“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

14ನೇ ಜೂನ್ 2017
ಬುಧವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**


3060– ಆಲಮಟ್ಟಿ ಜಲಾಶಯದಿಂದ ರಾಜ್ಯಕ್ಕೆ ಹಂಚಿಕೆಯಾದ ನೀರನ್ನು ಬಳಸಿಕೊಳ್ಳಲು ರಾಜ್ಯ ವಿಫಲವಾಗಿರುವ ಬಗ್ಗೆ –ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ

2961– ಹೇಮಾವತಿ ನಾಲಾ ವ್ಯಾಪ್ತಿಯ ತುಮಕೂರು ಜಿಲ್ಲೆಯಲ್ಲಿರುವ ನಾಲೆಗಳ ದುರಸ್ತಿ ಬಗ್ಗೆ –ಶ್ರೀ ಕಾಂತರಾಜು (ಬಿಎಂಎಲ್)

3052– ಹೈದರಾಬಾದ್-ಕರ್ನಾಟಕ ಭಾಗದಲ್ಲಿ “ಜವಳಿ ಪಾರ್ಕ್” (ಟೆಕ್ಸ್‌ಟೈಲ್ ಪಾರ್ಕ್) ಯೋಜನೆಯ ಬಗ್ಗೆ –ಶ್ರೀ ಅಮರನಾಥ ಪಾಟೀಲ್

3053– ರೈತರಿಗೆ ಬರ ಪರಿಹಾರ ನೀಡುವ ಕುರಿತು –ಶ್ರೀ ಟಿ.ಎ.ಶರವಣ

3027– ಎತ್ತಿನಹೊಳೆ ಯೋಜನೆಗೆ ಭೂಮಿ ಕಳೆದುಕೊಂಡ ರೈತಾಪಿ ವರ್ಗಕ್ಕೆ ಪರಿಹಾರ ನೀಡುವ ಬಗ್ಗೆ –ಶ್ರೀ ಎಂ.ಎ.ಗೋಪಾಲಸ್ವಾಮಿ

3037– ದಬ್ಬೇಗಟ್ಟ ಗೋಟೇಕೆರೆ ಏತನೀರಾವರಿ ಮಾಡುವ ಬಗ್ಗೆ –ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)

2966– ಬರಗಾಲದ ಪರಿಣಾಮ ಮೇವು ಕೊರತೆ ಮತ್ತು ಪರಿಹಾರೋಪಾಯ ಕುರಿತು –ಶ್ರೀ ವಿ.ಸೋಮಣ್ಣ

3025– ಬೀದರ್ ಜಿಲ್ಲೆಯ ಕೆರೆ ಹೂಳು ತೆಗೆಯುವ ಬಗ್ಗೆ –ಶ್ರೀ ರಘುನಾಥರಾವ್ ಮಲ್ಕಾಪೂರೆ

2984–ಮಾನವಿ ತಾಲ್ಲೂಕಿನ ನೀರಾವರಿ ಪೂರ್ಣಗೊಳಿಸುವ ಬಗ್ಗೆ –ಶ್ರೀ ಎನ್.ಎಸ್.ಬೋಸರಾಜು

2936– ಹಿಂದೂ ದೇವಾಲಯಗಳ ಆದಾಯದ ಬಗ್ಗೆ –ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

2981– ವಸ್ತು ಸಂಗ್ರಹಾಲಯ ನಿರ್ಮಾಣದ ಬಗ್ಗೆ –ಶ್ರೀ ರಾಮಚಂದ್ರಗೌಡ

2930– ಹಾವೇರಿ ಜಿಲ್ಲೆಯ ಸವಣೂರು ತಹಶೀಲ್ದಾರ ಕಛೇರಿಯಲ್ಲಿ ಉತಾರ ಕೊಡದಿರುವ ಬಗ್ಗೆ –ಶ್ರೀ ಸೋಮಣ್ಣ ಮ.ಬೇವಿನಮರದ

3042– ನಕಲಿ ಖಾತೆಗಳ ಕುರಿತು –ಶ್ರೀ ಎಂ.ನಾರಾಯಣಸ್ವಾಮಿ

2253– ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಕಾಮಗಾರಿಗಳ ಬಗ್ಗೆ –ಶ್ರೀ ರಮೇಶ್ ಬಾಬು

2289– ಹೈದ್ರಾಬಾದ್-ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ “ಅರ್ಹತಾ ಪ್ರಮಾಣ ಪತ್ರದ” ಬಗ್ಗೆ –ಶ್ರೀ ಅಮರನಾಥ ಪಾಟೀಲ್

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಚಿವರ ಹೇಳಿಕೆಗಳು**

**ಅ) ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ದಾಖಲಾತಿಗಳು ಕಡಿಮೆಯಾಗುತ್ತಿರುವ ಕುರಿತು.**

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**ಆ) ಬೆಳೆ ಹಾನಿ ಹೊಂದಿರುವ ರೈತರಿಗೆ ರೂ. 1.00 ಪರಿಹಾರ ನೀಡಿರುವ ಬಗ್ಗೆ.**

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**ಇ) ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳ ಪೂರೈಕೆ ವಿಷಯದ ಬಗ್ಗೆ.**

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**ಈ) ಎನ್.ಸಿ.ಟಿ.ಇ ಹೊಸ ನಿಯಮಕ್ಕೆ ಹಿಂದಿ ಶಿಕ್ಷಕರು ಕಂಗಾಲಾಗಿರುವ ಬಗ್ಗೆ.**

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಧಾನ ಸೌಧದ ಆವರಣದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ರವರ ಪ್ರತಿಮೆ ಅನಾವರಣಗೊಂಡಿದ್ದರೂ ಪ್ರತಿಮೆ ಕೆಳಗೆ ನಾಮಪಲಕ ಅಳವಡಿಸದೇ ಇರುವ ಬಗ್ಗೆ**

ಶ್ರೀಮತಿ ತಾರಾ ಅನೂರಾಧ

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**ಆ) ಕೂಡಗಿ ವಿದ್ಯುತ್ ಸ್ಥಾವರದಿಂದ 10 ಕಿ.ಮೀ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ 24 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಕುರಿತು**

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**ಇ) ಚಾಮರಾಜನಗರದಲ್ಲಿ ಒಳಚರಂಡಿ ಕಾಮಗಾರಿಗಳು ಕಳೆದ 5 ವರ್ಷಗಳಿಂದ ಮುಕ್ತಾಯ ವಾಗದಿರುವ ಬಗ್ಗೆ.**

ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)

ಶ್ರೀ ಆರ್.ರೋಷನ್ ಬೇಗ್(ನಗರಾಭಿವೃದ್ಧಿ ಸಚಿವರು)

**ಈ) ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಪೈಕಿ ಬಿಇಡಿ ಪೂರೈಸದೇ ಇರುವವರಿಗೆ ಬಿಇಡಿ ವ್ಯಾಸಂಗ ಮಾಡಲು ಪೂರ್ಣ ವೇತನ ಸಹಿತ ರಜೆ ನೀಡಿ ಅನುಕೂಲ ಮಾಡಿಕೊಡುವ ಕುರಿತು.**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಟಿ.ಶ್ರೀಕಂಠೇಗೌಡ

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**ಉ) ಬೆಳಗಾವಿ ಜಿಲ್ಲೆ ನಿಪ್ಪಾಣಿ ನಗರಸಭೆಯ ಪೌರಕಾರ್ಮಿಕರಿಗೆ ಸ್ವಚ್ಛತಾ ಕಾರ್ಯಕ್ಕಾಗಿ ಅಗತ್ಯ ಸಂರಕ್ಷಣಾ ಸಾಮಗ್ರಿಗಳನ್ನು ಒದಗಿಸದಿರುವುದರಿಂದ ಶ್ರೀ ರಣಬೇಡ ಸದಾನಂದ ಕಾಂಬಳೆ ಎಂಬ ಪೌರಕಾರ್ಮಿಕ ಮೃತಪಟ್ಟಿರುವ ಬಗ್ಗೆ**

ಶ್ರೀ ಮಹಾಂತೇಶ ಮ.ಕವಟಗಿಮಠ

ಡಾ॥ ಜಿ.ಪರಮೇಶ್ವರ್(ಸಭಾನಾಯಕರು)

**4. ವಿತ್ತೀಯ ಕಾರ್ಯಕಲಾಪ**

ಪೂರಕ ಅಂದಾಜುಗಳನ್ನೊಪ್ಪಿಸುವುದು.

**5. ವರದಿಗಳನ್ನೊಪ್ಪಿಸುವುದು.**

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ.**

**ರಾಜ್ಯದಲ್ಲಿ ಸತತ ಬರಗಾಲದಿಂದ ಉದ್ಭವಾಗಿರುವ ಪರಿಣಾಮದ ಬಗ್ಗೆ**

ಶ್ರೀಮತಿ ಜಯಮ್ಮ

ಶ್ರೀ ಬಿ.ಜೆ.ಪುಟ್ಟಸ್ವಾಮಿ

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಶ್ರೀ ಎಂ.ನಾರಾಯಣಸ್ವಾಮಿ

ಶ್ರೀ ನಿರಾಣಿ ಹನುಮಂತ ರುದ್ರಪ್ಪ

ಶ್ರೀ ಸಿ.ಎಂ.ಲಿಂಗಪ್ಪ

ಶ್ರೀಮತಿ ತಾರಾ ಅನೂರಾಧ

ಡಾ॥ ಜಯಮಾಲ ರಾಮಚಂದ್ರ

ಶ್ರೀ ವಿ.ಎಸ್.ಉಗ್ರಪ್ಪ

ಶ್ರೀ ಬಸವರಾಜ ಪಾಟೀಲ ಇಟಗಿ

<><><>

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(703) 14.06.2017 11.00 SV-RN

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 14ನೇ ಜೂನ್ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**1) ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 3060**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರ ಕರ್ನಾಟಕದ

ಜೀವನಾಡಿಯಾಗಿರುವಂತಹ ಕೃಷ್ಣಾ ನದಿ ನೀರಿನ ಹಂಚಿಕೆ ವಿಚಾರವಾಗಿ ಕರ್ನಾಟಕ ರಾಜ್ಯವು ಆಲಮಟ್ಟಿ ಜಲಾಶಯದ ತನ್ನ ಪಾಲಿನ ನೀರನ್ನು ಬಳಸಿಕೊಳ್ಳುವಲ್ಲಿ ನಮ್ಮ ರಾಜ್ಯ ವಿಫಲವಾಗಿದ್ದು, ಆಂಧ್ರಪ್ರದೇಶಕ್ಕೆ ಹೆಚ್ಚು ನೀರು ಹರಿದು ಹೋಗುತ್ತಿದೆ ಎನ್ನುವಂತಹ ವಿಚಾರವನ್ನು ನಾನು ಕೇಳಿದ್ದೆನು. ಅದಕ್ಕೆ ಕೃಷ್ಣಾ ನ್ಯಾಯಾಧಿಕರಣದ 2ನೇ ತೀರ್ಪಿನ ಅನ್ವಯ ಆರ್.ಎಲ್ ಮಟ್ಟವನ್ನು 519 ಮೀಟರ್‌ನಿಂದ 524 ಮೀಟರ್‌ನವರೆಗೆ ಎತ್ತರಿಸುವ ವಿಚಾರದಲ್ಲಿ ಸರ್ಕಾರ ಕ್ರಮ ಕೈಗೊಂಡಿದ್ದು, ಕೇಂದ್ರ ಸರ್ಕಾರದ ಅಂತಿಮ ಒಪ್ಪಿಗೆಯ ಅಧಿಸೂಚನೆಗೆ ಕಾಯುತ್ತಿದ್ದೇವೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಅದು ಯಾವ ಹಂತದಲ್ಲಿದೆ ಮತ್ತು ಅದಕ್ಕೇನಾದರೂ ಕಾನೂನಾತ್ಮಕವಾದ ತೊಡಕುಗಳಿವೆಯೇ? ಲಿಖಿತ ಉತ್ತರದಲ್ಲಿ ತಿಳಿಸಿರುವಂತೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು SLP (Special Leave Petition) ಯನ್ನು ದಾಖಲು ಮಾಡಿದೆ ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಎಸ್.ಎಲ್.ಪಿ. ವಿಚಾರದಲ್ಲಿ ಏನಾದರೂ ತಡೆಯಾಜ್ಞೆ ಬಂದಿದೆಯೇ? ತಡೆಯಾಜ್ಞೆ ಏನಾದರೂ ಬಂದಿದ್ದಲ್ಲಿ ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡಬೇಕು. ಒಂದು ವೇಳೆ ತಡೆಯಾಜ್ಞೆ ಏನೂ ಇಲ್ಲದಿದ್ದರೆ ಪ್ರಗತಿ ಮಾಡುವುದಕ್ಕೆ ತೊಂದರೆಗಳೇನಿವೆ? ಏಕೆಂದರೆ ಇದಕ್ಕೆ ಐದು ದಶಕಗಳ ಇತಿಹಾಸವಿದೆ. ದಿವಂಗತ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲನ್ನು ಇಟ್ಟಿರತಕ್ಕಂತಹ ಒಂದು ಪ್ರಮುಖವಾದ ನೀರಾವರಿ ಯೋಜನೆ ಆಗಿದ್ದು, ಮಾನ್ಯ ಸಚಿವರೂ ಸಹ ಉತ್ತರ ಕರ್ನಾಟಕದ ಭಾಗದಿಂದ ಬಂದಿರುವವರಾಗಿದ್ದಾರೆ. ಆ ಯೋಜನೆ ಅನುಷ್ಠಾನಗೊಳಿಸಬೇಕೆಂದು ಐದು ದಶಕಗಳಿಂದ ಉತ್ತರ ಕರ್ನಾಟಕದ ಜನ ಕಾದಿದ್ದಾರೆ. ಆದುದರಿಂದ ಆ ಯೋಜನೆಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುತ್ತದೆ ಎನ್ನುವ ವಿವರಗಳನ್ನು ಕೊಡಬೇಕು. ಮೊದಲಿಗೆ ಎಸ್.ಎಲ್.ಪಿ.ಯ ಬಗ್ಗೆ ಮಾಹಿತಿಯನ್ನು ಮಾನ್ಯ ಸಚಿವರು ನೀಡಲಿ. ನಂತರ ಅದಕ್ಕೆ ಪೂರಕ ಪ್ರಶ್ನೆಯನ್ನು ನಾನು ಕೇಳುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಕೃಷ್ಣಾ ನ್ಯಾಯಾಧಿಕರಣ-1 ಮತ್ತು 2 ರ ತೀರ್ಪಿನ ಅನ್ವಯ ನಮ್ಮ ರಾಜ್ಯದ ಪಾಲಿನ ನೀರನ್ನು ಉಪಯೋಗಿಸದೆ ಉಳಿದಿರುತ್ತದೆಯೇ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ನಮಗೆ ಹಂಚಿಕೆಯಾಗಿರುವ 173 ಟಿ.ಎಂ.ಸಿ. ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ. ಸುಮಾರು 6.22 ಲಕ್ಷ ಹೆಕ್ಟೇರ್ ಪೈಕಿ 6.19 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಯನ್ನು ಕಲ್ಪಿಸಲಾಗಿದೆ. ಕೃಷ್ಣಾ ನ್ಯಾಯಾಧಿಕರಣ-2 ಬ್ರಿಜೇಶ್ ಕುಮಾರ್ ತೀರ್ಪು ಬಂದ ಮೇಲೆ...

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಸಭಾಪತಿಯವರು:–** ಮಾನ್ಯ ಸಚಿವರೆ, ನೇರವಾಗಿ ಮಾನ್ಯ ಸದಸ್ಯರ ಪ್ರಶ್ನೆಗಷ್ಟೇ ಉತ್ತರವನ್ನು ಕೊಡಿ. ಇಲ್ಲವಾದಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಇಡೀ ಕೃಷ್ಣಾ ನದಿಯ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ನೇರವಾಗಿಯೇ ಉತ್ತರವನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಅಧಿಸೂಚನೆಯ ಬಗ್ಗೆ ಪ್ರಶ್ನೆಯನ್ನು ಕೇಳಿರುತ್ತಾರೆ. ಉತ್ತರದಲ್ಲಿ ಈ ಅಂಶವು ಬಿಟ್ಟು ಹೋಗಿದೆ. ಅಧಿಸೂಚನೆ 5(2) ಎಂದರೆ ಅವಾರ್ಡ್, 5(3) ಎಂದರೆ ಸ್ಪಷ್ಟೀಕರಣವಾಗಿ ಅಂತಿಮ ಅವಾರ್ಡ್ ಆಗುತ್ತದೆ. ಅಧಿಸೂಚನೆ ಹೊರಡಿಸಬೇಕಾದುದು ಮಾತ್ರ ಬಾಕಿ ಇದೆ. ಅಧಿಸೂಚನೆಯಲ್ಲಿ ಅಡೆ ತಡೆಯಾಗಿರುವ ಬಗ್ಗೆ ಬಹುಶಃ ಇಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ಬಂದಿರುವುದಿಲ್ಲ. ಅದನ್ನು ಈಗ ಹೇಳುತ್ತೇನೆ. ಈ ಅಧಿಸೂಚನೆಯಲ್ಲಿ ಮೊದಲಿಗೆ ನಾವು ಹಾಕಿರುವ ಎಸ್.ಎಲ್.ಪಿ. ಇದೆ. ನಾವು 278 ಟಿ.ಎಂ.ಸಿ. ನೀರನ್ನು ಕೇಳಿದ್ದೇವೆ. ನಮಗೆ ಕೊಟ್ಟಿರುವುದು 177 ಟಿ.ಎಂ.ಸಿ. ಕಡಿತ ಆಗಿ 173 ಟಿ.ಎಂ.ಸಿ. ಸ್ಪಷ್ಟೀಕರಣದಲ್ಲಿ ಆಯಿತು. ಮತ್ತೆ 5(3)ರಲ್ಲಿ ನೀಡಿರುವ ಸ್ಪಷ್ಟೀಕರಣದಲ್ಲಿ manner of withdrawal under Sec.9A ಬಗ್ಗೆ ಹೇಳಿದ್ದು, ತುಂಗಭದ್ರಾ ಬೋರ್ಡ್ ಕೂಡ ಕೃಷ್ಣಾ ಬೋರ್ಡ್‌ನೊಳಗೆ ವಿಲೀನಗೊಂಡು, ಅಲ್ಲಿಗೊಂದು ಬೋರ್ಡ್ ಬರುತ್ತದೆ. ಆ ಬೋರ್ಡ್ interpretation ಮೇಲೆ ತೀರ್ಪು ನಮ್ಮ ರಾಜ್ಯದ ಪರವಾಗಿಯಾದರೂ ಆಗಬಹುದು ಅಥವಾ ವಿರೋಧವಾಗಿಯಾದರೂ ಬರಬಹುದು ಎಂದು ಹೇಳಿ ಅದನ್ನೂ ಕೂಡ ನಾವು ಪ್ರಶ್ನೆ ಮಾಡಿದ್ದೇವೆ. ಹೀಗೆ ಏಳೆಂಟು ವಿಚಾರಗಳ ಬಗ್ಗೆ ಎಸ್.ಎಲ್.ಪಿ.ಯನ್ನು ಹಾಕಿದ್ದೇವೆ. ಎಸ್.ಎಲ್.ಪಿ. ಸಂಖ್ಯೆ 7457–7460/2014 ಆಗಿದೆ. ನಮ್ಮ ಎಸ್.ಎಲ್.ಪಿ.ಯೇ ನಮಗೆ ಅಡ್ಡವಾಗಿದೆ.

ಎರಡನೆಯದಾಗಿ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳೂ ಸಹ ಇದರ ಮೇಲೆ ಎಸ್.ಎಲ್.ಪಿ.ಯನ್ನು ಫೈಲ್ ಮಾಡಿದೆ. ಈ ಮಧ್ಯೆ ಆಂಧ್ರ–ತೆಲಂಗಾಣ ವಿಭಜನೆಯಾದ ನಂತರ ಅದನ್ನು ಪುನರಾರಂಭಗೊಳಿಸಬೇಕೆಂದು ನ್ಯಾಯಾಧಿಕರಣದ ಮುಂದೆ ಹೋದರು. ತೆಲಂಗಾಣದವರು ನ್ಯಾಯಾಧಿಕರಣದ ಮುಂದೆ ಹೋದಾಗ ಅದು ಕೇವಲ ಆಂಧ್ರಪ್ರದೇಶ ಮತ್ತು ತೆಲಂಗಾಣದ ನಡುವೆ ಎಂದು ಹೇಳಿ ನಮ್ಮ ರಾಜ್ಯದ ಪರವಾಗಿ ತೀರ್ಪು ಆಯಿತು. ತದನಂತರ ಅವರು ಸರ್ವೋಚ್ಚ ನ್ಯಾಯಾಲಯಕ್ಕೂ ಹೋದರು. ಅಲ್ಲಿಯೂ ಸಹ it is only between two successive States ಎಂದು ಆಯಿತು. ಇದು ಆಕ್ಟ್‌ನಲ್ಲಿಯೂ ಕೂಡ ಬಹಳ ಸ್ಪಷ್ಟವಾಗಿದೆ. ಈಗ ತಾಂತ್ರಿಕವಾಗಿ ಆಂಧ್ರಪ್ರದೇಶದವರು ಒಂದು ದಾವೆಯನ್ನು ಹೂಡಿದ್ದಾರೆ. ಅಂತಿಮವಾಗಿ ಅದರ ಬಗ್ಗೆಯೂ ಸಹ ನಾವು ವಾದ ಮಾಡುತ್ತೇವೆ. ಹಿಂದೆ ಆಂಧ್ರಪ್ರದೇಶ 5(2) ಅಧಿಸೂಚನೆ ಆದ ನಂತರ ಹಾಕಿದ್ದ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಸ್.ಎಲ್.ಪಿ.ಯಲ್ಲಿ without hearing us notification stay ಮಾಡಬಾರದು ಎಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ತಡೆಯಾಜ್ಞೆ ಇದೆ. ಇವುಗಳೆಲ್ಲವನ್ನೂ ನಾವು ವಿಚಾರ ಮಾಡಿದ್ದೇವೆ. ಇಲ್ಲಿ ನಾವು ಹಾಕಿರುವಂತಹ ಎಸ್.ಎಲ್.ಪಿಯನ್ನು ನಾವು ಹಿಂಪಡೆಯಬೇಕೆ ಎನ್ನುವಂಥದ್ದು ಇದೆ. ಅದು ಬಹುಶಃ ಸಾಧ್ಯವಾಗಲಿಕ್ಕಿಲ್ಲ. ಎರಡನೆಯದಾಗಿ ಮಹಾರಾಷ್ಟ್ರ ರಾಜ್ಯದವರು ಈಗಾಗಲೇ ಅಧಿಸೂಚನೆಯನ್ನು ಹೊರಡಿಸುವಂತೆ ಒತ್ತಾಯವನ್ನು ಮಾಡಿದ್ದಾರೆ. ನಾವು ಅದಕ್ಕೆ ಬೆಂಬಲವನ್ನೂ ಸೂಚಿಸಿದ್ದೇವೆ. ಈಗ ನಮ್ಮ ಮುಂದಿರುವುದು ಎರಡು ದಾರಿಗಳೆಂದರೆ ನಮ್ಮ ಕಾನೂನು ತಂಡದ ಮುಖ್ಯಸ್ಥರಾದ ಶ್ರೀ ಫಾಲಿ ಎಸ್. ನಾರಿಮನ್ ಅವರನ್ನೊಳಗೊಂಡಂತೆ ಎಲ್ಲರೊಂದಿಗೂ ಸಹ ನಾನು ವೈಯಕ್ತಿಕವಾಗಿ ಹೋಗಿ ಚರ್ಚೆಯನ್ನು ಮಾಡಿರುತ್ತೇನೆ.

(...ಮುಂದು)

(704)/14-06-2017/11-10/RC-RN

**ಶ್ರೀ ಎಂ.ಬಿ.ಪಾಟೀಲ್(ಮುಂದು):-**

ಈಗ ನಾವೇನು ಮಾಡುತ್ತಿದ್ದೇವೆಂದರೆ, ನಮ್ಮ SLP ಅನ್ನು withdraw ಮಾಡಿಕೊಳ್ಳಬೇಕೆಂದರೆ ಬಹಳ ಕಷ್ಟವಿದೆ. ಏಕೆಂದರೆ, ನಮಗೆ manner of withdrawal ನಲ್ಲಿ ಇನ್ನು ಹೆಚ್ಚಿನ ನೀರು ಸಿಗಬೇಕಾಗಿತ್ತು, ಹಾಗಾಗಿ ನಾವು ಕೂಡ SLP ಅನ್ನು ಹಾಕಿದ್ದೇವೆ ಈ ವಿಷಯ ತಮಗೂ ಸಹ ತಿಳಿದಿದೆ. ಆದರೆ ಈಗ ಕಾವೇರಿ ನೀರಿನ ಹಂಚಿಕೆಯಲ್ಲಿ ಏನಾಗಿದೆ ಎಂದರೆ 5(2) ಆಗಿದೆ 5(3) ಆಗಿಲ್ಲ, ಅದು ಸ್ಪಷ್ಟೀಕರಣ ಆಗಿಲ್ಲ. ಆದರೆ ಕೃಷ್ಣದಲ್ಲಿ 5(3) ಆಗಿದೆ. ಕಾವೇರಿಯಲ್ಲಿ ನೋಟಿಫಿಕೇಶನ್ ಆಗುವ ಸಮಯದಲ್ಲಿ without prejudice to our rights before the Tribunal and Supreme Court ಅಂದರೆ ನಮ್ಮ Tribunal ನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಏನು ತೀರ್ಮಾನವಾಗುತ್ತದೆ it will be binding. ಅದನ್ನು ಇಟ್ಟುಕೊಂಡು ನೋಟಿಫಿಕೇಶನ್ ಮಾಡಿದ್ದಾರೆ. ಏಕೆಂದರೆ ಅಲ್ಲಿಯ ಪರಿಸ್ಥಿತಿಯು ಕೂಡ ವಿಭಿನ್ನವಾಗಿತ್ತು. ಏಕೆಂದರೆ ಅಲ್ಲಿ ನೀರನ್ನು ನಾವು ಉಪಯೋಗಿಸುತ್ತಿದ್ದೆವು. ಈಗ ನಾವು ಇಲ್ಲಿ without prejudice to our rights before the Supreme Court ಏಕೆಂದರೆ Tribunal ಆಗಿ ಹೋಗಿದೆ. ಆದರೂ ಏನಾದರು ಮಾಡಬಹುದೆ ಎಂಬುವುದರ ಬಗ್ಗೆ ಇತ್ತೀಚೆಗೆ ನಮ್ಮ ರಾಜ್ಯದ ವಕೀಲರ ಬಳಿ ಹೋದಾಗ ಚರ್ಚೆ ಮಾಡಿ ಬಂದಿದ್ದೇವೆ. ಅಲ್ಲದೆ ಇವತ್ತಿನ ದಿವಸ ಅದರ ಸಾಧಕ-ಬಾಧಕಗಳ ಬಗ್ಗೆ ಬಹಳ

ಅಧಿಕೃತ ಪ್ರಕಟಣೆಗಾಗಿ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಭೀರವಾಗಿ ಚರ್ಚೆ ನಡೆಯುತ್ತಿದ್ದು ಇದರ ಬಗ್ಗೆ ಯಾವ ರೀತಿ ಮುಂದುವರೆಯಬೇಕು ಎಂಬುವುದನ್ನು ನೋಡಿಕೊಂಡು 15 ದಿವಸದಲ್ಲಿ ಅಂತಿಮವಾದಂತಹ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಆಂಧ್ರ ಮತ್ತು ತೆಲಂಗಾಣದ SLPs' (Special Leave Petitions) ಏನಾಯಿತು ಎಂಬುದರ ಮಾನ್ಯ ಸಚಿವರು ಹೇಳಲಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಸುಪ್ರೀಂ ಕೋರ್ಟಿನಲ್ಲಿ ರಿಜೆಕ್ಟ್ ಆಯಿತು ಎಂದು ಹೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸುಪ್ರೀಂ ಕೋರ್ಟ್‌ನಲ್ಲಿ ಮೂರು ರಾಜ್ಯಗಳ SLPs ಇದೆ. Except Maharashtra State, and Karnataka state, Andhra Pradesh and Telangana State are against the final Tribunal award. ಅದು ಈಗ hearingಗೆ ಬರಬೇಕಾಗಿರುವುದು ಒಂದು ಭಾಗ. ಎರಡನೆಯದಾಗಿ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ಎಂದು bifurcation ಆದಮೇಲೆ ಮತ್ತೆ ನ್ಯಾಯಾಧೀಕರಣದ ಮುಂದೆ ಪುನರಾರಂಭಗೊಳಿಸಬೇಕೆಂದು ಹೋದರು. ಅದನ್ನು ಸುಪ್ರೀಂ ಕೋರ್ಟಿನವರು ಮತ್ತು Tribunal ನವರು ಕೂಡ quash ಮಾಡಿದ್ದಾರೆ. ಅಲ್ಲಿ ಕರ್ನಾಟಕದ ಪರವಾಗಿ ಆಗಿದೆ. ತೆಲಂಗಾಣದವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಈಗ ಆಂಧ್ರ ಪ್ರದೇಶದವರು ಸಹ ಪುನಃ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅದರ ಬಗ್ಗೆ ನಾವು ವಾದ ಮಾಡುತ್ತೇವೆ. ತೆಲಂಗಾಣಕ್ಕೆ ಏನು ಅನ್ವಯ ಆಗಿತ್ತು ಅದು ಆಂಧ್ರಕ್ಕೂ ಸಹ applicable ಆಗುತ್ತದೆ. ಹಾಗಾಗಿ ಅದು ನಮ್ಮ ಮುಂದಿರುವಂತಹ ಸವಾಲು ಅಲ್ಲ. ನಮ್ಮ ಮುಂದಿರುವಂತಹ ಸವಾಲು ಏನೆಂದರೆ, ನಾವೇನು SLPs file ಮಾಡಿದ್ದೇವೆ ಇದಕ್ಕೆ ಸುಪ್ರೀಂ ಕೋರ್ಟಿನಲ್ಲಿ ಸ್ಟೇ ಇದೆ. ಅಂದರೆ ಆಂಧ್ರದವರು SLP ಹಾಕಿದಾಗ 5(2) ನಂತರ ಏನು SLPs ಹಾಕಿದ್ದರು without hearing us it should not notify ಎಂದು ಒಂದು ಸ್ಟೇ ಇದೆ. ಈ ವಿಚಾರವನ್ನು ಇಟ್ಟುಕೊಂಡು ನಾವು ಹೋಗುತ್ತೇವೆ. ಆದರೆ ಪ್ರಮುಖವಾಗಿ ನಮ್ಮ ರಾಜ್ಯದ್ದೇ ಒಂದು SLP ಇದೆ. ಆದುದರಿಂದ ಈ ವಿಚಾರದ ಬಗ್ಗೆ ಬಹಳಷ್ಟು ಚರ್ಚೆಯನ್ನು ಸಹ ಮಾಡುತ್ತಿದ್ದೇವೆ. ಹಾಗಾಗಿ ಮುಂದಿನ 15 ದಿವಸದಲ್ಲಿ ಇದರ ಬಗ್ಗೆ ಒಂದು ಅಂತಿಮ ನಿರ್ಧಾರಕ್ಕೆ ಬರುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ SLP ಬಗ್ಗೆ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಬೇಕು. ಎರಡನೆ ವಿಚಾರವೇನೆಂದರೆ, ಆ ಭಾಗದಲ್ಲಿ ಸುಮಾರು 9 ಏತ ನೀರಾವರಿಗಳು ಆಗಬೇಕಾಗಿದೆ. Land acquisition is a big issue ಏಕೆಂದರೆ ಈಗಾಗಲೇ ಮೊನ್ನೆ ದಿವಸ ಮಾನ್ಯ ಅಮರನಾಥ್ ಪಾಟೀಲರು ಹಾಗೂ ಮಾನ್ಯ ಎಲ್ಲಾ ಸದಸ್ಯರು ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮುಂಬರುವ ದಿವಸಗಳಲ್ಲಿ land acquisition ಇರಬಹುದು, 9 ಏತ ನೀರಾವರಿ ಯೋಜನೆಗಳನ್ನು ತಮ್ಮ ಅವಧಿಯಲ್ಲಿ ಒಂದು ಕಾಲಮಿತಿಯಲ್ಲಿ Action Plan ಮಾಡಿ. ಮುಂದೆ ಬರುವಂತಹ ಯಾವುದೇ ಸರ್ಕಾರ ಇರಬಹುದು ಆದಷ್ಟು ಬೇಗ 9 ಏತ ನೀರಾವರಿ ಯೋಜನೆಗಳು ಏನಿವೆ, ಅವುಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತಹ ಕೆಲಸ ಆಗಬೇಕು. ಏಕೆಂದರೆ ಈಗಾಗಲೆ 50 ವರ್ಷಗಳಾಗಿದೆ. ಆದುದರಿಂದ ಪ್ರತೀ ವರ್ಷ ಈ ಯೋಜನೆಗೆ ಬೇಕಾಗುವಂತಹ ಅನುದಾನವನ್ನು ಕೊಟ್ಟು ಆ ಯೋಜನೆಗಳನ್ನು ಅನುಷ್ಠಾನಗೊಳಿಸುವ ದಿಶೆಯಲ್ಲಿ ಸರ್ಕಾರದ ಬದ್ಧತೆ ಏನು ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಏಕೆಂದರೆ ಈಗಾಗಲೆ 50 ವರ್ಷಗಳಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಕೃಷ್ಣ ಕೊಳ್ಳದ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆ ಆಗಿದೆ. ಅದಕ್ಕೆ ತಾವೇ ಸುಮಾರು 4 ಗಂಟೆಗಳ ಕಾಲ ಉತ್ತರ ಕೊಟ್ಟಿದ್ದೀರಿ. ಆ ಸಮಯದಲ್ಲಿ ಈ ಎಲ್ಲಾ ಪ್ರಶ್ನೆಗಳು ಬಂದಿವೆ ಎಂದು ತಿಳಿದುಕೊಂಡಿದ್ದೇನೆ. ಆದುದರಿಂದ ನೀವು ಉತ್ತರ ಕೊಡುವಾಗ ದೀರ್ಘವಾಗಿ ಕೊಡದೆ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡಿ.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೆ, ಈ ತೀರ್ಪು ಬಂದಮೇಲೆ 2012 ಜನವರಿಯಲ್ಲಿ ಇದಕ್ಕೆ ಹಿಂದಿನ ಸರ್ಕಾರ ಆವತ್ತು ಗೈಡೆನ್ಸ್ ವ್ಯಾಲ್ಯೂ ಪ್ರಕಾರ ಸುಮಾರು 17,207 ಕೋಟಿ ರೂಪಾಯಿಗಳು. ಆಗುತ್ತದೆ ಎಂದು ಹೇಳಿ ಒಂದು administrative approval ಕೊಟ್ಟಿದೆ. ಈಗ ಹೊಸದಾಗಿ ಭೂಸ್ವಾಧೀನ ಕಾಯ್ದೆ ಬಂದಮೇಲೆ ನಾಲ್ಕು ಪಟ್ಟು ಹಣ land acquisition for Rehabilitation and Resettlement ಗೆ ಹೋಗುತ್ತದೆ. ಇದೆಲ್ಲವೂ ಸಹ 50 ಸಾವಿರ ಕೋಟಿ ರೂಪಾಯಿಗಳನ್ನು ದಾಟಬಹುದು ಎಂದು ಒಂದು ಅಂದಾಜು ಇದೆ. ಅದನ್ನು ನಾವು ಪರಿಷ್ಕೃತ ಅಂದಾಜು ಮಾಡಿದ್ದೇವೆ. ಅದನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗುತ್ತೇವೆ. 17,207

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ರೂಪಾಯಿಗಳಲ್ಲಿ ಇಲ್ಲಿಯವರೆಗೆ ನಾವು ಸುಮಾರು 6,364 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರ ಬಗ್ಗೆ ಎಲ್ಲಾ ವಿವರಗಳನ್ನು ಪೂರ್ಣವಾಗಿ ಕೊಟ್ಟಿದ್ದೇನೆ.

ಸನ್ಮಾನ್ಯ ಸಭಾಪತಿಯವರೆ, ಇದರಲ್ಲಿ ನಮಗೆ ಮುಖ್ಯವಾಗಿರುವಂಥದ್ದು ಭೂಸ್ವಾಧೀನ ಕಾಯ್ದೆ ಬಗ್ಗೆ ಚರ್ಚೆಯಾದ ಪ್ರಕಾರ ಭೂಮಿಯನ್ನು ಕಳೆದುಕೊಂಡವರೆಲ್ಲರಿಗೂ ಪರಿಹಾರವನ್ನು uniform rate ಕೊಡಬೇಕೆಂದು ಮಾನ್ಯ ನಿರಾಣಿಯವರು, ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್ ಅವರು ಹೇಳಿದ್ದಾರೆ. ಏಕೆಂದರೆ ಕೆಲವರಿಗೆ guidance value ಜಾಸ್ತಿ ಇದೆ, ಕೆಲವರಿಗೆ ಕಡಿಮೆ ಇದೆ ಎಂಬುದರ ಬಗ್ಗೆ ಚರ್ಚೆ ಆಗಿದೆ. ಆದಕಾರಣ ಇದರ ಬಗ್ಗೆ ಒಂದು ಅಂತಿಮವಾದಂತಹ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಇನ್ನೊಂದು ವಿಷಯವೇನೆಂದರೆ, 9 ಏತ ನೀರಾವರಿ ಯೋಜನೆಗಳು ಏನಿವೆ, ಅವುಗಳಿಗೆ ಇವತ್ತು ನಾವು ಬಹಳಷ್ಟು ಒತ್ತನ್ನು ಕೊಟ್ಟಿದ್ದೇವೆ. 9 ಏತ ನೀರಾವರಿ ಯೋಜನೆಗಳಲ್ಲಿ ಕೆಲವೊಂದು ಯೋಜನೆಗಳು ಶೇಕಡ 60ರಷ್ಟು ಕಾಮಗಾರಿ ಆಗಿದೆ, ಇನ್ನು ಕೆಲವೊಂದು ಯೋಜನೆಗಳು ಶೇಕಡ 80ರಷ್ಟು, ಇನ್ನೂ ಕೆಲವು ಯೋಜನೆಗಳಲ್ಲಿ ಶೇಕಡ 90ರಷ್ಟು ಕೆಲಸ ಮಾಡಿದ್ದೇವೆ. ಉದಾಹರಣೆಗಾಗಿ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್ ಅವರು ಇಲ್ಲಿಯೇ ಇದ್ದಾರೆ. ಮುಳವಾಡು ಮತ್ತು ಚಿಮ್ಮಲಗಿ ಏತ ನೀರಾವರಿಯ ಬಗ್ಗೆ ನೋಡಿದ್ದಾರೆ. ಹಾಗಾಗಿ ನಾವು ಎಲ್ಲಾ ಯೋಜನೆಗಳಿಗೂ ಒತ್ತನ್ನು ಕೊಟ್ಟಿದ್ದೇವೆ. ಇನ್ನು ಪ್ರಮುಖವಾಗಿ ಇರುವುದು ಭೂಸ್ವಾಧೀನಕ್ಕೆ ನಾವು ಹಣವನ್ನು ಕೊಡಬೇಕಾಗಿರುವಂಥದ್ದು. ಅದೇ ನಮಗೆ major burden ಆಗುತ್ತದೆ. ಇನ್ನು ಪ್ರಾಜೆಕ್ಟ್‌ನ ಪರಿಷ್ಕೃತ ಅಂದಾಜು ಏನಿದೆ ಅದರ ಖರ್ಚು ಸಹ ಬರುತ್ತದೆ. ಆದರೂ ಸಹ ಸರ್ಕಾರ ಇವತ್ತಿನ ದಿವಸ ಎಲ್ಲಾ ಕೆಲಸವನ್ನು ಬಹಳ ವೇಗವಾಗಿ ಮಾಡುತ್ತಿದೆ. ಶೀಘ್ರದಲ್ಲಿಯೇ ಭೂಸ್ವಾಧೀನದ ಬಗ್ಗೆ ನಾವು ರೈತರಿಗೆ ಏನು ಪರಿಹಾರ ಕೊಡಬೇಕು ಅದಕ್ಕೂ ಮತ್ತು Rehabilitation and Resettlement ಗೂ ಸಹ ನಾವು ಬಹಳ fast ಆಗಿದ್ದೇವೆ. ಅದನ್ನು ಸಹ ನಾವು ಮಾಡಿದರೆ ಬಹುಶಃ ನಮ್ಮ ಸರ್ಕಾರದ ಅವಧಿಯಲ್ಲಿ ಒಂದು ನಿರ್ಣಾಯಕ ಹಂತಕ್ಕೆ ಮುಟ್ಟುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಚುಕ್ಕೆ ಪ್ರಶ್ನೆ ಸಂಖ್ಯೆ 2961
(ಉತ್ತರವನ್ನು ಲಗತ್ತಿಸಲಾಗಿದೆ)

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕಾಂತರಾಜು (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಗೆ ಹೇಮಾವತಿ ಜಲಾಶಯದಿಂದ ನಮಗೆ 32 ರಿಂದ 35 ಟಿಎಂಸಿ ನೀರು ಅಲೋಕೇಶನ್ ಆಗಿತ್ತು. ಆದರೆ ಅಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ. ಏಕೆಂದರೆ, ಯಾವ ನಾಲೆಗಳನ್ನು ಅಷ್ಟೊಂದು ಅಭಿವೃದ್ಧಿ ಮಾಡಿಲ್ಲ. ನೀರು ಬರುವಂತಹ ಚಾನಲ್‌ಗಳು ನಮ್ಮ ತುಮಕೂರು ಜಿಲ್ಲೆಯಲ್ಲಿ ಇಲ್ಲ. ಆದುದರಿಂದ ಇದಕ್ಕಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ ಎಂಬ ಪ್ರಶ್ನೆಗೆ ಕ್ರಿಯಾ ಯೋಜನೆ ಪ್ರಸ್ತಾವನೆ ಇರುವುದಿಲ್ಲವೆಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಹಾಗೂ ನಾಲೆಗಳು ಸರಿಯಾಗಿ ದುರಸ್ಥಿಯಾಗದೆ ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು ಎಂಬ ಪ್ರಶ್ನೆಗೆ ಅನ್ವಯಿಸುವುದಿಲ್ಲವೆಂಬ ಉತ್ತರವನ್ನು ಸರ್ಕಾರ ಕೊಟ್ಟಿದೆ.

ಈಗ ಏನಾಗಿದೆ ಎಂದರೆ, ಎರಡು ವರ್ಷದಿಂದ ಬರಗಾಲವಿದ್ದ ಕಾರಣ ಹೇಮಾವತಿ ಜಲಾಶಯದಿಂದ ಚಾನಲ್‌ಗಳಿಗೆ ನೀರನ್ನು ಬಿಟ್ಟಿಲ್ಲ. ಹಾಗಾಗಿ ಅಲ್ಲಿ ಮಣ್ಣು ಬಿದ್ದು ಹುಲ್ಲು ಬೆಳೆದು ನಿಂತಿದೆ. ಚಾನೆಲ್‌ಗಳಲ್ಲಿ ಸೀಮೆಂಟ್ ಕೆಲಸ ಮಾಡಲಾಗಿದೆ ಆದರೆ ಅದರ ಮೇಲೆ ಮಣ್ಣು ಬಿದ್ದು ಗಿಡಗಳು ಬೆಳೆದು ಚಾನೆಲ್‌ಗಳು ಹಾಳಾಗಿ ಹೋಗಿವೆ. ಈಗ ಮುಂಗಾರು ಚುರುಕಾಗಿರುವುದರಿಂದ ಮಳೆ ಬರಬಹುದು, ನಮಗೂ ಹಾಗೂ ನಮ್ಮ ಜಿಲ್ಲೆಗೆ ಅನುಕೂಲ ಆಗಬಹುದು ಎಂಬ ಆಶಾಭಾವನೆಯಿಂದ ಕೇಳುತ್ತಿದ್ದೇವೆ. ನಿಮಗೆ ಕೃಷ್ಣಾ ಬೇಸಿನ್ ಮೇಲೆ ಯಾವ ರೀತಿಯಾದಂತಹ ಆಸಕ್ತಿ ಇದೆ, ಅದೇ ಆಸಕ್ತಿಯನ್ನು ದಯವಿಟ್ಟು ಹೇಮಾವತಿ ನಾಲೆಗೂ ತೋರಿಸಬೇಕೆಂದು ಹೇಳಬಯಸುತ್ತೇನೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಗ್ರಾವಿಟಿಯಲ್ಲಿ ನೀರು ಬರುವುದರಿಂದ ಒಂದೊಂದು ಕಿಲೋ ಮೀಟರ್‌ಗೂ gravity ವ್ಯತ್ಯಾಸವಿದೆ. ಹೆಚ್ಚು ಕಡಿಮೆ 25 ರಿಂದ 100 ಅಡಿಯಷ್ಟು ಇದ್ದು ಜಾಸ್ತಿ gravity ವ್ಯತ್ಯಾಸವಿದೆ. ಹಾಗಾಗಿ ಸ್ವಲ್ಪ ಮಣ್ಣು ತುಂಬಿದರೂ ನೀರು ಬರುವುದಿಲ್ಲ. ನಮ್ಮ ನಾಲೆಯ ಕಡೇಯ ಭಾಗದಲ್ಲಿರುವಂತಹ ರೈತರ ಜಮೀನಿಗೆ ನೀರು ಹೋಗುವುದಿಲ್ಲ. ದಯಮಾಡಿ ಅದಕ್ಕೆ ಅನುದಾನವನ್ನು ಬಿಡುಗಡೆ ಮಾಡಿ ತಕ್ಷಣ ಈ ಕೆಲಸವನ್ನು ಮಾಡಬೇಕು. ಏಕೆಂದರೆ ಈಗೇನಾದರು ಡ್ಯಾಂ ತುಂಬಿ ನೀರು ಬರುವಂತಹ ಕೆಲಸವಾದರೆ ರೈತರಿಗೆ ತುಂಬಾ ಅನಾನುಕೂಲವಾಗುತ್ತದೆ. ಆದರೆ ನಿಮ್ಮ ಅಧಿಕಾರಿಗಳು ಏನು ಮಾಹಿತಿಯನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ನಾವು ಅಲ್ಲೆಲ್ಲಾ ಓಡಾಡಿದಾಗ ನೋಡಿದ್ದೇವೆ. ಎಲ್ಲಾ ನಾಲೆಗಳಲ್ಲಿಯೂ ಗಿಡ-ಗಂಟಿಗಳು ಬೆಳೆದು ಸಮಸ್ಯೆಯಾಗಿದೆ. ಅಲ್ಲಿ ಯಾವುದೇ ರೀತಿಯಿಂದಲೂ ನಿರ್ವಹಣೆ ಮಾಡದಿರುವುದರಿಂದ ಲೀಕೇಜ್ ಜಾಸ್ತಿ ಆಗುತ್ತಿದೆ. ಆದಕಾರಣ ಅಧಿಕಾರಿಗಳನ್ನು ಕರೆದು ಅದರ ಬಗ್ಗೆ ಒಂದು ಮಾಹಿತಿಯನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಲಿಖಿತ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ನೀರು ಪೋಲಾಗುತ್ತಿರುವ ಬಗ್ಗೆ ಕೇಳಿದ್ದಾರೆ. ಇದು ನಮ್ಮ ಗಮನಕ್ಕೆ ಬಂದಿಲ್ಲ ಎಂಬ ಮಾತನ್ನು ಸಹ ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರು ನಿರ್ಧಿಷ್ಟವಾಗಿ ಇಂತಹ ಕಡೆ ನೀರು ಪೋಲಾಗುತ್ತಿದೆ ಎಂದು ಹೇಳಿದರೆ ಅದರ ಬಗ್ಗೆ ಖಂಡಿತವಾಗಿ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ನಾಲೆಗಳ ದುರಸ್ತಿಗಾಗಿ 2014-1015ನೇ ಸಾಲಿನಲ್ಲಿ ನಾವು ಸುಮಾರು 1 ಕೋಟಿ 60 ಲಕ್ಷ ರೂಪಾಯಿಗಳನ್ನು, 2015-16ನೇ ಸಾಲಿನಲ್ಲಿ 1 ಕೋಟಿ 59 ಲಕ್ಷ ರೂಪಾಯಿಗಳನ್ನು ಹಾಗೂ 2016-17ನೇ ಸಾಲಿನಲ್ಲಿ 1 ಕೋಟಿ 51 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯಾವ್ಯಾವ ಕಾಲದಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎಂಬುದರ ಬಗ್ಗೆ ವಿವರಗಳನ್ನು ಸಹ ಕೊಟ್ಟಿದ್ದೇನೆ.

(ಮುಂದು)

(705) 14.06.2017 KG.VK 11.20

ಹಾಗೂ ನಾನು overall ಆಗಿ check ಮಾಡುತ್ತೇನೆ. ನಾನು overall ಆಗಿ ಪರಿಶೀಲನೆ ಮಾಡಲು ನಮ್ಮ ಮುಖ್ಯ ಅಭಿಯಂತರರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆಯನ್ನು ನೀಡುತ್ತೇನೆ. ಅವರುಗಳು ನಾಲೆಗಳ ಬಳಿ ಹೋಗಿ ಎಲ್ಲೆಲ್ಲಿ ಏನೇನು ಅವಶ್ಯಕತೆ ಇದೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ. ಮಾನ್ಯ ಸದಸ್ಯರು ನಿಖರವಾಗಿ ಹೇಳಿರುವಂಥದ್ದನ್ನು ಸಹಾ ನಾನು ಗಮನಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಎರಡನೆಯದಾಗಿ, ಮಾನ್ಯ ಸದಸ್ಯರು ಕೃಷ್ಣಾಗೆ ಯಾವ ರೀತಿಯ ಒತ್ತನ್ನು ಕೊಡಲಾಗಿಯೋ, ಅದೇ ರೀತಿಯ ಒತ್ತನ್ನು ಹೇಮಾವತಿಯ ನಾಲೆಗಳಿಗೂ ಸಹಾ ಕೂಡಿ ಎಂದು ಹೇಳಿದ್ದಾರೆ. ತುಮಕೂರು ಜಿಲ್ಲೆಯ ಹೆಚ್.ಎಲ್.ಬಿ.ಸಿ ಹೇಮಾವತಿ ಎಡದಂಡೆ ಕಾಲುವೆ 0 ಕಿಲೋ ಮೀಟರ್‌ನಿಂದ 72 ಕಿಲೋಮೀಟರ್‌ವರೆಗೆ ಇದೆ. ಹೇಮಾವತಿ ಜಲಾಶಯದಿಂದ ತುಮಕೂರು ಜಿಲ್ಲೆಗೆ 25 ಟಿ.ಎಂ.ಸಿ ನೀರು allocation ಇದೆ. ಈ ಹಿಂದೆ ತುಮಕೂರು ಜಿಲ್ಲೆಗೆ 9 ಅಥವಾ 10 ಟಿ.ಎಂ.ಸಿ ನೀರಿಗಿಂತ ಹೆಚ್ಚಿಗೆ ದೊರೆಯುತ್ತಿರಲ್ಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಸನ್ಮಾನ್ಯ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ನಾವು 0 ಕಿಲೋಮೀಟರ್‌ನಿಂದ 72 ಕಿಲೋಮೀಟರ್‌ವರೆಗೆ ಕಾಲುವೆಯನ್ನು ಮುಕ್ತಾಯ ಮಾಡಿ 25 ಟಿ.ಎಂ.ಸಿ ನೀರು ಬರುವಂತೆ ಮಾಡಿದ್ದೇವೆ. ಅದನ್ನು ಬಹಳ

ನಿಗಧಿತ ಅವಧಿಯಲ್ಲಿ ಮಾಡಿದ್ದೇವೆ. ಹೆಚ್.ಎಲ್.ಬಿ.ಸಿ ಗೆ ಸುಮಾರು 600 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚು ಮಾಡಿದ್ದೇವೆಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ **ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾಲೆಗಳು ಸಂಪೂರ್ಣವಾಗಿ ಹಾಳಾಗಿ ಹೋಗಿವೆ. ನಾಲೆಗಳಲ್ಲಿ ನೀರಿನ ಸಾಮಾರ್ಥ್ಯ ಇಲ್ಲ. ಆ ನಾಲೆಗಳನ್ನು ದುರಸ್ತಿ ಮಾಡಿ ಅಧುನಿಕರಣ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ **ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಅವರಿಗೆ ಹೇಮಾವತಿ ಎಡದಂಡೆ ಕಾಲುವೆಯನ್ನು ಒಂದು ದೊಡ್ಡ ಕೊಡುಗೆಯನ್ನಾಗಿ ಮಾಡಿಕೊಟ್ಟಿದ್ದೇವೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರಾದ ರಮೇಶ್ ಬಾಬುರವರು ಪ್ರಶ್ನೆ ಕೇಳುತ್ತಿದ್ದಾರೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ ನೀವು ಆ ಮೇಲೆ ಮಾತನಾಡಿ.

ಶ್ರೀ **ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂಥದ್ದು ಬಹಳ ಪ್ರಮುಖವಾದ ಅಂಶ. 1987 ರಲ್ಲಿ ಹೇಮಾವತಿ ನಾಲೆ ಪ್ರಾರಂಭವಾಗಿದೆ. ಮಾನ್ಯ ಸದಸ್ಯರಾದ ಕಾಂತರಾಜುರವರು ಇಲ್ಲಿ ಕಾಮಗಾರಿಗಳು ಸರಿಯಾಗಿ ನಡೆದಿರುವುದಿಲ್ಲ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಮಾನ್ಯ ಸಚಿವರು ಎಲ್ಲಿ ತೊಂದರೆಯಾಗಿದೆ ಇದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಮಾನ್ಯ ಸಚಿವರ ಪಕ್ಕದಲ್ಲಿಯೇ ತುಮಕೂರು ಜಿಲ್ಲೆಯ ಸಚಿವರು ಸಹ ಇದ್ದಾರೆ. ಸಣ್ಣ ನೀರಾವರಿ ಸಚಿವರು ಸಹ ಇದ್ದಾರೆ. ಜಿಲ್ಲಾ ಅಭಿವೃದ್ಧಿ ಸಭೆಯಲ್ಲಿ ಚರ್ಚೆ ಆದಂತಹ ವಿಷಯಗಳನ್ನು ಈಗಾಗಲೇ ಉಸ್ತುವಾರಿ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಇಲ್ಲಿ ಪ್ರಶ್ನೆ ಇರುವಂಥದ್ದು, ಏನು allocation ಕೊಟ್ಟಿದ್ದಾರೆ, ಅದರಲ್ಲಿ ಚಿಕ್ಕನಾಯಕನಹಳ್ಳಿ, ತಿಪಟೂರು, ತುಮಕೂರು, ತುರುವೇಕೆರೆ ಇರಬಹುದು ಇಲ್ಲಿಗೆಲ್ಲಾ ಕುಡಿಯುವ ನೀರಿನ ಯೋಜನೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಬಹಳ ಪ್ರಮುಖವಾಗಿ ಹೇಮಾವತಿ ನಾಲೆ ವಲಯದಲ್ಲಿ ಬರುವಂತಹ ಅಭಿಯಂತರರು Final Notification ಮಾಡದೆ Preliminary Notification ಮೇಲೆ ಸುಮಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದನ್ನು ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದಂತಹ ಸಂದರ್ಭದಲ್ಲಿ ಇದಕ್ಕೆ ಯಾರು ಹೊಣೆಗಾರರು ಆಗುತ್ತಾರೆ?

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರಾದ ರಮೇಶ್ ಬಾಬುರವರೆ, ತಾವು ಪ್ರಶ್ನೆಯನ್ನು ಕೇಳದೇ Statement ಮಾಡುವುದಕ್ಕೆ ಹೋಗುತ್ತಿದ್ದೀರಿ. Kindly, ask him a question.

(ಗೊಂದಲ)

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಕೇಳುತ್ತಿದ್ದೇನೆ. ದಯಮಾಡಿ ಯಾವ ಅಧಿಕಾರಿಗಳು ಈ ಹೇಮಾವತಿ ವಲಯದಲ್ಲಿ ಕುಡಿಯುವ ನೀರಿನ ಯೋಜನೆಯಲ್ಲಿ Final Notification ಮಾಡದೆ, ಸರ್ಕಾರದ ಹಣ ಪೋಲಾಗುವುದಕ್ಕೆ ಕಾರಣರಾಗಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ದುರಸ್ತಿ ಕಾರ್ಯಕ್ಕೆ ಹಣವನ್ನು ಸಹ ಬಿಡುಗಡೆ ಮಾಡಿಲ್ಲ. ಈ ಸಾಲಿನಲ್ಲಿ ಕನಿಷ್ಠ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಂತರಾಜು (ಬಿಎಂಎಲ್):–** ಮಾನ್ಯ ಸಭಾಪತಿಯವರೇ,....

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕಾಂತರಾಜುರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ನಿಮ್ಮ ಅವಕಾಶ ಮುಗಿಯಿತು ಅಲ್ಲವೇ? ಈಗ ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ maintenance part ಏನಿದೆ, ನಮ್ಮ Central Water Commission norms ಮತ್ತು ನಮ್ಮ ರಾಜ್ಯ norms ಇಟ್ಟುಕೊಂಡು ಅದು inform ಆಗಿ per hectare interest ನಲ್ಲಿ ಬರುತ್ತದೆ. ಅದರ ಪ್ರಕಾರ, ಹಂಚಿಕೆ ಆಗಿರುತ್ತದೆ. ಅದರ ಪ್ರಕಾರ, ಅವರವರ ವಿಭಾಗ ಕಾಲುವೆಗಳಿಗೆ ನೀರನ್ನು ಬಿಡಲಾಗಿರುತ್ತದೆ. ಒಬ್ಬರಿಗೆ ಹೆಚ್ಚು, ಒಬ್ಬರಿಗೆ ಕಡಿಮೆ ಎಂದಲ್ಲ. ಎಲ್ಲಿ ಅವಶ್ಯಕತೆ ಬೀಳುತ್ತದೆ, ಎಲ್ಲೂ ಒಂದು ಕಡೆ ಡ್ಯಾಮೇಜು ಆಗಿದ್ದರೆ ಅದನ್ನು ದುರಸ್ತಿ ಮಾಡುವಂತಹ ಪದ್ಧತಿ ಇದೆ. ಇದು ಯಾವುದೇ ಸರ್ಕಾರ ಇರಲಿ, ಇದನ್ನು ಮಾಡುವಂಥದ್ದು. ನಾನು ಪ್ರಾರಂಭದಿಂದ ಅಂತ್ಯದವರೆಗೆ ಅದನ್ನು verification ಮಾಡಿಸುತ್ತೇನೆಂದು ಹೇಳಿದ್ದೇನೆ. ಎಲ್ಲೆಲ್ಲಿ ಅವಶ್ಯಕತೆ ಬರುತ್ತದೆ ಅಲ್ಲಿಗೂ ಮತ್ತು ಮಾನ್ಯ ಸದಸ್ಯರು ಹೇಳಿರುವಂತಹ ಮಾಹಿತಿಯನ್ನು ತೆಗೆದುಕೊಂಡು ಅದರ ಬಗ್ಗೆ ಅಗತ್ಯವಾದ ಕ್ರಮಗಳನ್ನು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತೇನೆ. ಆದರೆ, ನಮ್ಮ ಭಾಗಕ್ಕೆ ಇಷ್ಟು ಹಣವನ್ನು ಕೊಟ್ಟಿದ್ದೀರಿ, ಇಲ್ಲಿಗೂ ಸಹ ಕೊಡಿ ಎನ್ನುವುದಲ್ಲ. ಅದು ಎಲ್ಲಾ ಕಡೆಗೂ per hectare 800 ರೂಪಾಯಿಗಳು ನಿಗಧಿಯಾಗಿರುತ್ತದೆ. ಇಡೀ ರಾಜ್ಯಕ್ಕೆ 800 ರೂಪಾಯಿಗಳ ಪ್ರಕಾರ ಇರುತ್ತದೆ.

**ಶ್ರೀ ಕಾಂತರಾಜು:-** ಮಾನ್ಯ ಸಭಾಪತಿಯವರೇ, 24 ಟಿ.ಎಂ.ಸಿ ನೀರು ನಮಗೆ allocation ಆಗಿದೆ. ಆದರೆ, ನಮಗೆ 9 ಟಿ.ಎಂ.ಸಿ ನೀರು ಮಾತ್ರ ಬರುತ್ತಿದೆ. ಮಾನ್ಯ ಸಚಿವರು ನಾಲೆ ದೊಡ್ಡದು ಮಾಡಲಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ನೀರು ಯಾವಾಗ ಬರುತ್ತದೆ? 24 ಟಿ.ಎಂ.ಸಿ ನೀರು ತುಮಕೂರು ಜಿಲ್ಲೆಗೆ ಬರುವಷ್ಟು ತಾಂತ್ರಿಕೆಯನ್ನು ಯಾವಾಗ ಮಾಡಲಾಗುವುದು?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನು ಬೇಕಾದರೆ, ಈಗ ವಿವರವಾಗಿ ಚರ್ಚೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಆಯಿತು ನಿಮಗೆ ಅವಕಾಶ ಕೊಡುತ್ತೇನೆ. ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ಅಮರನಾಥ ಪಾಟೀಲ್ ಇವರದ್ದು.

(ಗೊಂದಲ)

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದೇ ಒಂದು clarification ಇದೆ. ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಕ್ಷ್ಮೀನಾರಾಯಣರವರೇ, ಸಾಕು ಬಿಡಿ. ನಿಮ್ಮ ಪ್ರಶ್ನೆ ಬಂದಾಗ ನಿಮಗೆ ಅವಕಾಶ ಕೊಡುತ್ತೇನೆ. 10 ನಿಮಿಷ ಒಂದೊಂದು ಪ್ರಶ್ನೆಗೆ ಅವಕಾಶ ಕೊಟ್ಟರೆ, ಮೂರು ಗಂಟೆಗಳ ಕಾಲ ಪ್ರಶ್ನೋತ್ತರ ಅವಧಿ ಆಗುತ್ತದೆ. ನೀವು ಪ್ರಶ್ನೆಯನ್ನು ನೇರವಾಗಿ ಕೇಳಿ. ಸಚಿವರಿಂದ ಉತ್ತರ ಕೊಡಿಸುತ್ತೇನೆ.

(ಗೊಂದಲ)

**ಶ್ರೀ ಕಾಂತರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣರವರು ಮಾತನಾಡಲಿ ಬಿಡಿ.

(ಗೊಂದಲ)

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಮಾನ್ಯ ಸಭಾಪತಿಯವರೇ, ಕ್ರಮ ಸಂಖ್ಯೆ 'ಇ' ನಲ್ಲಿ ಕಾಮಗಾರಿಗಳ ಹಣ ವಿನಿಯೋಗ ಮಾಡುವುದಕ್ಕೆ ಅನ್ವಯಿಸುವುದಿಲ್ಲವೆಂದು ಇದೆ. ಇದು ಯಾವ ರೀತಿಯಲ್ಲಿ ಅನ್ವಯಿಸುವುದಿಲ್ಲ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೆ, ಅದರ ಅರ್ಥವನ್ನು ಮಾನ್ಯ ಸದಸ್ಯರಿಗೆ ಒಂದೆರಡು ಸಾಲುಗಳಲ್ಲಿ ಹೇಳಿಬಿಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೀರು ಪೋಲು ಆಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಆದ್ದರಿಂದ ಅದು ಅನ್ವಯಿಸುವುದಿಲ್ಲವೆಂದು ಹೇಳಿದ್ದೇನೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ಈಗಾಗಲೇ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯವರು ಹೇಮಾವತಿ ನಾಲೆಯನ್ನು ಸಾವಿರ ಕೋಟಿ ರೂಪಾಯಿಗಳಲ್ಲಿ ಆಧುನಿಕರಣ ಮಾಡುವಂತಹ ವ್ಯವಸ್ಥೆ ಇದೆ ಎಂದು ಹೇಳಿದ್ದಾರೆ. ಸಣ್ಣ ಪುಟ್ಟ ನಾಲೆಗಳಿಗೆ ನೀರು ಹರಿಸುವುದಕ್ಕಾಗುವುದಿಲ್ಲ. ಯಾವುದೋ ಒಂದು ಚಾನಲ್‌ಗೆ 600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಸಣ್ಣ ಪುಟ್ಟ ಚಾನಲ್‌ಗಳಲ್ಲಿ ನೀರು ಹರಿಯಬೇಕಾದರೆ ಈ proposal ಗೆ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಬರುತ್ತದೆ. ಆದ್ದರಿಂದ ಈ ವರ್ಷ ಎಷ್ಟು ಹಣ ಇದಕ್ಕಾಗಿ ಮೀಸಲಾಗಿ ಇಡುತ್ತೀರಿ ಎನ್ನುವುದು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ಯಾವುದೋ ಒಂದು ಕಾಲುವೆ ಅಲ್ಲ. ಹೆಚ್.ಎಲ್.ಬಿ.ಸಿ ಬಹಳ ಮಹತ್ವವಾದಂತಹ ಕಾಲುವೆ. ಡಾ||ಪರಮೇಶ್ವರ್ ರವರು ಸದನದಲ್ಲಿ ಇದ್ದಾರೆ. ಅಲ್ಲಿ ಏನಾಗಿದೆ ಅಂದರೆ, ತುಮಕೂರಿಗೆ allocation ಆಗಿರುವುದು 24 ರಿಂದ 25 ಟಿ.ಎಂ.ಸಿ ನೀರು. ಈ ಹಿಂದೆ ತುಮಕೂರಿಗೆ 9 ರಿಂದ 10 ಟಿ.ಎಂ.ಸಿ ನೀರು ಮಾತ್ರ ಬರುತ್ತಿತ್ತು. 0 ಕಿಲೋ ಮೀಟರ್‌ನಿಂದ 72 ಕಿಲೋಮೀಟರ್‌ವರೆಗೆ ನಾಲೆಯನ್ನು ಆಧುನಿಕರಣ ಮಾಡಿದ್ದರಿಂದ ತುಮಕೂರಿಗೆ ಮೊದಲು ಬರುತ್ತಿದ್ದ 9 ಟಿ.ಎಂ.ಸಿ ನೀರಿನ ಜೊತೆಗೆ 14 ರಿಂದ 15 ಟಿ.ಎಂ.ಸಿ ನೀರು ಹೆಚ್ಚಿಗೆ ಬರುತ್ತಿದೆ. ಮಾನ್ಯ ಸದಸ್ಯರು ಹೇಳುವಂತೆ ಅದು ಯಾವುದೋ ಒಂದು ಕಾಲುವೆ ಅಲ್ಲ. ಅದು ಬಹಳ ಮಹತ್ವವಾದಂತಹ ಕಾಲುವೆ. ಉಳಿದವುಗಳಿಗೆ norms ಇದೆ. ಆ norms ಪ್ರಕಾರ, per hector

ಗೆ 800 ರೂಪಾಯಿಗಳ ಪ್ರಕಾರ ಕೊಡುತ್ತೇವೆ. ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಎಲ್ಲಿ ಅವಶ್ಯಕತೆ ಇದೆ, ಅದರ ಬಗ್ಗೆ ಸಭೆ ಏನು ನಿರ್ಣಯ ಕೊಟ್ಟಿದೆ, ಅದನ್ನು ನಾನು attend ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 3052**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಬೀದರ್, ಗುಲ್ಬರ್ಗ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ ಹಾಗೂ ಹರಪನಹಳ್ಳಿ ಈ ಭಾಗಗಳಲ್ಲಿನ ಜವಳಿ ಪಾರ್ಕ್‌ಗಳ ಬಗ್ಗೆ ಪ್ರಶ್ನೆ ಮಾಡಿದ್ದೆ. ಈ ಭಾಗಗಳಲ್ಲಿನ ಜವಳಿ ಪಾರ್ಕ್‌ಗಳು (textile park) ಸಂಪೂರ್ಣ ಯೋಜನಾ ಮಾಹಿತಿ ಅಂದರೆ, ಎಷ್ಟು ಎಕರೆಗಳನ್ನು ಸ್ವಾಧೀನ ಪಡಿಸಿಕೊಂಡು ಎಷ್ಟು ನಿವೇಶನಗಳನ್ನು ಮಾಡಲಾಗಿದೆ. ಇದಕ್ಕೆ ಯೋಜನಾ ವೆಚ್ಚ ಎಷ್ಟು ಎಂಬ ಪ್ರಶ್ನೆಗಳನ್ನು ಕೇಳಿದ್ದೆ. ಮತ್ತೆ ಉದ್ಯಮ ಮಾಹಿತಿ ಬಗ್ಗೆಯೂ ಕೇಳಿದ್ದೆ. ಎಷ್ಟು ಉದ್ಯಮಗಳು ಅಲ್ಲಿಗೆ ಬಂದಿದ್ದು, ಅವುಗಳು ಎಷ್ಟು ಬಂಡವಾಳ ಹೂಡಿಕೆ ಮಾಡಿದೆ ಮತ್ತು ಅದರ ಜೊತೆಗೆ ಎಷ್ಟು ಉದ್ಯೋಗಗಳು ಸೃಷ್ಟಿಯಾದವು ಎನ್ನುವಂತಹ ಪ್ರಶ್ನೆಯನ್ನು ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಬಳ್ಳಾರಿ ಮತ್ತು ಕಲಬುರಗಿಯಲ್ಲಿ ಜವಳಿ ಪಾರ್ಕ್ ಮಾಡಿದ್ದೇವೆ. ಯಾದಗಿರಿ ಜಿಲೆಯಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ ಎಂಬ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ, ಬಳ್ಳಾರಿಯ ಬಗ್ಗೆ ಒಂದು ಅಂಕಿ-ಅಂಶಗಳ ಪಟ್ಟಿಯನ್ನು ಬಹಳ ವಿವರವಾಗಿ ಕೊಟ್ಟಿದ್ದಾರೆ. ಇದರಲ್ಲಿ ಪತ್ರಿ ಘಟಕಕ್ಕೆ ಅರ್ಧ ಎಕರೆಯಂತೆ ರೂ.10.5 ಲಕ್ಷ ದರ ನಿಗದಿಪಡಿಸಿ 83 ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಸರ್ಕಾರದಿಂದ 3 ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಅನುದಾನವೆಂದು ಕೆ.ಐ.ಡಿ.ಬಿ.ಎ.ಗೆ ನೀಡಲಾಗಿದೆ. ಈ ಜವಳಿ ಪಾರ್ಕ್‌ನಲ್ಲಿ 5 ಜೀನ್ಸ್ ವಾಷಿಂಗ್ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಇವುಗಳ ಒಟ್ಟು ಬಂಡವಾಳ ಹೂಡಿಕೆ 319.00 ಲಕ್ಷಗಳಾಗಿದ್ದು, ಒಟ್ಟಾರೆ 966 ಜನರಿಗೆ ಉದ್ಯೋಗ ದೊರೆತ್ತಿರುತ್ತದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಇದನ್ನು ಲೆಕ್ಕ ಮಾಡಿ ನೋಡಿದಾಗ, 256 ಜನರಿಗೆ ಅಷ್ಟೇ ಉದ್ಯೋಗ ಸಿಕ್ಕಿದೆ. ಮಾನ್ಯ ಸಚಿವರು ಇದನ್ನು clarify ಮಾಡಬೇಕು. ಮತ್ತೆ ಬಳ್ಳಾರಿಯಲ್ಲಿ ಅರ್ಧ ಎಕರೆಗೆ 10.5 ಲಕ್ಷ ರೂಪಾಯಿಗಳು ನಿಗದಿಪಡಿಸಿದೆ ಎಂದು ಹೇಳಿದ್ದಾರೆ. ಅಂದರೆ, ಒಂದು ಎಕರೆ, 21 ಲಕ್ಷ ರೂಪಾಯಿಗಳು ಆಯಿತು. ಇದು ಸ್ವಲ್ಪ ಜಾಸ್ತಿ ಆಯಿತು.

ಈಗ ಕಲಬುರಗಿಯಲ್ಲಿ ಸಹ ಜವಳಿ ಪಾರ್ಕ್‌ನ್ನು ಸ್ಥಾಪನೆ ಮಾಡಿದ್ದಾರೆ. ಕಲಬುರಗಿಯಲ್ಲಿ ಒಂದು ಎಕರೆಗೆ 5.4 ಲಕ್ಷ ರೂಪಾಯಿಗಳಂತೆ ಒಟ್ಟು 50 ಎಕರೆಗಳನ್ನು ತೆಗೆದುಕೊಂಡು ಇದಕ್ಕೆ 2.7 ಕೋಟಿ ರೂಪಾಯಿಗಳು ಪಾವತಿಯಾಗಿದೆ. ಇದರಲ್ಲಿ ಸ್ಪೆಷಲ್ ಪರ್ಪಸ್ ವೆಹಿಕಲ್ ಮಾಡಿದ್ದಾರೆ. ಸುವರ್ಣ ವಸ್ತ್ರ ನೀತಿ ಯೋಜನೆಯಡಿ 2 ಕೋಟಿ ರೂಪಾಯಿಗಳನ್ನು KIADB (Karnataka Industrial Area Development Board) ಗೆ ಪಾವತಿ ಮಾಡಿದ್ದಾರೆ. ಸಂಪೂರ್ಣವಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾದ ಮೇಲೆ ಕೆ.ಐ.ಡಿ.ಬಿ.ಐ.ಯವರು ಹಂಚಿಕೆ ಮಾಡಿರುತ್ತಾರೆ. ಅದಾದ ಮೇಲೆ ಮತ್ತೆ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗಾಗಿ ಎಂದು 2.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಹಣವನ್ನು ಕೊಟ್ಟಿರುವುದು ಏಕೆ? ಇದು ಒಂದು. ಎರಡನೆಯದು, ಕಲಬುರಗಿಯಲ್ಲಿ ಎಷ್ಟು ಉದ್ಯಮಗಳು ಬಂದಿದ್ದವೆ, ಎಷ್ಟು ಬಂಡವಾಳ ಹೂಡಿಕೆ ಆಗಿದೆ? ಎಷ್ಟು ಉದ್ಯೋಗಗಳು ಸೃಷ್ಟಿಯಾಗಿದೆ ಎಂಬುದರ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಮೂರನೆಯದು, 2.5 ಕೋಟಿ ರೂಪಾಯಿಗಳ ಮೇಲೆ ಏನಾದರೂ ಲೋಕಾಯುಕ್ತಕ್ಕೆ ದೂರು ಬಂದಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು. ಮತ್ತೆ ಇವತ್ತು ಯಾದಗಿರಿ ಮತ್ತು ಕಡೆಚೂರು ಮತ್ತು ಬಾಡಿಹಾಳದಲ್ಲಿ ಅಂತರಾಷ್ಟ್ರೀಯ ಮಟ್ಟದ ಜವಳಿ ಪಾರ್ಕ್‌ನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಸಾವಿರ ಎಕರೆಯನ್ನು ದಿನಾಂಕ 05.10.2013 ರಂದು ಸ್ವಾಧೀನ ಪಡಿಸಿಕೊಂಡಿದ್ದಾರೆ. ಇವತ್ತಿಗೆ ನಾಲ್ಕು ವರ್ಷಗಳು ಆಗಿವೆ. ಇಲ್ಲಿ ಮಾನ್ಯ ಸಚಿವರು ಇದನ್ನು ಬಹಳ ಮುಕ್ತವಾಗಿ ಒಪ್ಪಿಕೊಂಡು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ರೈತರಿಂದ ಸಾವಿರಾರು ಎಕರೆಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ನಾಲ್ಕು ವರ್ಷಗಳಾದರೂ ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ ಎಂದರೆ, ಈ ಭೂಮಿಯನ್ನು ಏನು ಮಾಡುತ್ತಾರೆ? ಹೊಸ ಕಾನೂನು ಪ್ರಕಾರ, ರೈತರಿಂದ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಐದು ವರ್ಷಗಳಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನನ್ನು ಉಪಯೋಗಿಸದಿದ್ದರೆ ಅದನ್ನು ರೈತರಿಗೆ ವಾಪಸ್ಸು ಕೊಡಬೇಕೆಂದು ಇದೆ. ಈ ನಿಟ್ಟಿನಲ್ಲಿ ಸರ್ಕಾರದಲ್ಲಿ ಇರುವಂತಹ ಯೋಜನೆಗಳು ಏನು?

(706) 11:30 14-06-2017 CS.VK

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದೇನೆ. ಅದಕ್ಕೆ ಪೂರಕವಾಗಿ ಒಂದೆರಡು ವಿಚಾರಗಳನ್ನು ಮಾನ್ಯ

ಸದಸ್ಯರು ಪ್ರಸ್ತಾಪಿಸಿದ್ದಾರೆ. ಯಾದಗಿರಿಯಲ್ಲಿ ಸುಮಾರು 3000 ಎಕರೆ ಭೂಮಿಯನ್ನು ಗುರುತಿಸಿದ್ದೆವು, ಆದರೆ ಅಲ್ಲಿ ಯಾರು ಆಸಕ್ತ ಉದ್ಯಮಿಗಳು ಉದ್ದಿಮೆ ನಡೆಸಲು ಮುಂದೆ ಬರಲಿಲ್ಲ. ನಾನು Shahi Exports Pvt Ltd., ಅವರನ್ನು ಕೂಡ ಕರೆದು ಮಾತನಾಡಿದ್ದೆನು, ಆದರೆ ಅವರು ಇಲ್ಲಿ ಉದ್ದಿಮೆಯನ್ನು ಪ್ರಾರಂಭ ಮಾಡಲು ಇಚ್ಚಿಸದೇ ಬೇರೆ ಕಡೆಗೆ ಹೋದರು. ನಾನು ಬಾಂಬೆಗೆ ಹೋದಾಗ ಮತ್ತು ನಾವು ಏಲ್ಲೆಲ್ಲಿ conference ಗಳನ್ನು ನಡೆಸಿದೆವು, ಅಲ್ಲೆಲ್ಲಾ ಬಂಡವಾಳ ಹೂಡಿಕೆದಾರರಿಗೆ ನೀವು ಬಂಡವಾಳವನ್ನು ಹಾಕಿ ಉದ್ದಿಮೆಯನ್ನು ಪ್ರಾರಂಭಿಸಿದರೆ 2013–2018ರ ನೂತನ ಜವಳಿ ನೀತಿಯಲ್ಲಿ ಸಿಗತಕ್ಕ ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆ ಎಂದು ಹೇಳಿದ್ದೆವು. ಆದರೆ ಯಾದಗಿರಿಯಲ್ಲಿ ಉದ್ದಿಮೆಯನ್ನು ಪ್ರಾರಂಭಿಸಲು ಯಾರು ಮುಂದೆ ಬರುತ್ತಿಲ್ಲ. ಈಗಾಗಲೇ 1000 ಎಕರೆ ಭೂಮಿ ನಮ್ಮ ತಾಬದಲ್ಲಿದೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಗಳೆ, ಯಾವುದೇ ಯೋಜನೆಗಾದರೂ ಸಹ ಪ್ಲಾನಿಂಗ್ ಮಾಡದೇ 3000 ಎಕರೆಯಷ್ಟು ಭೂಮಿಯನ್ನು ರೈತರಿಂದ ವಶ ಮಾಡಿಕೊಂಡಿರುವುದು ಯಾವ ನ್ಯಾಯ? ಇಲಾಖೆಯವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ? potentiality ಇರುವ ಕಡೆಗಳಲ್ಲಿನ ಭೂಮಿಯನ್ನು ಗುರುತಿಸಬೇಕಿತ್ತಲ್ಲವೇ? ಎಲ್ಲಿ ಕೈಗಾರಿಕೆಗಳು ಬರಬೇಕು, ಎಲ್ಲಿ ಜವಳಿ ಪಾರ್ಕ್ ಬರಬೇಕು, ಎನ್ನುವುದರ ಬಗ್ಗೆ ಏಕೆ ನಿಖರವಾಗಿ ಸರ್ವೆ ಮಾಡಿಲ್ಲ? ತಪ್ಪಾಗಿ ಭೂಮಿಯನ್ನು ಗುರುತಿಸಿ ರೈತರ ಹೊಟ್ಟೆಯ ಮೇಲೆ ಏಕೆ ಹೊಡೆಯಲಾಗಿದೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಬೆಳಗಾವಿ ಜಿಲ್ಲೆಯಿಂದ ಬಂದವರು ಅಲ್ಲಿನ ಬೋರ್‌ಗಾವ್ ನಲ್ಲಿ ಜವಳಿ ಪಾರ್ಕ್ ಮಾಡುವ ಬಗ್ಗೆ ಘೋಷಣೆ ಆಗಿತ್ತು.

**ಸಭಾಪತಿಯವರು:–** ಈಗ ಬೆಳಗಾವಿಯ ವಿಚಾರ ಬೇಡ. ಈಗ ಬಂದಿರುವ ಪ್ರಶ್ನೆಗೆ ಸಚಿವರು ಉತ್ತರ ನೀಡಲಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಗಳೇ, ಈಗ ಯಾದಗಿರಿಯಲ್ಲಿ ಸಮಸ್ಯೆ ಆಗಿದೆ. ಅಲ್ಲಿ ಜನರನ್ನು ಆಕರ್ಷಿಸಿ, ಅಲ್ಲಿ ಒಂದು ತರಬೇತಿ ಕೇಂದ್ರವನ್ನು ತೆರೆಯಬೇಕೆಂದು ಈಗಾಗಲೇ ಹಣವನ್ನು ಕೂಡ ನೀಡಲಾಗಿದೆ. ಕಡೇ ಪಕ್ಷ ಅಲ್ಲಿ ಬರುವವರಿಗಾದರೂ ತರಬೇತಿಯನ್ನು ನೀಡಬೇಕೆನ್ನುವುದು ನಮ್ಮ ಒಂದು ವಿಚಾರ. ನಾವು ಹೊರಗಿನ ಎಲ್ಲಾ ಕಂಪನಿಗಳಿಗೂ ಸಹ ಇಲ್ಲಿ

ಉದ್ದಿಮೆಯನ್ನು ಪ್ರಾರಂಭಿಸಿದರೆ ನಾವು ಸರ್ಕಾರದಿಂದ ನೀಡುವ ಎಲ್ಲಾ ಸವಲತ್ತುಗಳನ್ನು ನೀಡುತ್ತೇವೆ, ಬಂಡವಾಳ ಹೂಡಿಕೆ ಮಾಡಿ ಎಂದು ಆಹ್ವಾನವನ್ನು ಕೊಟ್ಟಿದ್ದೇವೆ. ಆದರೆ ಈಗ ಗುರುತಿಸಿರುವ ಜಾಗ ಎರಡು ಸಿಟಿಯಿಂದಲೂ ಕೂಡ ಬಹಳ ದೂರದಲ್ಲಿದೆ. ಇದನ್ನು ನಾವು ಮೊದಲೇ ಯೋಚನೆ ಮಾಡಬೇಕಾಗಿತ್ತು.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲೇ ಪ್ಲಾನ್ ಮಾಡದೇ ರೈತರ ಭೂಮಿಯನ್ನು ಏಕೆ ವಶಪಡಿಸಿಕೊಂಡಿದ್ದಾರೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಅಲ್ಲಿ ಸಾಕಷ್ಟು ಭೂಮಿ ಇದೆ ಮುಂದೆ ಇಲ್ಲಿಗೆ ಬಸ್ ಸಂಪರ್ಕ ಒದಗಿಸಬಹುದು ಎನ್ನುವ ಆಲೋಚನೆಯಿಂದ ಈ ಜಾಗವನ್ನು ಗುರುತಿಸಿದ್ದಾರೆ. ನಾವು ಇನ್ನಷ್ಟು ಪ್ರಯತ್ನವನ್ನು ಮಾಡುತ್ತೇವೆ. ನಾಳೆ ಇನ್ನು 2-3 ಕಡೆ ಕಾನ್ಫರೆನ್ಸ್ ನಡೆಯಲಿದೆ.

**Sri K.B. SHANAPPA:-** They cannot do it. ರೈತರಿಂದ ಪಡೆದ ಜಮೀನಿನ ಬಳಕೆ ಆಗದಿದ್ದರೆ ರೈತರ ಜಮೀನುಗಳನ್ನು ರೈತರಿಗೆ ವಾಪಸ್ ಕೊಟ್ಟುಬಿಡಿ. When it is not materialising, please return it back to them.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಈ ಜಾಗ ಎರಡು ಸಿಟಿಗಳಿಂದ ದೂರ ಇರುವುದರಿಂದ ಜನವಸ್ತಿ ಇಲ್ಲದೇ ಇರುವ ಕಾರಣ ಅಲ್ಲಿ ಬಂಡವಾಳ ಹೂಡಲು ಯಾರು ಮುಂದಕ್ಕೆ ಬರುತ್ತಿಲ್ಲ. ಆದ್ದರಿಂದ ಈ ವಿಚಾರದ ಬಗ್ಗೆ ನಾನು ಮತ್ತೆ ಮರುಪರಿಶೀಲಿಸಿ, ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು action plan ಮಾಡಬೇಕು, ಮುಂಬೈ ಮತ್ತು ಹೈದರಾಬಾದ್ ಭಾಗದಲ್ಲಿ ಎಲ್ಲೆಲ್ಲಿ road show ಗಳನ್ನು ಮಾಡಬೇಕೆನ್ನುವ ಮಾತನ್ನು ಹೇಳಿದ್ದಾರೆ ಆ ಪ್ರಯತ್ನಗಳನ್ನು ಮಾಡಿ. ಆ ಭಾಗದಲ್ಲಿ ಉದ್ಯೋಗಗಳ ಸೃಷ್ಟಿ ಮಾಡಬೇಕು,

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಆ ನಿಟ್ಟಿನಲ್ಲಿ ಏನೇನು ಮಾಡಲು ಸಾಧ್ಯತೆ ಇದೆ, ಅದನ್ನೆಲ್ಲ ಮಾಡಿ, ಇನ್ನೊಮ್ಮೆ ಎಲ್ಲಾ ಬಂಡವಾಳ ಹೂಡಿಕೆದಾರರನ್ನು ಕರೆಯಿಸಿ ಸಭೆ ನಡೆಸಲಾಗುವುದು.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆಲ್ಲ ಒಂದು deadline ಇಟ್ಟುಕೊಳ್ಳಬೇಕು, ಇಲ್ಲದಿದ್ದರೆ 5 ವರ್ಷ ಆದಮೇಲೆ ಏನೂ ಮಾಡದಿದ್ದರೆ ರೈತರ ಜಮೀನು ಹಿಂದಕ್ಕೆ ನೀಡಬೇಕಾಗುತ್ತದೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಇನ್ನು ಸದಸ್ಯರು ಕಲುಬುರ್ಗಿಯ ಜವಳಿ ಪಾರ್ಕಿನ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ನನ್ನನ್ನು ಅಲ್ಲಿಗೆ ಕರೆದಿದ್ದ ಹಿನ್ನಲೆಯಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಅದನ್ನು ಸರಿಪಡಿಸಿಕೊಡುವ ಭರವಸೆಯನ್ನು ಅವರಿಗೆ ನೀಡಿದ್ದೆನು. ಅದನ್ನೆಲ್ಲ ಈಗಾಗಲೇ ಸರಿಪಡಿಸಿದ್ದೇನೆ. ನಾನು ಕೂಡ ಅಲ್ಲಿನ ಜವಳಿ ಪಾರ್ಕ್‌ಗೆ ಭೇಟಿ ನೀಡಿದ್ದೇನೆ, ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಅಲ್ಲಿಗೆ ಭೇಟಿಯನ್ನು ನೀಡಿ, ಆದಷ್ಟು ಬೇಗ ಈ ಕೆಲಸ ಆಗಬೇಕೆಂದು ಹೇಳಿದ್ದರು. SPV ಮಾಡಿರುವಂತಹವರು 1 ಕೋಟಿ ರೂಪಾಯಿಯಷ್ಟು ಬಂಡವಾಳವನ್ನು ಹಾಕಿದ್ದಾರೆ. ಇನ್ನೂ ಸಹ ಅವರು ತಮ್ಮ ಪಾಲಿನ ಬಂಡವಾಳವನ್ನು ಹೂಡಬೇಕು. ಕೇಂದ್ರಸರ್ಕಾರದಿಂದ ಬರುವ ಹಣವನ್ನು ಪಡೆಯಲು ಸಹ ನಾವು ಈಗಾಗಲೇ ಪತ್ರವನ್ನು ಬರೆದಿದ್ದೇವೆ. ರಾಜ್ಯಸರ್ಕಾರದಿಂದ ನೀಡಬೇಕಾಗಿದ್ದ ಹಣವನ್ನು ನಾವು ನೀಡಿದ್ದೇವೆ. ಮೊನ್ನೆ ದಿವಸ ಸಹ ಅವರಿಗೆ ಆದಷ್ಟು ಬೇಗನೆ ಕೆಲಸ ಪ್ರಾರಂಭಿಸುವುದಕ್ಕೆ ಹೇಳಿದ್ದೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ KIADB ಗೆ 2 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಇದು ಸಂಪೂರ್ಣವಾಗಿ ಅಭಿವೃದ್ಧಿಗೊಂಡಿರುವ ಒಂದು ಜವಳಿ ಪಾರ್ಕ್, ಅದರ ಮೂಲಭೂತಸೌಕರ್ಯಗಳಿಗಾಗಿ ಎಂದು ಮತ್ತೆ ಎರಡೂವರೆ ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಈ ಹಣ ಏಕೆ ನೀಡಲಾಯಿತು, ಮತ್ತು ಇದರ ಮೇಲೆ ಲೋಕಾಯುಕ್ತಕ್ಕೆ ದೂರು ಏನಾದರೂ ನೀಡಲಾಗಿದೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಅದರ ಮೇಲೆ ಈಗಾಗಲೇ ತನಿಖೆ ನಡೆಸಲಾಗಿದೆ. ಅಂತಹದ್ದು ಏನೂ ಆಗಿಲ್ಲ,

**ಶ್ರೀ ಅಮರನಾಥ ಪಾಟೀಲ್:-** ಲೋಕಾಯುಕ್ತದಿಂದ ಏನಾದರೂ ವರದಿ ಬಂದಿದೆಯೇ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಇಲಾಖೆಯಿಂದ ಮಾಹಿತಿಯನ್ನು ತರಿಸಿಕೊಡುತ್ತೇನೆ. ಜೊತೆಗೆ ಮಾನ್ಯ ಸದಸ್ಯರು ಹರಪನಹಳ್ಳಿಯಲ್ಲಿ ಜವಳಿ ಪಾರ್ಕನ್ನು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪ್ರಾರಂಭಿಸಲಾಗುವುದೇ ಎನ್ನುವ ಪ್ರಶ್ನೆಯನ್ನು ಕೇಳಿದ್ದರು. ಹರಪ್ಪನಹಳ್ಳಿಯಲ್ಲಿ ಜವಳಿ ಪಾರ್ಕ್ ನಿರ್ಮಿಸುವುದಕ್ಕೆ ನಮಗೆ ಯಾವುದೇ ಪ್ರಸ್ತಾವನೆಗಳು ಬಂದಿಲ್ಲ. ಆದ್ದರಿಂದ ಅಲ್ಲಿ ಜವಳಿ ಪಾರ್ಕ್ ನಿರ್ಮಿಸುವ ಪ್ರಮೇಯವೇ ಇಲ್ಲ ಎನ್ನುವ ವಿಚಾರವನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ 966 ಜನರಿಗೆ ಉದ್ಯೋಗ ನೀಡಲಾಗುವುದು ಎಂದಿದ್ದರೆ ಟೋಟಲ್‌ನಲ್ಲಿ 256 ಎಂದಿದೆ,

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರದಲ್ಲಿ ಉದ್ದೆಗಳ ಸಂಖ್ಯೆ ಕಡಿಮೆ ಆಗಿದೆ ಎನ್ನುವ ವಿಚಾರದ ಬಗ್ಗೆ ನಾನು ಇಲಾಖೆಯ ಜೊತೆಯಲ್ಲಿ ಚರ್ಚಿಸಿ, ಮಾನ್ಯ ಸದಸ್ಯರಿಗೆ ಲಿಖಿತವಾಗಿ ಉತ್ತರ ನೀಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ನಗರದ್ದು ಎಷ್ಟು ದಿವಸದಲ್ಲಿ ಮಾಡುತ್ತಾರೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ಮತ್ತು ಬಳ್ಳಾರಿಯ ಜವಳಿ ಪಾರ್ಕ್ ಅನ್ನು ಕೂಡ declare ಮಾಡಿದ್ದೇವೆ. ಅಲ್ಲಿ ಯಾವುದೇ ತೊಂದರೆ ಇಲ್ಲದೆ ಅವು ಪೂರ್ಣಪ್ರಮಾಣದಲ್ಲಿ ನಡೆಯುತ್ತಿವೆ. ಗುಲ್ಬರ್ಗಾದಲ್ಲಿ SPV ನವರು ಹಣ ಕಟ್ಟದಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಅವರಿಗೆ ನೋಟಿಸ್ ನೀಡಲಾಗಿದೆ. ಗುಲ್ಬರ್ಗಾಕ್ಕೆ ನಾನೇ ಸ್ವತಃ ಬಂದು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಒಂದು ಅವಕಾಶ ಕೇಳಿದ ಹಿನ್ನಲೆಯಲ್ಲಿ ಅವರಿಗೆ ಒಂದು ಅವಕಾಶವನ್ನು ನೀಡಲಾಗಿದೆ. ಹಾಗೂ ಅವರು ಮಾಡದಿದ್ದರೆ ಕಾನೂನಿನ ರೀತ್ಯಾ ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಮಾನ್ಯ ಸದಸ್ಯರು ಗೋರ್‌ಗಾವ್ ಬಗ್ಗೆ ಕೇಳಿದರು, ನಾನು ಅಲ್ಲಿಗೂ ಸಹ ಭೇಟಿಯನ್ನು ನೀಡಿದ್ದೆನು. ಅಲ್ಲಿನ ಹಿತ್ತಲ್ ಕರಂಜಿಯಲ್ಲಿ ಪವರ್ ಸಪ್ಲೈ ಕಡಿಮೆ ಆಗುತ್ತಿದೆ. ನಮ್ಮ ಕರ್ನಾಟಕದಲ್ಲಿ ಹೆಚ್ಚಿಗೆ ಮಾಡುವ ಸಲುವಾಗಿ ನಮ್ಮ ಆಯವ್ಯಯದಲ್ಲಿ ಅದಕ್ಕೆ 50% ಅನ್ನು ನೀಡಬೇಕಾಗುತ್ತದೆ. ಇಲ್ಲಿ 99 ವರ್ಷಗಳಿಗೆ ನೀಡುತ್ತಿದ್ದ ಹಿನ್ನಲೆಯಲ್ಲಿ ಈ ಯೋಜನೆಗೆ ಯಾರು ಮುಂದಕ್ಕೆ ಬರುತ್ತಾ ಇರಲಿಲ್ಲ. ಹಾಗಾಗಿ ಈ ಅವಧಿಯನ್ನು ಹತ್ತು ವರ್ಷಗಳಿಗೆ ನಿಗಧಿ ಮಾಡಲಾಗಿದೆ. ಯಾರು ಮುಂದೆ ಬರುತ್ತಾರೆ ಅವರಿಗೆ 10 ವರ್ಷಗಳ ನಂತರ ಸ್ವಾಧೀನಕ್ಕೆ ನೀಡಬೇಕೆಂದು ಯೋಚನೆ ಮಾಡಿ, ಈಗಾಗಲೇ ನಾವು ಆದೇಶವನ್ನು ಕೂಡ ಮಾಡಿದ್ದೇವೆ. ಹಾಗಾಗಿ ತಾವುಗಳು ಸಹ ಪ್ರಯತ್ನ ಮಾಡಿ, ಗೋರ್‌ಗಾವ್‌ನಲ್ಲಿ

ಯಾವ ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಾರೋ ಅವರಿಗೆ ನಮ್ಮ ಹೊಸ ಜವಳಿ ನೀತಿಯಲ್ಲಿ ದೊರೆಯುವ ಎಲ್ಲಾ ಸವಲತ್ತುಗಳನ್ನು ನೀಡಲಾಗುವುದು.

**ಪ್ರಶ್ನೆ ಸಂಖ್ಯೆ 3053**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ರಾಜ್ಯದಲ್ಲಿ ಬರಪೀಡಿತ ತಾಲ್ಲೂಕುಗಳನ್ನು ಗುರುತಿಸಿರುವ ಬಗ್ಗೆ ಉತ್ತರ ನೀಡಿದ್ದಾರೆ. ಕೇಂದ್ರಸರ್ಕಾರದ ಮಾರ್ಗಸೂಚಿಯಂತೆ ಮುಂಗಾರು ಹಂಗಾಮಿಗೆ 4702 ಕೋಟಿ ರೂಪಾಯಿಗಳು ಮತ್ತು ಹಿಂಗಾರಿಗೆ 3310 ಕೋಟಿ ರೂಪಾಯಿಗಳ ಅನುದಾನಕ್ಕೆ ಬೇಡಿಕೆಯನ್ನು ಇಡಲಾಗಿತ್ತು. ಆದರೆ ನಮಗೆ 1685 ಕೋಟಿ ರೂಪಾಯಿಗಳು ಬಿಡುಗಡೆ ಆಗಿವೆ ಎನ್ನುವುದನ್ನು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. 29757 ರೈತರ ಬ್ಯಾಂಕು ಖಾತೆಗಳಿಗೆ 1530 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಉತ್ತರದಲ್ಲಿ ಕೂಡ ನೀಡಿದ್ದಾರೆ. ಬಾಕಿಯಿರುವ ರೈತರಿಗೆ ಪರಿಹಾರ ಯಾವಾಗ ನೀಡಲಾಗುವುದು ಇದಕ್ಕೆ ಏನಾದರೂ ಕಾಲಮಿತಿ ಇದೆಯೇ ಎಂದು ಕೇಳಿರುವ ಪ್ರಶ್ನೆಗೆ ಬ್ಯಾಂಕ್ ಖಾತೆಗೆ ಆರ್‌ಟಿಎಸ್ ಮತ್ತು ಆಧಾರ್ ಕಾರ್ಡನ್ನು ಲಿಂಕ್ ಮಾಡಿ, ಹೆಸರಿನ ಹೊಂದಾಣಿಕೆ ಆಗಬೇಕು, ಆಗ ನಾವು ಪರಿಹಾರ ಕೊಡುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆಧಾರ್ ಕಾರ್ಡನ್ನು ನೆಪ ಮಾಡಿಕೊಂಡು ಮುಂದೂಡದೆ ಯಾವಾಗ ಪರಿಹಾರವನ್ನು ಪೂರ್ಣಾವತಿ ಮಾಡಲಾಗುವುದು. ಇತ್ತೀಚಿನ ದಿವಸಗಳಲ್ಲಿ ರೈತರ ಖಾತೆಗೆ ಬೆಳೆ ಪರಿಹಾರ ಎಂದು 1 ರೂಪಾಯಿಯನ್ನು ಜಮಾ ಮಾಡಿರುವುದರ ಬಗ್ಗೆ ಹಲವಾರು ಮಾಧ್ಯಮಗಳಲ್ಲಿ ವರದಿ ಪ್ರಕಟ ಮಾಡಿರುವುದನ್ನು ನಾವು ನೋಡಿದ್ದೇವೆ.

(ಮುಂದು)

(707) 11.40 14-06-2017 ಎಂವಿ:ಬಿಎನ್ಎಸ್

**ಶ್ರೀ ಟಿ.ಎ.ಶರವಣ (ಮುಂದು...):–**

ಈ ಒಂದು ರೂಪಾಯಿ ಹಣವನ್ನು ಜಮಾ ಮಾಡಿರುವಂಥದ್ದು ಸರ್ಕಾರದ ವೈಫಲ್ಯವಲ್ಲವೇ? ಸರ್ಕಾರ ಒಂದು ರೂಪಾಯಿ ಹಣವನ್ನು ಜಮಾ ಮಾಡುವುದಕ್ಕೋಸ್ಕರ ಈ ಕಾರ್ಯವನ್ನು ಮಾಡಿದ್ದಾರೆಯೇ? ಎಲ್ಲೋ ಒಂದು ಕಡೆ ರೈತರ ಅಕೌಂಟ್‌ಗಳಿಗೆ ಒಂದು ರೂಪಾಯಿ ಜಮಾ ಮಾಡಿರುವಂಥದ್ದನ್ನು ಇಲಾಖೆಯ ಅಧಿಕಾರಿಗಳೆ ಒಪ್ಪಿಕೊಂಡು ಇದು ಏನೋ ದೋಷವಾಗಿದೆಯೆಂದು ಹೇಳಿದ್ದಾರೆ. ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಇದು ರೈತರಿಗೆ ಅಪಮಾನ ಮಾಡಿದ ಹಾಗೆ

ಅಲ್ಲವೆ? ಈಗ ಉಳಿದಿರುವಂತಹ ಪರಿಹಾರವನ್ನು ಯಾವ ಅವಧಿಯೊಳಗಡೆ ಕೊಡುತ್ತಾರ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎತ್ತಿರುವಂತಹ ಪ್ರಶ್ನೆಗೆ ನಮ್ಮ ಲಿಖಿತ ಉತ್ತರದಲ್ಲಿ ಮಾಹಿತಿ ಇದೆ. ನಾವು ಈಗಾಗಲೇ 22,99,737 ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಪೂರ್ತಿ ಹಣ ಜಮಾ ಮಾಡಲಾಗಿದೆ. ಇನ್ನು ಸುಮಾರು ಎಪ್ಪತ್ತು ಸಾವಿರ ರೈತರಿಗೆ ಪರಿಹಾರವನ್ನು ಕೊಡಬೇಕಾಗಿದೆ. ಇದಕ್ಕೆ ಕಾರಣವೇನೆಂದರೆ, ಮೊದಲ ಬಾರಿಗೆ ನೇರವಾಗಿ ಅವರ ಬ್ಯಾಂಕ್ ಅಕೌಂಟ್‌ಗೆ ಹಣ ಹೋಗುವುದಕ್ಕೆ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಅಕೌಂಟ್‌ಗೆ ಲಿಂಕ್ ಮಾಡಿದ್ದೇವೆ, ಅದು ಬಹಳ ಸುಲಭವಾಗಿದೆ ಮತ್ತು ಚೆನ್ನಾಗಿ ಆಗಿದೆ. ಇದಕ್ಕೆ ಕಾರಣವೇನೆಂದರೆ, ರೈತರ ಬ್ಯಾಂಕ್ ಖಾತೆಗೆ ಒಂದು ರೂಪಾಯಿ ಏಕೆ ಹಾಕಲಾಗಿದೆ ಎಂದು ಹೇಳಿದ್ದಾರೆ. ಅದು ಉದ್ದೇಶಪೂರ್ವಕವಲ್ಲ ಅಥವಾ ಇನ್ನೊಂದು ಅಲ್ಲ. ಕೆಲವು ರೈತರ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಸಂಖ್ಯೆ ಸರಿಯಾಗಿ ಹೊಂದಾಣಿಕೆ ಆಗುತ್ತಿರಲಿಲ್ಲ, ಪಹಣಿಯಲ್ಲಿ ವ್ಯತ್ಯಾಸವಾಗುತ್ತಿತ್ತು, ಹಾಗಾಗಿ ಅದನ್ನು ಸರಿಪಡಿಸಿಕೊಳ್ಳುವ ದೃಷ್ಟಿಯಿಂದ sample ಗೋಸ್ಕರ ಹಾಕಿದ್ದೇವೆಯೆ ವಿನಃ, ಅವರಿಗೆ ಅಷ್ಟೇ ಹಣ ಕೊಡಬೇಕೆಂದಲ್ಲ. ಇವತ್ತಿನ ದಿವಸ ಅದನ್ನು ಹಾಕಿದ ಮೇಲೆ ಎಲ್ಲಿ ಅವರ ಅಕೌಂಟ್‌ಗೆ ಸರಿಯಾಗಿ ಹೋಗಿದೆ ಅವರೆಲ್ಲರಿಗೂ ಕೂಡ ಪೂರ್ಣ ಹಣವನ್ನು ಜಮಾ ಮಾಡಿದ್ದೇವೆ. ಆದುದರಿಂದ ಉಳಿದಿರುವಂತಹ ರೈತರಿಗೂ ಕೂಡ ಹಣವನ್ನು ಬೇಗ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು. ಒಂದು ವೇಳೆ ಆಧಾರ್ ಕಾರ್ಡ್ ಸಂಖ್ಯೆ ಸರಿಯಾಗಿ ಲಿಂಕ್ ಆಗದಿದ್ದರೆ, ನೇರವಾಗಿ ಅವರ ಮನೆಗೆ ಹೋಗಿ ಚೆಕ್ಕನ್ನು ಕೊಡುವಂತಹ ಕೆಲಸವನ್ನು ಜಿಲ್ಲಾಧಿಕಾರಿಗಳು ಮಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಅನುಭವಸ್ಥರು, ಕೇಂದ್ರ ಸರ್ಕಾರದಿಂದ ಬಂದಂತಹ ಹಣ, ಇದನ್ನು ಘೋಷಣೆ ಮಾಡಿರುವುದು ಡಿಸೆಂಬರ್ ತಿಂಗಳಿನಲ್ಲಿ ಇದು ತಮಗೂ ಗೊತ್ತಿದೆ. ಹೋದ ವರ್ಷ ಡಿಸೆಂಬರ್ ತಿಂಗಳಿನಲ್ಲಿ 1,685 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತೇವೆಂದು ಘೋಷಣೆ ಮಾಡಿದರು. ಘೋಷಣೆ ಮಾಡಿದ ತಕ್ಷಣ, ಸರ್ಕಾರದ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರ್‌ಗಳು ಮತ್ತು ತಹಶೀಲ್ದಾರರು ಎಲ್ಲರೂ active ಆಗಿ. ಕೇಂದ್ರದಿಂದ ಇಷ್ಟು ಹಣ ಬರುತ್ತಿದೆ, ರೈತರ ಆಧಾರ್ ಸಂಖ್ಯೆಯನ್ನು ಅವರ ಬ್ಯಾಂಕ್ ಅಕೌಂಟ್‌ಗೆ ಜೋಡಿಸಬೇಕಾಗಿತ್ತು. ಅದನ್ನು ಬಿಟ್ಟು ಅವರು ಏನು ಮಾಡುತ್ತಿದ್ದರು? ಮಾನ್ಯ ಸಭಾಪತಿಯವರೇ, ಆ ರೈತರಿಗೆ ಕೇಂದ್ರದಿಂದ ಬೆಳೆ ಪರಿಹಾರಕ್ಕಾಗಿ ಬಂದಿರುವ ಹಣ, ಕರ್ನಾಟಕ

ರಾಜ್ಯದ್ದು ಒಂದು ಪೈಸೆ ಕೂಡ ಇಲ್ಲ. ಕೇಂದ್ರದಿಂದ ಹಣ ಬರುತ್ತದೆಂದು ಡಿಸೆಂಬರ್‌ನಲ್ಲಿ ಘೋಷಣೆ ಆಗಿದೆ. ಆದರೆ 31ನೇ ಮಾರ್ಚ್‌ನಲ್ಲಿ ಬಂದಿರುವುದು. ಆರು ತಿಂಗಳ ನಂತರ ಈ ಬೇಜವಾಬ್ದಾರಿ ಅಧಿಕಾರಿಗಳು ರೈತರ ಬ್ಯಾಂಕ್ ಖಾತೆಗೆ ಒಂದು ರೂಪಾಯಿ, ಎರಡು ರೂಪಾಯಿ, ಐವತ್ತು ರೂಪಾಯಿಗಳನ್ನು ಹಾಕಿದ್ದಾರೆ. ಬರಗಾಲದ ಸಂದರ್ಭದಲ್ಲಿ ಹಣ ಸಿಗುತ್ತದೆಂದು ರೈತರು ಒದ್ದಾಡುತ್ತಿದ್ದಾರೆ. ಸರ್ಕಾರ ಸಾಲ ಮನ್ನಾ ಮಾಡಬೇಕೆಂದು ಅವರು ಒದ್ದಾಡುತ್ತಿದ್ದಾರೆ. ಕೇಂದ್ರದಿಂದ ಬಂದಂತಹ ಹಣವನ್ನು ಕೂಡ, ಸಂಬಂಧಪಟ್ಟ ಅಧಿಕಾರಿಗಳು ರೈತರ ಆಧಾರ್ ಸಂಖ್ಯೆಗೂ ಮತ್ತು ಬ್ಯಾಂಕ್ ಖಾತೆಗೆ ಲಿಂಕ್ ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ನಾನು ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿ ಇದಕ್ಕಿಂತ ಬೇರೆ ಕೆಲಸ ಏನು ಎಂದು ಸಿಕ್ಕಾಪಟ್ಟೆ ಗಲಾಟೆ ಮಾಡಿ ಬಂದಿದ್ದೇನೆ. ಅದಕ್ಕೆ ಅವರು ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದರು. ಯಾವ್ಯಾವ ಜಿಲ್ಲೆಯಲ್ಲಿ ಆಗಿಲ್ಲ, ಆ ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾನ್ಯ ಸಚಿವರು ಛೀಮಾರಿ ಹಾಕಬೇಕು. ಕೇಂದ್ರದಿಂದ ಬಂದಂತಹ ಹಣವನ್ನು ಕೊಡುವುದಕ್ಕೆ ನಿಮಗೆ ಏನು ರೋಗವೆಂದು, ನೀವು ನಿಮ್ಮ ಭಾಷೆಯಲ್ಲಿ ಅವರಿಗೆ ಹೇಳಿ, ಅದು ಮಾನ್ಯ ಸಚಿವರಿಗೆ ಬರುತ್ತದೆ. ಇಲ್ಲವಾದರೆ ಅವರು ಖಂಡಿತವಾಗಿ ಕೆಲಸ ಮಾಡುವುದಿಲ್ಲ. ಈಗ ಆರು ತಿಂಗಳಾದರು ಈ ಕೆಲಸವನ್ನು ಮಾಡಿಲ್ಲ. ಯಾವ ಅಧಿಕಾರಿಗಳ ಬಗ್ಗೆ ನೀವು ಕ್ರಮ ತೆಗೆದುಕೊಳ್ಳುತ್ತೀರಿ? ಮಾನ್ಯ ಸದಸ್ಯರಾದಂತಹ ಶ್ರೀ ಟಿ.ಎ.ಶರವಣರವರು ಹೇಳಿದ ಹಾಗೆ ಈ 155 ಕೋಟಿ ರೂಪಾಯಿಗಳ ಬೆಳೆ ಪರಿಹಾರದ ಹಣ ರೈತರಿಗೆ ತಲುಪಬೇಕಾಗಿದೆ. ನೀವು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ವಿಶೇಷ ಸಭೆ ಮಾಡಿ, ಇಷ್ಟು ದಿನಗಳಲ್ಲಿ ಮಾಡಬೇಕೆಂದು ಅವರಿಗೆ time bound ನಿಗದಿ ಮಾಡಿದರೆ ಮಾತ್ರ ಅವರು ಮಾಡುತ್ತಾರೆ. ಇಲ್ಲವಾದರೆ ಆರಾಮವಾಗಿ ಬೆಚ್ಚಗೆ ಮಲಗಿಕೊಂಡು, ಕುಳಿತುಕೊಳ್ಳುತ್ತಾರೆ, ಸರ್ಕಾರ ಯಾವಾಗ ಪರಿಹಾರವನ್ನು ಕೊಡುತ್ತದೆಂದು ಸ್ಪಷ್ಟಪಡಿಸಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಆ ರೀತಿ ತಿಳಿದುಕೊಳ್ಳುವುದು ಬೇಡ. ನಾವುಗಳು ಇಚ್ಚಾಶಕ್ತಿಯನ್ನು ಬಳಸಿಕೊಂಡು, ಬಂದಂತಹ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಿದ್ದೇವೆ. ಈ ಹೊಸ ಪದ್ಧತಿಯನ್ನು ತರುವಂತಹ ಉದ್ದೇಶ ಏನೆಂದರೆ, ಹಿಂದಿನ ವರ್ಷ ಬಂದಂತಹ ಹಣವನ್ನು ಕೆಲವು ಸಾರಿ ಹಂಚುವುದಕ್ಕೆ ಆಗಿರುವುದಿಲ್ಲ. ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಜಿಲ್ಲಾಧಿಕಾರಿಗಳು ತಹಶೀಲ್ದಾರ್‌ರವರಿಗೆ ಚೆಕ್ ಕಳುಹಿಸುತ್ತಿದ್ದರು, ಅವರು ಶಿರಸ್ತೇದಾರರ ಮುಖಾಂತರ ಆ ರೈತರಿಗೆ ಚೆಕ್ ಕೊಡುವಂತಹ ಕೆಲಸ ಮಾಡುತ್ತಿದ್ದರು, ಆಗ ಅಲ್ಲಿ corruption ಆಗುತ್ತಿತ್ತು. ಆಗ ಅವರಿಗೆ ಅಕೌಂಟ್ ಇರುತ್ತಿರಲಿಲ್ಲ, ಹೀಗಾಗಿ ಅವರಿಗೆ ಕೊಟ್ಟಂತಹ

ಹಣ ಸಕಾಲದಲ್ಲಿ ತಲುಪಲಿಲ್ಲ ಮತ್ತು ಬಹಳಷ್ಟು ಕಡೆ misuse ಆಗುವಂತಹ ಸನ್ನಿವೇಶಗಳು ನಮಗೆ ಕಂಡು ಬಂತು. ಇದನ್ನು ತಪ್ಪಿಸುವ ದೃಷ್ಟಿಯಿಂದ, ಇದೊಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿರುವುದು, ಈಗ ಏನು 22,99,737 ಜನರಿಗೆ ನಾವು ಪರಿಹಾರದ ಹಣವನ್ನು ಕೊಟ್ಟಿದ್ದೇವೆ ಅದರಲ್ಲಿ ಒಂದು ಪೈಸೆಯೂ ಸಹ ವ್ಯತ್ಯಾಸವಾಗದೆ ರೈತರ ಖಾತೆಗೆ ಹೋಗಿದೆ. ವಾಸ್ತವಿಕವಾಗಿ ನಾವು ಹೇಳಬೇಕಾದರೆ ನಮ್ಮ Village Accountant ಗಳು ಮತ್ತು Revenue Inspector ಗಳು ಬ್ಯಾಂಕ್‌ಗೆ ಹೋಗಿ ಕುಳಿತುಕೊಂಡು, ರೈತರನ್ನೂ ಕರೆಸಿಕೊಂಡು ಅವರ ಅಕೌಂಟ್‌ನ್ನು ಸರಿ ಮಾಡುವಂತಹ ಕೆಲಸವನ್ನು ಮಾಡಿರುವುದರಿಂದ ಈ ಕೆಲಸವಾಗಿದೆ. ತಾವು ಹೇಳಿದ ರೀತಿಯಲ್ಲಿ ಏನು ಈ 155 ಕೋಟಿ ರೂಪಾಯಿ ಇದೆಯಲ್ಲಾ ಅದನ್ನು ಈಗಾಗಲೇ ಜಿಲ್ಲಾಧಿಕಾರಿಗಳ ವಶಕ್ಕೆ ಕೊಟ್ಟಿದ್ದೇವೆ. ಇದು ಹೊಂದಾಣಿಕೆ ಆಗದೆ ಹೋದರೆ, ನಾವು ನೇರವಾಗಿ ಅವರಿಗೆ ಚೆಕ್ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ನಾವು delay ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ, ನಾನು ಈ system ನಲ್ಲಿ ಭ್ರಷ್ಟಚಾರವಾಗಿದೆ ಎಂದು ಹೇಳಲಿಲ್ಲ. ಈ ವ್ಯವಸ್ಥೆ ಸರಿ ಇದೆ, ಅದಕ್ಕೆ ನಾನು appreciate ಮಾಡುತ್ತೇನೆ. ಇಲ್ಲಿರುವ ಪ್ರಶ್ನೆ ರೈತರ ಬ್ಯಾಂಕ್ ಅಕೌಂಟ್ ಇದೆಯೋ, ಇಲ್ಲವೋ ಆ ರೈತರು ಯಾರೆಂದು ಅವರ ಹತ್ತಿರ ಪಟ್ಟಿ ಇದೆ. ಅವರ ಬ್ಯಾಂಕ್ ಅಕೌಂಟ್ ಇದೆಯೋ, ಇಲ್ಲವೋ ಎಂದು ಕೇಳುವುದಕ್ಕೆ ಆರು ತಿಂಗಳು ಬೇಕೆ? ಈಗ ನೀವೇ ಯೋಚನೆ ಮಾಡಿ, ಬ್ಯಾಂಕ್‌ಗೆ ಆ ರೈತರ ವಿಳಾಸ ಮತ್ತು ಮಾಹಿತಿ ಇರುತ್ತದೆ. ಬ್ಯಾಂಕ್ ಅಕೌಂಟ್ ಇದೆ ಎಂದರೆ, ಅವರ ಅಕೌಂಟ್‌ಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುವುದಕ್ಕೆ ಒಂದು ದಿನ ಸಾಕು, ಬೇಡ ಒಂದು ತಿಂಗಳು ತೆಗೆದುಕೊಳ್ಳಲಿ. ಸುಮಾರು ಆರು ತಿಂಗಳಿನಿಂದ ಈ 155 ಕೋಟಿ ರೂಪಾಯಿ ಹಣವನ್ನು ಇಟ್ಟುಕೊಂಡು ಕುಳಿತ್ತಿದ್ದಾರೆ ಎಂದರೆ ಬೇಜವಾಬ್ದಾರಿತನ ಆ ಅಧಿಕಾರಿಗಳದ್ದು ತಾನೆ? ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ತಾವು ಛಡಿ ಹಿಡಿದುಕೊಂಡರೆ ಈ ಕೆಲಸವಾಗುತ್ತದೆ. ಇಲ್ಲವಾದರೆ ಇನ್ನೂ ಆರು ತಿಂಗಳ್ಳಾದರು ಇದು ಆಗುವುದಿಲ್ಲ. ತಾವು ದಯವಿಟ್ಟು ಇದನ್ನು ಮಾಡಿ, ಮಾನ್ಯ ಸಚಿವರಿಗೆ ಆ ಶಕ್ತಿ ಇದೆ. ಇದನ್ನು ಯಾವಾಗ ಮಾಡುತ್ತೀರಿ ಎಂದು ನನಗೆ clear ಮಾಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಹೆಚ್ಚು ಎಂದರೆ ಒಂದು ತಿಂಗಳೊಳಗಾಗಿ ಅದನ್ನು disburse ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಚಿವರು ಹಿರಿಯರಿದ್ದಾರೆ. ಅವರು ತಾವು ವಿಧಾನಸಭಾಧ್ಯಕ್ಷರಾಗಿ ಪೀಠದಲ್ಲಿ ಕುಳಿತಾಗ ಅಧಿಕಾರಿಗಳಿಗಾಗಲಿ, ನಮ್ಮಂತಹ ಶಾಸಕರಿಗಾಗಲಿ ಸದಾ ಚಾಟಿ ಬೀಸುತ್ತಿದ್ದೀರಿ. ಆದರೆ ಈಗ ನಿಮ್ಮ ಇಲಾಖೆಯಲ್ಲಿ ಈ ತರಹ ಏಕೆ ನಡೆಯುತ್ತಿದೆ? ಇವತ್ತಿನ ದಿವಸ ಆರು ತಿಂಗಳು ಆದರೂ ಕೂಡ, ರೈತರಿಗೆ ಬೆಳೆ ಪರಿಹಾರವನ್ನು ಕೊಡಬೇಕಾಗಿರುವುದರಲ್ಲಿ ವಿಳಂಬವಾಗುತ್ತಿದೆ. ಆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುವುದನ್ನು ಒಂದು ಕಡೆ ಇಟ್ಟು. ನಿಮ್ಮ ನಿಯಮವೇನಿದೆ ಅದನ್ನು ಮಾಡಿಕೊಂಡು ಹೋಗಿ. ತಮ್ಮ ಸ್ವಾಭಿಮಾನಕ್ಕೋಸ್ಕರ ಜೀವನವನ್ನು ನಡೆಸುತ್ತಿರುವಂತಹ ರೈತರಿಗೆ ತಕ್ಷಣ ಪರಿಹಾರವನ್ನು ಕೊಡಿ, ಯಾರು ತಪ್ಪು ಮಾಡಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ, ಆ ಒಂದು ರೂಪಾಯಿ ಎಂದು ಇದೆಯಲ್ಲಾ, ನಿಜವಾಗಿಯೂ ಅದನ್ನು ಒಪ್ಪುವಂತಹ ಕೆಲಸವಲ್ಲ. ರೈತ ಸಮುದಾಯಕ್ಕೆ ಅವಮಾನ ಮಾಡಿರುವಂಥದ್ದು, ಇದರ ಬಗ್ಗೆ ಕೂಡ ತನಿಖೆ ಮಾಡಿ, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆಯೂ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಇರಲಿ ಬಿಡಿ, ಮಾನ್ಯ ಸದಸ್ಯರು ಅವರ ಅಭಿಪ್ರಾಯ ಹೇಳುತ್ತಿದ್ದಾರೆ. ಆಯಿತು ಒಂದು ತಿಂಗಳ ಒಳಗೆ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಆ ಒಂದು ರೂಪಾಯಿಯನ್ನು ಕೊಟ್ಟಿರುವುದು ಅವರಿಗೆ ಪಾವತಿ ಮಾಡುವ ದೃಷ್ಟಿಯಿಂದ ಅಲ್ಲ. ಅವರ ಅಕೌಂಟ್ ಸರಿ ಇದೆಯೇ, ಇಲ್ಲವೇ ಎಂದು ಪರಿಶೀಲನೆ ಮಾಡುವ ದೃಷ್ಟಿಯಿಂದ ಮಾಡಿರುವುದು. ಯಾವುದು ಸರಿ ಇದೆಯೆಂದು ಗೊತ್ತಾಯಿತೊ ಅಂತಹ ಖಾತೆಗಳಿಗೆ ಹಣವನ್ನು ಜಮಾ ಮಾಡಿಬಿಟ್ಟಿದ್ದೇವೆ. (ಗೊಂದಲ) ಆಗ ಅಲ್ಲಿ ಹೇಳುವ ಸ್ಥಾನದಲ್ಲಿದ್ದೆ, ಈಗ ಇಲ್ಲಿ ಕೇಳುವ ಸ್ಥಾನದಲ್ಲಿದ್ದೇನೆ. ಅದು ಹಾಗೆ ಅಲ್ಲವೇ?, ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ, ಆಡಳಿತದ ವಿಚಾರದಲ್ಲಿ ನಾನು ಏನು ನಿಶ್ಚಯವನ್ನು ಇಟ್ಟುಕೊಂಡಿದ್ದೆ, ಅದನ್ನು ಅಧಿಕಾರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ. ಇಲ್ಲಿ ಮಾತ್ರ ಒಂದು ಪೈಸೆಯೂ ಕೂಡ ದುರುಪಯೋಗ ಆಗದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ, ಇನ್ನು ಉಳಿದಿರುವುದನ್ನು ಬೇಗ ಕೊಟ್ಟು ಬಿಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆ ಬರುವುದೆ ಇಲ್ಲ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಎಂ.ಎ.ಗೋಪಾಲಸ್ವಾಮಿಯವರದ್ದು.

ಮಾಧ್ಯಮ / ಪತ್ರಿಕಾ ಪ್ರಕಟಣೆಗೆ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 3027**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಯಲುಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಮತ್ತು ಎತ್ತಿನಹೊಳೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರ ಪರಿಹಾರ ನೀಡಲು ಎಕರೆವಾರು ನಿಗದಿಪಡಿಸಿರುವ ಬೆಲೆ ಎಷ್ಟು? ಸರ್ಕಾರದಿಂದ ಇದುವರೆವಿಗೂ ಬಿಡುಗಡೆಯಾಗಿರುವ ಅನುದಾನ ಎಷ್ಟು? ಸದರಿ ಯೋಜನೆಗೆ ಭೂಮಿ ಕಳೆದುಕೊಂಡಿರುವ ಹಿರದನಹಳ್ಳಿ, ಹಾಲಹಳ್ಳಿ, ಕಡಗರಹಳ್ಳಿ ಮತ್ತು ಹೊಸಹಳ್ಳಿ ಭಾಗದ ರೈತ ವರ್ಗಕ್ಕೆ ಎಕರೆಗೆ ಅತೀ ಕಡಿಮೆ ದರ ನಿಗದಿಪಡಿಸಿರುವುದಕ್ಕೆ ಕಾರಣವೇನು? ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿದ್ದೇನೆ. ಅದಕ್ಕೆ ಲಿಖಿತ ಉತ್ತರವನ್ನು ಒದಗಿಸಿದ್ದಾರೆ, ಅಲ್ಲಿನ ರೈತರು ಈಗಾಗಲೇ ಜಮೀನನ್ನು ಕೊಟ್ಟಿದ್ದಾರೆ. ಅಲ್ಲಿನ ಅಕ್ಕಪಕ್ಕದ ಜಮೀನಿನಲ್ಲಿ Home stay ಮತ್ತು Resort ಮಾಡುವುದಕ್ಕೆ ಅಲ್ಲಿ ಒಂದು ಎಕರೆಗೆ 20 ರಿಂದ 25 ಲಕ್ಷ ರೂಪಾಯಿಗಳಿಗೆ ಕೇಳುತ್ತಿದ್ದಾರೆ. ಆದರೆ, ಸರ್ಕಾರದಿಂದ ಒಂದು ಎಕರೆಗೆ ನಾಲ್ಕು ಲಕ್ಷದಿಂದ ಐದು ಲಕ್ಷದವರೆಗೆ ಹಣವನ್ನು ಬಿಡುಗಡೆ ಮಾಡುತ್ತಾರೆ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಈಗ ನನ್ನ ಮನವಿ ಏನೆಂದರೆ ಜಲಾಶಯಗಳಿಗೆ ಮುಳುಗಡೆಯಾಗುವಂತಹ ರೈತರ ಜಮೀನಿಗೆ ಬದಲಿ ಭೂಮಿಯನ್ನೋ, ಯೋಜನಾ ನಿರಾಶ್ರಿತ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಸರ್ಕಾರಿ ಕೆಲಸ ಈ ತರಹದ ಸಹಕಾರ ಮತ್ತು ಅನುಕೂಲವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು, ಮಾನ್ಯ ಸದಸ್ಯರ ಪ್ರಶ್ನೆಗೆ ನೇರವಾಗಿ ಉತ್ತರ ಹೇಳಿಬಿಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಎತ್ತಿನಹೊಳೆ lift component ಏನಿದೆ, ಅದಕ್ಕೆ ಸಕಲೇಶಪುರದಲ್ಲಿ ನಾವು ನೇರ ಖರೀದಿಗೆ ಹೋಗಿದ್ದೇವೆ. ಆ ನೇರ ಖರೀದಿಯನ್ನೂ ಕೂಡ ನಮ್ಮ ನೂತನ ಭೂ-ಸ್ವಾಧೀನ ಕಾಯ್ದೆ ಏನಿದೆ, ಆ ಕಾಯ್ದೆಗೆ ಅನುಗುಣವಾಗಿ ಇವತ್ತಿನ ದಿವಸ ಮಾಡುತ್ತಿದ್ದೇವೆ. ಅಲ್ಲಿ ಕಳೆದ ಹಿಂದಿನ ಮೂರು ವರ್ಷಗಳ ಸಾಲಿನಲ್ಲಿರುವಂತಹ sales deeds ಇರುತ್ತವೆ. ಕ್ರಯದ ಮೌಲ್ಯಗಳಿರುತ್ತವೆ, ಅದನ್ನು ತುಲನೆ ಮಾಡಿ ಅದರ multiplying factors.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(708) 14.06.2017 11.50 LL-BNS

**ಶ್ರೀ ಎಂ.ಬಿ.ಪಾಟೀಲ್:- (ಮುಂದು.)** ಉದಾಹರಣೆಗೆ, ಪಟ್ಟಣ ಕೇಂದ್ರದಿಂದ ಐದು ಕಿಲೋಮೀಟರ್ ಅಂತರದ ಒಳಗೆ ಇರುವ ಪ್ರದೇಶಕ್ಕೆ ಒಂದೂವರೆ ಪಟ್ಟು, ಐದು ಕಿಲೋಮೀಟರ್‌ಗಿಂತಲೂ ಹೆಚ್ಚಿನ ಅಂತರ ಪ್ರದೇಶಕ್ಕೆ ಎರಡು ಪಟ್ಟು ಮತ್ತು ಶೇಕಡ 100 ರಷ್ಟು solatium ಸೇರಿಸಿ ಇವತ್ತಿನ ದಿವಸ ಪರಿಹಾರಧನ ನಿಗದಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿರುವಂತಹ ವಿಷಯ ಬಹಳ ಮಹತ್ವದ್ದಾಗಿದೆ. ಕೆಲವೊಂದು ಕಡೆ ಏನಾಗಿದೆಯೆಂದರೆ, ಉದಾಹರಣೆಗಾಗಿ, ಬೇಲೂರು-ಸಕಲೇಶಪುರ ರಸ್ತೆಗೆ ಬರುವಂತಹ ಜಮೀನುಗಳಿಗೆ ಒಂದು ಕಡೆ sales statistics ಬಹಳ ಜಾಸ್ತಿಯಿದೆ. ಅಲ್ಲಿ ಒಂದು ದರ ಬರುತ್ತದೆ. ಹೀಗಾಗಿ ಒಂದು ಕಡೆ ಖುಷ್ಕಿ ಭೂಮಿಗೆ ಕನಿಷ್ಠ ಪ್ರತಿ ಎಕರೆಗೆ 4 ಲಕ್ಷದ 40 ಸಾವಿರ ರೂಪಾಯಿಗಳಿದ್ದರೆ, ಇನ್ನೊಂದು ಗರಿಷ್ಠ ಪ್ರತಿ ಎಕರೆಗೆ 39 ಲಕ್ಷ ರೂಪಾಯಿಗಳಾಗಿದೆ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ multiplying factors ಮತ್ತು ಶೇಕಡ 50 ರಷ್ಟು ಕ್ರಯದ ಕರಾರು ಮಾಡಿಕೊಂಡು ನಾವು ಭೂ ಪರಿಹಾರವನ್ನು ಕೊಟ್ಟಿದ್ದೇವೆ. ಇನ್ನು ಭೂಮಿ ಕಳೆದುಕೊಂಡ ರೈತರ ಹೆಸರು ಮತ್ತು ಗ್ರಾಮಗಳ ವಿವರ ಕೇಳಿದ್ದಾರೆ. ಅದು 22 ಬುಕ್‌ಲೆಟ್ ಆಗುತ್ತದೆ. ಅದನ್ನು ಕೂಡ ನಂತರ ಒದಗಿಸುತ್ತೇನೆ. ಈ ತಕ್ಷಣ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಅದು 22 ದೊಡ್ಡ ಪುಸ್ತಕಗಳಾಗುತ್ತವೆ. ಆದರೆ, ಮಾನ್ಯ ಸದಸ್ಯರು ಕೇಳಿರುವಂತಹದ್ದು, ಅಲ್ಲಿ ಹೋಮ್ ಸ್ಟೇಗಳೆಲ್ಲವೂ ಕೂಡ sales statistics ನಲ್ಲಿ ಬಂದಿರುತ್ತದೆ. ಆದರೂ, ನಾನು ಈ ಬಗ್ಗೆ ಪುನರ್ ಪರಿಶೀಲಿಸುತ್ತೇನೆ. ಹೋಮ್‌ಸ್ಟೇಗಳನ್ನು ಯಾವ ರೀತಿ ರಿಜಿಸ್ಟ್ರೇಷನ್ ಮಾಡಿದ್ದಾರೆ? ಆ ಕ್ರಯದ ಕರಾರುಗಳಲ್ಲಿ ಏನಿವೆ, ಅವುಗಳೆಲ್ಲವನ್ನೂ ಜಿಲ್ಲಾಧಿಕಾರಿಗಳು ಪರಿಗಣಿಸಿದ್ದಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿರುವಂತಹ ವಿಚಾರವನ್ನು ಮತ್ತೊಮ್ಮೆ ಪರಿಶೀಲಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನ್ಯಾಯ ಏನಾದರೂ ತಪ್ಪಿದ್ದಲ್ಲಿ ಸೂಕ್ತವಾದಂತಹ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇನೆ.

ಎರಡನೆಯದಾಗಿ, ಪರ್ಯಾಯ ಜಮೀನು ಅಲ್ಲಿ ಲಭ್ಯತೆಯಿದ್ದರೆ ಅದನ್ನು ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಒಂದು ವೇಳೆ ಆ ರೀತಿಯ ಜಮೀನು ಇದ್ದರೆ ಅದನ್ನು ನಾವು ಪರಿಗಣಿಸುತ್ತೇವೆ ಮತ್ತು ಇನ್ನಿತರ ಸೌಲಭ್ಯಗಳು ಸಿಗಬೇಕೆಂದು ಹೇಳಿದ್ದಾರೆ. ನೂತನ ಭೂ ಸ್ವಾಧೀನ ಕಾಯ್ದೆಯ ಪ್ರಕಾರ ಏನೆಲ್ಲಾ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ ಅವುಗಳನ್ನು ಕೊಡುವಂತಹ ಕೆಲಸ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:– 3037**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ):–** ಮಾನ್ಯ ಸಭಾಪತಿಯವರೇ, ಕಳೆದ ಹತ್ತು ವರ್ಷಗಳಿಂದ ಇರತಕ್ಕಂತಹ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಸಮರ್ಥವಾದಂತಹ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ನಾನು ಮತ್ತೊಂದು ಪ್ರಶ್ನೆಯನ್ನು ಹಾಕಿದ್ದೆನು. ಆದರೆ, ಅದು ಚುಕ್ಕೆರಹಿತ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಆ ಚುಕ್ಕೆ ರಹಿತ ಪ್ರಶ್ನೆ ಬಗ್ಗೆ ಈಗ ಕೇಳುವುದು ಬೇಡ. ಈ ಪ್ರಶ್ನೆ ಬಗ್ಗೆ ಮಾತ್ರ ಕೇಳಿ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಪೂರಕವಾಗಿ ಮಾನ್ಯ ಮಂತ್ರಿಗಳಿಗೆ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೊದಲನೆಯದಾಗಿ, ಸುಮರು 650 ಕೋಟಿ ರೂಪಾಯಿ ವೆಚ್ಚ ಮಾಡಿ ಕಾಲುವೆ ಮಾಡಿರತಕ್ಕಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಬರುತ್ತಿರತಕ್ಕಂತಹ ಉಪ ಕಾಲುವೆಗಳಿಗೆ ಇವತ್ತಿನ ದಿವಸ ಹಣ ನೀಡದೇ ಇರುವುದರಿಂದ ರೈತರ ಹೊಲಗಳಿಗೆ ನೀರು ಹರಿಸುವುದು ಕಷ್ಟ ಎನ್ನುವಂತಹ ದೃಷ್ಟಿಯಿಂದ ಮಾನ್ಯ ಸಚಿವರು ಕಳೆದ ಬಾರಿ ಸದನದಲ್ಲಿ, "ಪಟ್ಟಿ ಕೊಡಿ. ನಾವು ಖಂಡಿತವಾಗಿ ಅನುದಾನ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ"ಎಂದು ಆಶ್ವಾಸನೆ ಕೊಟ್ಟಿದ್ದರು. ನಾನು ಈ ಭಾಗದಲ್ಲಿ ಸುಮಾರು ಇಪ್ಪತ್ನಾಲ್ಕು ಸಾವಿರ ಜನಸಂಖ್ಯೆ ಇರುವಂತಹ ಒಂದು ಹೋಬಳಿಗೆ ಅನುಕೂಲವಾಗುವಂತಹ ವ್ಯವಸ್ಥೆಯೊಳಗೆ ಏತ ನೀರಾವರಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅದಕ್ಕೆ ತಕ್ಕಂತೆ, ಉಪ ಕಾಲುವೆಗಳಿಗೆ ನೀರು ಹರಿಸತಕ್ಕಂತಹ ವ್ಯವಸ್ಥೆಗೆ ಈಗಾಗಲೇ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಅದರಂತೆ, ಆ ಅನುದಾನವನ್ನು ಕೂಡ ಮಂಜೂರು ಮಾಡಿಕೊಡಬೇಕೆನ್ನುವುದು ನನ್ನ ಮನವಿ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ಆದರೂ ಕೂಡ, ಅದನ್ನು ಪರಿಗಣಿಸಿ ಕ್ರಮ ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ:– 2966**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಒಂದು ಮಾತು ಸತ್ಯ. ಅದೇನೆಂದರೆ, "ನಾನು ಅಲ್ಲಿ ಹೇಳುವುದಕ್ಕೆ ಬಂದಿದ್ದೇನೆ, ಇಲ್ಲಿ ಕೇಳುವುದಕ್ಕೆ ಬಂದಿದ್ದೇನೆ" ಎನ್ನುವಂತಹ ಮಾತನ್ನು ಒಪ್ಪಬೇಕಾಗುತ್ತದೆ. ಮಾನ್ಯ ಸಚಿವರು ಕೇಳುವುದಕ್ಕೇ ಬರಲಿ. ನಮಗೆ ಮಾರ್ಗದರ್ಶನ ಕೊಡಲಿ. ಆದರೆ, ಉತ್ತರ ಕೊಡುವಾಗ ವಿಧಾನ ಸಭೆಯಲ್ಲಿ ಏನು ಉತ್ತರ ಕೊಟ್ಟಿದ್ದಾರೆ, ಅದೇ ರೀತಿಯ ದಾಟಿಯಲ್ಲಿ ಉತ್ತರ ಈ ಸದನದಲ್ಲಿ ಕೂಡ ಬರಬೇಕಾಗುತ್ತದೆ. ತಾವೆಲ್ಲರೂ ಕೂಡ ಮುಂದಿನ ದಿನಗಳಲ್ಲಿ ಎರಡೂ ಸದನಗಳಿಗೂ ಒಂದು ದೊಡ್ಡ ಉದಾಹರಣೆಯಾಗಿರತಕ್ಕಂತಹ ವ್ಯಕ್ತಿಗಳು. ಆದುದರಿಂದ, ನಾನು ಮಾನ್ಯ ಸಚಿವರ ಅನುಭವವನ್ನು ಬಲ್ಲವನಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಎರಡು-ಮೂರು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈ ರಾಜ್ಯದಲ್ಲಿ ಇತ್ತೀಚಿನ ತೀವ್ರ ಬರಗಾಲದ ಪರಿಣಾಮ ದನ-ಕರುಗಳಿಗೆ ಮೇವಿನ ಕೊರತೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅದರ ನಿರ್ವಹಣೆಯನ್ನು ಕಂದಾಯ ಇಲಾಖೆ ಮಾಡುತ್ತಿದೆಯೋ ಅಥವಾ ಪಶು ಸಂಗೋಪನಾ ಇಲಾಖೆ ಮಾಡುತ್ತಿದೆಯೋ, ಮೇವಿನ ಕೊರತೆ ಕಾರಣಗಳೇನು? ಅದನ್ನು ತಡೆಯಲು ತೆಗೆದುಕೊಂಡ ಪರ್ಯಾಯವಾದ ಕ್ರಮಗಳ ಬಗ್ಗೆ ಕೇಳಿದ್ದೆನು, ಅದಕ್ಕೆ 5 ಕೆ.ಜಿ. ಕಿಟ್‌ಗಳನ್ನು ಕೊಟ್ಟಿದ್ದೇವೆಂದು ಉತ್ತರ ನೀಡಿದ್ದಾರೆ. ಮಾನ್ಯ ಈಶ್ವರಪ್ಪನವರು ಮತ್ತು ಮಾನ್ಯ ಸಚಿವರ ರೀತಿ ನಾನು ಸಾಕಷ್ಟು ಬರಗಾಲದ ಅಧ್ಯಯನ ಪ್ರವಾಸ ಮಾಡದೇ ಇರಬಹುದು. ಆದರೆ, ಇದು ಎಷ್ಟರಮಟ್ಟಿಗೆ ಸರಿಯೆನ್ನುವುದನ್ನು ಮಾನ್ಯ ಸಚಿವರೆ ವಿಮರ್ಶೆ ಮಾಡಬೇಕು ಮತ್ತು ಇದರಲ್ಲಾಗಿರತಕ್ಕಂತಹ ಪಾಪದ ಕೂಸು ಎಷ್ಟರಮಟ್ಟಿಗೆ ಇದೆಯೆನ್ನುವುದನ್ನು ಕೂಡ ಮಾನ್ಯ ಸಚಿವರಿಗೆ ಅರ್ಥವಾಗಿದೆ. ಅದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮೂರನೆಯ ಪ್ರಶ್ನೆ ಏನೆಂದರೆ, ಇದರಿಂದ ಲಾಭವಾಗಿರುವುದು ಯಾರಿಗೆ ಎಂದು ಕೇಳಿದ್ದೆನು, ಅದಕ್ಕೆ ಉದ್ಭವಿಸುವುದಿಲ್ಲವೆಂದು ಲಿಖಿತ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರೆ **"ಬರ ಪರಿಹಾರದ ವಿತರಣೆ ವಿಳಂಬದ ಬಗ್ಗೆ ಕ್ಷಮೆ ಕೋರಿದ ಕಾಗೋಡು ತಿಮ್ಮಪ್ಪನವರು", "ಮೇವು ಹಗರಣ, ಡಿ.ಸಿ.ಗಳಿಗೆ ತರಾಟೆ" "ರಾಜ್ಯದಲ್ಲಿ ಮೇವು ಹಗರಣ ಕೋಟಿ ಕೋಟಿ ಲೂಟಿ ತಮ್ಮ ವ್ಯವಸ್ಥೆ ಸರ್ಕಾರದಿಂದಲೇ ಹೋಗುತ್ತಿದೆ"** ಎಂದು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯದಲ್ಲಿ ಮೇವು ಹಗರಣ ಕೋಟಿ ಕೋಟಿ ಲೂಟಿ ಎನ್ನುವುದಕ್ಕಿಂತಲೂ ಹೆಚ್ಚಾಗಿ ಇಷ್ಟೆಲ್ಲಾ ಆಗುತ್ತಿದ್ದರೂ ಕೂಡ ಮಾನ್ಯ ಸಚಿವರು ಅಧಿಕಾರಿಗಳಿಗೆ ತಾಕೀತು ಮಾಡಿದರೂ ಕೂಡ ಯಾವುದೇ ಒಬ್ಬ ಅಧಿಕಾರಿಯು ವಿಶೇಷವಾಗಿ ದನ-ಕರುಗಳಿಗೆ ಕೊಡತಕ್ಕಂತಹ ಮೇವಿನಲ್ಲಿ ನೂರಾರು ಕೋಟಿ ರೂಪಾಯಿ ಗೋಲ್‌ಮಾಲ್ ಆಗಿ ಅದನ್ನು

ನಿಯಂತ್ರಿಸುವುದಕ್ಕಾಗದಂತಹ ಸಂದರ್ಭ ಇವತ್ತಿನ ದಿವಸ ಸೃಷ್ಟಿಯಾಗಿದೆ. ಈ ವಿಚಾರ ಸತ್ಯವೇ ಅಥವಾ ಇಲ್ಲವೇ ಎನ್ನುವುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕು. ಪಶುಸಂಗೋಪನಾ ಇಲಾಖೆಯವರು, ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏನು ಇವತ್ತಿನ ದಿವಸ ಇದನ್ನು ನಿರ್ವಹಣೆ ಮಾಡುತ್ತಿದ್ದಾರೆ, ಅವರು ಮಾಡುತ್ತಿರತಕ್ಕಂತಹ ಪಾಪದ ಕೆಲಸ ಒಂದಲ್ಲ, ನಾನು ಮೊನ್ನೆಯ ದಿವಸ ಚಾಮರಾಜನಗರದ ಕೆಲವು ಕಡೆ ಶ್ರೀ ರಾಮಚಂದ್ರಾಪುರ ಮಠದ ಸ್ವಾಮಿಗಳವರು ಒಂದು ಐದಾರು ಕಡೆ ಮೇವನ್ನು ಯಾವ ರೀತಿ ತಂದು ವಿತರಣೆ ಮಾಡುತ್ತಿದ್ದಾರೆನ್ನುವುದನ್ನು ನೋಡಿಕೊಂಡು ಬಂದೆ. ಆದರ ಪಕ್ಕದಲ್ಲಿ ಸರ್ಕಾರದ್ದು ಕೂಡ ಒಂದೆರೆಡು ಗೋಶಾಲೆಗಳು ಇವೆ. ತಾವು ದಯಮಾಡಿ, ಈ ಮೂಕ ಪ್ರಾಣಿಗಳಿಗೆ ಕೊಡತಕ್ಕಂತಹ ಮೇವಿನ ವಿಷಯದಲ್ಲಿಯೂ ಕೂಡ ಲೂಟಿ ಮಾಡುತ್ತಿದ್ದಾರೆನ್ನುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಸ್ಪಷ್ಟನೆ ನೀಡಬೇಕು. ಮೂರನೆಯದಾಗಿ, ಮಾನ್ಯ ಟಿ.ಬಿ. ಜಯಚಂದ್ರರವರು ಪಂಜಾಬ್‌ನ ಸೈನ್ಲೇಜ್ ಮೇವನ್ನು ತರಬೇಕೆಂಬ ವಿಷಯವನ್ನು ಹೇಳುತ್ತಿದ್ದರು. ನಿಜವಾಗಿಯೂ ಕೂಡ ಇದು ಒಳ್ಳೆಯದು. ಆದರೆ ಇದು ಕೇವಲ ಕಾಗದದಲ್ಲಿ ಮಾತ್ರ ಇದೆಯೇ ಹೊರೆತು, ಇಷ್ಟೆಲ್ಲಾ ಕ್ಲಿಷ್ಟ ಪರಿಸ್ಥಿತಿ ಬಂದರೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಪಂಜಾಬ್ ಮತ್ತು ಹರಿಯಾಣದಲ್ಲಿ ಸಾಕಷ್ಟು ಮೇವು ಇದೆ. ಅದನ್ನು ನಮ್ಮ ರಾಜ್ಯಕ್ಕೆ ತರಿಸಿಕೊಂಡು ಹಂಚಿಕೆ ಮಾಡಬೇಕು. ಬರ ಪರಿಹಾರಕ್ಕಾಗಿ ನೂರಾರು ಕೋಟಿ ರೂಪಾಯಿ ಹಣ ಬಿಡುಗಡೆಯಾದರೂ ಕೂಡ ಅಧಿಕಾರಿಗಳು ತಿನ್ನುವುದನ್ನು ತಪ್ಪಿಸುವಂತಹ ಕಾರ್ಯಕ್ಕೆ ಸರ್ಕಾರದಿಂದ ಕನಿಷ್ಠ ಪಕ್ಷ ಚಾಲನೆ ಕೊಡುವುದಕ್ಕೆ ಆಗದೇ ಇದ್ದರೆ ಹೇಗೆ? ಇನ್ನು ಬರ ಪರಿಹಾರದ ನಿರ್ವಹಣೆಯನ್ನು ಮಾನ್ಯ ಕಾಗೋಡು ತಿಮ್ಮಪ್ಪನವರಂತಹ ಒಬ್ಬ ಹಿರಿಯ ಮುತ್ಸದ್ಧಿ ಮಂತ್ರಿಗಳು ಕೂಡ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಎರಡು ಇಲಾಖೆಯವರು ಅವರ ಮೇಲೆ ಇವರು, ಇವರ ಮೇಲೆ ಅವರು ಆರೋಪ ಮಾಡಿದ್ದಾರೆ. ಅಪ್ಪ-ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ರೀತಿಯಲ್ಲಿ ಆಗಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇದರಿಂದಾಗಿ ಹಗರಣ ಆಗಿದೆಯೇ ಇಲ್ಲವೇ ಎನ್ನುವುದನ್ನು ಸ್ಪಷ್ಟನೆ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಕೆಲವು ವಿಷಯಗಳ ಬಗ್ಗೆ ಕೇಳಿದ್ದಾರೆ. ಈ ಮೇವಿನ ವಿತರಣೆ ವಿಚಾರದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪ್ರಾಮಾಣಿಕವಾಗಿ ನಡೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಆ ರೀತಿ ನಡೆದುಕೊಳ್ಳುತ್ತಾರೋ ಅಥವಾ ಇಲ್ಲವೋ ಎನ್ನುವಂತಹದ್ದನ್ನು ನಾವು ಗಮನಿಸಿದ್ದೇವೆ. ನಾನೂ ಕೂಡ

ಎಲ್ಲಾ ಜಿಲ್ಲೆಗಳಿಗೆ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ಈ ವರ್ಷ ಮೇವಿನ ತೊಂದರೆಯಾಗಿಲ್ಲ. ನಮ್ಮ ರಾಜ್ಯದಲ್ಲಿ ಮೇವು ಸಿಗದೇ ಇದ್ದರೂ ಆಂಧ್ರ ಪ್ರದೇಶದಿಂದ ತರಿಸಿಕೊಂಡಿದ್ದೇವೆ. ಹಾಸನ ಜಿಲ್ಲೆಯವರು ಪಂಜಾಬ್‌ನಿಂದ ಮೇವನ್ನು ತರಿಸಿಕೊಂಡಿದ್ದಾರೆ. ಈ ರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಎಲ್ಲೆಲ್ಲಿ ಮೇವು ಲಭ್ಯವಿದೆಯೋ ಅಲ್ಲಿಂದ ಮೇವು ತರಿಸಿಕೊಂಡು ಜಮಾ ಮಾಡಿ ಉಪಯೋಗ ಕೂಡ ಮಾಡಿಕೊಂಡಿದ್ದೇವೆ. ಇವತ್ತಿನವರೆಗೂ ಮೇವು ಇಲ್ಲದೇ ಗೋಶಾಲೆಗಳು ತೊಂದರೆ ಅನುಭವಿಸಿವೆ ಎನ್ನತಕ್ಕಂತಹ ಯಾವುದೇ ದೂರು ಪ್ರಾಮಾಣಿಕವಾಗಿ ಬಂದಿಲ್ಲ. ಇದರ ಮೇಲ್ವಿಚಾರಣೆಯನ್ನು ನಮ್ಮ ಪಶು ಸಂಗೋಪನಾ ಇಲಾಖೆಯವರು ನಿರ್ವಹಿಸುತ್ತಿದ್ದಾರೆ. ಮಾನ್ಯ ಸದಸ್ಯರು ಚಾಮರಾಜನಗರಕ್ಕೆ ಭೇಟಿ ನೀಡಿದ್ದೇನೆಂದು ಹೇಳಿದರು. ಶ್ರೀ ರಾಮಚಂದ್ರಾಪುರ ಮಠದವರು ಪ್ರಾರಂಭ ಮಾಡುವುದಕ್ಕೆ ಮುಂಚೆ ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲಿ ಗೋಶಾಲೆ ಬಹಳ ಚೆನ್ನಾಗಿ ನಡೆಯುತ್ತಿದೆ. ಮಾನ್ಯ ಸದಸ್ಯರು ಏನು ಅನುಮಾನ ವ್ಯಕ್ತಪಡಿಸಿದ್ದಾರೆ, ಆ ಅನುಮಾನಕ್ಕೆ ಅವಕಾಶವಿಲ್ಲ. ಆದಾಗ್ಯೂ ಕೂಡ ನಿರ್ದಿಷ್ಟ ಕೆಲವು ಪ್ರಕರಣಗಳು ಕಂಡುಬಂದರೆ ನಾನು ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತಿನವರೆಗೂ ಮೇವು ಹಂಚತಕ್ಕ ಕೆಲಸ ಸಮರ್ಪಕವಾಗಿ ಆಗಿದೆ. ಇನ್ನೂ ಕೂಡ ಹೆಚ್ಚುಕಡಿಮೆ 55 ಲಕ್ಷ ಟನ್ ಮೇವು ನಮ್ಮ ಬಳಿ ದಾಸ್ತಾನಿದೆ. ಆದುದರಿಂದ, ದಯಮಾಡಿ ಆ ರೀತಿಯ ಅನುಮಾನವನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

(ಮುಂದು)

(709)/14-6-2017/12-00/ಎಲ್‌ಎಂ/ಕೆಎಸ್(ಜಿಆರ್)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ಕಂದಾಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾದಲ್ಲಿಯ ಒಂದು ಗೋಶಾಲೆಗೆ ಹೋಗಿದ್ದರು. ಅಲ್ಲಿ 375 ಹಸುಗಳು ಇವೆ ಎನ್ನುವ ವರದಿ ಬಂತು. ಮಾರನೇ ದಿನ ಆ ಊರಿಗೆ ನಾನು ಹೋಗಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಆ ಗೋಶಾಲೆಗೆ ಭೇಟಿ ಕೊಟ್ಟು ಹೋದ ತಕ್ಷಣ ಅಲ್ಲಿಂದ 100 ಹಸುಗಳನ್ನು ಖಾಲಿ ಮಾಡಿಸಿದ್ದಾರೆ ಎನ್ನುವ ಸುದ್ದಿ ಪತ್ರಿಕೆಯಲ್ಲಿ ವರದಿಯಾಯಿತು. ನಾನು DC ಯವರನ್ನು ಕರೆದು ಏನು ಪತ್ರಿಕೆಯಲ್ಲಿ ಈ ರೀತಿ ಸುದ್ದಿ ಬಂದಿದೆ ಎಂದು ಕೇಳಿದೆ. ಅದಕ್ಕೆ DC ಯವರು ಇಲ್ಲ ಸರ್ ಈ ಸುದ್ದಿ ಸುಳ್ಳು ಎಂದು ಹೇಳಿದರು.

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಅಮರನಾಥ್ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಆ ಗೋಶಾಲೆಗೆ ಭೇಟಿ ನೀಡಿದ್ದಾಗ ಖಾಸಗಿಯವರಿಂದ ಹಸುಗಳನ್ನು ತಂದು ತೋರಿಸಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನಾನು DC ಯವರಿಗೆ ನಡೆಯಿರಿ ಭೇಟಿ ಕೊಟ್ಟು ಬರೋಣ ಎಂದು ಹೇಳಿದೆ. ನಾನು ಅಲ್ಲಿ ಇರುವ ಕಾರ್ಯಕರ್ತರನ್ನು ಮಾತನಾಡಿಸಿಕೊಂಡು ಬರುವಷ್ಟರಲ್ಲಿಯೇ DC ಯವರು ಸ್ಥಳಕ್ಕೆ ಮುಂಚಿತವಾಗಿ ಹೋಗಿಬಿಟ್ಟಿದರು. ಅಲ್ಲಿ ಹಸುಗಳು ತುಂಬಾ ಕಡಿಮೆ ಇದ್ದವು. ಆದರೂ 275 ಹಸುಗಳು ಇವೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಹೋದಾಗ 375 ಹಸುಗಳು ಇದ್ದವು ಅದರಲ್ಲಿ 100 ಹಸುಗಳು ಇಲ್ಲ. ಈ ವಿಚಾರ ನಿಮಗೆ ಗೊತ್ತೆ ಎಂದು ಕೇಳಿದ್ದಕ್ಕೆ , ನನಗೆ correct ಆಗಿ ಗೊತ್ತು ಎಂದು ಹೇಳಿದರು. ಇದನ್ನು ಯಾರು manage ಮಾಡುವ ಡಾಕ್ಟರ್‌ನ್ನು ಇಲ್ಲಿಗೆ ಕರೆಯಿಸಿ ಎಂದು ಹೇಳಿದೆ. ಇಲ್ಲಿ ನಾವಿಬ್ಬರೂ ಮಾಡಿರುವ ಚರ್ಚೆ ಬಗ್ಗೆ ಆ ಡಾಕ್ಟರ್‌ಗೆ ಗೊತ್ತಿಲ್ಲ. ಆ ಡಾಕ್ಟರ್ ಎಲ್ಲೋ ಇದ್ದವರನ್ನು ಕರೆಯಿಸಿದರು. ಅವರಿಗೆ ನಾನು ಎಷ್ಟು ಹಸುಗಳು ಇವೆ ಎಂದು ಕೇಳಿದೆ. ಅದಕ್ಕೆ ಅವರು 175 ಹಸುಗಳು ಇವೆ ಸರ್ ಎಂದು ಹೇಳಿದರು. ಈ ಉದಾಹರಣೆಯನ್ನು ಏಕೆ ಕೊಡುತ್ತಿದ್ದೇನೆ ಎಂದರೆ, ಮೇವಿನಲ್ಲಿ ಲೂಟಿ ಹೊಡೆಯುತ್ತಿರುವುದು ಅಷ್ಟಿಷ್ಟಲ್ಲ. ನೀವು ಭೇಟಿ ಕೊಡಲು ಹೋದಾಗ, ಮಾನ್ಯ ಸದಸ್ಯರಾದ ಅಮರನಾಥ್ ಪಾಟೀಲ್ ಹೇಳಿದ ಹಾಗೆ ಹಸುಗಳನ್ನು ಎಲ್ಲಿಂದಲ್ಲೋ ತಂದು ಕಟ್ಟಿ ಹಾಕಿರುತ್ತಾರೆ. ಲೆಕ್ಕಕ್ಕೆ ತೋರಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಂದ ಹೋಗುತ್ತಿದ್ದಂತೆ ಅಲ್ಲಿ ಹಸುವು ಇರುವುದಿಲ್ಲ, ಮೇವು ಇರುವುದಿಲ್ಲ. ತಿನ್ನಬಾರದರಲ್ಲಿ ತಿನ್ನುತ್ತಿದ್ದಾರೆ. ಅಂಥವರು ಮನುಷ್ಯರೆ ಅಲ್ಲ. ಇದನ್ನು ಯಾವ ರೀತಿ ಪರಿಶೀಲಿಸುತ್ತೀರಿ ಮತ್ತು ಇದನ್ನು ಬಿಗಿ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಸುಮ್ಮನೆ ನಾವು ಪ್ರಶ್ನೆ ಕೇಳುವುದು ಸಚಿವರು ಎಲ್ಲಾ ಮಾಡಿದ್ದೇವೆ ಎಂದು ಹೇಳುವುದು. ತಾವು ಹೇಳುವುದು ಯಾವುದು ಆಗಿರುವುದಿಲ್ಲ. ಶ್ರೀ ವಿ. ಸೋಮಣ್ಣನವರು ಕೇಳಿರುವ ಪ್ರಶ್ನೆಗೆ ಮಂತ್ರಿಗಳು ಸ್ವಾಭಾವಿಕವಾಗಿ ಈ ರೀತಿ ಉತ್ತರ ಕೊಡಬೇಕು ಕೊಟ್ಟಿದ್ದಾರೆ. ಏಕೆಂದರೆ, ಅಧಿಕಾರಿಗಳು ಬರೆದು ಕೊಡುತ್ತಾರೆ ಅದನ್ನೆ ಸಚಿವರು ಉತ್ತರ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಗೋಶಾಲೆಗೆ ಭೇಟಿ ನೀಡಿ ಬಂದ ಮಾರನೇ ದಿನವೇ ನಾನು ಕೂಡಾ ಅದೇ ಗೋಶಾಲೆಗೆ ಭೇಟಿ ನೀಡಿ ನೋಡಿದ್ದೇನೆ. ಅಲ್ಲಿ ಹಸುಗಳು ಇಲ್ಲ. ತಪ್ಪಾಗಿದೆ ಕ್ಷಮಿಸಬೇಕು ಎಂದು ಅಧಿಕಾರಿಗಳು ಕೇಳಿಕೊಂಡಿರುವುದು ಪತ್ರಿಕೆಯಲ್ಲಿಯು ಬಂದಿದೆ. ಮೇವಿನಲ್ಲಿ ಲೂಟಿಯಾಗುತ್ತಿದೆ ಇದನ್ನು ಯಾವ ರೀತಿ ತಡೆಯುತ್ತೀರಿ ಇದನ್ನು ದಯಮಾಡಿ ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಕಾಗೋಡು ತಿಮ್ಮಪ್ಪನವರಾಗಿಯೇ ಇರಬೇಕು ಎನ್ನುವುದು ನಮ್ಮ ಭಾವನೆ. ಇದನ್ನು ನೊಂದು ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದಲ್ಲಿ ಮೇವು ಲೂಟಿ ಯಾವ ರೀತಿ ನಡೆದಿದೆ ಎನ್ನುವುದನ್ನು ಹೇಳಿದರು. ಈ ರೀತಿ ಭೀಕರ ಬರಗಾಲ ಬಂದಾಗ ಸರ್ಕಾರ ಏನು ಮಾಡಬೇಕು ಎಂದರೆ, ಯಾರ್ಯಾರ ಮನೆಯಲ್ಲಿ ಎಷ್ಟು ಹಸುಗಳು ಇವೆ ಎನ್ನುವ census ಇದೆ. ನಾವು ಇಷ್ಟು ಹಣವನ್ನು ಕೊಡುತ್ತೇವೆ ನೀವೇ ನಿರ್ವಹಣೆ ಮಾಡಿಕೊಳ್ಳಿ ಎಂದು ಹೇಳಿಬಿಟ್ಟರೆ ಒಳ್ಳೆಯದು. ಯಾವ ರೀತಿ ಒಂದು ರೂಪಾಯಿ ಹಾಕಿ ಖಾತೆ ಸರಿಯಾಗಿದೆ ಎಂದು ಮಾಡುತ್ತೀರಲ್ಲ, ಅದೇ ರೀತಿ ಇದನ್ನು ಮಾಡಿಬಿಟ್ಟರೆ at least ನಿಮ್ಮನ್ನು ದೇವರಾಗಿ ಜನರು ಕಾಣುತ್ತಾರೆ. ಇರುವ ಪದ್ಧತಿಯನ್ನು ಬದಲಾವಣೆ ಮಾಡದೆ ಹೋದರೆ ಸಚಿವರು 10ರಲ್ಲಿ 11 ಆಗುತ್ತಾರೆಯೇ ವಿನ:, ಬರ ನಿರ್ವಹಣೆ ಮಾಡುವಲ್ಲಿ ಸಫಲತೆಯನ್ನು ಕಾಣುವ ಪರಿಸ್ಥಿತಿಯಲ್ಲಿ ಸಚಿವರ ಉತ್ತರವಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಅಧಿಕಾರದಲ್ಲಿ ಇರುವಾಗ ಬರನಿರ್ವಹಣೆಯಲ್ಲಿ ಎಲ್ಲಿಯೂ ಯಾವ ಕೆಲಸವು ಆಗಿರುವುದಿಲ್ಲ. ಸಚಿವರ ಉತ್ತರ ನನಗೆ ತೃಪ್ತಿ ತಂದಿರುವುದಿಲ್ಲ. ನಿಮ್ಮಂತಹ ಹಿರಿಯರೆ ಈ ಸರ್ಕಾರದಲ್ಲಿ ಅಧಿಕಾರಿಗಳನ್ನು ಈ ರೀತಿ shield ಮಾಡಿದರೆ ರಾಜ್ಯದ ಜನತೆಗೆ, ಬಡ ಮೂಕಪ್ರಾಣಿಗಳಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಒಂದು ಸಂದೇಶವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಶ್ರೀ ಕಾಗೋಡು ತಿಮ್ಮಪ್ಪನವರಂತ ಮಂತ್ರಿಗಳ ಬಾಯಲ್ಲಿ ಈ ರೀತಿ ಮಾತು ಬರಬಾರದು. ಎಷ್ಟು ಲೂಟಿಯಾಗುತ್ತಿದೆ, ದಗಲಭಾಜಿಯಾಗುತ್ತಿದೆ, ಮೋಸವಾಗುತ್ತಿದೆ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಪ್ರಕರಣದ ಬಗ್ಗೆ ಹೇಳಿದ್ದಾರೆ, ತಾವು ಕೂಡಾ ಹೇಳಿದ್ದೀರಿ ಅದನ್ನು ನಾನು ಖುದ್ದಾಗಿ ಪರಿಶೀಲನೆ ಮಾಡುತ್ತೇವೆ. ಅಗತ್ಯವಿದ್ದರೆ ಗೋಶಾಲೆಯನ್ನು ತೆಗೆಯಬೇಕು. ಮೇವಿನ ಬ್ಯಾಂಕ್ ಪ್ರಾರಂಭ ಮಾಡಲಾಗಿದೆ. ಅಲ್ಲಿ ಎರಡು ರೂಪಾಯಿಗೆ ಮೇವು ಕೊಡಲಾಗುತ್ತದೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ, ಅದು ಪ್ರವೃತ್ತಿಯೇ ಆಗಿ ಹೋಗಿದೆ. ಅದು ನಿಯಂತ್ರಣಕ್ಕೆ ಬರುವವರೆಗೆ ಇದಕ್ಕೆ ಸ್ವಲ್ಪ ಬೀಗ ಹಾಕಬೇಕು ಎಂದು ಯೋಚನೆ ಮಾಡಿದ್ದೇವೆ. ಅಗತ್ಯವಿದ್ದರೆ ಗೋಶಾಲೆಗಳನ್ನು ತೆರೆಯಬೇಕು, ಇಲ್ಲದಿದ್ದರೆ ಮೇವಿನ ಅಗತ್ಯವಿದ್ದವರು 2 ರೂ.ಗಳನ್ನು ಕೊಟ್ಟು ಮೇವುವನ್ನು ನಮ್ಮ ಮೇವು ಬ್ಯಾಂಕ್‌ನಿಂದ ತೆಗೆದುಕೊಂಡು ಹೋಗಬಹುದಾಗಿದೆ. ಮಾನ್ಯ ಸೋಮಣ್ಣನವರ ಮನಸ್ಸಿನಲ್ಲಿ ಏನು ಅನುಮಾನವಿದೆ ಆ ಅನುಮಾನ ಬೇಡ. ಅವರು ಹಿರಿಯರು ಈ ರೀತಿಯ ಪ್ರಕರಣಗಳು ಎಲ್ಲಿಯಾದರೂ ನಡೆದಿದ್ದರೆ ನಾನು

ಮಾಧ್ಯಮ ಪ್ರಕಟಣೆಗಾಗಿ ಅಲ್ಲ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಖುದ್ದು ಹೋಗಿ ಪರಿಶೀಲನೆ ಮಾಡಿ ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ. ಈಗ ಈ ವರ್ಷದ ಕೊನೆ ಹಂತದಲ್ಲಿದ್ದೇವೆ. ಸಿರಾದಲ್ಲಿ, ತುಮಕೂರಿನಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಗೋಶಾಲೆಗಳನ್ನು ಮಾಡಿದ್ದಾರೆ. ಈಗ ಕಡಿಮೆಯಾಗಿವೆ. ಎಷ್ಟು ಸಾಧ್ಯವೋ ಅಷ್ಟು ನಿರ್ವಹಣೆ ಮಾಡಿದ್ದೇವೆ. ಇದು ದೊಡ್ಡ ಪ್ರಮಾಣದ ಯೋಜನೆಯಾಗಿದ್ದು ಸಣ್ಣ–ಪುಟ್ಟ ತಪ್ಪುಗಳು ಆಗಿದ್ದರೆ ಕ್ಷಮಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಇಲ್ಲಿ ಮಾನ್ಯ ಸಚಿವರು ಕ್ಷಮೆ ಕೇಳುವ ಅವಶ್ಯಕತೆ ಇಲ್ಲ. ಆದರೆ ದುಡ್ಡು ಹೊಡೆದು ತಿನ್ನುತ್ತಿರುವವರ ಪರವಾಗಿ ನೀವು ವಾದ ಮಾಡ್ತೀ ಮಾಡುತ್ತೀರಿ ಎನ್ನುವುದು ಅವರಿಗೆ ಗೊತ್ತು. ಏನು ಭ್ರಷ್ಟಾಚಾರವಾಗುತ್ತಿಲ್ಲ ಎಂದು ತಾವು ಹೇಳುತ್ತೀರಿ ಹೀಗೆ ಹೇಳಲು ಕಾರಣ ಅಧಿಕಾರಿ ಏನು ಬರೆದು ಕೊಡುತ್ತಾರೆ ಅದನ್ನೇ ನೀವಾಗಲಿ, ನಾವಾಗಲಿ ಹೇಳುವುದು. ಮಾನ್ಯ ಸಚಿವರು ಯಾವ ಜಿಲ್ಲೆಗ ಹೋಗುತ್ತಾರೆ ಅಲ್ಲಿಯ ಪತ್ರಿಕೆಯವರನ್ನು ಕೇಳಿದರೆ, ಅವರು ಇಂತಹ ಕಡೆ ಈ ರೀತಿಯಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಸಂಬಂಧಪಟ್ಟವರನ್ನು ಕರೆದು ಯಾವ ಭಾಷೆಯಲ್ಲಿ ಹೇಳಬೇಕು ಹೇಳಿ, ಅವರ ಮೇಲೆ ಕ್ರಮ ತೆಗೆದುಕೊಂಡರೆ ಇದನ್ನು ತಡೆಹಿಡಿಯಬಹುದಾಗಿದೆ. ಇಲ್ಲದಿದ್ದರೆ ಕೆಲವು ಅಧಿಕಾರಿಗಳು ರಾಜ್ಯಕ್ಕೆ ಬರ ಬರಲಿ ಎಂದು ಕಾಯುತ್ತಿರುತ್ತಾರೆ. ಆ ಬರದ ನೆಪದಲ್ಲಿ ಮೇವಿನಲ್ಲಿ ಲೂಟಿ ಮಾಡುವುದು, ಕೆರೆ ಹೂಳೆತ್ತುತ್ತೇವೆ ಎಂದು ಲೂಟಿ ಮಾಡುತ್ತಾರೆ. ಹಣ ಲೂಟಿ ಮಾಡಲು ಬರ ಬರಲಿ ಎಂದು ಕೆಲವರು ಕಾಯುತ್ತಿರುತ್ತಾರೆ. ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಹೇಳಿ ಸಚಿವರು ಪಾಪಕ್ಕೆ ಸಿಕ್ಕಿಹಾಕಿಕೊಳ್ಳಬಾರದು ಎನ್ನುವುದು ನಮ್ಮ ಆಸೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಗಳೇ, ಗದಗ ಜಿಲ್ಲೆ ಡಂಬಳ ಪಕ್ಕದ ಗೋಶಾಲೆಯಲ್ಲಿ ಕೊಳೆತ್ತಿರುವುದು, fungus ಹತ್ತಿರುವ ಮೇವನ್ನು ಹಾಕಿರುವುರಿಂದ ಕರುಗಳು ಸತ್ತವು. ಇದು ಪತ್ರಿಕೆಗಳಲ್ಲಿ ವರದಿಯಾಗಿದೆ. ಕರುಗಳು ಸತ್ತಿರುವುದರಿಂದ ನೂರಾರು ಹಸುಗಳು ಇರುವುದು ಖಾಲಿಯಾಗಿ ಬರಿ 20 ಹಸುಗಳು ಉಳಿದವು. ನಾನೇ ಹೋಗಿ ಭೇಟಿ ಕೊಟ್ಟು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಗುಣಮಟ್ಟದ ಮೇವನ್ನು ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಗಳೇ, ಗುಣಮಟ್ಟದ ಮೇವು ಕೊಡುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಕೆಲವು ಕಡೆಗಳಲ್ಲಿ ಸಣ್ಣ–ಪುಟ್ಟ ತಪ್ಪುಗಳಾಗಿವೆ. 100% ಎಲ್ಲವು ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಈ ವರ್ಷ ಮಾಡಿರುವ ದೊಡ್ಡ ಕಾರ್ಯಕ್ರಮವಿದು. ಇದರಲ್ಲಿ ಸಣ್ಣ–ಪುಟ್ಟ ಲೋಪದೋಷಗಳು ಆಗಿವೆ. ಆದರೂ ಮಾನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿ

ಇಟ್ಟುಕೊಂಡು ಮುಂದಿನ ದಿನಗಳಲ್ಲಿ ಖಂಡಿತವಾಗಿ ಅನುಸರಿಸುತ್ತೇವೆ. ಸದಸ್ಯರುಗಳು ಕೂಡಾ ಇದರಲ್ಲಿ ಕೈಜೋಡಿಸಬೇಕೆಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 3025**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಪ್ರಮಾಣಿಕವಾದ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಎಂದರೆ, ಬೀದರ್ ಜಿಲ್ಲೆಯಲ್ಲಿ ಎಷ್ಟು ಕೆರೆಗಳು ಇವೆ ಎನ್ನುವುದಕ್ಕೆ 124 ಕೆರೆಗಳು ಇವೆ ಎಂದು ಉತ್ತರ ಕೊಟ್ಟಿದ್ದಾರೆ. ಎರಡನೆಯದಾಗಿ, ನೀರಿಲ್ಲದೆ ಬತ್ತಿ ಹೋಗುತ್ತಿರುವ ಕೆರೆಗಳನ್ನು ಗುರುತಿಸಿ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಬೇಕು ಎನ್ನುವ ಉದ್ದೇಶದಿಂದ ಕೆರೆಗಳಲ್ಲಿ ತುಂಬಿರುವ ಹೂಳು ತೆಗೆದು ಜಿರ್ಣೋದ್ಧಾರ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಮಾಹಿತಿ ನೀಡುವುದು ಎಂದು ಕೇಳಿದ್ದಕ್ಕೆ, ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಕೆರೆಗಳ ಜೀರ್ಣೋದ್ಧಾರ, ದುರಸ್ಥಿ, ಸಮಗ್ರ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಇವುಗಳಲ್ಲಿ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗುವ ಉದ್ದೇಶದಿಂದ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಅಂಶವೂ ಸೇರಿದಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಲಿಖಿತ ಉತ್ತರ ಕೊಟ್ಟಿದ್ದಾರೆ. ನನ್ನ ಮೂರನೆ ಪ್ರಶ್ನೆ, ಜಿಲ್ಲೆಯಲ್ಲಿ ಯಾವ ಯಾವ ಕೆರೆಗಳನ್ನು ಹೂಳು ತೆಗೆದು ಜೀರ್ಣೋದ್ಧಾರ ಮಾಡಲು ಆಯ್ಕೆ ಮಾಡಲಾಗಿದೆ, ಆಯ್ಕೆ ಮಾಡಲಾದ ಕೆರೆಗಳ ಹೆಸರು ವಿಳಾಸ ಮತ್ತು ಅನುದಾನದ ವಿವರವನ್ನು ನೀಡುವುದು ಎಂದು ಕೇಳಿರುವುದಕ್ಕೆ, 2017-18ನೇ ಸಾಲಿನ ಆಯವ್ಯಯದಲ್ಲಿ "ಕೆರೆ ಸಂಜೀವಿನಿ" ಎಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳಿಂದ ಹೂಳು ತೆಗೆಯಲಾಗಿದೆ ಎನ್ನುವುದಕ್ಕೆ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯಲ್ಲಿರುವುದು ಒಟ್ಟು 124 ಕೆರೆಗಳು. 2014-15ನೇ ಸಾಲಿನಲ್ಲಿ ಒಂದು ಕೆರೆಯ ಹೂಳನ್ನು ತೆಗೆದಿರುವುದಿಲ್ಲ ಎಂದು ಭಗವಂತನ ಆಣೆ ಮಾಡಿ ಹೇಳಿದ್ದಾರೆ. 2015-16ರಲ್ಲಿ 124 ಕೆರೆಗಳ ಪೈಕಿ ಕೇವಲ 3 ಕೆರೆಗಳ ಹೂಳನ್ನು ತೆಗೆಯಲಾಗಿದೆ ಎಂದು ಹೇಳಿದ್ದಾರೆ. 2016-17ನೇ ಸಾಲಿನಲ್ಲಿ ಯಾವುದೇ ಕೆರೆಗಳ ಹೂಳು ತೆಗೆದಿರುವುದಿಲ್ಲ. ಮೂರು ಕೆರೆಗಳ ಹೂಳು ತೆಗೆಯಲು ಮಂಜೂರಾದ ಹಣ 180 ಲಕ್ಷ ರೂ.ಗಳು. ಹೂಳು ತೆಗೆಯಲು ಖರ್ಚು ಮಾಡಿರುವ ಹಣ 10 ಲಕ್ಷ 40 ಸಾವಿರ ರೂ.ಗಳು. 87.37 ಲಕ್ಷ ರೂ.ಗಳನ್ನು ಹೂಳೆತ್ತುವ ಹೊರತು ಇತರೆ ಅಭಿವೃದ್ಧಿಗಾಗಿ ಖರ್ಚು ಮಾಡಿದ್ದಾರೆ. 124 ಕೆರೆಗಳ ಪೈಕಿ ಮೂರು ವರ್ಷದಲ್ಲಿ ಮೂರು ಕೆರೆಗಳ ಹೂಳೆತ್ತಲು ಕಾಮಗಾರಿಯನ್ನು ತೆಗೆದುಕೊಂಡಿದ್ದಾರೆ. ಆ ಮೂರು

ವರ್ಷಗಳಲ್ಲಿ ಅವರ financial expenditure ನೋಡಿದರೆ 5.7% ಇದೆ. ಈ ರೀತಿ ಕೆಲಸ ಮಾಡಿದರೆ ಬೀದರ್‌ನಲ್ಲಿರುವ ಕೆರೆಗಳ ಹೂಳನ್ನು ಯಾವಾಗ ತೆಗೆಯುತ್ತಾರೆ, ಅವು ಯಾವಾಗ ಉದ್ಧಾರವಾಗುತ್ತವೆ, ಆ ಕೆರೆಗಳಲ್ಲಿ ಯಾವಾಗ ನೀರನ್ನು ತುಂಬಿಸಲಾಗುತ್ತದೆ? ಆ ನೀರನ್ನು ರೈತ ಯಾವಾಗ ಉಪಯೋಗ ಮಾಡಬೇಕು. ಇದು ಜವಾಬ್ದಾರಿಯುತ ಸರ್ಕಾರ ಕೊಡುವ ಉತ್ತರವೇ? ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಪ್ರಮಾಣಿಕವಾಗಿ ಮಾನ್ಯ ಮಂತ್ರಿಗಳು ಸದನದ ಮುಂದೆ ಮಂಡಿಸಿದ್ದಾರೆ. ಆದರೆ ಸರ್ಕಾರದ ನಿಲುವೇನು, ಮಂತ್ರಿಗಳ ಜವಾಬ್ದಾರಿ ಏನು?

(ಮುಂದು)

(710) 14.06.2017 / YL (KS) GR /12.10

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ಮುಂದು):-**

ಇಲಾಖೆಯೂ ಕೆಲಸ ಮಾಡತಕ್ಕಂಥ ಕಾರ್ಯವೈಖರಿ ಏನು? ಮಾನ್ಯ ಎಂ.ಬಿ.ಪಾಟೀಲ್‌ರವರೆ ದಯವಿಟ್ಟು ಮಾನ್ಯ ಸಚಿವರಿಗೆ ಏನು ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಟಿ.ಬಿ.ಜಯಚಂದ್ರರವರು ಬಹಳ ಹಿರಿಯ ಸಚಿವರು ಹಾಗೂ ಯೋಗ್ಯರಾಗಿರುವಂಥವರು. ನನಗೆ ಮಾನ್ಯ ಸಚಿವರ ಬಗ್ಗೆ ಚೆನ್ನಾಗಿ ಗೊತ್ತು. ಈ ರೀತಿ ಮಾಡುವುದು ಶೋಭೆ ತರತಕ್ಕಂಥ ಕೆಲಸವೇ, ಇದರಿಂದಾಗಿ ಸರ್ಕಾರಕ್ಕೆ ಮತ್ತು ಇಲಾಖೆಗೆ ಶೋಭೆ ಬರುತ್ತದೆಯೇ ಅಥವಾ ಮಾನ್ಯ ಸಚಿವರಿಗೆ ಶೋಭೆ ಬರುತ್ತದೆಯೇ? ಈ ರೀತಿಯಾಗಿ ಮಾಡಿದರೆ ನಮ್ಮ ಬೀದರ್ ಜಿಲ್ಲೆ ಯಾವಾಗ ಉದ್ಧಾರವಾಗಬೇಕೆಂದು ದಯವಿಟ್ಟು ತಿಳಿಸಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾಗಿರತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬೀದರ್ ಜಿಲ್ಲೆಯಲ್ಲಿನ ಒಟ್ಟು 124 ಕೆರೆಗಳ ಪೈಕಿ 90 ಕೆರೆಯ ವ್ಯಾಪ್ತಿಗೆ ಬರುತ್ತದೆ. 34 ಜಿನುಗು ಕೆರೆಗಳೆಂದು ಬರುತ್ತದೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಯಾವ್ಯಾವುದು ಕೆರೆಗಳ ವ್ಯಾಪ್ತಿಗೆ ಬರುತ್ತದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಲಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಆಯಿತು ಬೇಡ ಬಿಡಿ. ಮಾನ್ಯ ಸದಸ್ಯರು ಬಹಳ ಪ್ರಮುಖವಾಗಿ ಎಷ್ಟು ಕೆರೆಗಳಲ್ಲಿ ಹೂಳು ತೆಗೆದಿದ್ದಾರೆಂದು ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದಾರೆ. 2015-16ನೇ ಸಾಲಿನಲ್ಲಿ 3 ಕೆರೆಗಳಲ್ಲಿ ಹೂಳೆತ್ತಲು ತಗಲಿರತಕ್ಕಂಥ ವೆಚ್ಚ 87 ಲಕ್ಷದ 37 ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ವೆಚ್ಚವೇ ಮಾಡಿಲ್ಲವೆಂಬ ಪ್ರಶ್ನೆ ಇಲ್ಲ. 2015-16ನೇ

ಉಪಯೋಗಕ್ಕಾಗಿ ಮಾತ್ರ ಪತ್ರಿಕೆಗಳಿಗೆ ಅಲ್ಲ

ಸಾಲಿನಲ್ಲಿ ಬಿಡುಗಡೆಯಾದ ಅಂದಾಜು ಮೊತ್ತ ಒಂದು ಕೋಟಿ ಎಂಬತ್ತು ಲಕ್ಷ ರೂಪಾಯಿಗಳು. ಆದರೆ, ಖರ್ಚಾಗಿರುವುದು ಮಾತ್ರ 87 ಲಕ್ಷದ 37 ಸಾವಿರ ರೂಪಾಯಿಗಳು. ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ. ಮುಂದೆ ಏನು ಮಾಡುತ್ತದೆ ಎನ್ನುವಂತಹ ಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಿಜ ನಾನು ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗುತ್ತದೆ. ಈ ಸದನದ ಮುಖೇನ ನಾಡಿನ ಜನರಿಗೆ ಒಂದು ಸಂದೇಶವನ್ನು ಕೂಡ ಕೊಡಬೇಕಾಗುತ್ತದೆ. ಈ ವಿಚಾರದ ಬಗ್ಗೆ ಸಮಗ್ರವಾಗಿ ಚಿಂತನೆ ನಡೆದಿರತಕ್ಕಂಥದ್ದು ಎಂದರೆ 2002ನೇ ಸಾಲಿನಲ್ಲಿ. 2002ನೇ ಸಾಲಿನಲ್ಲಿ ಜಲ ಸಂವರ್ಧನೆ ಯೋಜನೆಯ ವತಿಯಿಂದ ಸುಮಾರು 815.00 ಕೋಟಿ ರೂಪಾಯಿಗಳಿಗೆ ಯೋಜನೆಯನ್ನು ಮಾಡಿ ವಿಶ್ವ ಬ್ಯಾಂಕಿನಿಂದ ಹಣವನ್ನು ಪಡೆದುಕೊಳ್ಳಲಾಗಿದೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಬೀದರ್ ಜಿಲ್ಲೆಗೆ ಸೀಮಿತವಾಗಿದೆ. ದಯವಿಟ್ಟು ಅಷ್ಟಕ್ಕೆ ಉತ್ತರ ಕೊಟ್ಟರೆ ಸಾಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಬೀದರ್ ಜಿಲ್ಲೆಯೂ ಸೇರುತ್ತದೆ. ಸುಮಾರು 815.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಟ್ಟು 3710 ಕೆರೆಗಳನ್ನು ಪುನಶ್ಚೇತನ ಮಾಡಲಾಗಿದೆ. ದಯವಿಟ್ಟು ಮಾನ್ಯ ಸದಸ್ಯರೆ ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು. ಏತಕ್ಕಾಗಿ ಇಷ್ಟೊಂದು ಅವಸರ ಮಾಡುತ್ತಿದ್ದಾರೆಯೊ ನನಗೆ ಅರ್ಥವಾಗುತ್ತಿಲ್ಲ. ಈಗ ಏನಾಗಿದೆಯೆಂದರೆ ಮಾನ್ಯ ಸದಸ್ಯರು ಇದನ್ನು ಮೊದಲನೆ ಹಂತದಲ್ಲಿ, ಎರಡನೆ ಹಂತದಲ್ಲಿ ಮಾಡಲಾಗಿದೆ. ಎರಡನೆ ಹಂತದಲ್ಲಿ 2013ನೇ ಸಾಲಿನಲ್ಲಿ 350 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾಡಲಾಗಿದೆ. Comprehensive ಆಗಿ ಯೋಜನೆಯನ್ನು ಮಾಡಿದ ಹಿನ್ನೆಲೆಯಲ್ಲಿ ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಅದೇ ರೀತಿಯಾಗಿ ಒಂದು ವಿಚಾರವನ್ನು ಮಾನ್ಯ ಈಶ್ವರಪ್ಪನವರ ಗಮನಕ್ಕೆ ತರಬೇಕಾಗುತ್ತದೆ. ನಮ್ಮ ಕೆರೆಗಳಲ್ಲಿ ನೀರನ್ನು ಸಂಗ್ರಹಿಸತಕ್ಕಂಥ ಸಾಮರ್ಥ್ಯವಿರತಕ್ಕಂಥದ್ದು ಸುಮಾರು 120 TMC ಮಾತ್ರ. ಈ ನೀರನ್ನು ಸಂಗ್ರಹಿಸಲು ಹೂಳೆತ್ತಲು ತಗುಲ್ಲಿದ ವೆಚ್ಚದ ಬಗ್ಗೆ ನಾನು ಅಧಿಕಾರಿಗಳ ಜೊತೆ ಅನೇಕ ಸಭೆಗಳಲ್ಲಿ ಚರ್ಚೆ ಮಾಡಿದ್ದೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನೀರಾವರಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರಿಗೆ ಕೇಳುವುದಕ್ಕೆ ಹೇಳಿ. ಈ ವಿಚಾರವೂ ಸದಸ್ಯರು ಕೇಳಿರುವ ಪ್ರಶ್ನೆಯ ವ್ಯಾಪ್ತಿಯಲ್ಲಿಯೇ ಬರುತ್ತದೆ.

ಶ್ರೀ ಎ.ಎನ್.ಆರ್. ನಾಗರತ್ನ

ಹೂಳು ತೆಗೆಯದೆ ಇರುವ ಕಾರಣದಿಂದ ನಾವು ಕನಿಷ್ಠ 30 TMC ನೀರನ್ನು ಸಂಗ್ರಹಿಸತಕ್ಕಂಥ ಸಾಮರ್ಥ್ಯವನ್ನು ಕಳೆದುಕೊಂಡಿದ್ದೇವೆ. ಹೂಳು ತೆಗೆಯಬೇಕೆನ್ನುವ ಒಂದೇ ಕಾರಣಕೋಸ್ಕರ ನಾವು ಈಗಾಗಲೇ 'ಕೆರೆ ಸಂಜೀವಿನಿ' ಎಂಬ ಯೋಜನೆಗೆ ಚಾಲನೆಯನ್ನು ನೀಡಿದ್ದೇವೆ. ಈ ಯೋಜನೆಗೆ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತಹ ಕೆರೆಗಳನ್ನು ನಾವು ಕೈಗೆತ್ತಿಕೊಳ್ಳುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಎರಡೆರಡು ಇಲಾಖೆಗಳು ಇರುವುದರಿಂದ ಸಮಸ್ಯೆಯಾಗುತ್ತಿದೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಆ ತರಹ ಏನಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರು financial achievement ಏನಾಗಿದೆ, physical achievement ಏನಾಗಿದೆ ಎನ್ನುವುದನ್ನು ಪ್ರತಿ ತಿಂಗಳು ಅಧಿಕಾರಿಗಳನ್ನು ಕರೆಸಿ ಸಭೆ ನಡೆಸಿದ್ದರೆ ಈ ರೀತಿಯ ಉತ್ತರವನ್ನು ಕೊಡುತ್ತಿರಲಿಲ್ಲ. ವಿಧಿಯಿಲ್ಲದೇ ಈ ರೀತಿಯ ಉತ್ತರವನ್ನು ಕೊಡುತ್ತಿದ್ದಾರೆ. ಕೆರೆಯ ಹೂಳೆತ್ತುವ ಕಾಮಗಾರಿಗೆ ಅನುದಾನವನ್ನು ಬಿಡುಗಡೆ ಮಾಡುವುದೇ ಬಹಳ ಕಡಿಮೆ ಎನ್ನುವುದು ನಿಮಗೂ ಗೊತ್ತಿದೆ. ಬಿಡುಗಡೆಯಾಗಿರುವ ಅನುದಾನ 180 ಲಕ್ಷ. ಆದರೆ, ಒಟ್ಟು ಇಲಾಖೆಯವರು ಖರ್ಚು ಮಾಡಿರತಕ್ಕಂಥದ್ದು 97.77 ಲಕ್ಷ. ಇದು ಉಪ್ಪಿನ ಕಾಯಿಗೂ ಆಗುವುದಿಲ್ಲವೆಂಬುದು ಮಾನ್ಯ ಸಚಿವರಿಗೆ ಗೊತ್ತಿದೆ. ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ 30 ಟಿಎಂಸಿ ನೀರನ್ನು ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲವೆಂದು ಮಾನ್ಯ ಸಚಿವರೆ ಹೇಳಿದ್ದಾರೆ. ಇಷ್ಟೇಲ್ಲಾ ಸಮಸ್ಯೆ ಇದ್ದು, ಬಿಡುಗಡೆಯಾಗಿರುವ ಅನುದಾನವನ್ನು ಖರ್ಚು ಮಾಡುವುದಕ್ಕೆ ಏಕೆ ಸಾಧ್ಯವಾಗಿಲ್ಲ? ಅನುದಾನವನ್ನು ಏತಕ್ಕೆ ಜಾಸ್ತಿ ಬಿಡುಗಡೆ ಮಾಡಲಿಲ್ಲವೆಂದು ನಾನು ಕೇಳುವುದಿಲ್ಲ. ಇಲಾಖೆಯ ಹಣಕಾಸಿನ ಲಭ್ಯತೆಗೆ ತಕ್ಕಂತೆ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ. ಮಾನ್ಯ ಸಚಿವರು ರಾಜಕಾರಣ ಮಾಡಿಕೊಂಡಿರುವುದರಿಂದ ಸಮಯವಿರುವುದಿಲ್ಲ. ಆದರೆ, ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ? ಬಿಡುಗಡೆಯಾಗಿರುವ ಅನುದಾನವನ್ನು ಖರ್ಚು ಮಾಡುವುದಕ್ಕಾಗಿ ಎನ್ನುವುದು ತುಂಬಾ ಸ್ಪಷ್ಟ. ಮಾನ್ಯ ಎಂ.ಬಿ.ಪಾಟೀಲ್‌ರವರೆ ದಯವಿಟ್ಟು ನಾನು ಕೈ ಮುಗಿಯುತ್ತೇನೆ. ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ಏಕೆಂದರೆ ಮಾನ್ಯ ಸಚಿವರು ಗಮನ ಕೊಡುವುದಕ್ಕಾಗಲಿಲ್ಲವೆಂದರೆ ಈ ಇಲಾಖೆಗಳನ್ನು ಬೇರೆಯವರಿಗೆ ಕೊಡಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ಇಲಾಖೆಯ ಜವಾಬ್ದಾರಿಯನ್ನು ಮಾನ್ಯ ಎಂ.ಬಿ.ಪಾಟೀಲ್‌ರವರಿಗೆ ಕೊಡಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬಿಡುಗಡೆಯಾಗಿರತಕ್ಕಂಥ ಅನುದಾನವನ್ನು ಅಧಿಕಾರಿಗಳು ಉಪಯೋಗಿಸಿಕೊಂಡಿಲ್ಲ ಎಷ್ಟು ಮಹಾ ಅನುದಾನವಿದೆ. ನೂರಾರು ಕೋಟಿ ರೂಪಾಯಿಗಳಿವೆಯೇ? ಕೊಟ್ಟಿರತಕ್ಕಂಥ ಅನುದಾನವೇ 180 ಕೋಟಿ ರೂಪಾಯಿಗಳು. ಇದರಲ್ಲಿ ಕೇವಲ 97.77 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂಬ ಉತ್ತರವನ್ನು ತಂದು ಸದನದ ಮುಂದೆ ಇಡುತ್ತಿದ್ದಾರೆ. ಮಾನ್ಯ ಸಚಿವರು ಹೇಳುವುದನ್ನು ಕೇಳಿಕೊಂಡು ಹೋಗುವುದಕ್ಕೆ ನಾವು ಸದನಕ್ಕೆ ಬರುತ್ತೇವೆಯೇ? ಮಾನ್ಯ ಸಚಿವರು ಅವರ ಸಮಾಧಾನಕ್ಕಾಗಿ ಏನಾದರೂ ಉತ್ತರವನ್ನು ಕೊಡಲಿ, ಏನು ಬೇಕಾದರೂ ಸಮಜಾಯಿಷಿಯನ್ನು ಕೊಡಲಿ. ಆದರೆ, ನನ್ನ ಪ್ರಶ್ನೆ ಅದಲ್ಲಾ. ಬಿಡುಗಡೆಯಾಗಿರತಕ್ಕಂಥ ಅನುದಾನವನ್ನಾದರೂ ಖರ್ಚು ಮಾಡಿಲ್ಲವೆಂದರೆ ಹೇಗೆ? ಮಾನ್ಯ ಸಚಿವರು ಇವತ್ತು ಅಧಿಕಾರಿಗಳನ್ನು ಸಭೆಗೆ ಕರೆದು Physical achievement and Financial target reach ಏಕೆ ಮಾಡಿಲ್ಲವೆಂದು ಕೇಳಬೇಕು. ಮಾನ್ಯ ಸಚಿವರಿಗೆ ಅಧಿಕಾರವಿದೆ ಅಲ್ಲವೇ? ದಯವಿಟ್ಟು ಸಭೆಯನ್ನು ಮಾಡಿ. ಇರುವ ಸಮಯವನ್ನು ಉಪಯೋಗಿಸಿಕೊಂಡು ಬಿಡುಗಡೆಯಾಗಿರತಕ್ಕಂಥ ಅನುದಾನವನ್ನಾದರೂ ಖರ್ಚು ಮಾಡಲಿ ಎಂದು ನನ್ನ ಮನವಿ. ಆಗುತ್ತದೆಯೋ, ಆಗುವುದಿಲ್ಲವೋ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ 124 ಕೆರೆಗಳ ಪೈಕಿ 90 ಕೆರೆಯ ವ್ಯಾಪ್ತಿಗೆ ಬರುತ್ತದೆ. 34 ಜಿನುಗು ಕೆರೆಗಳಿವೆ. ಜಿನುಗು ಕೆರೆ ಎಂದರೆ Percolation tank ನನಗೆ ಗೊತ್ತಿದೆ. ಇವೆರಡೂ ಕೆರೆಗಳು ಮಾನ್ಯ ಸಚಿವರ ವ್ಯಾಪ್ತಿಯಲ್ಲಿಯೇ ಬರುವುದು. ನಾನು ಕೇಳಿರತಕ್ಕಂಥ ಪ್ರಶ್ನೆ ಇಡೀ ರಾಜ್ಯಕ್ಕೆ ಸಂಬಂಧಿಸಿದಲ್ಲ. ಬೀದರ್ ಜಿಲ್ಲೆಗೆ ಸೀಮಿತವಾಗಿರುವುದು. ಬೀದರ್ ಜಿಲ್ಲೆಯ ಎಷ್ಟು ಕೆರೆಗಳಲ್ಲಿ ಹೂಳನ್ನು ತೆಗೆದಿದ್ದಾರೆ ಎನ್ನತಕ್ಕಂಥ ಪ್ರಶ್ನೆ. ಮಾನ್ಯ ಸಚಿವರು 124 ಕೆರೆಗಳ ಪೈಕಿ ಒಂದೊಂದು ವರ್ಷ 3 ರಂತೆ ಮಾಡಿದ್ದರೆ, 3 ವರ್ಷದಲ್ಲಿ 9 ಕೆರೆಗಳ ಹೂಳೆತ್ತುವ ಕೆಲಸವಾಗುತ್ತಿತ್ತು. 3 ವರ್ಷದಿಂದ 3 ಕೆರೆಗಳಲ್ಲಿ ಮಾತ್ರ ಹೂಳೆತ್ತಿದ್ದಾರೆ. ಆದರೆ, ಖರ್ಚು ಮಾಡಿರತಕ್ಕಂಥ ಅನುದಾನ 10.40 ಲಕ್ಷ ರೂಪಾಯಿಗಳು. ಉಳಿದ 87.37 ಲಕ್ಷವನ್ನು ಇತರೆ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ. ಎಷ್ಟು ದೂರದೃಷ್ಟವಿದು. What is the commitment? Do you know the commitment towards this programme? ಹೂಳೆತ್ತುವ

"ತಿದ್ದುಪಡಿಯಾಗದ ಪ್ರತಿ"

ಕಾಮಗಾರಿಗೆ ಕೇವಲ 5.7% ಮಾತ್ರ ಖರ್ಚು ಮಾಡಲಾಗಿದೆ. ಆದರೆ, ಕೈಗೆತ್ತಿಕೊಂಡಿರುವ ಕೆರೆಯ ಸಂಖ್ಯೆಯನ್ನು ನೋಡಿದರೆ, 2.8% ಮಾತ್ರ. ಈ ಇಲಾಖೆಯಲ್ಲಿ ಏನಾಗುತ್ತಿದೆ, ಈ ರೀತಿಯಾದರೆ, ಯಾವಾಗ ಕೆರೆಗಳು ಜೀರ್ಣೋದ್ಧಾರವಾಗುತ್ತದೆ? ಈ ಕೆರೆಗಳಿಂದ ನೇರವಾಗಿ ಸಣ್ಣ ಸಣ್ಣ ರೈತರಿಗೆ ಅನುಕೂಲವಾಗುವುದು ಮತ್ತು ಸಣ್ಣ ಸಣ್ಣ ಊರುಗಳಿಗೆ ಬೇಕಾಗಿರುವುದು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, 85.00 ಲಕ್ಷ ರೂಪಾಯಿಗಳಾದರೂ ಖರ್ಚು ಮಾಡಿದ್ದೇವೆಂದರೆ ಏನಾದರೂ ಸಮಜಾಯಿಷಿ ಆಗುತ್ತಿತ್ತು. ಆದರೆ, 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ. 87.37 ಲಕ್ಷ ರೂಪಾಯಿಗಳನ್ನು ವಿವಿಧ ಕೆಲಸಗಳಿಗೆ ಖರ್ಚು ಮಾಡಲಾಗಿದೆ ಎಂದರೆ ಯಾವಾಗ ಹೂಳೆತ್ತುವ ಕೆಲಸಗಳಾಗುತ್ತದೆ. ವಿವಿಧ ಕೆಲಸಗಳು ಏನೆಂಬುದನ್ನು ಹೇಳಬೇಕು.

**ಸಭಾಪತಿಯವರು:-** ಪ್ರಶ್ನೆಯನ್ನು ಕೇಳಿದ್ದೀರಿ. ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು 2015-16ನೇ ಸಾಲಿನ ಮಾಹಿತಿ ಮಾತ್ರ ಮಾನ್ಯ ಸದಸ್ಯರ ಹತ್ತಿರ ಇದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಮಾಹಿತಿಯಲ್ಲಿಯೇ ಇರುವುದು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಆ ಮಾಹಿತಿಯೂ ಸದಸ್ಯರ ಹತ್ತಿರವೂ ಇದೆ. ಈಗ ಒಟ್ಟು ವೆಚ್ಚವಾಗಿರುವುದು 97 ಲಕ್ಷದ 77 ಸಾವಿರ ರೂಪಾಯಿಗಳು. ಹೂಳೆತ್ತುವ ಹೊರತು ಇತರೆ ಅಭಿವೃದ್ಧಿಗಾಗಿ ಮಾಡಲಾದ ವೆಚ್ಚ 87.77 ಲಕ್ಷ ರೂಪಾಯಿ. ಹೂಳೆತ್ತಲು ಮಾಡಿರತಕ್ಕಂಥ ವೆಚ್ಚ 10 ಲಕ್ಷದ 40 ಸಾವಿರ ರೂಪಾಯಿಗಳು. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ನಾನು ಇವೆಲ್ಲಾವನ್ನು ಏತಕ್ಕೆ ಹೇಳಿದೆ ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಸಮಯವಿರುವುದಿಲ್ಲ. ಇಲಾಖೆಗಳು ಜಾಸ್ತಿ ಇದೆ ಎಂದು ಹೇಳಿದ್ದರು. ಅದು ಪ್ರಶ್ನೆಯಲ್ಲ. ಹೂಳೆತ್ತುವಂತಹ ಕಾರ್ಯಕ್ರಮ ಇವತ್ತು ಸರ್ಕಾರದ ಒಂದು ಆಧ್ಯತಾ ಕಾರ್ಯಕ್ರಮವಾಗಬೇಕು. 2002 ರಲ್ಲಿ ಒಂದು ಸಾರಿ ಈ ರೀತಿಯ ಕಾರ್ಯಕ್ರಮವಾಗಿರುವುದು ಬಿಟ್ಟರೆ, ತದನಂತರ ಕೆರೆ ಹೂಳೆತ್ತುವ ಕಾರ್ಯಕ್ರಮವನ್ನು ಮಾಡಿರುವಂಥದ್ದು, ಈ ಸಲ ಮಾತ್ರ. 'ಕೆರೆ ಕಲ್ಯಾಣ' ಎಂಬ ಯೋಜನೆಯನ್ನು ಕೊಟ್ಟಿದ್ದೇವೆ. ಹಿಂದಿನ ವರ್ಷ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಬರತಕ್ಕಂಥ ಕೆರೆಗಳಿಗೋಸ್ಕರ ಅದನ್ನು ಪ್ರಾಯೋಗಿಕವಾಗಿ ತೆಗೆದುಕೊಂಡು, ಹೂಳೆತ್ತುವಂತಹ ಕೆಲಸವನ್ನು ಜನರ ಸಹಕಾರದೊಂದಿಗೆ ಮಾಡಿದ್ದು, ಅದು ಹೆಚ್ಚು ಫಲಕಾರಿಯಾಗಿತ್ತು. ಆ ಕಾರಣಕೋಸ್ಕರ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳಿಗೂ

ಕೂಡ ಈ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಸಣ್ಣ ನೀರಾವರಿ ಇಲಾಖೆಯಲ್ಲಿ ಇದಕ್ಕಾಗಿ 100 ಕೋಟಿ ರೂಪಾಯಿಗಳ ಅನುದಾನವನ್ನಿಟ್ಟಿದೆ. ಪ್ರತಿ ಕ್ಷೇತ್ರಕ್ಕೂ 5 ಕೆರೆಗಳನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇವೆ. ಆದರೆ, ಹೂಳೆತ್ತುವಂತಹ ಕೆಲಸವೂ ಎಲ್ಲಾ ಸಂದರ್ಭದಲ್ಲಿಯೂ ಮಾಡುವುದಕ್ಕಾಗುವುದಿಲ್ಲ. ಮಳೆ ಬಾರದೆ ಕೆರೆಯಲ್ಲಿ ನೀರು ಯಾವಾಗ ಇರುವುದಿಲ್ಲವೋ ಅದೆಲ್ಲಾವನ್ನು ನೋಡಿಕೊಂಡು ಬೇಸಿಗೆ ಸಂದರ್ಭದಲ್ಲಿ ಹೂಳೆತ್ತುವ ಕೆಲಸವನ್ನು ಮಾಡಬೇಕು. ಹಾಗಾಗಿ, ಒಮ್ಮೊಮ್ಮೆ ನಾವು ನಿರ್ದಿಷ್ಟವಾಗಿ ಕಾರ್ಯಕ್ರಮ ಅನುಷ್ಠಾನ ಮಾಡತಕ್ಕಂಥದ್ದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಇವೆಲ್ಲಾ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಹೂಳೆತ್ತುವ ಕಾರ್ಯಕ್ರಮಕ್ಕೆ ಈ ಸ್ಕೀಂ ಚಾಲನೆ ನೀಡುತ್ತಿದ್ದೇವೆ. ಪ್ರತಿ ಕ್ಷೇತ್ರಕ್ಕೆ 5 ಕೆರೆಯೆಂದು ಜನರ ಸಹಕಾರದೊಂದಿಗೆ ಹೂಳೆತ್ತುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗೆ ಉತ್ತರವನ್ನು ಮಾನ್ಯ ಸಚಿವರು ಕೊಡುತ್ತಿದ್ದಾರೆ. ಹೂಳು ಯಾವಾಗ ಎತ್ತಬೇಕೆನ್ನುವುದು ಇಡೀ ಪ್ರಪಂಚಕ್ಕೆ ಗೊತ್ತಿದೆ. ಮಳೆಗಾಲದಲ್ಲಿ ತೆಗೆಯುವುದಕ್ಕೆ ಬರುವುದಿಲ್ಲ. ಯಾವಾಗ ಹೂಳೆತ್ತಬೇಕೆನ್ನುವುದಕೋಸ್ಕರವೇ ಇಲಾಖೆಯವರು ಅನುದಾನವನ್ನಿಟ್ಟುಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಕೆಲಸ ಮಾಡಬೇಕಾಗಿರುವುದು ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ನಾನು ಅದಕೋಸ್ಕರವೇ ಹೇಳುತ್ತಿದ್ದೇನೆ. . . . ಮುಂದು

(711) 14.06.2017 12.20 BSD-GR

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):**

ನಾನು ಮೇಲಿಂದ ಮೇಲೆ ಹೇಳುವುದಕ್ಕೆ ಇಷ್ಟಪಡುತ್ತಿಲ್ಲ. ಇವರು ಇಟ್ಟ ಹಣವನ್ನು ಖರ್ಚು ಮಾಡಲು 365 ದಿನವೂ ಮಳೆ ಬರುತ್ತಿತ್ತೇ? ಹಣವನ್ನು ಏಕೆ ಖರ್ಚು ಮಾಡಲಿಲ್ಲ? ಅಧಿಕಾರಿಗಳನ್ನು ಡಿಫೆಂಡ್ ಮಾಡಿಕೊಂಡರೆ ಆಗುವುದಿಲ್ಲ. ತಕ್ಷಣ ಸಭೆ ಮುಗಿಯುತ್ತಿದ್ದ ಹಾಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಹಣವನ್ನು ತಕ್ಷಣ ಖರ್ಚು ಮಾಡಬೇಕು. ಈಗಾಗಲೇ ಅಂದಾಜು ಯೋಜನೆ ಮಾಡಿಕೊಂಡಿರುವಂತೆ ಖರ್ಚು ಮಾಡಿ, ಈ ವರ್ಷದೊಳಗಾದರೂ ಮುಗಿಸುತ್ತಾರೆಯೇ?

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಯೋಜನೆಗಳನ್ನು ಮಾಡಿ, ಅದು automatic ಆಗಿ ಲ್ಯಾಪ್ಸ್ ಆಗಿ ನಂತರ programme carry over ಆಗುತ್ತದೆ. ನಾನು ಹೇಳುವುದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಆಗುತ್ತದೆ. ಹೋದ ವರ್ಷ ಬೀದರ್‌ನಲ್ಲಿ ಮಳೆ

ಬಂದ ಸಂದರ್ಭದಲ್ಲಿ ಹೆಚ್ಚು ಕೆರೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಅದರಲ್ಲಿ ಈ ವರ್ಷ ಸೇರಿಸಿ ತೆಗೆದುಕೊಳ್ಳುತ್ತೇನೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿಂದೆ ಹೂಳು ತೆಗೆಯುವುದರಲ್ಲಿ ತಪ್ಪಾಗಿದ್ದು, ಈ ವರ್ಷದ ವಿಶೇಷ ಯೋಜನೆಯಡಿ ರೂ.100 ಕೋಟಿ ಹಣ ಇಟ್ಟಿದ್ದು, ಅದರಲ್ಲಿ ಒಂದೊಂದು ಕ್ಷೇತ್ರಕ್ಕೆ 5 ಕೆರೆಗಳನ್ನು ತೆಗೆದುಕೊಂಡು ಕೆಲಸ ಮಾಡುವುದಾಗಿ ಹೇಳಿದ್ದಾರೆ. ತುಂಬಾ ಸಂತೋಷ!. ಬೀದರ್‌ನಲ್ಲಿ 6 ವಿಧಾನ ಸಭಾಕ್ಷೇತ್ರ ಇದ್ದು 5 ಕೆರೆಗಳು ಎಂದರೆ 30 ಕೆರೆಗಳನ್ನು ತೆಗೆದುಕೊಳ್ಳುತ್ತಾರೆಯೇ? ಮಾನ್ಯ ಸಚಿವರು ಈ ಕೆಲಸವನ್ನು ಬರೀ ಬೇಸಿಗೆ ಕಾಲದಲ್ಲಿ ಮಾಡಬೇಕು ಎಂದು ಹೇಳಿದರು. ಭಗವಂತನ ದಯೆಯಿಂದ ಈ ವರ್ಷ ಬೇಸಿಗೆ ಮುಗಿದಿದ್ದು, ಆ ರೂ.100 ಕೋಟಿಗಳನ್ನು ಪುಸ್ತಕದಲ್ಲಿ ಮುದ್ರಣ ಮಾಡುತ್ತಾರೆಯೇ? ಅಧಿಕಾರಿಗಳಿಗೆ ಲೂಟಿ ಹೊಡೆಯುವುದಕ್ಕೆ ಅವಕಾಶ ಕೊಡುತ್ತಾರೆಯೇ? ಬೇಸಿಗೆ ಮುಗಿದು ಮಳೆಗಾಲ ಚಾಲೂ ಆಗಿದ್ದು, ಯಾವಾಗ ಮಾಡುತ್ತಾರೆ? ಒಂದೊಂದು ಕ್ಷೇತ್ರದಲ್ಲಿ 5 ಕೆರೆಗಳನ್ನು ತೆಗೆದುಕೊಳ್ಳುವುದಾಗಿ ಹೇಳಿ ಇನ್ಯಾವಾಗ ಕೆಲಸ ಮಾಡಿಸುತ್ತಾರೆ ಎಂದು ಹೇಳಬೇಕು. ಇದು ಬದ್ಧತೆಯೇ? ಇಡೀ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. I never expected this kind of answer from a senior Minister.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ತಪ್ಪು ದಾರಿಗೆ ಎಳೆಯುತ್ತಿಲ್ಲ. ನಾನು ಪದೇ ಪದೇ ನಿರ್ದಿಷ್ಟವಾದ ಯೋಜನೆ ಬೇಕು ಎಂದು ಹೇಳುತ್ತಿದ್ದೇನೆ. ಕೆರೆಯ ಹೂಳನ್ನು ಎತ್ತಲು 2002ರ ಯೋಜನೆ ಬಿಟ್ಟರೆ ಈ ಸಾರಿ ಮಾತ್ರ ತೆಗೆದುಕೊಂಡಿರುವುದಾಗಿದೆ. ಪ್ರತಿ ವರ್ಷ ಕೆರೆ ಹೂಳನ್ನು ತೆಗೆಯುವ ಕಾರ್ಯಕ್ರಮಗಳನ್ನು ನಮ್ಮ ಇಲಾಖೆಯಿಂದ ತೆಗೆದುಕೊಂಡಿಲ್ಲ. ಪ್ರಾಯೋಗಿಕವಾಗಿ ತೆಗೆದುಕೊಂಡಿರುವ ಸಂದರ್ಭಗಳಿವೆ. ಆದರೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಈಗ ರೂಪಿಸಿದ್ದೇವೆ. ಇದು ನನಗೂ ಅರ್ಥವಾಗುತ್ತದೆ. ನಮ್ಮಲ್ಲಿ ಬರುವ 3 ಸಾವಿರ ಕೆರೆಗಳನ್ನು 5 ಕೆರೆಗಳಂತೆ ತೆಗೆದುಕೊಂಡರೆ ಎಷ್ಟು ವರ್ಷ ಬೇಕಾಗುತ್ತದೆ ಎಂದು ನನಗೆ ಅರ್ಥವಾಗುತ್ತದೆ. ಆದರೆ ಹಣಕಾಸಿನ ಲಭ್ಯತೆಯೂ ಬೇಕಲ್ಲವೇ? ಈ ಕಾರ್ಯಕ್ರಮ ಮಂಜೂರಾತಿ ಆದಮೇಲೆ ಮುಂದಿನ ನವೆಂಬರ್-ಡಿಸೆಂಬರ್‌ನಲ್ಲಿ ಹೂಳೆತ್ತಲು ಸಾಧ್ಯವಾಗುತ್ತದೆ. ಮುಂದಿನ season ಅಷ್ಟರಲ್ಲಿ ಎತ್ತುವುದಕ್ಕೆ ಸಾಧ್ಯವಾಗುತ್ತದೆ. ಇದು budgeted amount ಆಗಿದ್ದು, ಲ್ಯಾಪ್ಸ್ ಆಗುವ ಪ್ರಶ್ನೆ ಬರುವುದಿಲ್ಲ. ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚು ಮಾಡಲು ಅವಕಾಶ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅಂತಿಮವಾದ ಪ್ರಶ್ನೆ ಏನೆಂದರೆ, ಈ ಹಣವನ್ನು 2015-16ರಲ್ಲಿ ಇಟ್ಟು ಆ ವರ್ಷದಲ್ಲಿ ಖರ್ಚು ಮಾಡಲಿಲ್ಲ ಮತ್ತು 2016-17ರಲ್ಲಿಯೂ ಖರ್ಚು ಮಾಡಲಿಲ್ಲ. ನಾನು ಏಕೆ ಕೇಳುತ್ತಿದ್ದೇನೆಂದರೆ, ಇಲ್ಲಿ ನಾವು ಪ್ರಶ್ನೆ ಕೇಳುತ್ತೇವೆ, ಉತ್ತರ ಕೊಡುತ್ತಾರೆ, ಪತ್ರಕರ್ತರು ಇದ್ದಾರೆ, ಏನೋ ನಡೆದುಹೋಗುತ್ತದೆ. ಈಗ ನಾನು ಕೈಮುಗಿದು ಕೇಳುವುದೇನೆಂದರೆ, ಈ ಹಣವನ್ನು ಅನ್ಯಾಯವಾಗಿ ವ್ಯರ್ಥವಾಗಲು ಬಿಡಬಾರದು. ಅದು ಲ್ಯಾಪ್ಸ್ ಆಗುವುದಿಲ್ಲ ಎಂಬುದು ಗೊತ್ತು. ಎರಡು ವರ್ಷಗಳಾದರೂ ಹಣ ಖರ್ಚು ಮಾಡಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:-** ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಅದರಲ್ಲಿ expenditure ಏನು ಮಾಡುತ್ತಾರೋ, ಅಷ್ಟನ್ನು ಬಿಟ್ಟು ಉಳಿದಿದ್ದು carry over ಆಗುತ್ತದೆ. Spillover ಆಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಎಷ್ಟು ವರ್ಷ carry ಮಾಡುವುದು?

Sri T.B.JAYACHANDRA:- Mr.Chairman Sir, spillover ಆದಾಗ ನಾವು ಹಣವನ್ನು ಕೊಡಬೇಕಾಗುತ್ತದೆ. ಯಾವ ಯಾವ ಕೆರೆಗಳಿಗೆ, spillover ಆಗಿದೆಯೋ, ಈ ವರ್ಷದಕೆರೆ ಸಂಜೀವಿನ ಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಎರಡು ವರ್ಷಗಳಾಗಿದ್ದು ಮೂರನೆ ವರ್ಷಕ್ಕಾದರೂ ಮುಂದುವರೆಸುತ್ತಾರೆಯೇ?

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿರುವುದು. ದಯಮಾಡಿ ವಿಪಕ್ಷ ನಾಯಕರು ಅರ್ಥಮಾಡಿಕೊಳ್ಳಬೇಕು. ಇದುವರೆಗೆ ನಿರ್ದಿಷ್ಟವಾಗಿ ಕೆರೆಗಳಲ್ಲಿ ಹೂಳೆತ್ತಲು 2002ನೇ ಇಸವಿ ಬಿಟ್ಟರೆ ಈ ವರ್ಷ ಮಾತ್ರ ತೆಗೆದುಕೊಂಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** 2014-15ರಲ್ಲಿ ಹಣ ಇಟ್ಟಿರುವುದನ್ನು ದಯವಿಟ್ಟು ನೋಡಬೇಕು.

**ಶ್ರೀ ಟಿ.ಬಿ. ಜಯಚಂದ್ರ:-** ಅದನ್ನು ಪ್ರಾಯೋಗಿಕವಾಗಿ ತೆಗೆದುಕೊಂಡಿರುವುದಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಗ ಪ್ರಾರಂಭ ಮಾಡಲಿಲ್ಲವೇ?

**ಶ್ರೀ ಟಿ.ಬಿ. ಜಯಚಂದ್ರ:–** ನಾನು ಹೇಳುವುದನ್ನು ದಯಮಾಡಿ ಕೇಳಬೇಕು. ಅವರು ಸಹ ಮಂತ್ರಿಗಳಾಗಿ ಕೆಲಸ ಮಾಡಿದವರಾಗಿದ್ದಾರೆ. ನಾವು expenditure ಮಾಡುವುದಕ್ಕೆ ಆಗದಿದ್ದಾಗ spillover ಆಗುತ್ತದೆ. ನಂತರ ಒತ್ತು ಕೊಡಬೇಕಾದಾಗ ಅದಕ್ಕೆ ಕಾರ್ಯಕ್ರಮ ಬೇಕಾಗುತ್ತದೆ. ಕಾರ್ಯಕ್ರಮದಲ್ಲಿ ಸೇರಿಸಿ ಕೊಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** 2016–17ರಲ್ಲಿ ಸೇರಿಸಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:–** 2016–17ರಲ್ಲಿ ಇರಲಿಲ್ಲ. 2017–18ರಲ್ಲಿ ಮಾತ್ರ ಇದೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಉಗ್ರಪ್ಪನವರದ್ದಾಗಿದ್ದು, ಅದಕ್ಕೆ ಮಾನ್ಯ ಸಚಿವರು ಒಂದು ತಿಂಗಳು ಕಾಲಾವಕಾಶ ಕೇಳಿ ನನಗೆ ಪತ್ರ ಬರೆದಿದ್ದಾರೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಈ ರೀತಿ ಉತ್ತರ ಕೊಡುವುದಕ್ಕಿಂತ 6 ತಿಂಗಳು ಸಮಯ ಕೇಳುವುದೇ ಬಹಳ ಒಳ್ಳೆಯದು. ಉತ್ತರ ಕೊಡುವ ಪದ್ಧತಿ ನೋಡಿದರೆ ಆ ರೀತಿ ಇದೆ.

**ಸಭಾಪತಿಯವರು:–** ಮಾನ್ಯ ಸಚಿವರು ಪತ್ರ ಬರೆದಿದ್ದು, ಈ ವಿಷಯ ಸಂಗ್ರಹ ಮಾಡಿ ಕೊಡುವುದಕ್ಕೆ ಒಂದು ತಿಂಗಳು ಕಾಲಾವಕಾಶ ಬೇಕೆಂದು ಕೇಳಿದ್ದಾರೆ. ಆದ್ದರಿಂದ ಇವತ್ತು ಲಿಸ್ಟ್ ಆಗಿರುವ ಪ್ರಶ್ನೆಯನ್ನು ಕಾಲಾವಕಾಶದ್ದರಲ್ಲಿ ಹಾಕುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಿಯಮ 35ರ ಪ್ರಕಾರ ten days' notice ಕೊಟ್ಟು, ನನ್ನ ಪ್ರಶ್ನೆಯಲ್ಲಿ ರಾಜ್ಯದಲ್ಲಿನ ಯಾವ್ಯಾವ ಹಳ್ಳಿಗಳಲ್ಲಿ ಸ್ಮಶಾನಗಳಿವೆ, ಅದರ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದಾರೆ; ಅದನ್ನು ಜಾತಿವಾರು ಅಥವಾ ಧರ್ಮವಾರು ಇದ್ದರೆ ಹೇಳುವುದಕ್ಕೆ ಕೇಳಿದ್ದೇನೆ.

**ಸಭಾಪತಿಯವರು:–** ಆ ಚರ್ಚೆಗೆ ನಾನು ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಮಾನ್ಯ ಸಚಿವರು ಉತ್ತರ ಹೇಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಇದಕ್ಕೆ ತಿಂಗಳು ಸಮಯ ಏಕೆ?

**ಸಭಾಪತಿಯವರು:–** ಅವರು ಒಂದು ತಿಂಗಳು ಎಂದು ಕೇಳಿದ್ದು, ಅವರನ್ನೇ ಕೇಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಮನುಷ್ಯನಿಗೆ ಅತ್ಯಂತ ಮುಖ್ಯವಾಗಿ ಬೇಕಾಗಿರುವ ಇಶ್ಯೂ ಆಗಿದೆ.

**ಸಭಾಪತಿಯವರು:-** ಅದರ ಬಗ್ಗೆ ಚರ್ಚೆ ಬೇಡ. ನಿಮ್ಮ ಪ್ರಶ್ನೆಗೆ ಉತ್ತರ ನೀಡಲು ಒಂದು ತಿಂಗಳು ಸಮಯ ಕೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಉಗ್ರಪ್ಪನವರ ಪ್ರಶ್ನೆಯನ್ನೇ ಸ್ಮಶಾನಕ್ಕೆ ಕಳುಹಿಸಿಬಿಟ್ಟರು. ಇದು ಯಾವ ನ್ಯಾಯ?

**ಸಭಾಪತಿಯವರು:-** ಮಾನ್ಯ ಸಚಿವರು ಏನಾದರೂ ಹೇಳುವುದಿದ್ದರೆ ಹೇಳಬಹುದು, ಇಲ್ಲದಿದ್ದರೆ ಮುಂದಿನ ವಿಷಯಕ್ಕೆ ಹೋಗುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿಯುವ ಒಂದು ವಾರದೊಳಗಾದರೂ ಉತ್ತರವನ್ನು ಕೊಡುತ್ತಾರೆಯೇ ಎಂದು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಒಂದು ವಾರದಲ್ಲಿ ಆಗುವುದಿಲ್ಲ. ಸುಮ್ಮನೆ ಹುಡುಗಾಟಿಕೆಯಿಂದ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಒಂದು ತಿಂಗಳಾದರೂ ಬೇಕಾಗುತ್ತದೆ. ಏಕೆಂದರೆ ಅನೇಕ ಕಡೆಗಳಲ್ಲಿ ಅಧಿಕೃತವಾಗಿ ಘೋಷಿತ ಸ್ಮಶಾನಗಳು ಇವೆ. ಉದಾಹರಣೆಗೆ ನಮ್ಮ ಸೊಪ್ಪಿನ ಬೆಟ್ಟದಲ್ಲಿ ಸ್ಮಶಾನ ಇದ್ದು, ಪಹಣಿಯಲ್ಲಿ ಅದನ್ನು ಕಾಣಿಸಿಲ್ಲ. ಹೀಗೆ ಎಲ್ಲವನ್ನು ಗುರುತಿಸಿಕೊಂಡು ಹೇಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಸುಮಾರು 6 ಸಾವಿರ ಪಂಚಾಯಿಗಳಿದ್ದು ಎಲ್ಲಾ ಕಡೆಗಳಿಂದ ಮಾಹಿತಿ ಸಂಗ್ರಹಿಸಿ ಕೊಡಬೇಕಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಏನಾಗಿದೆಯೆಂದರೆ, ಕುಡಿಯಲು ನೀರು ಕೇಳಿದಾಗ ಬಾವಿ ತೆಗೆಯಲು ಶುರು ಹಚ್ಚಿಕೊಳ್ಳುತ್ತಿದ್ದಾರೆ. ಈ ರೀತಿ ಆಗಿದೆ. ಎಲ್ಲಾ ಮಾಹಿತಿಗಳು ಲಭ್ಯವಿರುತ್ತದೆ. ಆದ್ದರಿಂದ ದಯಮಾಡಿ ಸದನ ಮುಕ್ತಾಯವಾಗುವುದರೊಳಗೆ ಉತ್ತರ ಕೊಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಸಮರ್ಥರಿದ್ದು, ಅವರಿಂದ ಈ ರೀತಿಯ ಉತ್ತರ ಬಯಸಿರಲಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸದನ ಮುಗಿಯುವುದರೊಳಗೆ ಕೊಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಹೇಳುವುದು ಬೇಡ.

**ಸಭಾಪತಿಯವರು:-** ಆದರೆ ಉತ್ತರವನ್ನು ಕಳುಹಿಸಿಕೊಡಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಏಕೆಂದರೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಬಂದಮೇಲೆ ಸರ್ಕಾರಿ ಇದ್ದರೆ ಸ್ಮಶಾನ ಮಾಡಬೇಕು, ಸರ್ಕಾರಿ ಭೂಮಿ ಇಲ್ಲದಿದ್ದರೆ ಸ್ಮಶಾನಕ್ಕಾಗಿ ಜಮೀನು ಖರೀದಿ ಮಾಡಲು ಅವಕಾಶ ಕೊಟ್ಟಿದೆ. ಕೊಟ್ಟಿರುವ ಹಣ ಕಡಿಮೆಯಾಗಿದ್ದರಿಂದ ಅನೇಕ ಕಡೆ ಹೆಚ್ಚು ಹಣ ಕೊಟ್ಟು ಭೂಮಿ ಖರೀದಿ ಮಾಡಲು ಹೇಳಿದ್ದೇನೆ. ಆದ್ದರಿಂದ ಉತ್ತರ ಒದಗಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ತಹಶೀಲ್ದಾರರ ಹತ್ತಿರ ಎಷ್ಟು ಸ್ಮಶಾನಗಳಿವೆ ಎಂಬ ಮಾಹಿತಿ ಇದೆಯಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಯಾವ ತಹಶೀಲ್ದಾರರ ಹತ್ತಿರ ಸಿಗುತ್ತದೆ?

**ಶ್ರೀ ವಿ.ಎಸ್. ಉಗ್ರಪ್ಪ:-** ಸ್ಮಶಾನಗಳು ಯಾರ ನಿಯಂತ್ರಣಕ್ಕೆ ಬರುತ್ತವೆ?

**ಸಭಾಪತಿಯವರು:-** ಈಗ ಚರ್ಚೆ ಬೇಡ. ಒಂದು ವಾರದಲ್ಲಿ ಆಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದು, ಆದಷ್ಟು ಬೇಗ ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಖಂಡಿತ ಕೊಡುತ್ತೇನೆ.

**ಸಭಾಪತಿಯವರು:-** ನಂತರ ಮಾನ್ಯ ಪ್ರಸನ್ನಕುಮಾರ್‌ರವರ ಪ್ರಶ್ನೆಗೂ ಸಹ ಒಂದು ವಾರ ಕಾಲಾವಕಾಶ ಕೇಳಿದ್ದು, ಮುಂದಿನ ವಾರ ಉತ್ತರ ಕೊಡುತ್ತಾರೆ.

ಪ್ರಶ್ನೆ ಸಂಖ್ಯೆ: 2984

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಬಹಳ ದೀರ್ಘವಾಗಿ ಕೊಟ್ಟಿದ್ದು, ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಎರಡು ಏತ ನೀರಾವರಿ ಯೋಜನೆಗಳಲ್ಲಿ ಒಂದು 16 ವರ್ಷದ ಹಿಂದೆ ಪ್ರಾರಂಭವಾಗಿದ್ದು, ಮತ್ತೊಂದು 13 ವರ್ಷದ ಹಿಂದೆ ಪ್ರಾರಂಭವಾಗಿದೆ. ತುಂಗಾಭದ್ರ ಅಣೆಕಟ್ಟಿನ ಕೆಳಗೆ ಹೊರರಾಜ್ಯಕ್ಕೆ ಹೋಗುವ ನೀರನ್ನು recycling ಮಾಡಿ, Lift Irrigation ಮಾಡಬೇಕೆಂಬ ಉದ್ದೇಶಕ್ಕೆ ಶಾಸಕನಾಗಿರುವ ಸಂದರ್ಭದಲ್ಲಿ ಪ್ರಯತ್ನ ಮಾಡಿ ಮಂಜೂರಾತಿ

ಮಾಡಿಸಿದ್ದೆನು. 2001–02ರಲ್ಲಿ ದದ್ದಲ್ ಹತ್ತಿರ Lift Irrigation ಮಾಡಲು ರೂ.485 ಲಕ್ಷ ವೆಚ್ಚದ R.I.D.F-8 ರಲ್ಲಿ ಹಾಗೂ ಇನ್ನೊಂದು 2004–05ರಲ್ಲಿ ಮದ್ಲಾಪುರ ಹತ್ತಿರ Lift Irrigation ಮಾಡಬೇಕೆಂದು ಆಗಿತ್ತು.

(ಮುಂದು)

**(712) 14-06-2017 SK-GR 12.30**

ಎರಡು ಏತ ನೀರಾವರಿ ಯೋಜನೆಗಳಿಂದ tail end ಗೆ ನೀರು ಹೋಗುತ್ತಿಲ್ಲ. ರೈತರ 6371 ಎಕರೆ ಪ್ರದೇಶಗಳಿಗೆ ನೀರಾವರಿ ಅನುಕೂಲವಾಗಲೆಂದು ಮಾಡಿರುವಂತಹ ಯೋಜನೆಗಳಾಗಿದೆ. ಆದರೆ ಇವತ್ತಿಗೂ ಕಾರ್ಯರೂಪಕ್ಕೆ ಬಂದಿಲ್ಲ. ಒಂದು ಸಾರಿ ಟೆಂಡರ್ ಕರೆದು ಕೆಲಸವನ್ನು ಮಾಡಿಲ್ಲವೆಂದು ರದ್ದು ಪಡಿಸಿದ್ದಾರೆ. ಎರಡನೇ ಸಲ ಟೆಂಡರ್ ಕರೆದಿದ್ದರು ಅದನ್ನು ಕೂಡ ರದ್ದು ಮಾಡಿ ಈಗ ಮೂರನೇ ಸಲ ಟೆಂಡರ್ ಕರೆಯುತ್ತಿದ್ದಿರಿ. 2009–10 ರಲ್ಲಿ ತುಂಗಾಭದ್ರಾದಲ್ಲಿಪ್ರವಾಹ ಬಂದು ಮುಳುಗಡೆಯಾಗಿಯಿತು, ಈ ರೀತಿ ಅನೇಕ ರೀತಿಯ ವಿಸ್ತಾರವಾದಂತಹ ಉತ್ತರಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಪ್ರತಿ ಬಾರಿ ಅಧಿವೇಶನದಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ. ಇದೇ ರೀತಿಯಾದಂತಹ ಉತ್ತರಗಳು ಬರುತ್ತಿದೆ. ಆದರೆ ಅದು ಕಾರ್ಯರೂಪಕ್ಕೆ ಬರುತ್ತಿಲ್ಲವಾದ್ದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ.ಯಾವ ರೀತಿಯಲ್ಲಿ, ಯಾವತ್ತು ಮುಗಿಸುತ್ತಾರೆ? ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮದ್ಲಾಪೂರ ಮತ್ತು ದದ್ದಲ್ ನೀರಾವರಿ ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಈಗಾಗಲೇ ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. 215 ಲಕ್ಷ ರೂಪಾಯಿಗಳು ಪ್ರಾರಂಭವಾಗಿದ್ದು, delay ಯಾಗಿರುವುದ್ದರಿಂದ ಇದಕ್ಕೆ ಮತ್ತೊಂದು 200 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮತ್ತೊಂದು 200 ಲಕ್ಷ ರೂಪಾಯಿಗಳು 3–4 ಬಾರಿ ನೀವು ಕೊಡಬೇಕಾಗುತ್ತದೆ. ಈ ರೀತಿಯಾದಂತಹ ಪರಿಸ್ಥಿತಿ ಇದೆ. ಯಾರೂ ಸರಿಯಾದ ಕಾರ್ಯರೂಪಕ್ಕೆ ತರುವುದಕ್ಕೆ ಅಧಿಕಾರಿಗಳು ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ರೀತಿಯಾದಂತಹ Lift Irrigations ಅನೇಕ ವರ್ಷಗಳ ನಂತರ ಕಾರ್ಯ ರೂಪಕ್ಕೆ ಬರಬೇಕಾಗಿತ್ತು. ಕಾರಣಾಂತರಗಳಿಂದ ತೊಂದರೆಯಾಗಿರುವುದರಿಂದ ಶ್ರೀ ಟಿ.ಬಿ ಜಯಚಂದ್ರರವರು ನೀರಾವರಿ ಸಚಿವರಾದ ಮೇಲೆ ಇಲ್ಲಿಯವರೆಗೂ ನಮ್ಮ ಜಿಲ್ಲೆಗೆ ಬರುವುದಕ್ಕೆ ಆಗಲಿಲ್ಲ. ತಾವು ಮತ್ತು ತಮ್ಮ ಅಧಿಕಾರಿಗಳು ಬಂದು ನಮ್ಮ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಗೆ ಭೇಟಿ ನೀಡಿ ತಕ್ಷಣ ಅಲ್ಲಿರುವಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮತ್ತೊಂದು ಲಿಖಿತವಾಗಿ ಕೊಟ್ಟಂತಹ ಮೂರು ಯೋಜನೆಗಳು Lift Irrigationsಯಾವ ಯಾವ ಕಾರಣಕ್ಕೋಸ್ಕರ ಕಳೆದ 10-12 ವರ್ಷಗಳಿಂದ ಕಾಮಗಾರಿಗಳು ಯಾವ ಕಾರಣಕ್ಕೋಸ್ಕರವಾಗಿ ನಡೆಯದೇ ಇರುವಂತಹದ್ದನ್ನು ಕೂಡ ಉತ್ತರದಲ್ಲಿ ವಿವರಿಸಿ ಕೊಟ್ಟಿದ್ದೇನೆ. ಆದರೆ ಹಿಂದೆ ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾದಾಗ, ಒಂದು ಯೋಜನೆಯನ್ನು comprehensive ಆಗಿ ನಾವು ನೋಡುತ್ತಿರಲಿಲ್ಲ. Raising mains, jack well pumping, civil works ಈ ರೀತಿseparate, separate ಆಗಿ ಟೆಂಡರ್ ಕರೆಯುವಂತಹ ಕೆಲಸವನ್ನು ಮಾಡಿ, ಯಾರೂ ಕೂಡ ಈ ಟೆಂಡರ್ ಕೆಲಸವನ್ನು in time ಮುಗಿಸುವುದಕ್ಕೆ ಸಾಧ್ಯವಾಗಿಲ್ಲ. ಈಗ ಆ ಪದ್ಧತಿ ಕೂಡ ಬದಲಾವಣೆಯಾಗಿದೆ ಇದು ಈ ಹಿಂದೆಯಾಗಿರುವಂಥದ್ದು. ಆ ಕಾರಣಕ್ಕೋಸ್ಕರ ಇವತ್ತು ನನಗೆ ಮೇಲ್ನೋಟಕ್ಕೆ ಕಾಣುತ್ತಿರುವುದೇನೆಂದರೆ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿರುವುದಕ್ಕೆ ನಾನು ಮಾನ್ಯ ಬೋಸರಾಜರವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಈ ರೀತಿಯಾಗಿ lingering ಆಗಿರುವಂತಹ worksಅನೇಕ ಕಾಮಗಾರಿಗಳಿವೆ. ಅದಕ್ಕೋಸ್ಕರ ಮುಂದಿನ ತಿಂಗಳು ನಾನೇ ಖುದ್ದಾಗಿ ಹೋಗಿ ಕಾಮಗಾರಿಗಳನ್ನು ಪರಿಶೀಲಿಸಿ, ಆ ಕಾಮಗಾರಿಗಳು ವಿಳಂಬವಾಗುವುದಕ್ಕೆ ಕಾರಣಕರ್ತರಾಗಿದ್ದಂತವರು ಅಧಿಕಾರಿಗಳು ಅಥವಾ ಯಾರೇ ಇದ್ದರೂ ಕೂಡ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡುತ್ತೇನೆ. ಅದಕ್ಕಿಂತ ಮುಂಚೆ 8-10 ದಿವಸಗಳಲ್ಲಿTechnical Team ನ್ನು ಕಳುಹಿಸುತ್ತೇನೆ. ರಾಯಚೂರು ಭಾಗದಲ್ಲಿರುವಂತಹ ಯಾವ ಯಾವ ಯೋಜನೆಗಳುLift Irrigations defunctಆಗಿದೆ ಅಥವಾ ಕೆಲಸ ಪ್ರಾರಂಭವಾಗಿ ನಡೆದೇ ಇರುವಂತಹದು ನಮ್ಮಲ್ಲಿ ಈ ರೀತಿ ಬಹಳಷ್ಟು ಇದೆ. ಅದಕ್ಕೆ Technical Team ನಿಂದ ವರದಿಯನ್ನು ತರಿಸಿಕೊಂಡು ತದನಂತರ ನಾನು ಕೂಡ ಭೇಟಿ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅಧಿಕಾರಿಗಳು ಯಾರೇ ಆಗಿದ್ದರೂ ಕೂಡ ಅವರ ಮೇಲೆ ಕೆಲವೊಂದು ಜವಬ್ದಾರಿಯನ್ನು ಹೊರಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್‌ರವರದು.

ಶ್ರೀ **ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-**ಅವರು ಬರುತ್ತಾರೆಂದು ಹೇಳಿದರು.

ಶ್ರೀ **ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಏನಿದೆ?

**ಸಭಾಪತಿಯವರು:-**ಅವರೇ ಬಂದು ಬಿಟ್ಟರೆ ಮುಗಿದು ಹೋಯಿತು ಅಲ್ಲವೇ

ಶ್ರೀ **ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಎರಡು Lift Irrigation ಗಳಿಗಾಗಿ ಸುಮಾರು ನನ್ನ ಬೇಡಿಕೆ ಆಧಾರದ ಮೇಲೆ 75 ಲಕ್ಷ ರೂಪಾಯಿಗಳು ಮಂಜೂರಾತಿಯನ್ನು ಮಾಡಿದರು. 2015-16 ರಲ್ಲಿ ಆಗಿದೆ. ಇವತ್ತಿನವರೆಗೂ ಇನ್ನು ಟೆಂಡರ್ ಕರೆದಿಲ್ಲ. ಸುಂಕೇಶ್ವರ ಕೆರೆ ಎಂದು ಹೇಳಿ.

ಶ್ರೀ **ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಸುಂಕೇಶ್ವರ ಕೆರೆಯನ್ನು ಕೂಡಲೇ ಟೆಂಡರ್ ಕರೆದು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ 2963**
**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ **ಬಸನಗೌಡ ಆರ್ ಪಾಟೀಲ್ (ಯತ್ನಾಳ್):-**ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು 34,559 ದೇವಾಲಯಗಳು ಸರ್ಕಾರದ ಮುಜರಾಯಿ ಇಲಾಖೆ ಅಧೀನದಲ್ಲಿದೆ. ಬಹಳ ದುರಂತವೇನೆಂದರೆ, ಹಿಂದೂ ದೇವಾಲಯಗಳ ಮೇಲೆ ಸರ್ಕಾರ ನಿಯಂತ್ರಣ ಮಾಡುತ್ತಿದೆ. ಆದರೆ ಉಳಿದ ಯಾವ ಧರ್ಮದ ಪ್ರಾರ್ಥನಾ ಮಂದಿರಗಳ ಮೇಲೆ ಸರ್ಕಾರದ ನಿಯಂತ್ರಣವಿಲ್ಲ. ಮುಜರಾಯಿ ಇಲಾಖೆಯ ದೇವಸ್ಥಾನಗಳಿಂದ ವರ್ಷಕ್ಕೆ ಸುಮಾರು 476.21 ಲಕ್ಷ ರೂಪಾಯಿ ಆದಾಯ ಬರುತ್ತಿದೆ. ಅವುಗಳ ಅಭಿವೃದ್ಧಿಗಾಗಿ 314.55 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎನ್ನುವ ಮಾಹಿತಿಯನ್ನು ಲಿಖಿತ ಉತ್ತರದಲ್ಲಿ ಸಚಿವರು ಕೊಟ್ಟಿದ್ದಾರೆ. ಇನ್ನು 161.66 ಲಕ್ಷ ರೂಪಾಯಿಗಳನ್ನು ಏನು ಮಾಡಲಾಗುತ್ತದೆ? ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿದರು ಎಂಬುದನ್ನು ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಅದೇ ರೀತಿ ಹಿಂದು ದೇವಸ್ಥಾನಗಳಿಂದ ಏನು ಆದಾಯ ಬರುತ್ತಿದೆ. ಇವತ್ತು

ಫೇಸ್‌ಬುಕ್ ಮತ್ತು ವಾಟ್ಸಪ್‌ಸಾಮಾಜಿಕ ಜಾಲತಾಣಗಳಲ್ಲಿ ನೀವು ದೇವಸ್ಥಾನಗಳಲ್ಲಿರುವ ಹುಂಡಿಯಲ್ಲಿ ಕಾಣಿಕೆಯನ್ನು ಹಾಕಬೇಡಿ ಎಂಬ ಪ್ರಚಾರ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಏಕೆ ರೀತಿಯಾಗಿ ನಡೆಯುತ್ತಿದೆ ಎಂದರೆ, ಯಾವ ಹಿಂದೂ ದೇವಸ್ಥಾನಗಳ ಅಭಿವೃದ್ಧಿಗಾಗಿ ಜನರು ಹಣವನ್ನು ಕೊಡುತ್ತಾರೆಯೇ ಹೊರತು,ಸರ್ಕಾರಕ್ಕೆ ಅಲ್ಲ. ಆ ದೇವಸ್ಥಾನಗಳು ಅಭಿವೃದ್ಧಿಯಾಗಬೇಕು. ಯಾತ್ರಿಕರು ಬಂದಾಗ ಒಳ್ಳೆಯ ಒಂದು ಯಾತ್ರಿ ನಿವಾಸ, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯಗಳ ವ್ಯವಸ್ಥೆಯಾಗಬೇಕು ಹಾಗೂ ಪ್ರವಾಸೋದ್ಯಮ ಬೆಳೆಯಬೇಕು.ಇವೆಲ್ಲಾ ಭಾವನೆಗಳನ್ನಿಟ್ಟು ಇವತ್ತು ಹಿಂದೂ ದೇವಸ್ಥಾನಗಳಲ್ಲಿ ಇಷ್ಟೊಂದು ಹಣವನ್ನು ಭಯ-ಭಕ್ತಿಯಿಂದ ಹಾಕುತ್ತಿರುವುದು.ಇವತ್ತು ಯೋಗ್ಯವಾದ ಸಂಭಾವನೆಯನ್ನು ಅರ್ಚಕರಿಗೂ ಕೊಡಬೇಕು.ಆದರೆ ಭಕ್ತಾದಿಗಳ ಅನಿಸಿಕೆಯಂತೆ ಹಣವನ್ನು ಖರ್ಚು ಮಾಡದೇ ಬೇರೆ ಬೇರೆ ಉದ್ದೇಶಕ್ಕಾಗಿ ಅಂದರೆಹಿಂದೂ ದೇವಾಲಯಗಳ ಹಣವನ್ನು ಹಜ್ ಯಾತ್ರೆಗೆ ಹೋಗುವವರಿಗೆ ಹಣವನ್ನು ಖರ್ಚು ಮಾಡುತ್ತಿರುವುದನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ನಿರಂತರವಾಗಿ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈ ಎಲ್ಲಾ ಹಣ ನೂರಕ್ಕೆ ನೂರರಷ್ಟು ಹಿಂದೂ ದೇವಸ್ಥಾನಗಳ ಅಭಿವೃದ್ಧಿಗಾಗಿ ಖರ್ಚು ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತಿದೆ? ಇವತ್ತು ಉಳಿದ ಧರ್ಮದವರಿಂದ ಸರ್ಕಾರಕ್ಕೆ ಆದಾಯ ಬರದೇ ಇರುವಂತಹವರಿಗೆ ಸರ್ಕಾರ 108 ಕೋಟಿ ರೂಪಾಯಿಗಳ ಗೌರವಧನವನ್ನು ಕೊಡುತ್ತಿದೆ. ಆದರೆ ನಮ್ಮ ಅರ್ಚಕರಿಗೆ ಯೋಗ್ಯ ಸಂಭಾವನೆ ಕೊಡುವುದರ ಮೂಲಕ ಅವರು ಇನ್ನುಷ್ಟು ಹೆಚ್ಚು ಅಧ್ಯಯನ ಮಾಡಿ ಯಜ್ಞ-ಯಾಗದಿಗಳನ್ನು ಅತ್ಯಂತ ಶಾಸ್ತ್ರೋಕ್ತವಾಗಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತಿದ್ದೇನೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿರುವುದಕ್ಕೆ ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅವರು ಎರಡು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ದೇವಸ್ಥಾನದ ಆದಾಯದಲ್ಲಿ ಉಳಿದಂತಹ ಹಣ ಎಲ್ಲಿದೆ ಎಂದು ಕೇಳಿದ್ದಾರೆ. ದೇವಾಲಯದ ಹಣ ಬ್ಯಾಂಕ್ ಖಾತೆಗಳಲ್ಲಿರುತ್ತದೆ. ಯಾವುದೇ ದೇವಸ್ಥಾನದ ಹುಂಡಿಯಲ್ಲಿ ಬಂದಂತಹ ಹಣವನ್ನು ನಾವ್ಯಾರೂ ಕೂಡ ನೇರವಾಗಿ ಅದನ್ನು ಖರ್ಚು ಮಾಡುವುದಿಲ್ಲ. 'ಎ' ವರ್ಗದ ದೇವಸ್ಥಾನಗಳ ಹುಂಡಿಯಿಂದ ಬಂದಂತಹ ಹಣದಲ್ಲಿ ಶೇಕಡ 10 ರಷ್ಟು ಮತ್ತು 'ಬಿ' ವರ್ಗದ ದೇವಸ್ಥಾನದ ಹುಂಡಿಯಿಂದ ಬಂದಂತಹ ಹಣದಲ್ಲಿಶೇಕಡ 5 ರಷ್ಟು ಹಣವನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ. ಅದು ನಮ್ಮ ರಾಜ್ಯದ ಮುಜರಾಯಿ ಆಯುಕ್ತರವರ ಖಾತೆಯಲ್ಲಿರುತ್ತದೆ. ಆ ಹಣವನ್ನು ಯಾವುದೇ ಬೇರೆ

ತಿದ್ದುಪಡಿಯಾಗದ ಪ್ರತಿ ಶಾಸಕರು

ಬೇರೆ ಧರ್ಮಗಳ ಚರ್ಚ್‌ಗಳಿಗೆ, ಮಸೀದಿಗಳಿಗೆ ಬಳಕೆಯಾಗುತ್ತದೆ ಎಂದು ಹೇಳುವುದು ನೂರಕ್ಕೆ ನೂರು ಸುಳ್ಳು. ಈ ರೀತಿ ವಾಟ್ಸಪ್‌ನಲ್ಲಿ ಅಪಪ್ರಚಾರ ಮಾಡುತ್ತಿರುವುದನ್ನು ಕೂಡ ನಾನು ನೋಡಿದ್ದೇನೆ. ಬಹಳ ವೀರವೇಷವಾಗಿ ಕೆಲವು ಜನರು ಹಿಂದೂ ಧರ್ಮದ ಬಗ್ಗೆ ಇಲ್ಲ ಸಲ್ಲದ ಬಗ್ಗೆ ಮಾತನಾಡುತ್ತಾರೆ. ಈ ಹಣ ಯಾವ ರೀತಿ ಉಪಯೋಗವಾಗುತ್ತದೆ ಎನ್ನುವುದು ನಮ್ಮ ಕಾಯ್ದೆಯಲ್ಲಿರುವುದು. ಇದರಲ್ಲಿಹಿರಿಯ ಮಾನ್ಯ ಸದಸ್ಯರಾದ ಬಸವನಗೌಡರವರಿಗೆ ಗೊತ್ತಿದೆ. ನಾವು ಯಾರು ಕೂಡ ಹತ್ತು ಪೈಸೆಯನ್ನು ಕೂಡ ಯಾವುದಕ್ಕೂ ಉಪಯೋಗಿಸುವುದಿಲ್ಲ. ಬಂದಂತಹ ಹಣವನ್ನು ರಾಜ್ಯದ ಧಾರ್ಮಿಕ ಪರಿಷತ್ತು ಇದ್ದು ಆ ಪರಿಷತ್ತಿನಲ್ಲಿ ನಾವೆಲ್ಲರೂ ಚರ್ಚೆ ಮಾಡುತ್ತೇವೆ. ಈ ವರ್ಷ ಮುಜರಾಯಿ ದೇವಸ್ಥಾನಗಳಿಗೆ ಶೇಕಡ 60 ರಷ್ಟು ಹಣವನ್ನು ಖರ್ಚು ಮಾಡಬೇಕು. ಉಳಿದಂತಹ ದೇವಸ್ಥಾನಗಳಿಗೆ ಶೇಕಡ 40 ರಷ್ಟು ಹಣವನ್ನು ಖರ್ಚು ಮಾಡಬೇಕೆಂದು ಒಂದು guidelinesನ್ನು ಕೂಡ ನಾವು ಮಾಡಿದ್ದೇವೆ. ಆ ಪ್ರಕಾರ ಎಲ್ಲಾ ಹಣವನ್ನು ಕೂಡ ಅದೇ ಉದ್ದೇಶಕ್ಕಾಗಿ ಖರ್ಚು ಮಾಡುತ್ತೇವೆಯೇ ವಿನಃ ಯಾವುದೇ ಚರ್ಚ್‌ಗಳಿಗೆ ಅಥವಾ ಮಸೀದಿಗಳಿಗೆ ಮತ್ತೊಂದಕ್ಕೆ ನಾವು ಯಾವುದಕ್ಕೂ ಕೊಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಖರ್ಚು ಮಾಡುವ ಬಗ್ಗೆ ಯಾವುದೇ ರೀತಿಯ ದಾಖಲೆಗಳಿದ್ದರೆ ಕೊಡುವುದು. ಅವರು ಸುಮ್ಮನೆ ವಾಟ್ಸಪ್‌ನಲ್ಲಿ ಹಾಕಿ ಅವರಿವರ ತಲೆ ಕೆಡಸುವುದು ಸರಿಯಲ್ಲ. ಹಿಂದೂ ದೇವಾಲಯಗಳ ಹುಂಡಿಗೆ ಹಣ ಹಾಕಿದರೆ ಬೇರೆ ಬೇರೆ ಕಡೆಗೆ ಹೋಗುತ್ತದೆ ಎನ್ನುವ ಮಾತನ್ನು ಕೂಡ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಈ ಹಿಂದೆ ಪ್ರಶ್ನೆಯನ್ನು ಕೇಳಿದ್ದರು. ಅವರಿಗೆ ನಾನು ಕೂಡ ಉತ್ತರ ಕೊಡುವುದಕ್ಕೆ ತಯಾರಾಗಿದ್ದೆ, ಅವರು ಆ ದಿನ ಇರಲಿಲ್ಲ. ಇವತ್ತು ಮಾನ್ಯ ಸದಸ್ಯರಾದ ಬಸವನಗೌಡರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ನಾನು ಹೇಳಬೇಕೆಂಬುದು ನನ್ನ ಮನಸ್ಸಿನಲ್ಲಿತ್ತು. ಈ ರೀತಿ ಏಕೆ ಹೇಳುತ್ತಾರೆ? ಈ ಮಾತುಗಳನ್ನು ವೀರವೇಷವಾಗಿ ಹೇಳುತ್ತಾರೆ.

**(ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ದೇವಸ್ಥಾನಗಳಿಗೆ ಹಣವನ್ನು ಹಾಕಬೇಡಿ ಇದು ಹಾಗೇ ಹೀಗೆ ಎಂದು ಹೇಳುತ್ತಾರೆ. ಇದೆಲ್ಲಾ ಸುಳ್ಳು ಮತ್ತು ನಾವು ದೇವಸ್ಥಾನದ ಹುಂಡಿಯಲ್ಲಿ ಬಂದಂತಹ ಹಣವನ್ನು ಪೈಸಾ ಪೈಸಾವನ್ನು ಕೂಡ ಲೆಕ್ಕವಿಟ್ಟು, ಲೆಕ್ಕ ಕೊಡುತ್ತೇವೆ. ಆದುದರಿಂದ ಇಂತಹ ವದಂತಿಗಳಿಗೆ ಯಾರು ಕಿವಿಕೊಡಬಾರದೆಂದು ನಾನು ಈ ಸದನದ ಮೂಲಕ ವಿನಂತಿಸುತ್ತೇನೆ.

(ಮುಂದು)

713/14.06.2017/12.30/hv.md

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಎರಡನೆಯ ಪ್ರಶ್ನೆಗೆ ನಾನು ಉತ್ತರವನ್ನು ಹೇಳಲು ಬಯಸುತ್ತಿದ್ದೇನೆ. ಹಿಂದೂ ಧರ್ಮೀಯರಿಗೆ ಬೇರೆ ಬೇರೆ ದೇವರ ಹೆಸರಿನಲ್ಲಿ ಹಲವಾರು ದೇವಸ್ಥಾನಗಳಿವೆ. ಅನ್ಯ ಧರ್ಮಿಯರಿಗೆ ಒಂದೇ ಒಂದು ಚರ್ಚ್ ಅಥವಾ ಮಸೀದಿ ಇರುತ್ತದೆ. ಹಿಂದೂ ಧರ್ಮದಲ್ಲಿ ಒಬ್ಬೊಬ್ಬ ಭಕ್ತ ಒಂದೊಂದು ದೇವರನ್ನು ಪೂಜಿಸುತ್ತಿರುತ್ತಾನೆ. ನಮ್ಮಲ್ಲಿ ಸುಮಾರು 34,559 ದೇವಸ್ಥಾನಗಳಿವೆ. ಇವುಗಳ ಜೊತೆಗೆ ಮಠಗಳು ಮತ್ತು ಸಣ್ಣಪುಟ್ಟ ಊರುಗಳಲ್ಲಿ ಗುರುತಿಸದೇ ಇರುವಂತಹ ದೇವಸ್ಥಾನಗಳು ಇವೆ ಇವುಗಳನ್ನೆಲ್ಲ ಲೆಕ್ಕ ಹಾಕಿದರೆ, ಹಿಂದೂ ದೇವಸ್ಥಾನಗಳ ಸಂಖ್ಯೆ ಕೋಟಿಗಟ್ಟಲೆ ಆಗುತ್ತದೆ. ಆದ್ದರಿಂದ ಹಿಂದೂ ದೇವಸ್ಥಾನಗಳ ಹುಂಡಿಯ ಹಣವನ್ನು ಬೇರೆ ಧರ್ಮಿಯರಿಗಾಗಿ ಬಳಕೆ ಮಾಡಲಾಗುತ್ತಿದೆ ಎನ್ನುವುದು ಮತ್ತು ಈ ರೀತಿ ಅಪಪ್ರಚಾರ ಮಾಡುವುದು ಸರಿಯಲ್ಲ ಎನ್ನುವುದನ್ನು ಎಲ್ಲರಿಗೂ ಹೇಳಬೇಕಾಗಿದೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ಎಲ್ಲಿಯೂ ಈ ಹಣವನ್ನು ದುರುಪಯೋಗ ಮಾಡಿದಂತಹ ಉದಾಹರಣೆಗಳು ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಪ್ರತಿಜ್ಞಾವಿಧಿ ಸ್ವೀಕಾರ ಮಾಡುವಂತಹ ಸಂದರ್ಭದಲ್ಲಿ, 'ವಿಧಿದ್ವಾರ ಸ್ಥಾಪಿತವಾದ ಸಂವಿಧಾನದ ಆಶೋತ್ತರಗಳನ್ನು ಎತ್ತಿ ಹಿಡಿಯುತ್ತೇನೆ' ಎಂದು ಪ್ರತಿಜ್ಞಾವಿಧಿಯನ್ನು ಸ್ವೀಕಾರ ಮಾಡಿ ಮಂತ್ರಿಗಳಾಗಿದ್ದಾರೆ. ಸಂವಿಧಾನ ಶಿಲ್ಪಿಗಳಾದ ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅತ್ಯಂತ ಶ್ರೇಷ್ಠವಾಗಿರುವ ಸಂವಿಧಾನವನ್ನು ಭಾರತ ದೇಶಕ್ಕೆ ಕೊಟ್ಟಿದ್ದಾರೆ. ಲಿಖಿತ ಸಂವಿಧಾನದ ಪೀಠಿಕೆಯಲ್ಲಿ; "India into a SOVEREIGN SOCIALIST SECULAR DEMOCRATIC REPUBLIC and to secure to all its citizens" ಎಂದು ಹೇಳಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿರುತ್ತದೆ. ಅದರ ಮೇಲೆ ಬೆಳಕು ಚೆಲ್ಲುವಂತಹ ವಿಚಾರಗಳನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಈ ಸಾಲಿನ ಆಯವ್ಯಯದಲ್ಲಿ "ರಾಜ್ಯದ 17 ದೇವಾಲಯಗಳಲ್ಲಿ 201 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ" ಎಂದು ಹೇಳಿದ್ದಾರೆ. ಈ 201 ಕೋಟಿ ರೂಪಾಯಿಗಳು ದೇವಾಲಯಗಳಿಂದ ಸಂಗ್ರಹವಾಗಿರುವ ಹಣವನ್ನೇ ಖರ್ಚು ಮಾಡಲಾಗುತ್ತಿದೆಯೇ ಅಥವಾ ಅದಕ್ಕಾಗಿ ಸರ್ಕಾರ ಮುಜರಾಯಿ ಇಲಾಖೆಗೆ ಪ್ರತ್ಯೇಕವಾಗಿ 201 ಕೋಟಿ ರೂಪಾಯಿಗಳ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಸನ್ಮಾನ್ಯ ಸಭಾಪತಿಯವರೇ, 201 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಆಯವ್ಯಯದಲ್ಲಿ ಮೀಸಲಾಗಿಟ್ಟಿಲ್ಲ. ಆಯವ್ಯಯದಲ್ಲಿ 55 ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರ ನೀಡಲಾಗಿದೆ. ಈ ಹಣ ದೇವಸ್ಥಾನಗಳ ಜೀರ್ಣೋದ್ಧಾರ, ದುರಸ್ತಿ ಕಾರ್ಯ, ಎಸ್.ಸಿ., ಎಸ್.ಟಿ. ಸಮೂದಾಯಗಳಿಗೆ ಮತ್ತು ಗಿರಿ ಜನರಿಗೆ. . . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಈ ಸಾಲಿನ ಆಯವ್ಯಯದಲ್ಲಿ 201 ಕೋಟಿ ರೂಪಾಯಿಗಳನ್ನು ನೀಡಲಾಗಿದೆ ಎಂದು ಉಲ್ಲೇಖ ಮಾಡಲಾಗಿದೆ. ದೇವಸ್ಥಾನದ ಹುಂಡಿಗಳಲ್ಲಿ ಭಕ್ತಾಧಿಗಳು ಹಾಕಿರುವ ಹಣವನ್ನು ಸಂಗ್ರಹ ಮಾಡಿಕೊಂಡು ಅದನ್ನೇ ದೇವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರ ವೆಚ್ಚ ಮಾಡುತ್ತಿದೆ. ಆದರೆ, ಆಯವ್ಯಯದಲ್ಲಿ ಮಾತ್ರ 'ದೇವಸ್ಥಾನಗಳ ಅಭಿವೃದ್ಧಿಗಾಗಿ 201 ಕೋಟಿ ರೂಪಾಯಿಗಳನ್ನು ನೀಡಲಾಗಿದೆ' ಎಂದು ಉಲ್ಲೇಖ ಮಾಡಲಾಗಿದೆ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಸನ್ಮಾನ್ಯ ಸಭಾಪತಿಯವರೇ, ಭಕ್ತಾದಿಗಳು ಹುಂಡಿಗೆ ಹಾಕುವ ಹಣಕ್ಕೂ 201 ಕೋಟಿ ರೂಪಾಯಿಗಳಿಗೂ ಯಾವುದೇ ಸಂಬಂಧವಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ಈ 201 ಕೋಟಿ ರೂಪಾಯಿ ಹುಂಡಿ ಹಣವಲ್ಲ ಬೇರೆಯೇ ಹಣವೆಂದು ಅರ್ಥವಾಯಿತು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕೊಡುವ 201 ಕೋಟಿ ರೂಪಾಯಿಗಳನ್ನು ಶಾಸಕರು ಮತ್ತು ಭಕ್ತಾದಿಗಳು ದೇವಸ್ಥಾನಗಳ ಅಭಿವೃದ್ಧಿ ಮತ್ತು ಸ್ಥಾಪನೆಗಾಗಿ ಹಣವನ್ನು ಕೇಳಿದರೆ ಈ ಮೊತ್ತದಿಂದ ಹಣವನ್ನು ನೀಡಲಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಆಯವ್ಯಯದಲ್ಲಿ ಘೋಷಣೆ ಮಾಡಿರುವ 201 ಕೋಟಿ ರೂಪಾಯಿಗಳು ದೇವಸ್ಥಾನಗಳ ಹುಂಡಿಯಿಂದ ಸಂಗ್ರಹವಾಗಿರುವ ಹಣ ಅಲ್ಲ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಸನ್ಮಾನ್ಯ ಸಭಾಪತಿಯವರೇ, ಆ ಹಣ ಹುಂಡಿಯಿಂದ ಸಂಗ್ರಹವಾಗಿರುವ ಹಣವಲ್ಲ. ಅದೇ ಬೇರೆ, ಇದೇ ಬೇರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನದ ಪೀಠಿಕೆಯಲ್ಲಿ; "India into a SOVEREIGN SOCIALIST SECULAR DEMOCRATIC REPUBLIC and to secure to all its citizens" ಎಂದು ಉಲ್ಲೇಖ ಮಾಡಿದ್ದಾರೆ. ಸಂವಿಧಾನದ ಆಶೋತ್ತರಗಳನ್ನು ಎತ್ತಿ ಹಿಡಿಯುವುದು ಮಾನ್ಯ ಸಚಿವರ ಕರ್ತವ್ಯವಾಗಿದೆ. ಇದನ್ನು ಪಾಲನೆ ಮಾಡುವ ಜವಾಬ್ದಾರಿ ಈ ಸರ್ಕಾರದ ಮೇಲೆ ಇದೆ. ಮಾನ್ಯ ಸಚಿವರ ಮೇಲೆ ಇನ್ನೂ ಹೆಚ್ಚಿನ ಜವಾಬ್ದಾರಿ ಇದೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ನಾವು ಪ್ರಶ್ನೆ ಮಾಡಿಲ್ಲ. ಸಂವಿಧಾನದಲ್ಲಿ ಏನು ಹೇಳಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರು ದೇವಸ್ಥಾನಗಳ ಖರ್ಚು ವೆಚ್ಚಗಳ ಬಗ್ಗೆ ಪ್ರಶ್ನೆ ಮಾಡಿದ್ದಾರೆ.

**ಉಪಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದಾರೆ. ಮಧ್ಯೆ ತಾವು ಎದ್ದು ನಿಲ್ಲುವುದು ಸರಿಯಲ್ಲ. ಮಾನ್ಯ ಬಸನಗೌಡ ಯತ್ನಾಳ್‌ರವರೆ ತಾವು ತಮ್ಮ ಮಾತುಗಳನ್ನು ಮುಂದುವರಿಸಿ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹಿರಿಯ ಸದಸ್ಯರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆ. ಮಾನ್ಯ ಸಚಿವರು ಯಾವ ರೀತಿ ಹಣವನ್ನು ವೆಚ್ಚ ಮಾಡಲಾಗುತ್ತಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ನಾನು ಸಹ ಈ ವಿಚಾರಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಓದುತ್ತಿದ್ದೆ, 2009ನೇ ಇಸವಿಯಲ್ಲಿ ಸೂರ್ಯಗ್ರಹಣ ಉಂಟಾದ ಸಂದರ್ಭದಲ್ಲಿ 'ಈ ಸೂರ್ಯಗ್ರಹಣ ರಾಜ್ಯಕ್ಕೆ ಅನಿಷ್ಟಕಾರಕ, ಜನರ ಮೇಲೆ ಮಾರಕ ಪರಿಣಾಮವನ್ನುಂಟು ಮಾಡುತ್ತದೆ' ಎನ್ನುವ ಹಿನ್ನಲೆಯಲ್ಲಿ ಅಂದಿನ ಸರ್ಕಾರ 'ಎ' ಮತ್ತು 'ಬಿ' ದರ್ಜೆಯ ಪ್ರತಿ ದೇವಸ್ಥಾನಕ್ಕೆ 8 ಸಾವಿರ ರೂಪಾಯಿಗಳನ್ನು ನೀಡಿತ್ತು. ನಾನು ಬಹಳ ನಿರ್ದಿಷ್ಟವಾಗಿ ಇದರ ಬಗ್ಗೆ ಮಾತನಾಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಹೊರಡಿಸಿರುವ ಸುತ್ತೋಲೆ ನನ್ನ ಬಳಿ ಲಭ್ಯವಿದೆ. ಸರ್ಕಾರ ನೀಡಿರುವ ಈ ಹಣವನ್ನು ಸೂರ್ಯಗ್ರಹಣದಿಂದ ಆಗುವ ದುಷ್ಪರಿಣಾಮವನ್ನು ಹೋಗಲಾಡಿಸಲು ಮಾಡುವ ಪೂಜೆ, ಹೋಮ, ಹವನಕ್ಕಾಗಿ ಮಾತ್ರ ಬಳಸಬೇಕೆಂದು ಹೇಳಲಾಗಿತ್ತು.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಮುಜರಾಯಿ ಇಲಾಖೆಯಲ್ಲಿರುವ ಹಣ ಸೂರ್ಯಗ್ರಹಣ, ಚಂದ್ರಗ್ರಹಣ, ಯಜ್ಞ, ಯಾಗ, ಹವನ ಮತ್ತು ಹೋಮ ಮಾಡುವುದಕ್ಕಾಗಿ ಇದೆಯೇ ಹೊರತು ಮಸೀದಿಗಳಿಗೆ ಕೊಡುವುದಕ್ಕೆ ಅಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, 2009ರಲ್ಲಿ ಸೂರ್ಯಗ್ರಹಣ ಅನಿಷ್ಟಕಾರಕ ಎಂದು ಶಾಂತಿ ಪೂಜೆಗಾಗಿ ಪ್ರತಿ ದೇವಸ್ಥಾನಗಳಿಗೆ ಸರ್ಕಾರದ ವತಿಯಿಂದ 8 ಸಾವಿರ ರೂಪಾಯಿಗಳನ್ನು ನೀಡಲಾಗಿತ್ತು. ನಂತರ 2012ರಲ್ಲಿ ಮಳೆಗಾಗಿ 'ಪರ್ಜನ್ಯ ಹೋಮ' ಎಂದು ಮಾಡಲಾಯಿತು. ಇದು ಬಹಳ ದೊಡ್ಡ ವಿವಾದವನ್ನೇ ಸೃಷ್ಟಿಸಿತು. ಈ ಹೋಮಕ್ಕಾಗಿ ಸುಮಾರು 34 ಸಾವಿರ ದೇವಸ್ಥಾನಗಳಿಗೆ ತಲಾ 5 ಸಾವಿರ ರೂಪಾಯಿಗಳನ್ನು ನೀಡಲಾಗಿತ್ತು. ಇದು ದೇವಸ್ಥಾನಗಳ ಅಭಿವೃದ್ಧಿಗಾಗಿ ಅಲ್ಲ. ಮೂಢನಂಬಿಕೆಗಳ ಹಿನ್ನೆಲೆಯಲ್ಲಿ ಹಣವನ್ನು ನೀಡಲಾಗಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾಗಿರುವ ಮಾನ್ಯ ಎಸ್.ಆರ್.ಪಾಟೀಲ್‌ರವರು ಭಾರತದ ಸಂವಿಧಾನದ ಪೀಠಿಕೆಯಲ್ಲಿರುವ ವಾಕ್ಯವನ್ನು ಉಲ್ಲೇಖ ಮಾಡಿದರು. ಭಾರತದ ಸಂವಿಧಾನದ ಶಿಲ್ಪಿಯಾಗಿರುವ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು. . . . .

**ಉಪಸಭಾಪತಿಯವರು:-** ಮಾನ್ಯ ಯತ್ನಾಳ್‌ರವರೆ, ನೇರವಾಗಿ ಉಪ ಪ್ರಶ್ನೆಯನ್ನು ಕೇಳಿ. ಕಾಲವ್ಯಯ ಮಾಡುವುದು ಬೇಡ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಉಪ ಪ್ರಶ್ನೆಗೆ ಪೂರಕವಾಗಿ ಪ್ರಸ್ತಾವನೆ ಮಾಡಿ ಉಪ ಪ್ರಶ್ನೆಗೆ ಬರುತ್ತಿದ್ದೇನೆ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ದೇಶದಲ್ಲಿ ಗೋಹತ್ಯೆ ಆಗಬಾರದು ಎನ್ನುವುದನ್ನು ಹೇಳಿದ್ದರು ಆ ವಿಚಾರವನ್ನು ಇವರುಗಳು ಮರೆತಿದ್ದಾರೆ. ಜಾತ್ಯಾತೀತ ಎಂದರೆ ಏನು? ಜಾತ್ಯಾತೀತ ಎಂದರೆ, ಹಿಂದು . . .

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಎಲ್ಲಿಯೂ ಈ ವಿಚಾರವನ್ನು ಹೇಳಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಸಂವಿಧಾನದ ಬಗ್ಗೆ ಹೇಳಿದಾಗ ನಾವು ಕೇಳಿದ್ದೇವೆ, ಈಗ ಮಾನ್ಯ ಸದಸ್ಯರು ಸಂವಿಧಾನದಲ್ಲಿರುವ ಅಂಶಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ. ಅದನ್ನು ಕೇಳಲು ಇವರುಗಳು ತಯಾರಿಲ್ಲ.

**ಉಪಸಭಾಪತಿಯವರು:-** ಇದು ಪ್ರಶ್ನೋತ್ತರ ವೇಳೆ, ಚರ್ಚೆಗೆ ಅವಕಾಶವಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಏನೇನೋ ಮಾತನಾಡುತ್ತಿದ್ದಾರೆ. ದೇಶದ ಸಂವಿಧಾನದ ಬಗ್ಗೆ ಅವರಿಗೆ ಗೌರವ ಇದೆಯೇ?

**(ಗೊಂದಲ)**

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, 'ಯಲ್ಲಮ್ಮನ ಗುಡ್ಡದಲ್ಲಿ ಮುಲ್ಲಾ ಸಾಬಿಗೇನು ಕೆಲಸ' ಎನ್ನುವ ಗಾದೆ ಮಾತಿನಂತೆ ಇಲ್ಲಿ ಐವನ್ ಡಿ'ಸೋಜಾರವರ ಕೆಲಸವೇನು?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ಯತ್ನಾಳ್‌ರವರೆ, ತಾವು ನೇರವಾಗಿ ಉಪ ಪ್ರಶ್ನೆಯನ್ನು ಕೇಳಿ. ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**(ಗೊಂದಲ)**

**ಶ್ರೀ ಬಿ.ರಮಾನಾಥ ರೈ(ಅರಣ್ಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಏತಕ್ಕೋಸ್ಕರ ಬೌದ್ಧ ಧರ್ಮವನ್ನು ಸ್ವೀಕರಿಸಿದರು ಎನ್ನುವುದರ ಬಗ್ಗೆಯೂ ಅವರು ಹೇಳಬೇಕಾಗುತ್ತದೆ. ನಂತರ ಬೇರೆ ವಿಚಾರದ ಬಗ್ಗೆ ಮಾತನಾಡಲಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):–** ಸನ್ಮಾನ್ಯ ಸಭಾಪತಿಯವರೇ, ಆ ವಿಚಾರ ಚರ್ಚೆಗೆ ಬಂದಾಗ ಅದರ ಬಗ್ಗೆಯೂ ಮಾತನಾಡುತ್ತೇನೆ. ಮಾನ್ಯ ವಿ.ಸೋಮಣ್ಣನವರು ಗೋವುಗಳಿಗೆ ಅವಶ್ಯಕತೆ ಇರುವ ಮೇವಿನ ಬಗ್ಗೆ ಪ್ರಶ್ನೆ ಕೇಳಿದಾಗ ಮಾನ್ಯ ಕಂದಾಯ ಸಚಿವರು ಉತ್ತರವನ್ನು ನೀಡಿದ್ದರು. 'ಎ' ವರ್ಗದ ದೇವಸ್ಥಾನಗಳಲ್ಲಿ ಗೋಶಾಲೆಗಳನ್ನು ಕಡ್ಡಾಯವಾಗಿ ತೆರೆಯಬೇಕು ಎನ್ನುವ ಆದೇಶವನ್ನು ಸರ್ಕಾರ ಏತಕ್ಕೋಸ್ಕರ ಮಾಡಬಾರದು ಎನ್ನುವುದು ನನ್ನ ಪ್ರಶ್ನೆಯಾಗಿದೆ. ದೇವಸ್ಥಾನಗಳ ಮೂಲಕ ಗೋವುಗಳ ರಕ್ಷಣೆಯಾದರೆ, ಅಲ್ಲಿ ಒಳ್ಳೆಯ ಮೇವು ನೀಡುವಂತಹ ವ್ಯವಸ್ಥೆಯಾಗುತ್ತದೆ. ಕಂದಾಯ ಇಲಾಖೆಯ ಧಾರ್ಮಿಕದತ್ತಿ ಇಲಾಖೆಯವರು ಈ ಕೆಲಸವನ್ನು ಮಾಡಬಹುದು. ಅವರ ಬಳಿ ಸುಮಾರು 161 ಕೋಟಿ ರೂಪಾಯಿಗಳಷ್ಟು ಹಣ ಉಳಿದಿದೆ. ಈ ಹಿನ್ನೆಲೆಯಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಎಲ್ಲ 'ಎ' ವರ್ಗದ ದೇವಸ್ಥಾನಗಳಲ್ಲಿ ಕಡ್ಡಾಯವಾಗಿ ಗೋಶಾಲೆಗಳನ್ನು ತೆರೆಯುವಂತಹ ಯೋಚನೆಯನ್ನು ಸರ್ಕಾರ ಮಾಡುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಅದೇ ರೀತಿಯಲ್ಲಿ ಹಿಂದೂ ದೇವಸ್ಥಾನದ ಅರ್ಚಕರಿಗೆ ಸರಿಯಾದ ಸಂಬಳವಿಲ್ಲ ಮತ್ತು ನೌಕರಿ ಭದ್ರತೆ ಇಲ್ಲ. ಇವರ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ ಎನ್ನುವುದು ನನ್ನ ಮತ್ತೊಂದು ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. . .

**ಉಪಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ, ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅವಕಾಶವಿಲ್ಲ ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಸಚಿವರು ಉತ್ತರವನ್ನು ನೀಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ನಿರ್ದೇಶನಕ್ಕೆ ತಲೆಬಾಗುತ್ತೇನೆ. ತಮ್ಮ ಆದೇಶವನ್ನು ಪಾಲಿಸುತ್ತೇನೆ. ಆದರೆ, ನಾನು ಬಹಳ ಗಂಭೀರವಾಗಿರುವ ವಿಚಾರದ ಬಗ್ಗೆ ಮಾತನಾಡುತ್ತಿದ್ದೇನೆ. ಸಂವಿಧಾನಾತ್ಮಕವಾದಂತಹ ವಿಚಾರವನ್ನು ಚರ್ಚೆ ಮಾಡುವುದಕ್ಕೂ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮೊದಲು ತಾವು ನನಗೆ ಮಾತನಾಡಲು ಒಂದು ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಉಪಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ಮಾಡುವುದು ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಇದು ನೇರವಾಗಿ ಸಾಂವಿಧಾನಿಕ ಉಪಬಂಧಗಳಿಗೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

**ಉಪಸಭಾಪತಿಯವರು:–** ಅದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಬೇಕಾದರೆ, ಬೇರೆ ರೂಪದಲ್ಲಿ ನೋಟೀಸ್ ನೀಡಿ. ತಾವು ಒಂದು ಹೇಳಿದರೆ ಅವರೊಂದು ಹೇಳುತ್ತಾರೆ. ಆಗ ಚರ್ಚೆ ಸರಿ ಹೋಗುವುದಿಲ್ಲ. ಮಾನ್ಯ ಸಚಿವರೇ, ತಾವು ಉತ್ತರ ಹೇಳುವುದನ್ನು ಮುಂದುವರಿಸಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಹಿಂದೂ ದೇವಾಲಯಗಳಲ್ಲಿನ ಅರ್ಚಕರಿಗೆ ಯಾವ ರೀತಿ ಸಂಬಳ ನೀಡಲಾಗುತ್ತಿದೆ. ಅವರ ವೃತ್ತಿ ಭದ್ರತೆಯ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ದೇವಸ್ಥಾನದ ಆದಾಯದಲ್ಲಿ ಶೇಕಡಾ 35ರಷ್ಟನ್ನು ಖರ್ಚು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ನಾನು ಈ ಇಲಾಖೆಯ ಅಧಿಕಾರ ವಹಿಸಿಕೊಂಡ ನಂತರ 'ಎ' ಮತ್ತು 'ಬಿ' ವರ್ಗದ ದೇವಸ್ಥಾನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಎರಡು ಎರಡೂವರೆ ಸಾವಿರ ರೂಪಾಯಿಗಳಷ್ಟು ಮಾತ್ರ ಸಂಬಳ ನೀಡಲಾಗುತ್ತಿತ್ತು. 'ಎ' ವರ್ಗದ ದೇವಸ್ಥಾನಗಳಲ್ಲಿ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ನೀಡಲಾಗುತ್ತಿದ್ದ ಸಂಬಳವನ್ನು 6000 ರೂಪಾಯಿಗಳಿಂದ 13,000 ರೂಪಾಯಿಗಳಿಗೆ ಹೆಚ್ಚಿಸಿ, 'ಬಿ' ವರ್ಗದ ದೇವಸ್ಥಾನಗಳ ಅರ್ಚಕರಿಗೆ 12,500 ರೂಪಾಯಿಗಳಷ್ಟು ಸಂಬಳವನ್ನು ಕೊಡಬೇಕೆಂದು ಆದೇಶವನ್ನು ಹೊರಡಿಸಲಾಗಿದೆ. ಭಕ್ತಾದಿಗಳು ಮಂಗಳಾರತಿ ತಟ್ಟೆಗೆ ಹಾಕುವ ಕಾಸಿಗೆ ಅನುಗುಣವಾಗಿ ಮತ್ತು ಅಲ್ಲಿನ ವ್ಯವಸ್ಥಾಪನಾ ಮಂಡಳಿಯವರು ಅರ್ಚಕರಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ಸಂಭಾವನೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ಕೆಲವು ದೇವಸ್ಥಾನಗಳಿಗೆ 'ತಸ್ತೀಕ್' ಎಂದು ಕೇವಲ 24 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿತ್ತು.

(ಮುಂದು)

(714) 14.06.17, 12.50, TCH/MD

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಜವಳಿ ಮತ್ತು ಮುಜರಾಯಿ ಸಚಿವರು(ಮುಂದು):–**

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎರಡು ಪಟ್ಟು ಮಾಡಿದ್ದೇವೆ. 24 ಸಾವಿರ ಇದ್ದುದನ್ನು 48 ಸಾವಿರ ರೂಪಾಯಿಗಳನ್ನು ಮಾಡಿ ಆದೇಶವನ್ನು ಸಹ ಹೊರಡಿಸಿದ್ದೇವೆ. ಸುಮಾರು 90 ರಷ್ಟು ಭಾಗ ಈ ತಸ್ತಿಕ್‌ನ್ನು ಪಡೆಯುವಂತಹ ಮುಜರಾಯಿ ದೇವಸ್ಥಾನಗಳಿಗೆ ಎಲ್ಲರಿಗೂ ವ್ಯವಸ್ಥೆ ಇದೆ. ಇನ್ನೂ ಕೆಲವು ದೇವಸ್ಥಾನಗಳಿಗೆ ವಾರ್ಷಿಕ 100, 200, 500 ಮತ್ತು 600 ರೂಪಾಯಿಗಳ ಅನುದಾನವನ್ನು ಕೊಡತಕ್ಕಂಥದ್ದು ಇದೆ. ಅಂತಹ ದೇವಸ್ಥಾನಗಳು ಬಹಳ ಕಷ್ಟ ಪರಿಸ್ಥಿತಿಯಲ್ಲಿರುವುದನ್ನು ಮನಗಂಡಿದ್ದೇನೆ. ಆದ್ದರಿಂದ ನಾನು ಅದನ್ನು ಚರ್ಚೆ ಮಾಡಿ, ಮುಂದಿನ ದಿನಗಳಲ್ಲಿ ಅಂತಹ ದೇವಸ್ಥಾನಗಳಿಗೂ ಕೂಡ ಅನುಕೂಲತೆ ಮಾಡಿಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

**ಉಪಸಭಾಪತಿಯವರು:–** ಗೋ ಶಾಲೆಗಳ ಬಗ್ಗೆ ಕೇಳಿದ್ದಾರೆ ಅದರ ಬಗ್ಗೆ ಉತ್ತರ ಕೊಡಿ.

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:–** ಮಾನ್ಯ ಸಭಾಪತಿಯವರೇ, ಗೋ ಶಾಲೆಗಳ ಬಗ್ಗೆಯು ಸಹ ಹೇಳುತ್ತೇನೆ. ಕೆಲವು ದೇವಸ್ಥಾನಗಳಿಂದ ಒಂದೋ ಅಥವಾ ಎರಡೋ ಗೋ ಶಾಲೆಗಳನ್ನು ನಡೆಸುತ್ತೇವೆ. ಅಲ್ಲಿ ಅವಶ್ಯಕತೆಗನುಗುಣವಾಗಿ ಗೋ ಶಾಲೆಗಳನ್ನು ನಡೆಸಬೇಕೆಂದು ಅಲ್ಲಿ ಜನರ ಬೇಡಿಕೆ ಇದ್ದರೆ, ಅಲ್ಲಿ ವ್ಯವಸ್ಥಾಪನ ಸಮಿತಿಗಳನ್ನು ಸಹ ಮಾಡಿದ್ದೇವೆ. ಹಿಂದೆ ದೇವಸ್ಥಾನಗಳಿಗೆ ವ್ಯವಸ್ಥಾಪನ ಸಮಿತಿಗಳನ್ನು ಇಲ್ಲಿಯವರೆಗೂ ಮಾಡಿರಲಿಲ್ಲ. ಈಗ ಜಿಲ್ಲಾ ಧಾರ್ಮಿಕ ಪರಿಷತ್ ಮಾಡಿದ್ದೇವೆ. ಆಯಾ ದೇವಸ್ಥಾನಗಳಿಗೆ ಸಂಬಂಧಪಟ್ಟಂತಹ ವ್ಯವಸ್ಥಾಪನ ಸಮಿತಿಗಳನ್ನು ಸಹ ಮಾಡಿದ್ದೇವೆ. ಅವರು ಮನಗಂಡು ಅಲ್ಲಿ ಗೋ ಶಾಲೆಯನ್ನು ಮಾಡಬೇಕೆಂದು ಅನಿಸಿದರೆ, ಹಣವಿರುತ್ತದೆ ಅದರಲ್ಲಿ ಅವರು ಮಾಡಬಹುದು. ಆ ದೇವಸ್ಥಾನದ ಹುಂಡಿಯಿಂದ ಬರುವಂತಹ ಹಣ ಏನಿದೆ ಅದನ್ನು ಆಯಾ ದೇವಸ್ಥಾನಗಳಿಗೆ ಅಂದರೆ ಶೌಚಾಲಯಗಳು, ಕೊಠಡಿಗಳು ಮೂಲಭೂತ ಸೌಕರ್ಯಗಳಿಗೆ ಈ ರೀತಿಯಾಗಿ ಹಣವನ್ನು ಉಪಯೋಗಿಸುತ್ತೇವೆ. ಹಾಗೇನಾದರೂ ಹೆಚ್ಚು ಹಣ ಉಳಿದಿದ್ದಲ್ಲಿ ನಾವು ಕುಕ್ಕೆಸುಬ್ರಮಣ್ಯ ದೇವಸ್ಥಾನ ಅಂತಹ ಕಡೆಗೆ, ಅಕ್ಕಪಕ್ಕದ ಊರುಗಳಿಗೆ ಕುಡಿಯುವ ನೀರು, ಊರಿನಲ್ಲಿ *UGD* (Under Ground Drainage system) ಮತ್ತು ಸಮುದಾಯಕ್ಕೆ ಅಷ್ಟೇ ಅಲ್ಲದೇ, ಪಾರ್ಕ್‌ಗಳನ್ನು ಮಾಡತಕ್ಕಂಥದ್ದು ಮತ್ತು ದೇವಸ್ಥಾನದ ವತಿಯಿಂದ ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದರೆ ಅವರಿಗೆ ಇನ್ನೂ ಹೆಚ್ಚು ಶಾಲೆ ನಡೆಸಲು ಏನು ಬೇಕೋ ಆ ಎಲ್ಲಾ ಅನುದಾನವನ್ನು ಕೊಡಲಾಗುತ್ತದೆ. ಭಕ್ತಾದಿಗಳು ದೇವಸ್ಥಾನದ ಹುಂಡಿಯಲ್ಲಿ ಹಾಕಿದ ಎಲ್ಲಾ ಹಣವನ್ನು ಆಯಾ ದೇವಸ್ಥಾನಗಳಿಗೆ, ಅದೇ ಊರಿನಲ್ಲಿ ಬಳಕೆ

ಮಾಡಲಾಗಿದೆ. ಅದರ ಜೊತೆಗೆ ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವಂತಹ ಮುಜರಾಯಿ ದೇವಸ್ಥಾನಗಳು ಬಹಷ್ಟು ದುಸ್ಥಿತಿಯಲ್ಲಿದ್ದರೆ, ಆಯಾಯ ಪ್ರದೇಶದಲ್ಲಿ ಬರುವ ನಾಲ್ಕೈದು ದೇವಸ್ಥಾನಗಳನ್ನು ದತ್ತು ತೆಗೆದುಕೊಂಡು, ಅದರ ಅಭಿವೃದ್ಧಿ ಮಾಡಿ ಸವಲತ್ತುಗಳನ್ನು ಕೊಡುವುದರಿಂದ ಪ್ರವಾಸೋಧ್ಯಮ ಕೂಡ ಬೆಳೆಯುತ್ತದೆ. ಆ ದಿಸೆಯಲ್ಲಿ ಮಾಡುವಂಥದ್ದು. ನಮ್ಮ ಪ್ರವಾಸೋಧ್ಯಮ ಇಲಾಖೆಯ ಸಚಿವರಿಂದಲೂ ಕೂಡ ಬಹಳಷ್ಟು ಹಣವನ್ನು ತೆಗೆದುಕೊಂಡು, ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಆ ಎಲ್ಲಾ ದೇವಸ್ಥಾನಗಳಿಗೂ ಕೂಡ ಯಾತ್ರಿ ನಿವಾಸಗಳನ್ನು ಮಾಡುವುದನ್ನೂ ಕೂಡ ಮಾಡುತ್ತಿದ್ದೇವೆ. ಒಟ್ಟಾರೆ ನಾವು ದೇವಸ್ಥಾನಗಳ ಬಗ್ಗೆ ಹಿಂದಿನ ಸರ್ಕಾರಕ್ಕಿಂತ ಹೆಚ್ಚು ಕಾಳಜಿಯನ್ನು ವಹಿಸಿಕೊಂಡು, ಆಯಾ ದೇವಸ್ಥಾನಗಳ ನಿರ್ವಹಣೆ ಮತ್ತು ಎಲ್ಲಾ ವ್ಯವಸ್ಥಾಪನ ಸಮಿತಿಗಳನ್ನು ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎನ್ನುವುದನ್ನು ಬಹಳ ಸಂತೋಷದಿಂದ ಹೇಳುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾನ್ಯ ಸಚಿವರು ಬಹಳ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2981**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. " ಧ್ರುವ ನಕ್ಷತ್ರವನ್ನು ತೋರಿಸಿ ಎಂದು ನಾನು ಕೇಳಿದ್ದೆನು". ಆದರೆ ಸಚಿವರು ತೋರಿಸುತ್ತಿರುವುದು ಸೂರ್ಯನನ್ನು. ಆದರೆ ನೋಡುವುದಕ್ಕೆ ಆಗುವುದಿಲ್ಲ. ನಾನು ಏತಕ್ಕೆ ಉದಾಹರಣೆಯನ್ನು ಕೊಟ್ಟೆನು ಎಂದರೆ, ಇಲ್ಲಿ ಸಂಗ್ರಹಾಲಯವನ್ನು ಮಾಡಬೇಕೆನ್ನುವ ಪ್ರಾಜೆಕ್ಟ್‌ನ್ನು ಬಿಟ್ಟು, ಬೇರೆ ಯಾವುದೋ ಪ್ರಾಜೆಕ್ಟ್‌ನ್ನು ಮಾಡುತ್ತಿರುವ ಬಗ್ಗೆ ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ನಾನು ಪ್ರಶ್ನೆ ಕೇಳಿರುವುದು ಕೂಡಲ ಸಂಗಮದಲ್ಲಿ "ಬಸವ ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ಮಾಡುವ ಬಗ್ಗೆ ಸೀಮಿತವಾಗಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಸಚಿವರು ಅಂಗೈಲಿ ಆಕಾಶವನ್ನು ತೋರಿಸುವಂತಹ ಒಂದು ಲಿಖಿತ ಉತ್ತರವನ್ನು ನನಗೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಬುದ್ಧ, ಬಸವ ಮತ್ತು ಡಾ॥ ಅಂಬೇಡ್ಕರ್‌ರವರು ಮಾಡಿರುವ ಘೋಷಣೆ ನಮ್ಮ ರಾಜ್ಯದ ಘೋಷಣೆ ಅಲ್ಲವೇ? ಕೂಡಲ ಸಂಗಮದಲ್ಲಿ ಬಸವ ವಸ್ತು

ಸಂಗ್ರಹಾಲಯವನ್ನು ಮಾಡಬೇಕೆಂದು ಯೋಜನೆ ಮಾಡಿದ ಮೇಲೆ ಅಲ್ಲಿ ಇವತ್ತಿನವರೆಗೆ ಕಟ್ಟಡ ಆಗಲಿಲ್ಲ. ಸರ್ಕಾರ ಅಲ್ಲಿ ಇನ್ನೇನನ್ನೋ ಮಾಡುವುದಕ್ಕೆ ಹೊರಟಿದೆ. ದೆಹಲಿಯಲ್ಲಿರುವ ಸ್ವಾಮಿ ನಾರಾಯಣ ಅಕ್ಷರಧಾಮದ ರೀತಿಯಲ್ಲಿ ಮಾಡುತ್ತೇವೆಂದು ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಹೇಳುತ್ತಾರೆ. ಇನ್ನೊಂದು ಮಾತನ್ನು ಹೇಳುವುದೇನೆಂದರೆ, ನಾನು ಆ ಸ್ವಾಮಿ ನಾರಾಯಣ ಅಕ್ಷರಧಾಮಕ್ಕೆ ಹೋದಾಗ, ನೀವು ಈ ದೇವಸ್ಥಾನದಲ್ಲಿ ಎಲ್ಲವನ್ನು ತೋರಿಸಿದ್ದೀರಿ. ಆದರೆ ಬಸವಣ್ಣನನ್ನು ತೋರಿಸಿಲ್ಲವೆಂದು ಹೇಳಿ, ತೋರಿಸಿಯೂ ಬಂದೆನು. ಈ ದೇಶದಲ್ಲಿ ಬಸವಣ್ಣನವರ ವಿಚಾರ ಎಷ್ಟೊಂದು ಮಹತ್ವವಾಗಿದೆ. "ನೀವು ಇಂತಹ ದೊಡ್ಡ ಸ್ವಾಮಿ ನಾರಾಯಣ ಅಕ್ಷರಧಾಮವನ್ನು ಮಾಡಿದ್ದೀರಲ್ಲಾ, ಬಸವಣ್ಣನವರನ್ನು ಏಕೆ ಇಲ್ಲಿ ತೋರಿಸಿಲ್ಲವೆಂದು ನಾನು ಅಲ್ಲಿ ಇಟ್ಟಿದ್ದ ಪುಸ್ತಕದಲ್ಲಿ ಬರೆದು ಬಂದೆನು". ಆದರೆ ಇದೂವರೆಗೂ ಅವರು ಮಾಡಿಲ್ಲ. ಕೂಡಲ ಸಂಗಮದಲ್ಲಿಯೂ ಅದೇ ಮಾದರಿಯಲ್ಲಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಇದಕ್ಕೂ ಕೂಡ ಮಂತ್ರಿಮಂಡಲದಿಂದ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡಿದ್ದೇವೆಂದು ಮಾನ್ಯ ಸಚಿವರು ಲಿಖಿತ ಉತ್ತರದ ಮೊದನೆಯ ಪ್ಯಾರದಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಪ್ರಶ್ನೆ ಹಾಕುತ್ತಿದ್ದೇನೆ. ಇದಕ್ಕೆ ನೀವು 367 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿರುವಂತಹ ಯೋಜನೆಯಾಗಿರುತ್ತದೆ. ಈ 367 ಕೋಟಿ ರೂಪಾಯಿಗಳ ಯೋಜನೆಯಲ್ಲಿ 1ನೇ ಹಂತದಲ್ಲಿ ಸುಮಾರು 94.67 ಕೋಟಿ ರೂಪಾಯಿಗಳ ಮೊತ್ತದ ಕಾಮಗಾರಿಗಳನ್ನು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಅನುದಾನದಿಂದ ಹಾಗೂ ಸುಮಾರು 44.94 ಕೋಟಿ ಮೊತ್ತದ ಕಾಮಗಾರಿಗಳನ್ನು ಸರ್ಕಾರದ ವತಿಯಿಂದ ಕೈಗೊಳ್ಳಲು ಒಪ್ಪಿಗೆ ನೀಡಲಾಗಿರುತ್ತದೆ ಎಂದು ಹೇಳಿರುತ್ತಾರೆ. ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಅನುದಾನದಿಂದ ಮಾಡಲಾಗುವುದೆಂದು ಹೇಳಿದ್ದಾರೆ. ಸರ್ಕಾರದಿಂದ ಅದನ್ನು ಮಾಡಿ ಎಂದರೆ, ನೀವು ಕೃಷ್ಣ ಭಾಗ್ಯ ಜಲ ನಿಗಮದವರ ಕಡೆ ಬೊಟ್ಟು ತೋರಿಸುತ್ತಿದ್ದಾರೆ. ಅವರು ಇದಕ್ಕೆ ಅನುದಾನವನ್ನು ಕೊಡುತ್ತಾರೋ ಅಥವಾ ಬಿಡುತ್ತಾರೋ ನಮಗೆ ಗೊತ್ತಿಲ್ಲ. ಇಲ್ಲಿ ಪ್ರಶ್ನೆ ಇರುವುದು, ಅಲ್ಲಿ ವಸ್ತು ಸಂಗ್ರಹಾಲಯ ನಿರ್ಮಾಣದ ಬಗ್ಗೆ ಕೇಳಿದ್ದು, ಅಲ್ಲಿ ಇನ್ನೂ ಕಟ್ಟಡದ ಕಾಮಗಾರಿ ಮಗಿದಿಲ್ಲವೆಂದು ಹೇಳುತ್ತಾರೆ. ನಾನು ವಸ್ತು ಸಂಗ್ರಹಾಲಯ ಬಗ್ಗೆ ಕೇಳಿದ್ದೆನು. ವಸ್ತು ಸಂಗ್ರಹಾಯಲದ ಕಟ್ಟಡದ ಕಾಮಗಾರಿಯು ಇನ್ನೂ ಮುಗಿದಿಲ್ಲವೆಂದು ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. ಆ ಕಟ್ಟಡದ ಕಾಮಗಾರಿಯನ್ನು ಯಾವಾಗ ಮುಕ್ತಾಯಗೊಳಿಸುತ್ತಾರೆ ಮತ್ತು ಆ ವಸ್ತು ಸಂಗ್ರಹಾಲಯಕ್ಕೆ ವಸ್ತುಗಳನ್ನು ಯಾವಾಗ ತಂದು ಇಡುತ್ತಾರೆ? ಎನ್ನುವುದಕ್ಕೆ ಮಾತ್ರ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

"ಮಾಧ್ಯಮ / ನ್ಯಾಯಾಲಯಗಳಲ್ಲಿ ಬಳಕೆಗಾಗಿ ಅಲ್ಲ"

**ಶ್ರೀ ಕಾಗೋಡು ತಿಮ್ಮಪ್ಪ:–** ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀ ರಾಮಚಂದ್ರಗೌಡರವರು ಹೇಳುವುದರಲ್ಲಿ ಅರ್ಥವಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಬಸವಣ್ಣನವರ ಮ್ಯೂಜಿಯಂ ಮಾಡುವಂತಹ ಕೆಲಸ ಅಪೂರ್ವವಾದಂತಹ ಮತ್ತು ಚಾರಿತ್ರಿಕವಾದಂತಹ ಕೆಲಸವಾಗುತ್ತದೆ. ಅವರಿಗೆ ಸಂಶಯ ಬೇಡ. ಈ ಕಟ್ಟಡದ ಕಾಮಗಾರಿಯನ್ನು ಎಷ್ಟು ಬೇಗ ಪೂರೈಸಲು ಸಾಧ್ಯವಿದೆಯೋ, ಅಷ್ಟು ಬೇಗ ಪೂರೈಸಿ, ಮಾನ್ಯ ಸದಸ್ಯರ ಅನಿಸಿಕೆ ಪ್ರಕಾರ ಅಲ್ಲಿ ಒಂದು ಬಸವಣ್ಣನವರ ಮ್ಯೂಜಿಯಂ ಅನ್ನು ಪ್ರಾರಂಭ ಮಾಡುವುದನ್ನು ಖಂಡಿತ ಮಾಡುತ್ತೇವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯ ತೀರ್ಮಾನದ ಪ್ರಕಾರವೇ ನಡೆಯುತ್ತಿದೆ. ಆದಾಗ್ಯೂ ಕೂಡ ಈ ನಿರೀಕ್ಷೆಯಂತೆ ಮನಸೋರಾತಿ ಆಗಿ, ಕೆಲಸ ಅರ್ಧಂಬರ್ಧ ಆಗಿ ನಿಂತಿರುತ್ತದೆ. ಉಳಿದಂತಹ ಕೆಲಸವನ್ನು ಸರ್ಕಾರ ಪೂರ್ಣಗೊಳಿಸುವಂತಹ ಕೆಲಸವನ್ನು ಖಂಡಿತ ಮಾಡುತ್ತದೆ.

**ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ರಾಮಚಂದ್ರಗೌಡರವರೆ, ಈ ವಿಷಯವು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಪಟ್ಟಿದ್ದೂ ಇದೆ. I will just give some information to the member. ತಮಗೆ ಅನುಕೂಲವಾಗುತ್ತದೆ.

**ಉಪಸಭಾಪತಿಯವರು:–** ಮಾನ್ಯ ಸಚಿವರೆ, ಮಾತನಾಡುವುದು ಬೇಡ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನೋಡಿ, ಬಸವಣ್ಣನವರು ಬಹಳ ಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. **"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ, ಅನ್ಯರನು ಹೀಯಾಳಿಸಬೇಡ"** ಇಲ್ಲಿ ಹುಸಿಯ ನುಡಿಯಬೇಡ ಎಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಹುಸಿಯ ಮಾತು ಆಗಬಾರದು. ಇದು ಬಸವಣ್ಣನವರ ವಿಚಾರವಾಗಿರುತ್ತದೆ. ಈ ಹುಸಿ ಮಾತು ಆದರೆ ನಿಮಗೆ ಗೌರವ ಮತ್ತು ಘನತೆ ಬರುವುದಿಲ್ಲ. ನಾವು ಸುಮ್ಮನೆ ಬಸವಣ್ಣ ಎಂದು ಹೇಳಿದರೆ ಏನು ಪ್ರಯೋಜನವಾಗುವುದಿಲ್ಲ. ಡಾ||ಬಿ.ಆರ್.ಅಂಬೇಡ್ಕರ್ ಎಂದರೆ ಏನೂ ಆಗುವುದಿಲ್ಲ. ನಾನು ಯಾವಾಗಲೂ ಒಂದು ಮಾತನ್ನು ಹೇಳುತ್ತಿದ್ದೆನು. "*Knowing is not doing. Doing is doing.*" Your knowledge will

not work. But your exhibition only will give the result. ಮಾನ್ಯ ಎಂ.ಬಿ.ಪಾಟೀಲ್‌ರವರು ಏನನ್ನೋ ಹೇಳಬೇಕೆಂದಿದ್ದರು ಹೇಳುವುದಕ್ಕೆ ಅವಕಾಶ ಕೊಡಿ.

**ಉಪಸಭಾಪತಿಯರು:–** ಮಾನ್ಯ ಸಚಿವರು ಮಾತನಾಡಲಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರ ಇಲಾಖೆಯಿಂದ ಸುಮಾರು 44.94 ಕೋಟಿ ರೂಪಾಯಿಗಳನ್ನು ಇವತ್ತಿನ ದಿವಸ ಅದಕ್ಕೆ ಖರ್ಚು ಕೊಡುತ್ತಿದ್ದಾರೆ. ನಮ್ಮ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ ವತಿಯಿಂದ, ಈಗಾಗಲೇ ಕೂಡಲ ಸಂಗಮಕ್ಕೆ ಒಂದು ಅಭಿವೃದ್ಧಿ ಪ್ರಾಧಿಕಾರ ಇರುತ್ತದೆ. ಆ ಪ್ರಾಧಿಕಾರವು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಿರುತ್ತದೆ. ಅದರಲ್ಲಿ ನಾವು ಕೂಡಲ ಸಂಗಮ ಮತ್ತು ಚಿಕ್‌ಸಂಗಂ ಕ್ಷೇತ್ರದಲ್ಲಿ 'ಅಕ್ಷರ ಧಾಮ' ಮಾದರಿಯಲ್ಲಿ ಇವತ್ತಿನ ದಿವಸ ವಸ್ತು ಸಂಗ್ರಹಾಲಯ ಮಾಡಿ ಅದನ್ನು ಅಭಿವೃದ್ಧಿಪಡಿಸುವ ಸಲುವಾಗಿ KBJNL ವತಿಯಿಂದ, 94,67,64,407 ರೂಪಾಯಿಗಳನ್ನು ನಾವು ಈಗಾಗಲೇ ಅದಕ್ಕೆ ಅನುಮೋದನೆಯನ್ನು ಕೊಟ್ಟಿದ್ದೇವೆ. ಇವತ್ತಿನ ದಿವಸ ನಾವು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಅದು ನಿರ್ಣಯ ಕೂಡ ಆಗಿದೆ. ಅದು ಆಡಳಿತಾತ್ಮಕ ಅನುಮೋದನೆಗೆ ಕ್ಯಾಬಿನೆಟ್‌ಗೆ ಬರುತ್ತಿದೆ. ಅದನ್ನು 'ಅಕ್ಷರ ಧಾಮ' ಮಾದರಿಯಲ್ಲಿ ಮಾಡಬೇಕಾಗಿರುತ್ತದೆ. ಶ್ರೀ ಎಸ್.ಆರ್.ಪಾಟೀಲ್ ರವರು ಆ ಭಾಗದ ಶಾಸಕರಾಗಿದ್ದು, ಅದರ ನೇತೃತ್ವವನ್ನು ಅವರು ವಹಿಸಿಕೊಂಡಿರುತ್ತಾರೆ. ಅಲ್ಲಿ 'ಅಕ್ಷರ ಧಾಮ' ಮಾದರಿಯಲ್ಲಿ ವಸ್ತು ಸಂಗ್ರಹಾಲಯ ಆಗಬೇಕೆಂದು ಕೇಳಿಕೊಂಡಿದ್ದಕ್ಕೆ, ಈಗ ನಾವು ಸುಮಾರು 94 ಕೋಟಿಗಳನ್ನು ಕೊಟ್ಟಿದ್ದೇವೆ. 44 ಕೋಟಿ ರೂಪಾಯಿಗಳನ್ನು ಅವರು ಕೊಡುತ್ತಿದ್ದಾರೆ. ಎಲ್ಲಾ ಸೇರಿದಂತೆ ಒಟ್ಟು ಸುಮಾರು 140 ಕೋಟಿ ರೂಪಾಯಿಗಳಲ್ಲಿ Museum ಒಳಗೊಂಡಂತೆ ಎಲ್ಲಾ ಅಭಿವೃದ್ಧಿ ಕಾರ್ಯವನ್ನು ನಾವು ಇವತ್ತಿನ ದಿವಸ ಮಾಡುತ್ತಿದ್ದೇವೆ ಎನ್ನುವಂತಹ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ.

**ಉಪಸಭಾಪತಿಯವರು:–** ಮಾನ್ಯ ಸಚಿವರಿಗೆ ಧನ್ಯವಾದಗಳು.

**(ಮುಂದು)**

**(715) 14.06.2017 PK(MSS)-AK 1.00**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಈ ರಾಜ್ಯದ ಬಜೆಟ್‌ನಲ್ಲಿ ಬಸವಣ್ಣನವರ ವಸ್ತು ಸಂಗ್ರಹಾಲಯವನ್ನು ಮಾಡುವುದಾಗಿ ಘೋಷಣೆ ಕೂಡ ಆಗಿದೆ. ಈಗ ಅಕ್ಷರಧಾಮ ರೀತಿಯಲ್ಲಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದನ್ನು ಯಾವಾಗ ಮಾಡಲಾಗುವುದು?

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಮ್ಯೂಸಿಯಂ ಮಾಡುವುದಕ್ಕಾಗಿ ನಮ್ಮ ಮುಖ್ಯಮಂತ್ರಿಗಳು 100 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. 100 ಕೋಟಿ ರೂಪಾಯಿಗಳಲ್ಲಿ ಎಲ್ಲವನ್ನೂ ಮಾಡುವುದಕ್ಕೆ ತಯಾರು ಮಾಡುತ್ತಿದ್ದೇವೆ.

## ಪ್ರಶ್ನೆ ಸಂಖ್ಯೆ: 2930
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕು ತಹಸೀಲ್ದಾರ್ ಕಾರ್ಯಾಲಯದಿಂದ ದಿನಾಂಕ 29.04.2000ನೇ ಇಸವಿಯಿಂದ ರೈತರಿಗೆ ಕೊಡಬೇಕಾದಂತಹ ಅನೇಕ ಕಾಗದ ಪತ್ರಗಳನ್ನು ಇವತ್ತಿನವರೆಗೂ ಕೊಡುತ್ತಿಲ್ಲ. ದಿನಾಂಕ 29.04.2000ನೇ ಇಸವಿಯ ನಂತರದ ಕಾಗದ ಪತ್ರಗಳು ಸಿಗುತ್ತಿದೆ. ಆದರೆ ಇದಕ್ಕಿಂತಲೂ ಪೂರ್ವದಲ್ಲಿರತಕ್ಕಂತಹ ಕಾಗದ ಪತ್ರಗಳನ್ನು ಯಾವುದೇ ಅಧಿಕಾರಿಗಳು ಕೊಡುತ್ತಿಲ್ಲ. ಅದಕ್ಕೆ ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಏನೆಂದರೆ ಸವಣೂರು ವಲಯದ 1993-94ನೇ ಸಾಲಿನಿಂದ 2000 ಸಾಲಿನವರೆಗಿನ ಕೈಬರಹದ ಪಹಣಿ ಪತ್ರಿ ಹೊರತುಪಡಿಸಿ 2000 ಇಸವಿಗಿಂತ ಹಿಂದಿನ ದಾಖಲೆಗಳು ಲಭ್ಯವಿಲ್ಲವೆಂದು ಹಿಂಬರಹ ನೀಡಲಾಗುತ್ತಿದೆ. ಆದರೆ 2000ನೇ ಇಸವಿಯ ನಂತರದ ದಾಖಲೆಗಳು ಲಭ್ಯವಿದ್ದು ಅವುಗಳನ್ನು ನೀಡಲಾಗುತ್ತಿದೆ. ಹಿಂಬರಹವನ್ನು ಕೊಟ್ಟರೆ 2000ನೇ ಇಸವಿಯ ಪೂರ್ವದಲ್ಲಿರತಕ್ಕಂತಹ 15-20 ವರ್ಷಗಳ ಕಾಗದ ಪತ್ರಗಳನ್ನು ರೈತರಿಗೆ ಅನುಕೂಲವಾಗುವಂತಹ ವಾರ್ಷಾ ಇರಬಹುದು, ವಾಟ್ನಿ ಇರಬಹುದು, ಹಕ್ಕುಪತ್ರ ಇರಬಹುದು, ಸರ್ಕಾರ ಎಂದು ಇದುದ್ದನ್ನು ಸರ್ಕಾರಿ ಎಂದು ಮಾಡುವುದಕ್ಕೆ, ಹೊಸಶರ್ತ ಇದ್ದಿದ್ದನ್ನು ಹಳೇಶರ್ತ ಮಾಡಲಿಕ್ಕೆ, ರೀಗ್ರ್ಯಾಂಟ್ ಮಾಡಲಿಕ್ಕೆ, ಖರೀದಿ ವ್ಯವಹಾರ ಮಾಡಲಿಕ್ಕೆ ಅಥವಾ ಒತ್ತೆ ಇಟ್ಟು ಬ್ಯಾಂಕ್‌ನಲ್ಲಿ ಸಾಲವನ್ನು ಪಡೆಯುವುದಕ್ಕೆ ಈ ರೀತಿ ಎಲ್ಲದ್ದಕ್ಕೂ ಕೂಡ ತೊಂದರೆಯಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ 2000ನೇ ಇಸವಿಗಿಂತಲೂ ಪೂರ್ವದಲ್ಲಿರುವಂತಹ ರೈತನಿಗೆ ಬೇಕಾದಂತಹ ಒಂದು ಡಾಕ್ಯೂಮೆಂಟ್ ಅನ್ನು ಕೂಡ ಕೊಡುತ್ತಿಲ್ಲ. ಮಾನ್ಯ ಸಚಿವರು ಉತ್ತರದಲ್ಲಿ ಏನು 2000ನೇ ಇಸವಿಯ ನಂತರದ ದಾಖಲೆಗಳನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಸವಣೂರು ತಾಲ್ಲೂಕಿನಲ್ಲಿ ರೈತರಿಂದ ಸ್ವೀಕೃತವಾಗಿರುವ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ವಿಲೇಗೊಳಿಸಲಾಗುತ್ತಿದೆ ಎಂದು

ಹೇಳಿದ್ದಾರೆ. ಲಭ್ಯವಿರುವ ದಾಖಲೆಗಳು ಎಂದರೇನು? ಎರಡನೆಯದಾಗಿ ಸರ್ಕಾರಿ ಜಮೀನುಗಳ ಮಂಜೂರಿ ಕಡತಗಳು ಲಭ್ಯವಿಲ್ಲದಿರುವ ಸಂದರ್ಭಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 8 ಎಲ್‌ಜಿಪಿ 2016 ದಿನಾಂಕ 20.06.2016ರನ್ವಯ ಮಿಸ್ಸಿಂಗ್ ಕಡತ ತಯಾರಿಸಿ ಕ್ರಮ ಜರುಗಿಸಬೇಕೆಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಅಲ್ಲಿಯ ತಹಸೀಲ್ದಾರ್‌ರವರು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಪತ್ರ ಬರೆದು ಈ ರೀತಿಯಾಗಿದೆ ಏನು ಮಾಡಬೇಕೆಂದು ಕೇಳಿದ್ದಾರೆ. ಮಾನ್ಯ ಅಸಿಸ್ಟೆಂಟ್ ಕಮಿಷನರ್‌ರವರು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದು ಏನು ಮಾಡಬೇಕೆಂದು ಪತ್ರವನ್ನು ಬರೆದಿದ್ದಾರೆ. ಮಾನ್ಯ ಜಿಲ್ಲಾಧಿಕಾರಿಗಳು ಇದು ಸರಿಯಾಗಿರುವುದಿಲ್ಲ. ಇದನ್ನು link documents ಪ್ರಕಾರ ಇದನ್ನು ರೈತರ ಸಮಸ್ಯೆಗಳನ್ನು ಪರಿಹರಿಸಿ ಎಂದು ಉತ್ತರವನ್ನು ಕೊಟ್ಟಿದ್ದಾರೆ. Link documents ಎಂದರೇನು? ಮಿಸ್ಸಿಂಗ್ ಕಡತವನ್ನು ತಯಾರಿ ಮಾಡುವುದು ಎಂದರೇನು ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ದಯಮಾಡಿ ಮಾನ್ಯ ಸಚಿವರು ರೈತರ ಕಳಕಳಿಯನ್ನು ಅರ್ಥ ಮಾಡಿಕೊಂಡು ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು. ನಾನು ಕೇಳಿರುವಂತಹ ಎರಡು ಉಪ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹಿಂದೆ ಒಂದು ಸಾರಿ ಇದರ ಬಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗಲೇ ನನಗೆ ಇದರ ಬಗ್ಗೆ ಗೊತ್ತಾಗಿದ್ದು. ಅಲ್ಲಿಯವರೆಗೂ ನನಗೆ ಗೊತ್ತಿರಲಿಲ್ಲ. ತಕ್ಷಣ ಅದರ ಬಗ್ಗೆ ತಿಳಿದುಕೊಂಡೆ. ಜನರಿಗೆ ತೊಂದರೆಯಾಗಿರುವುದು ನಿಜ. ಇಷ್ಟರೊಳಗೆ ಇದನ್ನು ಸರಿಪಡಿಸಬೇಕಾಗಿತ್ತು. ಈಗಾಗಲೇ ತೊಂದರೆಯಾಗಿ ಬಿಟ್ಟಿದೆ. ನಾನು ತಕ್ಷಣ ನಮ್ಮ ರೆವಿನ್ಯೂ ಕಮಿಷನರ್‌ರವರನ್ನು ಕಳುಹಿಸುತ್ತೇನೆ. ನಾನು ಕೂಡ ಒಂದು ಸಾರಿ ಅಲ್ಲಿಗೆ ಹೋಗಿ ಬಂದು ಯಥಾಸ್ಥಿತಿ ತರುವಂತಹ ಕೆಲಸವನ್ನು ಖಂಡಿತ ಮಾಡುತ್ತೇನೆ. ಕ್ರಮಬದ್ಧವಾಗಿ ಮಾಡಬೇಕಾದಂತಹ ಅಗತ್ಯ ಇದೆ. ಅದರ ಬಗ್ಗೆ ಮಾನ್ಯ ಸದಸ್ಯರು ಅನುಮಾನ ಪಡುವುದು ಬೇಡ. ಎಲ್ಲರೂ ಕುಳಿತುಕೊಂಡು ಇದನ್ನು ಸರಿಪಡಿಸೋಣ. ಮಿಸ್ಸಿಂಗ್ ರೆಕಾರ್ಡ್ ಎಂದರೆ, ಒಂದು ರೆಕಾರ್ಡ್ ಇರುತ್ತದೆ. ಈಗ ದರಖಾಸ್ತು ಇರುತ್ತದೆ. ದರಖಾಸ್ತು ಮಂಜೂರು ಮಾಡುವಾಗ ರೆಕಾರ್ಡ್ಸ್ ಪ್ರಿಪೇರ್ ಮಾಡಿರುತ್ತಾರೆ. ಅದು ಒರಿಜಿನಲ್ ರೆಕಾರ್ಡ್ ಅಗಿರುತ್ತದೆ. ಅದರಲ್ಲಿ ಮಜರ್ ಇರುತ್ತದೆ, ಎಲ್ಲಾ ಇರುತ್ತದೆ. ಅದು ತಹಸೀಲ್ದಾರ್ ಕಛೇರಿಯಲ್ಲಿ ಒಂದೊಂದು ಸಾರಿ ಮಾಯವಾಗಿ ಬಿಡುತ್ತದೆ. ಆ ರೀತಿಯಾಗಿ ಮಿಸ್ಸಿಂಗ್ ರೆಕಾರ್ಡ್ ಅನ್ನು ಮತ್ತೆ ಬಿಲ್ಡಪ್ ಮಾಡುವುದಕ್ಕೆ ಒಂದು ಪ್ರೊಸೀಜರ್ ಇರುತ್ತದೆ. ತಹಸೀಲ್ದಾರ್‌ರವರು ಆ ಕ್ರಿಯೆಯನ್ನು

ಪ್ರಾರಂಭ ಮಾಡಿ ಜಿಲ್ಲಾಧಿಕಾರಿಗಳ ಅನುಮತಿಯನ್ನು ಪಡೆದುಕೊಂಡು ಮತ್ತೆ ಒರಿಜಿನಲ್ ಎಂದು ಮಾಡುತ್ತಾರೆ. ಈಗ ಮಿಸ್ಸಿಂಗ್ ಅಗಿದೆ. ಈ ರೀತಿಯಾಗಬಾರದಿತ್ತು, ಆದರೆ ಅಗಿದೆ. ಅದುರಿಂದ ಸರ್ಕಾರದಿಂದ ಸ್ಪಷ್ಟ ಆದೇಶವನ್ನು ನೀಡಿ ಹಿಂದೆ ಏನೇನು ದಾಖಲೆಗಳಿತ್ತೋ ಅದನ್ನೆಲ್ಲಾ ಒರಿಜಿನಲ್ ದಾಖಲೆ ಅಂದರೆ ಅಧಿಕೃತವಾಗಿ ದಾಖಲೆಗೆ ತರುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಆತಂಕ ನನಗೆ ಅರ್ಥವಾಗಿದೆ. ಇಷ್ಟು ವಿಳಂಬವಾಗಬಾರದಿತ್ತು. 2000ನೇ ಇಸವಿಯಲ್ಲಿ ಆದಂತಹ ಒಂದು ಘಟನೆ ಸುಮಾರು 17 ವರ್ಷಗಳಾಗುತ್ತಿದ್ದರು ಅದನ್ನು ಅಲ್ಲಿಯ ಜನರು ಹೇಗೆ ಸಹಿಸಿಕೊಂಡಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಅದಷ್ಟು ಬೇಗ ಮಾನ್ಯ ಸದಸ್ಯರ ನಿರೀಕ್ಷೆಗೆ ತಕ್ಕಂತೆ ಎಲ್ಲಾ ಕಾಗದ ಪತ್ರಗಳನ್ನು ಯಥಾಸ್ಥಿತಿಗೆ ತರುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ಮಿಸ್ಸಿಂಗ್ ಕಡತವನ್ನು ತಯಾರು ಮಾಡಬೇಕೆಂದು ಹೇಳಿದರಲ್ಲಿ ಮಾನ್ಯ ಸರ್ಕಾರದ ಸುತ್ತೋಲೆಯ ಪ್ರಕಾರವಾಗಿ ಒಂದು ಏನಿದೆ ಎಂದರೆ, ಇದರಲ್ಲಿ ಆನೇಕ ತೊಂದರೆಗಳಿವೆ. 4–5 ಪುಟಗಳ ಒಂದು ಸರ್ಕಾರಿ ಸುತ್ತೋಲೆ ಇದೆ. ಈ ಸುತ್ತೋಲೆಯಲ್ಲಿ "ಭೂಮಾಪನ ಇಲಾಖೆಗೆ ಪೋಡಿ ಅಳತೆಗಾಗಿ ಕಳುಹಿಸುವ ಕಡತಗಳಲ್ಲಿ ಕರ್ನಾಟಕ ನಿಯಮ 1956ರ ನಿಯಮ 72 ರನ್ವಯ ಪೋಡಿ ಕೆಲಸಕ್ಕಾಗಿ ಭೂ ಮಂಜೂರಿ ಮತ್ತು ಭೂ ಸುಧಾರಣೆ ಕಡಗಳನ್ನು ಈ ಕೆಳಕಂಡ ದಾಖಲಾತಿಗಳನ್ನು ಹೊಂದಿರಬೇಕೆಂದು ಹೇಳಿದ್ದಾರೆ. ಇದರ ಪ್ರಕಾರ ಮಂಜೂರಿ ಆದೇಶ ಭೂ ಮಂಜೂರಿ ಕಡತಗಳಲ್ಲಿ (ಲ್ಯಾಂಡ್ ಗ್ರ್ಯಾಂಟ್) ಭೂ ಮಂಜೂರಿ ಆದೇಶ, ಸಾಗುವಳಿ ಚೀಟಿ ಅಥವಾ ಹಕ್ಕು ಪತ್ರ, ಅನುಮೋದಿತ ರೆವಿನ್ಯೂ ನಕ್ಷೆ, ಪೋಡಿ ಶುಲ್ಕ ಕಂದಾಯವಾಗಿರುವ ಬಗ್ಗೆ ದೃಢೀಕರಣ ಪತ್ರ ಅಥವಾ ವಿನಾಯಿತಿ ಪತ್ರ, ಚಾಲ್ತಿಯಲ್ಲಿರುವ ಆರ್.ಟಿ.ಸಿ. ಮತ್ತು ಮಂಜೂರಿದಾರರಿಗೆ ಸಂಬಂಧಿಸಿದ ದೃಢೀಕರಣ ಮ್ಯೂಟೇಶನ್ ನಕಲು ಎಂದು ಇದೆ. ಇವುಗಳು ಇಲ್ಲ ಎನ್ನುವುದರಿಂದಲೇ ಈ ಸಮಸ್ಯೆಗಳಾಗಿದೆ. ಇದಂತಹ ಕಾಗದ ಪತ್ರಗಳನ್ನು ಮೊಹರು ಹಾಕಿ ಸಹಿ ಮಾಡಿಕೊಡುವುದಕ್ಕೆ ರೆವಿನ್ಯೂ ಅಧಿಕಾರಿಗಳು ಏನೇನು ತೊಂದರೆಗಳನ್ನು ಕೊಡುತ್ತಾರೆ ಎನ್ನುವುದರ ಬಗ್ಗೆ ಮೊನ್ನೆಯ ದಿವಸ ಇದೇ ಸದನದಲ್ಲಿ ಬರಗಾಲ ವಿಷಯದ ಬಗ್ಗೆ ಚರ್ಚೆಯಲ್ಲಿ ಮಾತನಾಡುತ್ತಿರುವಾಗ ಎಲ್ಲವನ್ನೂ ತಿಳಿಸಿದ್ದೇನೆ. ಇಲ್ಲದೇ ಇರುವಂತಹ ದಾಖಲೆಗಳನ್ನು ತಹಸೀಲ್ದಾರ್ ಕಛೇರಿಯಲ್ಲಿ ಕೊಡುವುದು ಅವರ ಜಾಯಮಾನದಲ್ಲಿ ಅಗುವುದಿಲ್ಲ. ಮತ್ತೆ ಇದರಲ್ಲಿ ಆನೇಕ ನಿಬಂಧನೆಗಳನ್ನು ಹಾಕಿದ್ದಾರೆ. ಕಾಯ್ದೆ ಎಂದು ನಾನು ಹೇಳುತ್ತಿಲ್ಲ. ಮಾನವೀಯತೆಯ ದೃಷ್ಟಿಯಿಂದ ಅಧಿಕಾರಿಗಳು ತಮ್ಮ ಹಕ್ಕನ್ನು ಚಲಾಯಿಸಿ ಏನೋ ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡಿದ್ದರೆ ಅನುಕೂಲವಾಗುತ್ತದೆ. ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಜಿಲ್ಲಾಧಿಕಾರಿಗಳು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಇಲ್ಲದೇ ಇದಿದ್ದರೆ ನನ್ನ ನನ್ನ ಜಮೀನಿನ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ಅವರುಗಳು ತಿಳಿದುಕೊಳ್ಳಬೇಕಾಗಿತ್ತು. ಯಾರೇ ಆಗಲೀ ರೈತರಿಗೆ ತೊಂದರೆ ಕೊಡಬಾರದು, ಅವನು ನನ್ನಂತೆ ಜೀವ, ಹೊಟ್ಟೆಗೆ ಅನ್ನವನ್ನು ಕೊಡುತ್ತಾನೆ ಎನ್ನುವಂತಹ ಬುದ್ಧಿ ಅವರಲ್ಲಿ ಇದ್ದಿದ್ದರೆ ಕೆಲವೊಂದು ನಿಯಮಗಳನ್ನು ಅವರು ಸರಿಪಡಿಸಬೇಕಾಗಿತ್ತು. ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 74 ಭೂದಾಸ 2002 ದಿನಾಂಕ 30.10.2002 ವಿಲೇವಾರಿ ಅಗಿರುವಂತಹ ಕಡತಗಳಿಗೆ ಸಂಬಂಧಪಟ್ಟ ಮಂಜೂರಿದಾರರಿಗೆ ಸವಣೂರು, ಶಿಗ್ಗಾವಿ ಒಟ್ಟು 04 ತಾಲ್ಲೂಕುಗಳ ರೈತರ ಪ್ರಶ್ನೆ ಇದೆ. ಅದಕ್ಕಾಗಿ ಒಂದು ಉದಾಹರಣೆಯನ್ನು ಹೇಳುವುದಾದರೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಲೇವಾರಿ ಮಾಡಬೇಕೆಂದು ಇದೆ. ತಹಸೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್‌ಗಳು ಪತ್ರವನ್ನು ಬರೆದರೂ ಕೂಡ ಏಕೆ ಮಾಡುತ್ತಿಲ್ಲ? ಅದಕ್ಕೆ ಮಾನವೀಯತೆ ದೃಷ್ಟಿಯಿಂದ ಮಾಡಿ ಎಂದರೆ, ನಾವು ಹೇಳಿದಂತಹ ಎಲ್ಲಾ ದಾಖಲೆಗಳನ್ನು ಕೊಡಿ ಎಂದು ಹೇಳುತ್ತಾರೆ. ಸರ್ಕಾರಿ ಸುತ್ತೋಲೆ ಸಂಖ್ಯೆ: ಕಂಇ 74 ದಿನಾಂಕ 30.10.2002 ರ ಮಿಸ್ಸಿಂಗ್ ಫೈಲ್‌ಗೆ ಎಷ್ಟು ಸಮಸ್ಯೆ ಇದೆ ಎನ್ನುವುದರ ಬಗ್ಗೆ ತಮ್ಮ ಮುಖಾಂತರ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಏನೆಂದರೆ, ಗೈರು ವಿಲೇವಾರಿ ಕಡತದ ಪುನರ್ ನಿರ್ಮಾಣದಲ್ಲಿ ಜಿಲ್ಲಾ ಮಟ್ಟದಲ್ಲಿಯೇ ಜಿಲ್ಲಾಧಿಕಾರಿಗಳೇ ಒಂದು ಸಮಿತಿಯನ್ನು ಮಾಡಬೇಕಾಗಿದೆ.

**ಉಪಸಭಾಪತಿಯವರು:-** ಮಾನ್ಯ ಸೋಮಣ್ಣ ಮ.ಬೇವಿನ ಮರದರವರೆ ಇದು ಪ್ರಶ್ನೋತ್ತರ ವೇಳೆಯಾಗಿರುವುದರಿಂದ ನಿಮಗೆ ಏನಾಗಬೇಕಾಗಿದೆ ಎನ್ನುವುದನ್ನು ದಯಮಾಡಿ ನೇರವಾಗಿ ಮಾನ್ಯ ಸಚಿವರನ್ನು ಕೇಳಿ.

**ಶ್ರೀ ಸೋಮಣ್ಣ ಮ.ಬೇವಿನ ಮರದ:-** ಮಾನ್ಯ ಸಭಾಪತಿಯವರೆ, ಇದು ಬಹಳ ಮಹತ್ವದ ಪ್ರಶ್ನೆ ಇದೆ. ಕೈ ಮುಗಿದು ಕೇಳಿಕೊಳ್ಳುತ್ತಿದ್ದೇನೆ. ತಾವು ಇದಕ್ಕೆ ಸಹಕಾರವನ್ನು ಕೊಡಬೇಕು.

**ಉಪಸಭಾಪತಿಯವರು:-** ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಮಾನ್ಯ ಕಂದಾಯ ಸಚಿವರ ಪಕ್ಕದಲ್ಲಿ ಆ ಕ್ಷೇತ್ರದ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಕುಳಿತುಕೊಂಡಿದ್ದಾರೆ. ನೀವು ಕೂಡ ಸಹಾಯವನ್ನು ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, 2000ದ ಇಸವಿಗೆ ಮುಂಚೆ ತಹಸೀಲ್ದಾರ್‌ರವರ ಕಛೇರಿಗೆ ಬೆಂಕಿ ಬಿದ್ದುಬಿಟ್ಟು ಎಲ್ಲಾ ದಾಖಲೆಗಳು ಸುಟ್ಟು ಹೋಗಿದೆ. ಮಾನ್ಯ ಕಂದಾಯ ಸಚಿವರು ಹೇಳುತ್ತಿರುವುದು ಸರಿ ಇದೆ. ಅವರು ಅದನ್ನು ಸರಿಪಡಿಸಲು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕೆ ಯಾವ ರೂಪದಲ್ಲಿ, ಯಾವ ರೀತಿಯಲ್ಲಿ ಮಾಡುತ್ತಾರೆ ಎನ್ನುವುದನ್ನು ಸ್ವಲ್ಪ ಸಮಾಧಾನದಿಂದ ಹೇಳಿ ಅದನ್ನು ಸರಿ ಮಾಡಿಸಿದರೆ ಸಾಕು ಅಷ್ಟೇ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಏಕೆಂದರೆ, ಮಿಸ್ಸಿಂಗ್ ಕಡತ ಇರುತ್ತದೆ ಮತ್ತೊಂದು ಇರುತ್ತದೆ. ಬಹಳ ವರ್ಷಗಳಿಂದ ನಮ್ಮ ಅಜ್ಜನಿಂದಲೋ, ಅಪ್ಪನಿಂದಲೋ ಖಾತೆಯಿಂದ ನನ್ನ ಹೆಸರಿಗೆ ಜಮೀನು ಬಂದಿರುತ್ತದೆ. ಅದಕ್ಕೆ ಟೈಟಲ್ ಡೀಡ್ ಏನಿರುತ್ತದೆ? ಏನೂ ಇರುವುದಿಲ್ಲ. ಅದಕ್ಕೆ ಅಧಿಕೃತವಾಗಿ ಆರ್.ಟಿ.ಸಿ. ಗಿಂತಲೂ ಮುಂಚೆ ಕಂದಾಯವನ್ನು ಪಾವತಿ ಮಾಡಿರುವಂಥದ್ದು ಇರುತ್ತದೆ. ಅದೇ ಸುಟ್ಟು ಹೋಗಿರುತ್ತದೆ.

. . . ಮುಂದು

**(716)14-6-2017 MM-AK 01.10**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) (ಮುಂದು):-**

ಅಲ್ಲಿ ಒಂದು ಅಧಿಕೃತವಾದ ಮ್ಯೂಟೇಶನ್ ರಿಜಿಸ್ಟರ್ ಇರುತ್ತದೆ. ಅದು ಸುಟ್ಟು ಹೋಗಿರುತ್ತದೆ. ಅಂದರೆ ಟೈಟಲ್‌ಗೆ ಸರಿಯಾಗಿ, ಹೊಸದಾಗಿ ಎಲ್ಲಾ ದಾಖಲೆಗಳನ್ನು ನಿರ್ಮಿಸಬೇಕಾಗುತ್ತದೆ. ಇದು ಕಷ್ಟ. ಇಂತಹ ಸನ್ನಿವೇಶ ನಮ್ಮ ಅಧಿಕಾರಿಗಳಿಗೆ ಸಿಕ್ಕಿಬಿಟ್ಟರೆ ಪರಿಸ್ಥಿತಿಯನ್ನು ಹೇಳುವ ಹಾಗಿಲ್ಲ. ಇದು ನನಗೆ ಸ್ವತಃ ಗೊತ್ತಿದೆ. ಆದರೆ ಜಿಲ್ಲಾಧಿಕಾರಿಗಳು ಇಷ್ಟು ದಿವಸಗಳಾದರೂ ಸರಿಪಡಿಸದೇ ಇರುವುದು ಸರಿಯಲ್ಲ. ವಾಸ್ತವಿಕವಾಗಿ ಜಿಲ್ಲಾಧಿಕಾರಿಗಳು ತಕ್ಷಣ ಆ ಊರಿಗೆ ಭೇಟಿ ಕೊಟ್ಟು ಏನೇನು ವ್ಯವಸ್ಥೆಯಾಗಬೇಕೋ, ದಾಖಲೆಗಳನ್ನು ಯಾವ ರೀತಿಯಾಗಿ build up ಮಾಡಬೇಕೋ ಅದೆಲ್ಲವನ್ನೂ ಮಾಡಬೇಕು. Inam Abolition Act ಜಾರಿಗೆ ಬಂದಾಗ ಹಕ್ಕುಪತ್ರ ಕೊಡುವಂತಹ ಕೆಲಸವನ್ನು ಮಾಡುವಾಗ ಮೊದಲು ಅರ್ಜಿಯನ್ನು ತೆಗೆದುಕೊಂಡು ಎಲ್ಲವನ್ನೂ ಪರಿಶೀಲನೆ ಮಾಡಿ, ಅವರು ಸ್ವಾಧೀನತೆಯಲ್ಲಿದ್ದಾರೆ ಎನ್ನುವುದನ್ನು ನೋಡಿಕೊಂಡು, ಅಲ್ಲಿ ಮಹಜರು, ವಗೈರೆ ಮಾಡಬೇಕಾಗುತ್ತದೆ. ಇದು ಬಹಳ ದೊಡ್ಡ ಕೆಲಸವಿದೆ. ಈ ಸಂದರ್ಭದಲ್ಲಿ ನಿಮ್ಮ ಭೂಮಿಯ ಹಕ್ಕು ಟೈಟಲ್ ನನಗೆ ಬರಬಹುದು ಅಥವಾ ನನ್ನ ಭೂಮಿಯ ಹಕ್ಕು ಬೇರೊಬ್ಬರಿಗೆ ಹೋಗಬಹುದಾದಂತಹ ಸನ್ನಿವೇಶ ಇರುತ್ತದೆ. ಆದ್ದರಿಂದ ನಾವೆಲ್ಲರೂ ಸೇರಿ ಇದನ್ನು ಶೀಘ್ರಗತಿಯಲ್ಲಿ ಯಥಾಸ್ಥಿತಿಗೆ ತರುವಂತಹ ಕೆಲಸ ಮಾಡಬೇಕಾಗಿದೆ. ಈ ರೀತಿ ಅನೇಕ ಕಡೆ ಆಗಿಲ್ಲ ಮೊದಲ ಬಾರಿ ಇಂತಹ ಸನ್ನಿವೇಶ ಅಲ್ಲಿ ಬಂದಿದೆ. ಇದನ್ನು ಖಂಡಿತವಾಗಿ ನಾವು ನೀವೆಲ್ಲಾ ಸೇರಿ ದುರಸ್ತಿಪಡಿಸುವ ಕೆಲಸವನ್ನು ಶೀಘ್ರಗತಿಯಲ್ಲಿ ಮಾಡೋಣ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಮತ್ತೊಂದು ವಿನಂತಿ ಇದೆ. Link document ಎಂದರೆ ಏನು?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, link document ಅಂದರೆ, ಒಂದು ಜಮೀನು ಒಬ್ಬರಿಗೆ ಮಂಜೂರಾಗಿರುತ್ತದೆ ಎಂದಿಟ್ಟುಕೊಂಡರೆ, ಅದರ ಸಾಗುವಳಿ ಚೀಟಿ ಅವರ ಹೆಸರಿನಲ್ಲಿರುತ್ತದೆ. ಆ ಸಾಗುವಳಿ ಚೀಟಿಯನ್ನು ಕೊಟ್ಟರೆ ಅದು ಲಿಂಕ್ ಆಗುತ್ತದೆ. ನಾನು ಆಗಲೇ ಹೇಳಿದಂತೆ ನಿಮ್ಮ ಅಜ್ಜನ ಕಾಲದಲ್ಲಿ ಒಂದು ಭೂಮಿಯ ಹಕ್ಕು ಅವರ ಹೆಸರಿನಲ್ಲಿರುತ್ತದೆ. ಅಜ್ಜ ತೀರಿ ಹೋದ ನಂತರ ಅದು ಅಪ್ಪನಿಗೆ ಬರುತ್ತದೆ. ಅಪ್ಪನ ನಂತರ ಮಗನಿಗೆ ಬರುತ್ತದೆ. Link document ನಮ್ಮ ಬಳಿ ಎಲ್ಲಿರುತ್ತದೆ? ಆರ್.ಟಿ.ಸಿ. ಇರುತ್ತದೆಯೇ? ಏನೂ ಇರುವುದಿಲ್ಲ. ಬರೀ ಕಂದಾಯದ ಪಟ್ಟ ಇರುತ್ತದೆ. ಬಾಕಿಯದ್ದೆಲ್ಲಾ ಇರುವುದಿಲ್ಲ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ರೈತರ ಕಡೆ ಮೂಲ ದಾಖಲಾತಿಗಳ ಪ್ರತಿ ಇದ್ದು ಅವನೇ ಎಲ್ಲಾ ಕಾಗದಪತ್ರಗಳನ್ನು ತಹಸೀಲ್ದಾರ್‌ರವರಿಗೆ ಕೊಟ್ಟು ಕೊಡಿ ಎಂದರೆ, ಇವು ನಿನ್ನ ಕಡೆ ಇರಬಹುದು, ಆದರೆ ನನ್ನ ಕಡೆ ಇಲ್ಲ, ನಾನು ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ, ರೈತರಲ್ಲಿರುವ ಹಿಂದಿನ ತಹಸೀಲ್ದಾರ್, ಎ.ಸಿ., ಡಿ.ಸಿಯವರುಗಳು ಕೊಟ್ಟ ಮೂಲ ದಾಖಲೆಗಳು ಇದ್ದರೆ ಅದರ ಪ್ರಕಾರ ಅವರ ದಾಖಲೆಗಳನ್ನು ಕೊಡುವುದಕ್ಕೆ ಯಾವುದೇ ತೊಂದರೆಯಿಲ್ಲ ಎನ್ನುವ ಆದೇಶವನ್ನು ತಕ್ಷಣವೇ ಮಾಡಿಸಿ. ಇದರ ಸಲುವಾಗಿ ಇಲ್ಲಿಯೇ ಇರುವ ಉಸ್ತುವಾರಿ ಸಚಿವರು ಹಾವೇರಿಗೆ ಬಂದು ಅಥವಾ ಅವರನ್ನು ಇಲ್ಲಿಯೇ ಕರೆದು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ? ಇಂತಹ ದಿನವೇ ಮಾಡಿ ಎಂದು ನಾನು ಹೇಳುವುದಿಲ್ಲ. ಮಾನ್ಯ ಸಚಿವರು ಹಿರಿಯರು ಹಾಗು ಅನುಭವಸ್ಥರಾಗಿರುವುದರಿಂದ ಸಭೆ ಕರೆದಾಗ ನಮಗೊಂದು ಅವಕಾಶವನ್ನು ಕೊಟ್ಟರೆ, ನಾವು ಬಂದು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡುತ್ತೇವೆ. ಇಲ್ಲಿ ನಾಲ್ಕು ತಾಲ್ಲೂಕುಗಳ ಸಮಸ್ಯೆ ಇದೆ. ಆದ್ದರಿಂದ ದಯಮಾಡಿ ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಇದನ್ನು ಒಂದು ಕೋರ್ಟ್‌ನ ರೂಪದಲ್ಲಿ ತನಿಖೆ ನಡೆಸಬೇಕು. ಆ ತಹಸೀಲ್ದಾರರು ಮಾಡಿದಂತಹ ತೀರ್ಮಾನ ಒಂದು ಆಜ್ಞೆಯ ರೂಪದಲ್ಲಿ ಇರಬೇಕು. ಆ ರೀತಿ ಇದ್ದಾಗ ಮಾತ್ರ ಅದರಲ್ಲಿ ಏನಾದರೂ ವ್ಯತ್ಯಾಸವಾದರೆ ಮುಂದೆ ಅಪೀಲು ಹೋಗುವುದಕ್ಕೆ ಅವಕಾಶ ಇರುತ್ತದೆ. ಇದರ ಸಾಧಕ-ಬಾಧಕಗಳು ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಮಾನ್ಯ ಸದಸ್ಯರ ನಿಮ್ಮ ಅನುಮಾನ-ಅಂಜಿಕೆಗೆ ಪರಿಹಾರವನ್ನು ನಾವು ನೀವು ಸೇರಿ ಮಾಡೋಣ. ಇಂತಹ ಘಟನೆ ಬೇರೆ ಎಲ್ಲಿಯೂ ನಡೆದಿಲ್ಲ, ಆದರೆ ಅಲ್ಲಿ ನಡೆದಿದೆ. ನಾವು-ನೀವೆಲ್ಲರೂ ಒಗ್ಗೂಡಿ,

ಜೊತೆಗೆ ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್ಲರೂ ಸೇರಿ ಒಂದು ನ್ಯಾಯಾಲಯದ ರೂಪದಲ್ಲಿ ಮಾಡಿ, ಅದನ್ನು ಬಗೆಹರಿಸುವ ಕೆಲಸವನ್ನು ವಿಳಂಬವಿಲ್ಲದೇ ಮಾಡೋಣ.

**ಚುಕ್ಕೆ ಪ್ರಶ್ನೆ ಸಂಖ್ಯೆ: 3042**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯೇನೆಂದರೆ, 2016–17ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ವ್ಯಾಪ್ತಿಯಲ್ಲಿ ಬರುವ ಸಿಂಗನಾಯಕನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮಾದಪ್ಪನಹಳ್ಳಿಯ ಸರ್ವೆ ನಂ.9ರಲ್ಲಿ 18 ಎಕರೆ 38 ಗುಂಟೆಯನ್ನು ನಕಲಿ ದಾಖಲೆ ಸೃಷ್ಟಿ ಮಾಡಿ ಅದಕ್ಕೆ ಖಾತೆಯನ್ನು ಮಾಡಿಕೊಟ್ಟಿರುವುದರ ಬಗ್ಗೆ ನನ್ನ ಪ್ರಶ್ನೆ ಹಾಕಿದ್ದೆ. ಅದಕ್ಕೆ ಮಾನ್ಯ ಸಚಿವರು ಸಾರಾಸಗಟಾಗಿ ಅದು ಕಂಡು ಬಂದಿಲ್ಲವೆಂದು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಜಮೀನಿಗೆ ಮತ್ತೆ 32 ನಕಲಿ ದಾಖಲೆಗಳು ಇವೆ ಆದರೆ ಅದು 32 ಅಲ್ಲ ಮತ್ತೆರಡು ನಕಲಿ ದಾಖಲೆಗಳು ಆಗಿದೆ. ಅದಕ್ಕೆ ಅವರು ಆ ರೀತಿ ಕಂಡು ಬಂದಿಲ್ಲ ಎಂದು ಹೇಳಿದ್ದಾರೆ. ದಾಖಲೆಗಳ ಪ್ರಕಾರವಾಗಿ ಅವರು ಕೊಟ್ಟಿರುವುದು ಮತ್ತು ಅಧಿಕಾರಿಗಳು ಕೊಟ್ಟಿರುವುದು ಸರಿಯಾಗಿದೆ ಎಂದು ಭಾವಿಸುತ್ತೇನೆ. ಆದರೆ ನನ್ನ ಪ್ರಶ್ನೆ ಏನೆಂದರೆ, ನಿಜವಾಗಿಯು ಸರ್ಕಾರಿ ಜಾಗಕ್ಕೆ ನಕಲಿ ದಾಖಲೆ ಸೃಷ್ಟಿಯಾಗಿರುವುದು ಸತ್ಯ. ನಿಮ್ಮಂತಹ ಒಬ್ಬ ಪ್ರಮಾಣಿಕ, ದಕ್ಷ ಮಂತ್ರಿಗಳು ಈ ಇಲಾಖೆಯಲ್ಲಿದ್ದು ಇಂತಹ ಇಲಾಖೆಯಲ್ಲಿ ಈ ರೀತಿ ಆಗಬಾರದು. ನಿಮ್ಮ ಹೇಳಿಕೆಗಳನ್ನು ನೋಡಿ ನಾವು ಕಲಿಯುತ್ತಿದ್ದೇವೆ. ಸರ್ಕಾರಿ ಜಾಗಗಳು ಎಲ್ಲೆಲ್ಲಿ ಒತ್ತುವರಿಯಾಗಿದೆಯೋ ಅದನ್ನು ಯಾವುದೇ ಕಾರಣಕ್ಕೂ ಎಷ್ಟೇ ದೊಡ್ಡ ಭೂಗಳ್ಳರಾಗಿದ್ದರು ಕೂಡ ಅವರ ಕೈವಶವಾಗುವುದಕ್ಕೆ ಬಿಡದೇ ಮತ್ತೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ಸಚಿವರು ಮಾಡುತ್ತಿದ್ದಾರೆ. ಆದರೆ ದಯಮಾಡಿ ತಾವು ಈ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಉದಾಹರಣೆಗೆ ಬಾಲಕೃಷ್ಣಮೂರ್ತಿ ಎನ್ನುವ ಒಬ್ಬ ಅಧಿಕಾರಿ ತೆರಿಗೆ ಸಂಗ್ರಹಕಾರರಾಗಿದ್ದರು, ತದನಂತರ ರೆವಿನ್ಯೂ ಇನ್ಸ್‌ಪೆಕ್ಟರ್ ಆದರು. ಈಗ ಅವರು ಉಪ ತಹಸೀಲ್ದಾರ್ ಆಗಿ ಒಂದೇ ಜಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಎಲ್ಲೆಲ್ಲಿ ಸರ್ಕಾರಿ ಜಾಗಗಳಿವೆ ಎಂದು ಎನ್ನುವುದಿದೆಯೋ ಇಂತಹವುಗಳನ್ನೆಲ್ಲಾ ಕಲೆ ಹಾಕುತ್ತಾರೆ. ನನ್ನ ಮತ್ತೊಂದು ಪ್ರಶ್ನೆಗೂ ಮಾನ್ಯ ಸಚಿವರು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ದಾಖಲೆಗಳು ಸಿಗುವುದಿಲ್ಲ ಎಂದು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಆ ಅಧಿಕಾರಿಯು ಈ ದಾಖಲೆಗಳನ್ನು ಮನೆಗೆ ತೆಗೆದುಕೊಂಡು ಹೋಗಿರುವುದರಿಂದ ಆ ಕಡತಗಳು ಎಲ್ಲಿಯೂ ಸಿಗುತ್ತಿಲ್ಲ ಮತ್ತು ಸರ್ಕಾರದ ವಶದಲ್ಲಿಲ್ಲ. ಹಳೆಯ ದಿನಾಂಕದಲ್ಲಿ ಅರ್ಜಿಗಳನ್ನು ಪಡೆದುಕೊಂಡು ಅವರಿಗೆ ಮಂಜೂರು ಮಾಡಿದ ಬೇರೆ ಮಾಲೀಕನನ್ನು ಹುಟ್ಟುಹಾಕುವ ಮುಖಾಂತರ,

ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡುತ್ತಾರೆ. ಈ ರೀತಿಯಾಗಿ ಬಹಳಷ್ಟು ಸರ್ಕಾರಿ ಜಾಗಗಳು ಇವತ್ತಿನ ದಿವಸ ಭೂಗಳ್ಳರ ಕೈವಶವಾಗುತ್ತಿದೆ. ಈ ಅಧಿಕಾರಿ ಯಾರು ಭೂಗಳ್ಳರಿದ್ದಾರೆ, ಇವರ ಹೆಂಡತಿ ಹೆಸರಿನಲ್ಲಿ, ಬೇನಾಮಿ ಹೆಸರಿನಲ್ಲಿ ಭಾಗಿಯಾಗಿರುವ ಎಲ್ಲಾ ದಾಖಲೆಗಳು ನನ್ನ ಬಳಿ ಇದೆ. ಮಾನ್ಯ ಸಚಿವರು ನನಗೆ ಅವಕಾಶವನ್ನು ಕೊಟ್ಟರೆ ನೇರವಾಗಿ ಅವರ ಕಛೇರಿ ಅಥವಾ ಅವರ ಮನೆಗೆ ಹೋಗಿ ಎಲ್ಲಾ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ಕೊಡುತ್ತೇನೆ. ನನ್ನ ಕಳಕಳಿ ಏನೆಂದರೆ, ಸರ್ಕಾರಿ ಜಾಗದಲ್ಲಿ ಬಡವರಿಗೆ ಸೈಟ್ ಕೊಡುವುದಕ್ಕೆ ಆಗುತ್ತಿಲ್ಲ. ಶಾಲೆಗಳನ್ನು ಕಟ್ಟಲು ಜಾಗವಿಲ್ಲ, ಪಂಚಾಯಿತಿ ಕಛೇರಿಗಳನ್ನು ಕಟ್ಟುವುದಕ್ಕೆ ಜಾಗವಿಲ್ಲ. ಅದಕ್ಕೋಸ್ಕರವಾಗಿ ಸರ್ಕಾರಿ ಜಾಗಗಳನ್ನು ಉಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ತಾವು ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನಗಳಿಗೆ ಸಂಪೂರ್ಣವಾದ ಮಾಹಿತಿಗಳನ್ನು ಕೊಡುತ್ತೇನೆ. ಸರಿಯಾದ ಕಾನೂನಿನ ರೀತಿಯಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊಂದಿರುವ ಕಾಳಜಿಯನ್ನು ಮೆಚ್ಚುತ್ತೇನೆ. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರಗಳು ಬಂದ ನಂತರ ನೋಡಿದ ಮೇಲೆ ಇಲ್ಲಿ ಹೇಗೆ ನಡೆದಿರಬಹುದು ಎಂದು ಅರ್ಥವಾಗಿದೆ. ಬೆಂಗಳೂರಿನ ಸುತ್ತಮುತ್ತ ಅಷ್ಟು ಪ್ರಮಾಣದಲ್ಲಿ ಪಥಾ 1954ನೇ ಇಸವಿಯಲ್ಲಿರುವುದು. 2010ರಲ್ಲಿ ಕಂದಾಯ ಕಟ್ಟಿಸಿಕೊಂಡು ಮತ್ತೆ restore ಮಾಡುತ್ತಾರೆಂದರೆ ಇದಕ್ಕೆ ಏನರ್ಥ? ಅಂದರೆ ಇದರಲ್ಲಿ ಎಷ್ಟು ಅವ್ಯವಸ್ಥೆ ನಡೆದಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಇದರಲ್ಲಿ ಇನ್ನೊಂದು ಜಮೀನಿನದ್ದು ಕೂಡ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಪೆಂಡಿಂಗ್ ಇದೆ. ಮಾನ್ಯ ಸದಸ್ಯರು ನಮಗೆ ಸಲಹೆ ಕೊಟ್ಟಿರುವ ಹಾಗೆ ಅವರ ಜೊತೆಯಲ್ಲಿ ಕುಳಿತುಕೊಂಡು ಇದರ ಶೋಧನೆಯನ್ನು ಖಂಡಿತ ಮಾಡುತ್ತೇನೆ. ಅದಕ್ಕೆ ಮಾನ್ಯ ಸದಸ್ಯರು ನನಗೆ ಸಹಕರಿಸಬೇಕು. ಬೆಂಗಳೂರಿನಲ್ಲಿರುವ ಶಾಸಕರು ಇಂತಹವುಗಳಿಗೆ ಸಹಕಾರ ನೀಡಿದರೆ ಅನೇಕ ಕುರಿಗಳನ್ನು, ತಿಮಿಂಗಿಲಗಳನ್ನು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ವ್ಯವಹಾರದಲ್ಲಿ ನನಗೂ ಕೂಡ ಸಮಾಧಾನವಿಲ್ಲ. ಅನ್ಯಾಯವಾಗಿದೆ. ಸರ್ಕಾರದ ಭೂಮಿಯನ್ನು ನುಂಗುವುದಕ್ಕೆ ಎಷ್ಟು ಕೆಲಸ ಮಾಡಬೇಕೋ ಅಷ್ಟು ಕೆಲಸ ಮಾಡಿದ್ದಾರೆ. ಈ ಪ್ರಕರಣದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಇಂತಹ ಪ್ರಕರಣ ಎಷ್ಟು ನಡೆದಿದೆ ಎನ್ನುವುದನ್ನು ಶೋಧನೆ ಮಾಡಿ ಕೆಲವು ತಪ್ಪಿತಸ್ಥರನ್ನು ಪತ್ತೆ ಹಚ್ಚುವ ಕೆಲಸವನ್ನು ಮಾಡುತ್ತೇನೆ. ಮೊನ್ನೆ ಹೋಗಿ ಎಲ್ಲವನ್ನೂ ನೋಡಿಕೊಂಡು ಬಂದಿರುವಂತೆ ಸರ್ಕಾರಿ ಜಾಗದಲ್ಲಿ ಲೇಔಟ್ ಮಾಡಿಬಿಟ್ಟಿದ್ದಾರೆ. ಯಾರೂ ನೋಡುವವರು, ಕೇಳುವವರಿಲ್ಲ ಆ ಸ್ಥಿತಿ ಆಗಿದೆ. ಈಗ ಜಿಲ್ಲಾಧಿಕಾರಿಯೊಬ್ಬರು ಬಂದು ಅವರನ್ನು ಜೈಲಿಗೆ ಕಳುಹಿಸಿದ್ದರು. ಈಗ ಅವರನ್ನು ಬೇಲ್ ಕೊಟ್ಟು ಬಿಡಿಸಿಕೊಂಡು ಬಂದಿದ್ದಾರೆ. ಹಾಗಾಗಿ ಇಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ನನಗೂ ಬೇಸರವಿದೆ ಇದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತದಲ್ಲಿ ನಡೆಯಬಾರದು. ಮಾನ್ಯ ಸದಸ್ಯರ ಸಹಕಾರವನ್ನು ಪಡೆದು ಇದನ್ನು ಪತ್ತೆ ಹಚ್ಚುವ ಕೆಲಸವನ್ನು ಖಂಡಿತವಾಗಿಯು ಮಾಡುತ್ತೇನೆ.

**ಉಪಸಭಾಪತಿಯವರು:-** ಧನ್ಯವಾದಗಳು. (ಮುಂದು)

(717) 14-6-2017/1.20/ಡಿಎಸ್-ಆರ್‌ಎನ್

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅಧಿಕಾರಿಯ ಹೆಸರನ್ನು ಹೇಳಿದ್ದೇನೆ. ಯಾರಾದರೊಬ್ಬರಿಗೆ ಚಾಟಿ ಬೀಸದಿದ್ದರೆ ಇದು ನಿರಂತರವಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ಆ ಅಧಿಕಾರಿಯ ವಿರುದ್ಧ ಶೀಘ್ರವಾಗಿ ಕಾನೂನು ಕ್ರಮ ಕೈಗೊಳ್ಳಬೇಕು. ಅದೇ ರೀತಿಯಾಗಿ ಸರ್ವೆ ನಂಬರ್-21 ರಲ್ಲಿ 70 ಎಕರೆ ಸರ್ಕಾರಿ ಜಮೀನು ಎಂದು ಘೋಷಣೆಯಾಗಿದ್ದರೂ ಕೂಡ, ಡಿ.ಸಿ.ಯವರು ಸರ್ಕಾರಿ ಜಾಗವೆಂದು ಹೇಳಿದ್ದಾರೆ. ಆದರೆ ಗಂಗಭೈರಯ್ಯ ಎನ್ನತಕ್ಕಂಥವರು ಹಾಗೂ ಇನ್ನು ಹಲವಾರು ಜನರು ಆ ಜಮೀನನ್ನು ಮಂಜೂರು ಮಾಡಬೇಕೆಂದು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಇದು status-quo maintain ಮಾಡಬೇಕೆಂದು ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇದೆ. Status-quo maintain ಮಾಡಿ ಎಂದರೆ, ಯಾರು ಈಗ ಭೂಗಳ್ಳರು ಒತ್ತುವರಿ ಮಾಡಿಕೊಂಡಿದ್ದಾರೆಯೋ ಅವರ ಸ್ವಾಧೀನದಲ್ಲಿರಬೇಕೆಂದೇ ಅಥವಾ ಸರ್ಕಾರದ ಸ್ವಾಧೀನದಲ್ಲಿರಬೇಕು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಕೆಲವು ವಿಷಯಗಳ ಬಗ್ಗೆ ನಾನು ಸಂಶೋಧನೆ ಮಾಡದೆ ನೇರವಾಗಿ ಹೇಳುವುದು ಕಷ್ಟಕರವಾಗಿದೆ. ಏಕೆಂದರೆ ಸರ್ವೆ ನಂ.23 ರಲ್ಲಿ 79 ಎಕರೆ ಜಮೀನು ಇದ್ದು, ಅದು ಸರ್ಕಾರಿ ಗೋಮಾಳದ ಜಮೀನಾಗಿದ್ದು, 'ಬಿ' ಖರಾಬಿನಲ್ಲಿರುತ್ತದೆ. ಹಾಗಾಗಿ ಇದರಲ್ಲಿ ಅನೇಕ ಲೋಪಗಳಿವೆ. ಕಾನೂನು ಉಲ್ಲಂಘನೆಯಾಗಿದೆ. ಇದನ್ನು ಕಂಡುಹಿಡಿಯಬೇಕಾದ ಅಗತ್ಯ ಇದೆ. ನಾನು ಖಂಡಿತವಾಗಿಯೂ ಮಾನ್ಯ ಸದಸ್ಯರ ಸಹಕಾರ ಪಡೆದು ಆ ಕೆಲಸ ಮಾಡುತ್ತೇನೆ ಎನ್ನುವ ಭರವಸೆಯನ್ನು ಈ ಸದನಕ್ಕೆ ನೀಡುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಪ್ರಶ್ನೆ ಸಂಖ್ಯೆ:2253

ಉತ್ತರ ಲಗತ್ತಿಸಲಾಗಿದೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಯಲ್ಲಿ 5,94,000 ಹೆಕ್ಟೇರ್‌ಗೆ ನೀರಾವರಿ ಒದಗಿಸುವ ಉದ್ದೇಶವನ್ನಿಟ್ಟುಕೊಂಡು ಈ ಯೋಜನೆಯನ್ನು ಮಾಡಿದ್ದಾರೆ. ನನ್ನ ಪ್ರಶ್ನೆಗೆ ಮಾನ್ಯ ಸಚಿವರು 'ಭೂಸ್ವಾಧೀನತೆ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳ ಅನುಷ್ಠಾನಕ್ಕಾಗಿ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಅಂದಾಜಿಸಲಾದ ಮೊತ್ತ 30,143,17 ಕೋಟಿ ರೂಪಾಯಿಗಳಾಗಿರುತ್ತದೆ' ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಈ ಯೋಜನೆ ಪ್ರಾರಂಭವಾದ ಪ್ರಥಮ ಹಂತದಲ್ಲಿ land notification ಮಾಡಬೇಕೆಂದು ಏನು assess ಮಾಡಿದ್ದಾರೆಯೋ, ಅದೇ ರೀತಿಯ ಭೂಮಿಗೆ ಕೊಟ್ಟಂಥ ಅಲೋಕೇಶನ್ 6,592 ಕೋಟಿ ರೂಪಾಯಿಗಳು. ತದನಂತರ ಭೂಸ್ವಾಧೀನ ಪ್ರಕ್ರಿಯೆಗೆ ಹಣವನ್ನು enhance ಮಾಡಿ, 20,465 ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಬಂದರು. ಈಗ ಅದು 30,143,17 ಕೋಟಿ ರೂಪಾಯಿಗಳಾಗಿರುತ್ತದೆ ಎಂದು ಹೇಳಿದ್ದಾರೆ. ಇವೆಲ್ಲಕ್ಕಿಂತ ಬಹಳ ವಿಪರ್ಯಾಸವೇನೆಂದರೆ, ಇವರು ಒಟ್ಟು ಐಡೆಂಟಿಫೈ ಮಾಡಿರುವಂತಹ ಭೂಮಿ 1,33,867 ಎಕರೆ. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನು 75,563 ಎಕರೆ, ಸ್ಥಳಾಂತರಕ್ಕಾಗಿ 6,467 ಎಕರೆ, ಆದರೆ 13,541 ಎಕರೆಗೆ ಮಾತ್ರ ಅವಾರ್ಡ್ ಮಾಡಲಾಗಿದೆ ಎನ್ನುವ ಮಾತನ್ನು ಹೇಳುತ್ತಾರೆ. 2012 ರಲ್ಲಿ ಪ್ರಾರಂಭವಾದಂತಹ ಯೋಜನೆಗೆ ಶೇಕಡ 10 ರಷ್ಟು ಮಾತ್ರ ಪರಿಹಾರವನ್ನು ಕೊಟ್ಟಿರುವಂಥದ್ದು. ಇನ್ನೂ award process ನಲ್ಲಿ ಇರುವಂಥದ್ದು 48,606 ಎಕರೆ, ಅಂದರೆ ಶೇಕಡ 90 ರಷ್ಟು ಭೂಮಿಗೆ ಇವತ್ತಿನವರೆಗೂ ಈ ಸರ್ಕಾರಕ್ಕೆ ಅವಾರ್ಡ್ ಮಾಡಿ ಹಣ ಪಾವತಿ ಮಾಡುವುದಕ್ಕಾಗಿಲ್ಲ. ಅಂದರೆ, ಸರ್ಕಾರದ ನಿಧಾನ ಗತಿಯಿಂದ ಅವತ್ತಿನ ದಿವಸ 6,000 ಕೋಟಿ ರೂಪಾಯಿಗಳಿದ್ದ ಭೂಮಿಯ ಬೆಲೆ ಇವತ್ತು 30 ಸಾವಿರ ಕೋಟಿಗೆ ಹೋಗಿದೆ.

ನನ್ನ ಎರಡನೆ ಪ್ರಶ್ನೆಗೆ 7 ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಮಾನ್ಯ ಸಚಿವರು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ನನಗಿರುವ ಮಾಹಿತಿ ಪ್ರಕಾರ ಅಲ್ಲಿರುವಂಥದ್ದು 9 ಏತ ನೀರಾವರಿ ಯೋಜನೆಗಳು. ಅಂದರೆ ಸದನಕ್ಕೆ ಉದ್ದೇಶ ಪೂರ್ವಕವಾಗಿಯೇ ಸರ್ಕಾರ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆಯೋ ಅಥವಾ ಯಾವ ಕಾರಣಕ್ಕಾಗಿ ಈ ರೀತಿಯ ಮಾಹಿತಿಯನ್ನು ಕೊಟ್ಟಿದ್ದಾರೆಂದು ಮಾನ್ಯ ಸಚಿವರು ತಿಳಿಸಬೇಕು. ಇವತ್ತು ಬೆಳಿಗ್ಗೆ ಮಾನ್ಯ ಮಹಾಂತೇಶ್ ಕವಟಗಿಮಠರವರು ಕೇಳಿದ ಪ್ರಶ್ನೆಗೆ 9 ಯೋಜನೆಗಳಿವೆ ಎಂದು ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ ಪ್ರಶ್ನೆಗೆ 7 ಏತ ನೀರಾವರಿ ಯೋಜನೆಗಳು ಬರುತ್ತವೆಂದು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಯಲ್ಲಿ ಪ್ರಮುಖವಾಗಿರುವಂತಹ ಭೀಮಾ ಏತ ನೀರಾವರಿ ಯೋಜನೆ ಮತ್ತು

ನಾರಾಯಣಪುರ ಬಲದಂಡೆ ಕಾಲುವೆ ಯೋಜನೆಯನ್ನು ಕೈಬಿಟ್ಟಿದ್ದಾರೆ. ನನಗೆ ಏಕೆ ಮಾನ್ಯ ಸಚಿವರು ಈ ರೀತಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಅದೇ ಪ್ರಶ್ನೆಗೆ, ಒಟ್ಟಾರೆ ಯೋಜನೆಯ ಅಂದಾಜು ಮೊತ್ತ 7769.46 ಕೋಟಿ ರೂಪಾಯಿಗಳಾಗಲಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

**ಉಪಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರೇ, ತಾವು ನೇರವಾಗಿ ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಈ ಪೈಕಿ ಇದುವರೆವಿಗೂ ಯೋಜನೆಯಡಿ ಕೈಗೊಂಡಿರುವ 2 ಮುಖ್ಯ ಸ್ಥಾವರಗಳ ಹಾಗೂ consultancy ಕಾರ್ಯಕ್ಕಾಗಿ ಇದುವರೆವಿಗೂ ಒಟ್ಟು 1002.60 ಕೋಟಿ ವೆಚ್ಚ ಮಾಡಲಾಗಿರುತ್ತದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಅಂದರೆ, ಸರ್ಕಾರ ಏಕೆ ಈ ರೀತಿ ನಿಧಾನಗತಿ ಮಾಡುತ್ತಿದೆ?

ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದೇನೆ. ಆ ಪ್ರಶ್ನೆಗಳಿಗೆಲ್ಲಾ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಸಮಂಜಸವಾದ ಉತ್ತರವನ್ನು ಕೊಟ್ಟಿಲ್ಲ.

**ಉಪಸಭಾಪತಿಯವರು:-** ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಎಷ್ಟು ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗಿದೆ ಎನ್ನುವ ಮೂರನೇ ಪ್ರಶ್ನೆಗೆ ಇನ್ನು 129 ಕಾಮಗಾರಿಗಳು ಬಾಕಿ ಉಳಿದಿವೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಅಂದರೆ ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾಗಿರುವಂತಹ ಕಾಮಗಾರಿಗಳಲ್ಲಿ ಶೇಕಡ 48 ರಿಂದ 49 ರಷ್ಟು ಕಾಮಗಾರಿಗಳನ್ನು ಕೂಡ ಇದುವರೆವಿಗೂ ಪೂರ್ಣಗೊಳಿಸುವುದಕ್ಕಾಗಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಸುಮ್ಮನೆ ಅಧಿಕಾರಿಗಳು ಅನುಮೋದನೆ ಕೊಡುತ್ತಾರೆ. ಮಾನ್ಯ ಸಚಿವರು ಕೊಟ್ಟಿರುವ ಮಾಹಿತಿ ಪ್ರಕಾರ ಭೂಸ್ವಾಧೀನಕ್ಕಾಗಿ 30,000 ಕೋಟಿ ರೂಪಾಯಿ ಕೊಟ್ಟಿರುವಂಥದ್ದು. ಇನ್ನು 28,536 ಕೋಟಿ ರೂಪಾಯಿಗಳನ್ನು ಆಡಳಿತಾತ್ಮಕ ವೆಚ್ಚ ಮತ್ತು ಭೂಸ್ವಾಧೀನ ಸೇರಿ ಇದುವರೆವಿಗೂ ಅನುದಾನ ಬಿಡುಗಡೆಯಾಗಿದೆ. ದಿನಾಂಕ:30-3-2017 ರವರೆಗೆ ಖರ್ಚಾಗಿರುವಂಥದ್ದು 6364 ಕೋಟಿ ರೂಪಾಯಿಗಳು ಮಾತ್ರ. ಎಲ್ಲಿ ವಿಫಲತೆಯಾಗುತ್ತಿದೆ? ಇದೇ ರೀತಿ ಯೋಜನೆಯನ್ನು

ತೆಗೆದುಕೊಂಡು ಹೋದರೆ 5,94,000 ಹೆಕ್ಟೇರ್ ಭೂಮಿಗೆ ನೀರನ್ನು ಕೊಡುತ್ತೇವೆನ್ನುವ ಮಾತನ್ನು ತಿಳಿಸಿದ್ದಾರೆ. ಅದನ್ನು ಪೂರ್ಣವಾಗಿ ಒದಗಿಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗುತ್ತದೆಯೇ?

ಸನ್ಮಾನ್ಯ ಮಹಾಂತೇಶ್ ಕವಟಗಿಮಠರವರಿಗೆ ಬೇರೊಂದು ಪ್ರಶ್ನೆಗೆ ಕೊಟ್ಟಿರುವ ಲಿಖಿತ ಉತ್ತರದಲ್ಲಿ ಒಂದು ಕಡೆ 5,93,000 ಹೆಕ್ಟೇರ್ ಎಂದು ಹೇಳುತ್ತಾರೆ. ಮತ್ತೊಂದು ಕಡೆ 5,94,000 ಹೆಕ್ಟೇರ್ ಎಂದು ಹೇಳಿದ್ದಾರೆ. ಅಂದರೆ ಸರ್ಕಾರದಲ್ಲಿ ನಿಖರವಾದ ಮಾಹಿತಿ ಇಲ್ಲ. ಈ ರೀತಿಯ ಯೋಜನೆಗಳನ್ನು ಕೈಗೊಂಡರೆ ಇದರಿಂದ ಪ್ರಯೋಜನ ಪಡೆಯುವುದು ಯಾರು ಎನ್ನುವುದು ನನ್ನ ಪ್ರಶ್ನೆ. ಈಗ 9 ಏತ ನೀರಾವರಿ ಯೋಜನೆಗಳಿವೆ. 12,77,878 ಹೆಕ್ಟೇರ್‌ಗೆ ಸರ್ಕಾರ ನೀರನ್ನು ಕೊಡಬೇಕಾಗಿತ್ತು. ಆದರೆ ದಿನಾಂಕ:30-3-2017 ಕ್ಕೆ 7,65,000 ಹೆಕ್ಟೇರ್ ಕೊಟ್ಟಿರುವಂಥದ್ದು. ಈ 9 ಏತ ನೀರಾವರಿ ಯೋಜನೆಗಳಲ್ಲಿ 4 ಏತ ನೀರಾವರಿ ಯೋಜನೆಗಳಲ್ಲಿ ಇದುವರೆಗೂ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇರುವುದಕ್ಕೆ ಕಾರಣ ಏನು ಮತ್ತು ಯಾರು ಇದಕ್ಕೆ ಜವಾಬ್ದಾರರು? 9 ಏತ ನೀರಾವರಿ ಯೋಜನೆಗಳನ್ನು ಘೋಷಣೆ ಮಾಡಿ ಕೃಷ್ಣಾ ಬಂಡೆದಂಡೆ ಯೋಜನೆ ಬಗ್ಗೆ ಎಷ್ಟು ಸಾಧನೆಗಳನ್ನು ಹೇಳುವುದಕ್ಕೆ ಹೊರಟಿದ್ದಾರೆಯೋ, ಅಷ್ಟೇ ವಿಫಲತೆಯನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಒಂದು ಕಡೆ ಅಲೋಕೇಶನ್ ಎಂದು ಹೇಳುತ್ತಾರೆ, ಒಂದು ಕಡೆ ಹಣ ಖರ್ಚಾಗಿಲ್ಲ ಎಂದು ಹೇಳುತ್ತಾರೆ, ಮತ್ತೊಂದು ಕಡೆ ನಾವು ಇಷ್ಟು ಎಕರೆ ಪ್ರದೇಶಕ್ಕೆ ನೀರು ಕೊಡುತ್ತೇವೆಂದು ಹೇಳುತ್ತಾರೆ. ಮತ್ತೊಂದು ಕಡೆ ಇನ್ನೂ ನೀರು ಕೊಟ್ಟಿಲ್ಲ ಎಂದು ಸರ್ಕಾರದ ಅಂಕಿ-ಅಂಶಗಳು ಹೇಳುತ್ತಿವೆ. ಹಾಗಾಗಿ ಸರ್ಕಾರ ಏನು ಯೋಜನೆಯನ್ನು ಹಾಕಿಕೊಂಡಿದೆ ಇದು ನಿಧಾನ ಗತಿಯಾಗುತ್ತಿರುವುದರಿಂದ ಯಾರ ಮೇಲೆ ಕ್ರಮ ಕೈಗೊಂಡಿದ್ದಾರೆನ್ನುವ ಮಾಹಿತಿಯನ್ನು ಮಾನ್ಯ ಸಚಿವರು ತಿಳಿಸಬೇಕು.

ನನ್ನ ಕೊನೆಯ ಪ್ರಶ್ನೆ, ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯಲ್ಲಿ ಗುತ್ತಿಗೆ ಕಾಮಗಾರಿ ಪಡೆದು, ಅವಧಿ ಮೀರಿದ್ದ ಪ್ರಕರಣಗಳಲ್ಲಿ ಎಷ್ಟು ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಾಗಿದೆ, ಇದರಿಂದ ನಿಗಮಕ್ಕೆ ಆಗಿರುವ ನಷ್ಟ ಎಷ್ಟು ಎಂದು ಕೇಳಿದ್ದೇನೆ. ಕಾಮಗಾರಿಗಳ ಗುತ್ತಿಗೆಯನ್ನು ಪಡೆದು ನಿಗದಿತ ಗುತ್ತಿಗೆ ಅವಧಿಯಲ್ಲಿ ಪೂರ್ಣಗೊಳಿಸದೇ ಅವಧಿ ಮೀರಿದ ಪ್ರಕರಣಗಳಲ್ಲಿ ಗುತ್ತಿಗೆ ಕರಾರುಗಳಡಿಯ ನಿಬಂಧನೆಗಳನ್ವಯ ಗುತ್ತಿಗೆದಾರರ ವತಿಯಿಂದ ವಿಳಂಬ ಕಂಡುಬಂದಲ್ಲಿ ಸೂಕ್ತ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಮತ್ತೆ ಇವರು ಕೊಟ್ಟಿರುವ ಮಾಹಿತಿಯ ಪ್ರಕಾರವೇ ಅಂತಹ ಪ್ರಕರಣ ಯಾವುದು ಇಲ್ಲ ಎಂದು ಹೇಳುತ್ತಿದ್ದಾರೆ. ವಿಸ್ತೃತ ಅವಧಿಯಲ್ಲಿ ಗುತ್ತಿಗೆದಾರರು ನಮೂದಿಸಿದ ಗುತ್ತಿಗೆ ದರಗಳನ್ವಯ ಬಾಕಿ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡುತ್ತಿರುವುದರಿಂದ ನಿಗಮಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ ಎಂದು ಲಿಖಿತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ

ಉತ್ತರದಲ್ಲಿ ತಿಳಿಸಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಸನ್ಮಾನ್ಯ ಜಲಸಂಪನ್ಮೂಲ ಸಚಿವರು ಹಿರಿಯರಿದ್ದಾರೆ; ಅವರು ಆ ಭಾಗದವರಿದ್ದಾರೆ. ಕೃಷ್ಣಾ ಜಲ ಭಾಗ್ಯದಲ್ಲಿ ಅವರಿಂದ ನಾವು ಹೆಚ್ಚು ನಿರೀಕ್ಷೆಯನ್ನಿಟ್ಟುಕೊಂಡಿದ್ದೇವೆ. ಸರ್ಕಾರಕ್ಕೆ ಬಂದಿರುವಂತಹ ಅನುಪಾಲನ ವರದಿಯಲ್ಲಿ ಈ ಗುತ್ತಿಗೆ ಕಾಮಗಾರಿಗಳಲ್ಲಿ ಅವ್ಯವಹಾರವಾಗಿದೆ, ಹಣ ಹೆಚ್ಚಿಗೆ ಪಾವತಿ ಮಾಡಲಾಗಿದ್ದು ಸರ್ಕಾರಕ್ಕೆ ನಷ್ಟವಾಗಿದೆ ಎನ್ನುವುದನ್ನು ಲೆಕ್ಕಪರಿಶೋಧಕರು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಅಂತಹ ಪ್ರಕರಣಗಳೇ ಇಲ್ಲ ಎಂದು ಸಚಿವರು ನೀಡಿರುವ ಲಿಖಿತ ಉತ್ತರದಲ್ಲಿ ಸದನಕ್ಕೆ ತಿಳಿಸಿದ್ದಾರೆ. ಈ ರೀತಿ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡಬಾರದು.

**ಉಪಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ಈ ರೀತಿ ಚರ್ಚೆ ಮಾಡಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವೇನಾದರೂ ಪ್ರಶ್ನೆ ಕೇಳಿದರೆ ತಾವು ಹತ್ತು ಸಲ ಮಧ್ಯ ಪ್ರವೇಶ ಮಾಡುತ್ತೀರಿ. ಇದರಲ್ಲಿ ಚರ್ಚೆ ಮಾಡುವುದು ಏನಿದೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಸಿಟ್ಟು ಬರುತ್ತದೆಂದು ಇವತ್ತೇ ನನಗೆ ಗೊತ್ತಾಗಿದ್ದು. ಅವರು ಸಭಾನಾಯಕರಾಗಿದ್ದಾಗಲೂ ಸಿಟ್ಟು ಬರಲಿಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಮೇಶ್‌ಬಾಬುರವರು ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಗುತ್ತಿಗೆದಾರರ ಬಗ್ಗೆ ಕೇಳಿರುವುದರಿಂದ ನಾನು ಉತ್ತರ ಕೊಡುವುದಕ್ಕೆ ಸಮಯವನ್ನು ಕೇಳಿದ್ದೆ. (ಮುಂದು)

(718) 14-06-2017/1-30/ ಕೆಹೆಚ್/ಆರ್‌ಎನ್

**ಶ್ರೀ ಎಂ.ಬಿ.ಪಾಟೀಲ್ (ಮುಂದು):-** ಮೊಟ್ಟ ಮೊದಲನೆಯದಾಗಿ ಇವರಲ್ಲಿ ಏನು ತಪ್ಪು ಕಲ್ಪನೆ ಇದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಿಂದಿನ ಸರ್ಕಾರದಲ್ಲಿ ಜಾಸ್ತಿ ವೆಚ್ಚವಾಗಿದೆ. ಪ್ರತಿ ಎಕರೆ ಭೂಸ್ವಾಧೀನಕ್ಕೆ 2.20 ಲಕ್ಷ ರೂಪಾಯಿಗಳಂತೆ ಹಿಂದಿನ ಸರ್ಕಾರ 2012ನೇ ಇಸವಿಯಲ್ಲಿ 17,207 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದಾರೆ. ಯು.ಪಿ.ಎ ಸರ್ಕಾರ 2013 ರಲ್ಲಿ ಭೂ ಸ್ವಾಧೀನ ಕಾಯ್ದೆಯನ್ನು ಜಾರಿಗೆ ತಂದರು. ಭೂ ಸ್ವಾಧೀನ ಕಾಯ್ದೆಯಲ್ಲಿ ನಾಲ್ಕು ಪಟ್ಟು + ಶೇಕಡಾ 100 ರಷ್ಟು solatium ಇದೆಲ್ಲವನ್ನು ಕೂಡಿದರೆ 2.20 ಲಕ್ಷ ರೂಪಾಯಿಗಳಿರುವುದು, ಈಗ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನಿಷ್ಠ ಪಕ್ಷ 10 ಲಕ್ಷ ರೂಪಾಯಿಗಳು ದಾಟುತ್ತದೆ. ಇದಾದ ಮೇಲೆ ಶ್ರೀ ನಿರಾಣಿಯವರು, ಶ್ರೀ ಯತ್ನಾಳ್‌ರವರೆಲ್ಲ ಮೊನ್ನೆಯ ದಿವಸ uniform rate ಕೊಡಬೇಕೆಂದು ಚರ್ಚೆ ಮಾಡಿದರು.

**ಉಪಸಭಾಪತಿಯವರು:–** ಮಾನ್ಯ ಸಚಿವರೆ . . . .

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಉಪ ಪ್ರಶ್ನೆಗಳಿಗೂ ನಾನು ಸಮರ್ಪಕವಾದ ಉತ್ತರವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ತಪ್ಪು ಮಾಹಿತಿ ಕಡತಕ್ಕೆ ಹೋಗುತ್ತದೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳುವಾಗ ನೀವೆಷ್ಟು ಸಮಯವನ್ನು ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಉತ್ತರವನ್ನು ನೀಡಲು ನನಗೂ ಸಮಯವನ್ನು ಕೊಡಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾವು ಸಮರ್ಪಕವಾಗಿ ಕೇಳಬೇಕು. ಸಚಿವರು ಸಮರ್ಪಕವಾಗಿ ಉತ್ತರವನ್ನು ಕೊಡಬೇಕು. ಒಂದೊಂದು ಪ್ರಶ್ನೆಗೆ ಒಂದೊಂದು ಗಂಟೆಯ ಕಾಲವಕಾಶವನ್ನು ಕೊಡಿ.

(ಗೊಂದಲ)

**ಉಪಸಭಾಪತಿಯವರು:–** ಮಾನ್ಯ ಸಚಿವರೇ, ಶ್ರೀ ಐವನ್ ಡಿ'ಸೋಜಾರವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಸರ್ಕಾರದ ವಿಳಂಬ ನೀತಿಯಿಂದ ಭೂ ಸ್ವಾಧೀನ ಬಿಲ್ಲುಗಳು ಜಾಸ್ತಿಯಾಗಿರುವಂಥದ್ದು ಯಾವುದೂ ಕೂಡ ಆಗಿಲ್ಲ. ಯಾವ ಕಾರಣದಿಂದ ಹೆಚ್ಚಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. 17,207 ಕೋಟಿ ರೂಪಾಯಿಗಳ ಪರಿಷ್ಕೃತ ಅಂದಾಜು ಇನ್ನು ಆಗಿಲ್ಲ. ಈ ರೀತಿ ಪರಿಷ್ಕೃತ ಅಂದಾಜು ಆಗುತ್ತದೆಂದು ಮಾಡಲಾಗಿದೆ. ಪರಿಷ್ಕೃತ ಅಂದಾಜು ಮಾಡಿ ಅದಕ್ಕೆ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿದೆ. ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬುರವರು ಏತ ನೀರಾವರಿಗಳು ಎಷ್ಟು ಇವೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಬೆಳಿಗ್ಗೆ ಶ್ರೀ ಮಹಾಂತೇಶ್ ಕವಟಗಿಮಠರವರ ಪ್ರಶ್ನೆಯನ್ನು ಕೇಳಿರುವುದರಲ್ಲಿ ಉಪ ಯೋಜನೆಗಳು ಎಷ್ಟು ಇವೆ ಎಂದು ಕೇಳಿದ್ದರು. ಅದಕ್ಕೆ ಒಂಭತ್ತು ಉಪ ಯೋಜನೆಗಳಿವೆ. ಅದರಲ್ಲಿ Seven lift irrigation schemes. ಭೀಮಾ Flank ಮತ್ತು NRBC ಎರಡು ಕೂಡ ಹರಿವು ಇದೆ. ಶ್ರೀ ರಮೇಶ್ ಬಾಬುರವರೆ ಇಲ್ಲಿ ಬಂದು ನಾನು ಉತ್ತರವನ್ನು ಕೊಡುವಾಗ ಬಹಳಷ್ಟು ನೋಡಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಪೂರಕವಾಗಿ ಹೇಳುವುದೇನೆಂದರೆ, . . . .

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬು ರವರೆ ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆ, ನೀವು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಕೇಳಿದ್ದೇನೆ. ಈಗ ನಾನು ಹೇಳುವುದನ್ನೂ ಕೂಡ ಸಂಪೂರ್ಣವಾಗಿ ಕೇಳಿ. ನಾನು ಸರಿಯಾಗಿ ಹೋಂ ವರ್ಕ್ ಮಾಡಿಕೊಂಡು ಬಂದಿರುತ್ತೇನೆ. ಅದನ್ನು ತಿಳಿದುಕೊಂಡು ಮಾತನಾಡುತ್ತೇನೆ. ನಾನು ಯಾವುದೇ ರೀತಿಯಲ್ಲೂ ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡಿಲ್ಲ. ಮೂರನೇಯದಾಗಿ ಮೂರು ವರ್ಷಗಳಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯಲ್ಲಿ ತುಂಡು ಗುತ್ತಿಗೆಯಲ್ಲಿ ನೀಡಲಾಗಿದೆ ಎಂದು ಹೇಳಿದ್ದಾರೆ. ಇಲ್ಲಿ lift component ಇದೆ. ಎರಡು head works ಇದೆ. ಅಲ್ಲಿ ತುಂಡು ಗುತ್ತಿಗೆಯ ಪ್ರಶ್ನೆಯೇ ಬರುವುದಿಲ್ಲ. ಸರ್ಕಾರದಿಂದ ತುಂಡು ಗುತ್ತಿಗೆಯನ್ನು ಕೊಡುವಂತಹ ವ್ಯವಸ್ಥೆಯಿಲ್ಲ. ಅದು ಕೊಪ್ಪಳ-1 ಮತ್ತು 2. ಎರಡು lift component schemes ಇರುವಂತಹದ್ದು. ಇನ್ನು ಮುಂದೆ ಬರುವಂತಹದ್ದು ಏನಿದೆ, ಅಲ್ಲಿಯೂ ಕೂಡ micro irrigation ಬರುತ್ತದೆ. 1,02,000 ಎಕರೆ ಇರುವುದನ್ನು ಹನಿ ನೀರಾವರಿ ಮೇಲೆ ಆಗುವಂತಹದ್ದು. ಆಲಮಟ್ಟಿ ಅಣೆಕಟ್ಟನ್ನು 519 ರಿಂದ 524 ಮೀಟರ್‌ರವರೆಗೆ ನೀರನ್ನು ಶೇಖರಣೆ ಮಾಡಿದ ಮೇಲೆ ನಮ್ಮ drip irrigation system ನಲ್ಲಿ ಮಾಡುವಂಥದ್ದು. ಹಾಗಾಗಿ ಇಲ್ಲಿ ತುಂಡು ಗುತ್ತಿಗೆಯ ಪ್ರಶ್ನೆ ಬರುವುದೇ ಇಲ್ಲ. ಮೂರನೆಯದು ಬಹಳ ಮಹತ್ವವಾಗಿರುವಂತಹ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರಿಗೆ ಏಕೆ ಗೊಂದಲವಾಗಿದೆ ಎಂಬುವುದರ ಬಗ್ಗೆ ಹೇಳುತ್ತೇನೆ. ಪ್ರಮುಖವಾಗಿ ಗುತ್ತಿಗೆ ವಹಿಸಿದ ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿಸದೇ ಏಕೆ ವಿಳಂಬವಾಗುತ್ತಿದೆ ಎಂದರೆ, 2013 ರಲ್ಲಿ ಭೂ ಸ್ವಾಧೀನ ಕಾಯ್ದೆಯು ಜಾರಿಗೆ ಬಂದಿತು. ಪ್ರಸ್ತುತ ಕೇಂದ್ರ ಸರ್ಕಾರವು ಆದಕ್ಕೆ ಒಂದು ತಿದ್ದುಪಡಿಯನ್ನು ತರುವುದಕ್ಕೆ ಬಯಸಿದ್ದರಿಂದ ಒಂದು ವರ್ಷಗಳ ಕಾಲ ಸ್ಥಾಯಿ ಹೋಯಿತು. ಎರಡನೆಯದಾಗಿ ಗುತ್ತಿಗೆದಾರರುಗಳಿಂದಲೇ ಸ್ವಯಂಪ್ರೇರಿತವಾಗಿ ತೊಂದರೆಗಳಾಗಿ ಕಾಮಗಾರಿ ವಿಳಂಬವಾಗಿದ್ದರೆ ಗುತ್ತಿಗೆದಾರರಿಗೆ ನಾವು ದಂಡವನ್ನು ಹಾಕುತ್ತೇವೆ. ಹಿಂದೆ ಯಾರು ತಪ್ಪು ಮಾಡಿದ್ದಾರೆಂದು ಸಹ ಹೇಳುವುದಿಲ್ಲ. ಆದರೆ ಈ ವ್ಯವಸ್ಥೆಯಲ್ಲಿ ನಡೆಯಲೇಬೇಕಾಗುತ್ತದೆ. ನಾವು ಎಲ್ಲವನ್ನು ಭೂ ಸ್ವಾಧೀನ ಕಾಯ್ದೆಯ ಪ್ರಕಾರ ಮುಂದುವರಿಸಿಕೊಂಡು ಹೋಗಬೇಕೆಂದರೆ, ಯಾವ ಯೋಜನೆಗಳು ಹಿಂದೆ ಕೂಡ ಆಗುತ್ತಿರಲಿಲ್ಲ. ಈಗ ಕೂಡ ಆಗುವುದಿಲ್ಲ. ಇನ್ನು ಮುಂದೆ ಕೂಡ

ಆಗುವುದಿಲ್ಲ. ನಾವು ಗುತ್ತಿಗೆದಾರರನ್ನು, ಇಂಜಿನಿಯರ್‌ಗಳನ್ನು ಒಪ್ಪಿಸಿಕೊಂಡು ಕೆಲಸವನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ನಾನು ಒಂದು ಸಾರಿ ಚಿಮ್ಮಲಗಿ ಏತ ನೀರಾವರಿಗೆ ಹೋಗಿದ್ದೆನು. ಕಳೆದ ಬಾರಿ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರು ಹಳ್ಳಿಗಳಿಗೆ ಬಂದಾಗ, ನೀವು ಕೆಲಸವನ್ನು ಮಾಡಿ ನಾವು ಮುಂದೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದಾಗ ಇವತ್ತಿನ ದಿವಸ ಬಿಜಾಪುರ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಾಗಿ ನಡೆಯಬೇಕಾಗುತ್ತದೆ. ಈ ರೀತಿಯಾಗಿ ಮಾಡುತ್ತಿದ್ದರೂ ಕೂಡ ಈ ಯೋಜನೆಗಳಿಗೆ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತಿವೆಯೆಂದು ದೂರುಗಳಿವೆ. ಗುತ್ತಿಗೆದಾರರನ್ನು ಮೀರಿ, ಭೂ ಸ್ವಾಧೀನದ ಸಮಸ್ಯೆಗಳಿದ್ದರೆ ಮತ್ತೆ ಇತ್ತೀಚಿಗೆ ಬಹಳಷ್ಟು ವಿಶೇಷವಾಗಿ ಭೀಮಾ Belt ನ ನದಿಗೆ ಬರುವಂತಹ ಮರಳೇ ಏನಿದೆ ಅದು ಒಳ್ಳೆಯ ಮರಳು. ಕೃಷ್ಣ ನದಿಗೆ ಅಷ್ಟು ಸರಿಯಾದಂತಹ ಮರಳು ಬರುವುದಿಲ್ಲ. ಗುತ್ತಿಗೆದಾರರಿಗೆ ಸತತವಾಗಿ ಮೂರ್‍ನಾಲ್ಕು ವರ್ಷಗಳಿಂದ ಮರಳಿನ ತೊಂದರೆಯಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಹಸಿರು ನ್ಯಾಯಾಧೀಕರಣದಿಂದ ತಡೆಯಾಜ್ಞೆ ಇದೆ. ಮಹಾರಾಷ್ಟ್ರ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ ಮರಳನ್ನು ಕೊಡಿಸಬೇಕಾದರೆ ಸಚಿವರು ಮಧ್ಯಪ್ರವೇಶ ಮಾಡಿ ಮರಳನ್ನು ಕೊಡಿಸುವಂಥದ್ದು ಇದೆ. NLBC ಯಲ್ಲಿ ನಡೆದಿತ್ತು. ಮರಳು ದೊರೆಯುತ್ತಿಲ್ಲವೆಂದು ಗುತ್ತಿಗೆದಾರರು ಕೆಲಸವನ್ನು ನಿಲ್ಲಿಸಿ ಬಿಟ್ಟಿದ್ದರು. ಆದುದರಿಂದ ಮರಳು ಕೊಡಿಸುವಂತಹ ಕೆಲಸವನ್ನು ನಾನು ಕೂಡ ಮಾಡಿದ್ದೇನೆ. ಭೂ ಸ್ವಾಧೀನವನ್ನು ಕ್ಲಿಯರ್ ಮಾಡಿಕೊಡದ್ದೇ ಗುತ್ತಿಗೆದಾರರಿಗೆ ವಿಳಂಬವಾಗಿದೆ ಎಂದು ದಂಡ ಹಾಕಲಾಗುವುದೆಂದು ನಾವು ಏನಾದರೂ ನೋಟೀಸನ್ನು ಕೊಟ್ಟರೆ, ನಿಮ್ಮಿಂದ ವಿಳಂಬವಾಗಿರುವುದು ನಮಗೆ ಏಕೆ ದಂಡವನ್ನು ಹಾಕುತ್ತೀರಿ ಎಂದು ಕೇಳುತ್ತಾನೆ. ನನಗೆ ಗುತ್ತಿಗೆದಾರನು ಚಿಮ್ಮಲಗಿಯಲ್ಲಿ ಕೇಳಿದ. ಇದೇ ರೀತಿ ಮರಳಿನ ಸಮಸ್ಯೆ ಎಲ್ಲಾ ಕಡೆ ಇರುತ್ತದೆ. ಇದರ ಜೊತೆಗೆ ಕೆಲವೊಂದು ಕಡೆ ಮಳೆ ಬಂದು ತೊಂದರೆಯಾಗಿರುತ್ತದೆ. ಇಂತಹ ಸಮಸ್ಯೆಗಳಿದ್ದಾಗ ಮಾತ್ರ ನಾವು ಅವರಿಗೆ ಏನು ಮಾಡುವುದಿಲ್ಲ. ಆದರೆ ಸರ್ಕಾರದ ಬೊಕ್ಕಸಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗಿಲ್ಲ. ಸಮಸ್ಯೆ ಇದ್ದಾಗ ನಾನು ಏನು ಕೂಡ ಮಾಡುವುದಿಲ್ಲ. ಗುತ್ತಿಗೆದಾರರು ಏನಾದರೂ clear land acquisition ಇದ್ದಾಗ, ಮರಳಿನ ಸಮಸ್ಯೆ ಇಲ್ಲದೆಯಿದ್ದಾಗ, ಯಾವುದೇ ರೀತಿಯ ಸಮಸ್ಯೆಗಳಿಲ್ಲದೆ ಇದ್ದಾಗ ಅವನು ಏನಾದರೂ ವಿಳಂಬ ಮಾಡಿದರೆ ಅವನಿಗೆ ದಂಡವನ್ನು ವಿಧಿಸಲಾಗುತ್ತದೆ. ಹೀಗಾಗಿ ನಾನು ಸಂಪೂರ್ಣವಾಗಿ ಮತ್ತು ಜವಬ್ದಾರಿಯುತವಾಗಿ ಎಲ್ಲವನ್ನೂ ಕೂಡ ನೋಡಿ ಶ್ರೀ ರಮೇಶ್ ಬಾಬು ರವರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಏಕೆಂದರೆ ತಪ್ಪು ಉತ್ತರವನ್ನು ಕೊಡಬಾರದೆಂದು, ನಾನು ಸಮಯವನ್ನು ಕೂಡ ತೆಗೆದುಕೊಂಡಿದ್ದೆ. ಅದಕ್ಕೆ ಎಲ್ಲ ರೀತಿಯಿಂದ ಸರಿಯಾದ ಉತ್ತರವನ್ನು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೊಟ್ಟಿದ್ದೇನೆ. ಆದರೆ ಮಾನ್ಯ ಸದಸ್ಯರು ಅದನ್ನು ತಪ್ಪಾಗಿ ಗ್ರಹಿಸಿದ್ದಾರೆ. 17,207 ಕೋಟಿ ರೂಪಾಯಿಗಳ ಬದಲು solatium, almost five times ಆಗುತ್ತದೆ. ಇದು ಭೂಸ್ವಾಧೀನ ಕಾಯ್ದೆಯ ಪ್ರಕಾರ ಹಣ ಹೆಚ್ಚಾಗಿರುವುದು. ಸರ್ಕಾರದ ವಿಳಂಬ ನೀತಿಯಿಂದ ಆಗಿದೆ ಎಂದು ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿರುವುದು ತಪ್ಪು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆ . . . .

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬು ರವರೇ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬಹಳ ಪ್ರಮುಖವಾಗಿ ಭೀಮಾ Flank ಏತ ನೀರಾವರಿ ಯೋಜನೆಯ ಬಗ್ಗೆ ತಾವು ಉತ್ತರವನ್ನು ಕೊಟ್ಟಿಲ್ಲ. ಹಾಗಾದರೆ ಮಾನ್ಯ ಸಚಿವರು ಸದನಕ್ಕೆ ಕೊಟ್ಟಿರುವಂತಹ ಲಿಖಿತ ಉತ್ತರ ತಪ್ಪೇ. ನಾನು ತಪ್ಪಾಗಿ ಗ್ರಹಿಸಿಕೊಂಡಿಲ್ಲ. ಅದು ನನ್ನ ತಪ್ಪಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏತ ನೀರಾವರಿ ಯೋಜನೆಗಳು ಎಷ್ಟು ಎಂದು ಕೇಳಿದ್ದಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಹೌದು, ನಾನು ಏತ ನೀರಾವರಿ ಯೋಜನೆಯ ಬಗ್ಗೆ ಕೇಳಿದ್ದೆನು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏಳು ಏತ ನೀರಾವರಿ ಯೋಜನೆಗಳು, ಒಂಭತ್ತು ಲ್ಯೂಪ್ ಯೋಜನೆಗಳಿವೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಏತ ನೀರಾವರಿ ಯೋಜನೆ ಬಗ್ಗೆ ನನ್ನ ಪ್ರಶ್ನೆ ಇರುವಂತಹದ್ದು. ಏಳು ಏತ ನೀರಾವರಿ ಯೋಜನೆಯೆಂದು ಹೇಳಿದ್ದಾರೆ. ಭೀಮಾ Flank ಇದು ಯಾವುದು?

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬು ರವರೆ ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, it is not a lift irrigation scheme.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನೀವೇ ಇದರ ಬಗ್ಗೆ classification ಮಾಡಿದ್ದೀರಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ರಮೇಶ್ ಬಾಬು ರವರೆ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ನಾವು ತಿಳಿದುಕೊಂಡು ಬಂದಂಥವರು. ಒಂಭತ್ತು ಉಪ ಯೋಜನೆಗಳಿವೆ. ಅದರಲ್ಲಿ ಏಳು ಏತ ನೀರಾವರಿ ಯೋಜನೆಗಳಿವೆ. Bheema Flank & NRBC ಇವೆರಡೂ gravity ಮೇಲೆ ಹೋಗುವಂಥವು. ಹೀಗಾಗಿ ಅವರಿಗೆ ಒಂಭತ್ತು ಉಪ ಯೋಜನೆಗಳ ಬಗ್ಗೆ ಉತ್ತರವನ್ನು ಕೊಟ್ಟಿರುವಂಥದ್ದು. ಮಾನ್ಯ ಸದಸ್ಯರು ಏತ ನೀರಾವರಿ ಯೋಜನೆ ಬಗ್ಗೆ ಕೇಳಿದ್ದೀರಿ. ಅದರ ಬಗ್ಗೆ ಉತ್ತರವನ್ನು ಕೊಟ್ಟಿರುವಂಥದ್ದು. ಅಷ್ಟು ಉಪ ಯೋಜನೆಗಳ ಬಗ್ಗೆ ಕೇಳಿರುವುದರಿಂದ, ಒಂಭತ್ತು ಉಪ ಯೋಜನೆ ಎಂಬ ಉತ್ತರ ಬರುತ್ತಿತ್ತು. ಮಾನ್ಯ ಸದಸ್ಯರು ಏತ ನೀರಾವರಿ ಯೋಜನೆಗಳು ಎಷ್ಟು ಎಂದು ಕೇಳಿರುವುದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನೀವು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮಾಡಿರುವಂತಹದ್ದನ್ನು, ಇದು ಸೇರುತ್ತದೆ ಎಂದು ಸೇರಿಸಿದ್ದೀರಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏಳು ಏತ ನೀರಾವರಿ ಯೋಜನೆಗಳಿವೆ. ಎರಡು Flow Irrigation Schemes ಇವೆ.

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬುರವರೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಹದಿನೇಳು ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ.

**ಉಪಸಭಾಪತಿಯವರು:-** ಶ್ರೀ ರಮೇಶ್ ಬಾಬುರವರೆ ದಯಮಾಡಿ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ:- 2289**

**(ಉತ್ತರವನ್ನು ಒದಗಿಸಲಾಗಿದೆ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ ಕಲಂ 371 (ಜೆ) ಅನ್ವಯ ಅರ್ಹತಾ ಪ್ರಮಾಣ ಪತ್ರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದರಲ್ಲಿರುವಂತಹ ಅವಕಾಶಗಳು ಮತ್ತು ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ನಿಯಮಗಳು ಏನೇನಿವೆ? ಎನ್ನುವಂತಹ ಪ್ರಶ್ನೆಗೆ ಒಂದು ವಾರ ಕಾಲವಕಾಶವನ್ನು ತೆಗೆದುಕೊಂಡರೂ ಕೂಡ ಮಾನ್ಯ ಹಿರಿಯ ಸಚಿವರು ಬಹಳ ಸವಿಸ್ತಾರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಆ ನಿಯಮದಡಿಯಲ್ಲಿ ಕಾರ್ಯಗತಗೊಳ್ಳುತ್ತಿಲ್ಲ ಮತ್ತು ತೊಂದರೆಯಾಗುತ್ತಿದೆ. ಆ ವಿಷಯದ ಬಗ್ಗೆ ಇತರ ಮಾತನಾಡುತ್ತೇನೆ. ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ನಮ್ಮ ಹೈದರಾಬಾದ್-ಕರ್ನಾಟಕದ ವಿಮೋಚನೆಯ ಮುಂಚೂಣಿಯಲ್ಲಿದ್ದಂತಹ ಸ್ವಾತಂತ್ರ್ಯ ಹೋರಾಟಗಾರರಾದ ಸನ್ಮಾನ್ಯ ಸರ್ದಾರ್ ಶರಣಗೌಡ ಇನಾಂದಾರ್ ಎನ್ನುವಂತಹವರು ಬಹಳ ಮುಂಚೂಣಿಯಲ್ಲಿದ್ದಂಥವರು. ಅವರು ಇಲ್ಲಿರುವಂತಹ ಎಲ್ಲಾ ಸದಸ್ಯರಿಗೂ ಕೂಡ ಬಹುಶಃ ಎಲ್ಲರಿಗೂ ಗೊತ್ತಿರುವಂಥವರು. ಅವರ ಕುಟುಂಬಕ್ಕೆ ಇವತ್ತಿನ ದಿವಸ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕಾರ ಮಾಡಿರುವ ವಿಷಯವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅವರ ವಂಶಾವಳಿ ಪತ್ರವು ಎಲ್ಲ ದಾಖಲೆಗಳನ್ನು ಕೊಟ್ಟಿದ್ದಾರೆ.

(ಮುಂದು)

719/14-6-2017/1-40/bkp-vk

**ಶ್ರೀ ಅಮರನಾಥ ಪಾಟೀಲ್(ಮುಂದು..)**

ಆದಾಗ್ಯೂ ಕೂಡ ಮೊದಲು ಅದನ್ನು reject ಮಾಡಿದರು. Reject ಆದ ಮೇಲೆ ಈ ಪ್ರಶ್ನೆಗೆ ಸಂಬಂಧಪಟ್ಟ ಜಿಲ್ಲೆಯ ಡಿ.ಸಿ. ಆಫೀಸ್‌ಗೆ, ಹೋದಮೇಲೆ ನಾನು ಕೂಡ ಇದರ ಬಗ್ಗೆ ಅಸಿಸ್ಟೆಂಟ್ ಕಮಿಷನರ್‌ಗೆ ತಿಳಿಸಿ ಹೇಳಿದೆ. ಆದಾದ ಮೇಲೆ issue ಮಾಡಿದ್ದಾರೆ. ಆದರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಅದರಲ್ಲಿ ಇಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿದ್ದಾರೆ. ನಿಖರವಾಗಿ ಅವರ ಹೆಸರನ್ನು ಪ್ರಸ್ತಾಪ ಮಾಡಿ ಇಂತಹವರಿಗೆ ಈ ಕಾರಣಕ್ಕೆ reject ಮಾಡಿದ್ದಾರೆಂದು ಹೇಳಿದ ಮೇಲೆಯಾದರೂ ಗೌರವದಿಂದ ಅವರಿಗೆ ಕೊಟ್ಟಿದ್ದೇವೆಂದು ತಿಳಿಸಿದ್ದರೆ ಸರ್ಕಾರದ ಘನತೆ ಇನ್ನು ಹೆಚ್ಚಾಗುತ್ತಿತ್ತು. ಅದೆಲ್ಲೋ ತಪ್ಪಾಗಿದೆ. ಮಾಹಿತಿ ಕೊರತೆಯಿಂದ ಕೊಟ್ಟಿಲ್ಲವೆಂದು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, 371 (ಜೆ) ಅಡಿಯಲ್ಲಿ ಅರ್ಹತಾ ಪತ್ರ ಪಡೆಯುವಂತಹವರು ಯಾರು ಸಹ ಶ್ರೀಮಂತರಲ್ಲ, ದೊಡ್ಡ ದೊಡ್ಡವರಲ್ಲ. ಅವರು ರೈತರ ಮಕ್ಕಳು. ಆ ಭಾಗದ ಅತ್ಯಂತ ಹೆಚ್ಚಿನ ಜನಸಂಖ್ಯೆ ಇರುವಂತಹ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಮಕ್ಕಳು, ವಿದ್ಯಾರ್ಥಿಗಳು, ಯುವಕರುಗಳು, ಪದವೀಧರರಾಗಿರುತ್ತಾರೆ. ಅವರುಗಳು apply ಮಾಡಿ ತಮ್ಮ ಮುಂದಿನ ಉದ್ಯೋಗದಲ್ಲಿ ಹೆಚ್ಚಿನ ಮೀಸಲಾತಿ ಪಡೆಯಲಿಕ್ಕೋಸ್ಕರ ತೆಗೆದುಕೊಳ್ಳುತ್ತಾರೆ. ಅಲ್ಲಿ ಏನಾಗುತ್ತದೆ ಎನ್ನುವುದರ ಬಗ್ಗೆ ನಾನು ಇಷ್ಟೆ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಉಪಸಭಾಪತಿಯವರು:-**ಶ್ರೀ ಅಮರನಾಥ ಪಾಟೀಲ್ ರವರೇ, ತಮಗೆ ಏನಾಗಬೇಕೆಂದು ನೇರವಾಗಿ ಕೇಳಿ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ವಿಷಯಕ್ಕೆ ಬರುತ್ತಿದ್ದೇನೆ. ಈಗ ಉನ್ನತ ಸ್ಥಾನದಲ್ಲಿರುವಂತಹ ಡಿ.ಸಿ.ಗಳು, ಎ.ಸಿ.ಗಳು ಬಹಳ ಚೆನ್ನಾಗಿ ಸ್ಪಂದನೆ ಮಾಡುತ್ತಿದ್ದಾರೆ. ಅವರುಗಳ ಬಗ್ಗೆ ಏನೂ ದೂರುಗಳಿಲ್ಲ. ಅವರುಗಳಿಗಿಂತ ಕೆಳಗಡೆ ಇರುವಂತಹ ಕಿರಿಯ ಅಧಿಕಾರಿಗಳಿಗೆ ಕಮಿಟ್‌ಮೆಂಟ್ ಇಲ್ಲ. ಕಾನೂನಿನ ಯಾವುದೇ ಅರಿವಿಲ್ಲ. ಕೆಲವು ಕಡೆ ಏನು ಮಾಡುತ್ತಾರೆಂದರೆ ಇವತ್ತು ನಾಲ್ಕೈದು provisions ಇರುತ್ತವೆ. ಆ ನಾಲ್ಕೈದು provisions ಗಳಲ್ಲಿ ಯಾವುದೇ ಒಂದು fulfill ಆದಲ್ಲಿ ಪ್ರಮಾಣ ಪತ್ರವನ್ನು ನೀಡಬೇಕೆಂದು ಇದೆ. ಆದರೆ, ಇವರುಗಳು ಏನು ಷರತ್ತುಗಳನ್ನು ಹಾಕುತ್ತಾರೆಂದರೆ, ಎಲ್ಲಾ ದಾಖಲೆಗಳು ಬೇಕು, ಇಲ್ಲದಿದ್ದರೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇನ್ನು ಈ ಉದ್ಯೋಗವನ್ನು ಪಡೆಯುವ ನಿಟ್ಟಿನಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಮತ್ತು ಯುವಕರುಗಳು ಈ ಪ್ರಮಾಣ ಪತ್ರಕ್ಕೆ apply ಮಾಡುತ್ತಾರೆ. ಅವರುಗಳಿಗೆ ಈ ಪ್ರಮಾಣ ಪತ್ರಗಳನ್ನು 30 ದಿವಸಗಳ ಒಳಗಡೆ ಕೊಡಬೇಕೆನ್ನುವ ಷರತ್ತು ಇದೆ. ಆದರೆ, 30 ದಿವಸಗಳಲ್ಲಿ ಈ ಪ್ರಮಾಣ ಪತ್ರಗಳನ್ನು ನೀಡುತ್ತಿಲ್ಲ.

ಎರಡನೆಯದಾಗಿ, ಇನ್ನೊಂದು ಈ ಅಟಲ್‌ಜೀ ಜನ ಸ್ನೇಹಿ ಕೇಂದ್ರವನ್ನು ಪ್ರಾರಂಭ ಮಾಡಿರುವಂಥಹದ್ದಾಗಿದೆ. ಆದರೆ, ಇವತ್ತು ಅದು ಜನ ಸ್ನೇಹಿ ಎಂದು ಉಳಿದುಕೊಂಡಿದೆಯೋ ಅಥವಾ ಜನ ಶತ್ರು ಎಂದು ಆಗಿದೆಯೋ ಗೊತ್ತಿಲ್ಲ. ಏಕೆಂದರೆ, ಅದು 3-4 ತಿಂಗಳುಗಳಿಂದ online ನಲ್ಲಿ block ಆಗುತ್ತಿರುವುದರಿಂದ, ಅಲ್ಲಿ ಸರಿಯಾದ ರೀತಿಯಲ್ಲಿ ಮಾಹಿತಿ ಸಿಕ್ಕುತ್ತಿಲ್ಲ.

ಇನ್ನು reject ಆದಮೇಲೆ 30 ದಿವಸಗಳ ಒಳಗಡೆ ಡಿ.ಸಿ.ಯವರಿಗೆ ಮೇಲ್ಮನವಿಯನ್ನು ಸಲ್ಲಿಸಬೇಕಾಗುತ್ತದೆ.

**ಉಪಸಭಾಪತಿಯವರು:-** ಶ್ರೀಯುತ ಅಮರನಾಥ ರವರೇ, ತಮಗೆ ಏನಾಗಬೇಕೆಂದು ಕೇಳಿ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದೇ ವಿಚಾರವನ್ನು ಹೇಳುತ್ತಿದ್ದೇನೆ. ಆ ಮೇಲ್ಮನವಿಯನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಅಡ್ವೋಕೇಟ್ ಇಡಬೇಕೆಂದು ಹೇಳುತ್ತಾರೆ. ಯಾವ ಯುವಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಅಡ್ವೋಕೇಟ್ ಇಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ತಮ್ಮ ಮೂಲಕ ನಾನು ಸಚಿವರಿಗೆ ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಈ ಒಂದು ಅರ್ಹತಾ ಪ್ರಮಾಣಪತ್ರವನ್ನು ಕೊಡುವಂತಹ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಅಲ್ಲಿ ಇರುವಂತಹ ಕಿರಿಯ ಮಟ್ಟದ ಅಧಿಕಾರಿಗಳಿಗೆ ಹೆಚ್ಚಿನ ಒಂದು ಮಾಹಿತಿಯನ್ನು ಒದಗಿಸಿ, ಇದರಲ್ಲಿ ಅವರು ಮಾನವೀಯತೆಯ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ, ಯುವಕರಿಗೆ ಸರಿಯಾದಂತಹ ಸಮಯದಲ್ಲಿ ಆ ಒಂದು ಅರ್ಹತಾ ಪ್ರಮಾಣ ಪತ್ರವನ್ನು ನೀಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆ ದೀರ್ಘವಾಗಿದೆ. ಉತ್ತರವೂ ಕೂಡ ಅಷ್ಟೇ ದೀರ್ಘವಾಗಿದೆ. ನಿಜ. ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಈ ಆರ್ಟಿಕಲ್ 371(ಜೆ) ಜಾರಿಗೆ ಬಂದಮೇಲೆ ಕೆಲವು ವಿಶೇಷ ಸವಲತ್ತುಗಳು, ಸೌಲಭ್ಯಗಳಿವೆ. ಅದನ್ನು ಪಡೆಯವುದಕ್ಕೋಸ್ಕರ ಆ ಭಾಗದ ಜನರೇ ಎಂದು ಹೇಳಿ, ಪ್ರಮಾಣಪತ್ರವನ್ನು ಪಡೆಯಬೇಕಾಗುತ್ತದೆ. ಪ್ರಮಾಣಪತ್ರವನ್ನು ಪಡೆಯುವಂತಹ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕೆಳ ಹಂತದ ಅಧಿಕಾರಿಗಳಿಗೆ ಕೊಕ್ಕೆ ಹಾಕುವುದೇ ಒಂದು ಕೆಲಸವಾಗಿ ಬಿಟ್ಟಿದೆ. ಅದನ್ನು ತಪ್ಪಿಸುವಂತಹ ಕೆಲಸವನ್ನು ಇವತ್ತು ಮಾಡಬೇಕಾಗಿದೆ. ಏಕೆಂದರೆ, ನಮ್ಮ ಆಡಳಿತದಲ್ಲಿ ಒಂದು ಸಂಸ್ಕೃತಿ ವ್ಯವಸ್ಥಿತವಾಗಿ ಬೆಳೆದಿದೆ. ಅದೇ ನಮ್ಮ ಇವತ್ತಿನ ದುರಂತ. ಹಾಗಾಗಿ, ಇವತ್ತು ಅದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಅದಕ್ಕೆ ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ಪ್ರಸ್ತಾಪ ಮಾಡಿ, ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಹೈದ್ರಾಬಾದ್ ಕರ್ನಾಟಕಕ್ಕೆ ಸೇರಿದ್ದಕ್ಕೆ ಯಾವ್ಯಾವ ದಾಖಲೆಗಳು ಬೇಕೆಂದು ಎಲ್ಲವನ್ನು ಹೇಳಿದ್ದಾರೆ. ನಿಮಗೆ ಹುಟ್ಟಿದಂತಹ ಪ್ರದೇಶದ ಬಗ್ಗೆ ದೃಢೀಕರಣದ ಸರ್ಟಿಫಿಕೇಟ್ ಬೇಕಾಗುತ್ತದೆ. ಒಬ್ಬ ಆ ಭಾಗದಲ್ಲಿ ಹುಟ್ಟಿ ಬೇರೆ ಕಡೆ ಹೋಗಿ ವಿದ್ಯಾಭ್ಯಾಸ ಮಾಡುತ್ತಾನೆ. ಆದ್ದರಿಂದ, ಇದಕ್ಕೆ, ಆ ಪ್ರದೇಶದ ಶಾಸಕರುಗಳೆಲ್ಲಾ ಒಂದು ಕಡೆ ಕುಳಿತುಕೊಂಡು

ಸಾಧ್ಯವಾದಷ್ಟು ಮಟ್ಟಿಗೆ ಸ್ವಲ್ಪ ಚರ್ಚೆ ಮಾಡಬೇಕು. ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಲು ಸಹಕರಿಸಬೇಕು ಮತ್ತು ಅದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಏಕೆಂದರೆ, ಇದು ನನಗೂ ಸಹ ಹೊಸ ವಿಷಯವಾಗಿರುತ್ತದೆ. ನಿಮ್ಮ ಪ್ರಶ್ನೆ ಬಂದಾದ ಮೇಲೆಯೇ ಈ ವಿಷಯ ನನಗೆ ಗೊತ್ತಾಗಿರುವುದಾಗಿದೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಹಿರಿಯ ಸಚಿವರಿದ್ದು, ಇದಕ್ಕೆ ಒಪ್ಪಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಒಳ್ಳೆಯ ಸಂದೇಶ ಹೋಗಿದೆ. ಹೈದ್ರಾಬಾದ್-ಕರ್ನಾಟಕದ ವಿಮೋಚನೆಯ ಮುಂಚೂಣಿಯಲ್ಲಿದ್ದಂತಹ ಸ್ವಾತಂತ್ರ್ಯ ಹೋರಾಟಗಾರರಾದ ಸನ್ಮಾನ್ಯ ಸರ್ದಾರ್ ಶರಣಗೌಡ ಇನಾಂದಾರ್‌ರವರ ಕುಟುಂಬದವರು ಕೊಟ್ಟಂತಹ ದಾಖಲೆಗಳು rejection ಸಹ ಇದೆ, acceptance ಸಹ ಇದೆ. ಎರಡು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಅಲ್ಲಿಗೆ ಬರುವ ಬಗ್ಗೆ ದಿನಾಂಕವನ್ನು ಯಾವಾಗ ನಿಗದಿ ಮಾಡುತ್ತಾರೆ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈ ಒಂದು ಕೆಲಸವನ್ನು ಮಾಡೋಣ. ಒಂದು ದಿವಸ ಕುಳಿತುಕೊಂಡು ಹಿರಿಯ ಸದಸ್ಯರುಗಳೆಲ್ಲಾ ಸೇರಿಕೊಂಡು ಚರ್ಚೆ ಮಾಡಿ ಈ ಸಮಸ್ಯೆಯನ್ನು ಪರಿಹರಿಸೋಣ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಚಿವರು ಗುಲ್ಬರ್ಗಕ್ಕೆ ಬಂದು, ವಿಭಾಗೀಯ ಮಟ್ಟದ ಒಂದು ಮೀಟಿಂಗ್ ಕರೆಯಬೇಕು. ಜಿಲ್ಲಾ ಮಟ್ಟದಲ್ಲೂ ಸಹ ಸಚಿವರು ಪ್ರವಾಸ ಮಾಡಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ನಾನು ಅಲ್ಲಿಗೆ ಎರಡು-ಮೂರು ಬಾರಿ ಬಂದಿದ್ದೇನೆ. ಈ ವಿಚಾರವನ್ನು ಆ ಸಮಯದಲ್ಲಿ ಹೇಳಿದ್ದರೆ, ಅಲ್ಲಿಯೇ ಎಲ್ಲವನ್ನೂ ಮಾಡಿಕೊಡುತ್ತಿದ್ದೆ. ಈ ತಿಂಗಳ ಒಳಗಡೆಯೇ ಅಲ್ಲಿಗೆ ಬರುತ್ತೇನೆ, ಬಂದಾಗ ಸರಿ ಮಾಡೋಣ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಮನವಿ. ಇದರಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಇದೆ. ದಿನಾಂಕ: 1-1-2013 ರಲ್ಲಿ rules draft ಮಾಡಿ, ಅದನ್ನು ಜಾರಿಗೆ ತರಲಾಗಿದೆ. ಇಲ್ಲಿಯವರೆಗೂ ಸಹ 3-4 ವರ್ಷಗಳು ಕಳೆದರೂ ಸಹ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವುದಕ್ಕೆ ತೊಂದರೆಗಳಿರುವ ಬಗ್ಗೆ ಪ್ರತಿ ಬಾರಿಯೂ ಸಹ ಸದನದಲ್ಲಿ ಈ ವಿಚಾರವಾಗಿ ಶ್ರೀಯುತ ಅಮರನಾಥ ಪಾಟೀಲ್ ರವರು ಪ್ರಶ್ನೆ ಮಾಡುತ್ತಾರೆ. ಪ್ರತಿ ಬಾರಿಯೂ ಸಹ ಈ ವಿಚಾರವಾಗಿ ನಾವೆಲ್ಲರೂ ಹೇಳುತ್ತಲೇ ಇದ್ದೇವೆ. Let us put an end for this issue.

ಏನೆಂದರೆ, ಅಸಿಸ್ಟೆಂಟ್ ಕಮಿಷನರ್‌ರವರಿಗೆ, ಮತ್ತು ಡೆಪ್ಯೂಟಿ ಕಮಿಷನರ್‌ಗೆ strict ಆಗಿ ಸೂಚನೆಗಳನ್ನು ಸಚಿವರು ಕೊಡಲೇ ಬೇಕು. ನಾವು ಹುಟ್ಟಿ ಬೆಳೆದ ಊರಿನ ದೃಢೀಕರಣ ಪತ್ರವನ್ನು ಪಡೆಯಲು 20 ಸಲ ತಿರುಗಿಸಿ, ಒಬ್ಬ ಅಡ್ವೊಕೇಟ್ ಜೊತೆ ಡೆಪ್ಯೂಟಿ ಕಮಿಷನರ್ ಮುಂದೆ engage ಮಾಡಬೇಕಾದರೆ, is it possible to spend five or ten thousand to engage an advocate to argue on our behalf to get an eligibility certificate? ಸಚಿವರು ಹಿರಿಯರಿದ್ದಾರೆ. ಇದರ ಬಗ್ಗೆ ಅವರಿಗೆ ತುಂಬಾ ಅನುಭವ ಇದೆ. ಇದು ಒಂದು ವಿಚಾರ. ಎರಡನೆಯದಾಗಿ, ಪ್ರತಿ ಬಾರಿ ಅರ್ಜಿಯನ್ನು ಹಾಕುವಾಗಲೂ ಕೂಡ 15 ದಿವಸ ಇಲ್ಲವೇ 30 ದಿವಸಗಳ ಮುಂಚೆಯೇ ಆ certificate ತೆಗೆದುಕೊಳ್ಳಬೇಕೆನ್ನುವ ಷರತ್ತನ್ನು ಹಾಕುತ್ತಾರೆ. 30 ದಿವಸಗಳಲ್ಲ, 6 ತಿಂಗಳಾದರೂ certificate ಕೊಡುತ್ತಿಲ್ಲ. ಅದಕ್ಕೋಸ್ಕರ ಸಚಿವರಲ್ಲಿ ಕೈ ಜೋಡಿಸಿ ಕೇಳುವುದೇನೆಂದರೆ ಆ ಭಾಗದಲ್ಲಿ ಆಗಲಿ, ಅಥವಾ ಇಲ್ಲಿಯಾದರೂ ಒಂದು ಮೀಟಿಂಗ್ ನಿಗದಿ ಮಾಡಿದರೆ ನಾವು ಈ ವಿಚಾರವನ್ನು ಸಮಗ್ರವಾಗಿ ಸಚಿವರ ಗಮನಕ್ಕೆ ತರುತ್ತೇವೆ. ಈ ನಿಟ್ಟಿನಲ್ಲಿ ನಿಖರವಾದಂತಹ ಒಂದು ಆದೇಶವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. HKDB-371 (J) ಗೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ಹೆಚ್.ಕೆ.ಪಾಟೀಲ್ ನೇತೃತ್ವದಲ್ಲಿ ವಿಧಾನ ಮಂಡಲದ ಒಂದು Sub-committee ಇದೆ. ಆ ಸಬ್ ಕಮಿಟಿಯವರನ್ನು ಸಹ ಈ ಒಂದು ಸಭೆಗೆ ಕರೆಯಬೇಕು. ಏಕೆಂದರೆ, ಅಲ್ಲಿಯೇ ಎಲ್ಲಾ plan ಮಾಡುವುದಾಗಿದೆ. ಶ್ರೀಮಾನ್ ಹೆಚ್.ಕೆ.ಪಾಟೀಲ್ ನೇತೃತ್ವದಲ್ಲಿ ಒಂದು ಸಬ್ ಕಮಿಟಿ ಇದೆ. ಆ ಸಬ್ ಕಮಿಟಿ ಮತ್ತು ಆ ಭಾಗದಲ್ಲಿರುವಂತಹ ಎಲ್ಲಾ ಶಾಸಕರುಗಳನ್ನು ಆ ಒಂದು ಸಭೆಗೆ ಕರೆದರೆ ಈ ಸಮಸ್ಯೆ ಪರಿಹಾರವಾಗುತ್ತದೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಇನ್ನೊಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಅದರಲ್ಲಿ ಇರುವಂತಹ ನಿಯಮಗಳು, ಅರ್ಹತೆಗಳು ಎಲ್ಲವನ್ನೂ ಹೇಳಿದರು. ಆದರೆ, ಇನ್ನೊಂದು ಪ್ರಮುಖ ಅರ್ಹತೆ ಇದೆ, ಎಷ್ಟು ಅರ್ಜೆಂಟ್ ಅರ್ಹತಾ ಪತ್ರ ಬೇಕೋ, ಅದಕ್ಕೆ ಹಣದ ಅರ್ಹತೆಯನ್ನು ಪೂರ್ಣಗೊಳಿಸಿದರೆ ಯಾರಿಗೆ ಆಗಲಿ, ತಕ್ಷಣ ಅರ್ಹತಾ ಪ್ರಮಾಣ ಪತ್ರ ಸಿಕ್ಕುತ್ತದೆ.

**ಉಪಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸದನ ಈ ತಿಂಗಳ 21ನೇ ತಾರೀಖಿನವರೆಗೂ ಮುಂದೆ ಹೋಗಿದೆ. ಸೋಮವಾರ, ಅಥವಾ ಮಂಗಳವಾರ ಯಾವುದೋ ಒಂದು ದಿವಸದಲ್ಲಿ ಸದನ ಸೇರುವುದಕ್ಕಿಂತ ಮುಂಚೆ, ಅಥವಾ ಸದನ ಸೇರಿದ ಮೇಲೆ ಒಂದು ಸಭೆಯನ್ನು ಕರೆದು, ಈ ಬಗ್ಗೆ ಚರ್ಚೆ ಮಾಡಿ, ಸರ್ಕಾರದಿಂದ ಏನಾದರೂ ಒಂದು ಸುತ್ತೋಲೆಯನ್ನೋ, ಮತ್ತೊಂದನ್ನು ಮಾಡುವುದಾದರೆ ಮಾಡೋಣ. ಇದರ ಬಗ್ಗೆ ವಿಳಂಬವಾಗುವುದು ಬೇಡ.

**ಉಪಸಭಾಪತಿಯವರು:-** ಶ್ರೀಯುತ ಎಚ್ಎಂ. ರೇವಣ್ಣನವರ ಪ್ರಶ್ನೆಗೆ ಮತ್ತೆ ಒಂದು ವಾರ ಕಾಲಾವಕಾಶವನ್ನು ಮಾನ್ಯ ಸಚಿವರು ಕೇಳಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಮತ್ತೆ ಒಂದು ವಾರ ಕಾಲಾವಕಾಶವನ್ನು ಕೇಳಿದರೆ ಹೇಗೆ? ಏತಕ್ಕೋ ಏನೋ ಈ ಜಾಗ ಸರಿ ಇಲ್ಲವೆಂದು ಕಾಣುತ್ತದೆ. ನನಗೆ ಈ ಜಾಗವನ್ನು ಬದಲಾಯಿಸಿ.

**ಉಪಸಭಾಪತಿಯವರು:-** ಶ್ರೀಯುತ ರೇವಣ್ಣನವರೇ, ಮಾನ್ಯ ಸಚಿವರು ಒಂದು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದೇನು ಅಂತಹ ದೊಡ್ಡ ಪ್ರಶ್ನೆ ಅಲ್ಲ. ಕಳೆದ ಬಾರಿಯೂ ಇದೇ ಪ್ರಶ್ನೆಯನ್ನು ಕೇಳಿದ್ದಾಗ 10 ದಿವಸಗಳಲ್ಲಿ ಕೊಡುತ್ತೇವೆಂದು ಹೇಳಿದ್ದರು. ಇದು ಎರಡನೆ ಬಾರಿಗೆ ಮುಂದಕ್ಕೆ ಹೋಗುತ್ತಿದೆ. ನಮ್ಮ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ಶ್ರೀಮತಿ ತಾರ ಮೇಡಂನವರದ್ದು, ಶ್ರೀಮತಿ ಜಯಮಾಲ ಮೇಡಂ ರವರ ಪ್ರಶ್ನೆಗಳು ಬಂದಂತೆ ನಮ್ಮ ಪ್ರಶ್ನೆಗಳು ಬರುವುದಿಲ್ಲ. ಈ ಪ್ರಶ್ನೆ ಹೇಗೆ ಬಂತೋ ನಮಗೆ ಗೊತ್ತಿಲ್ಲ. ಬರುವುದು ಒಂದೊಂದು ಪ್ರಶ್ನೆ. ಅದಕ್ಕೂ ಉತ್ತರ ಬರುವುದಿಲ್ಲವೆಂದರೆ ನಾವು ಏನು ಮಾಡಬೇಕೋ ಗೊತ್ತಿಲ್ಲ.

(ಗೊಂದಲ)

**ಉಪಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಶ್ರೀಯುತ ರೇವಣ್ಣನವರೇ, ನಿಮಗೆ ಆದಷ್ಟು ಬೇಗ ಉತ್ತರ ಒದಗಿಸಿಕೊಡಲಿಕ್ಕೆ ಮಾನ್ಯ ಸಚಿವರಿಗೆ ಹೇಳುತ್ತೇನೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ. .

**ಉಪಸಭಾಪತಿಯವರು:–** ಶ್ರೀಯುತ ಶ್ರೀಕಂಠೇಗೌಡರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ತಡೆಹಿಡಿಯಲಾದ ಪ್ರಶ್ನೆಗಳಿಗೆ ಉತ್ತರ ಮುಕ್ತಾಯಗೊಂಡಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು**

**ಡಾ॥ ಜಿ. ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ: 14ನೇ ಜೂನ್, 2017 ಸಮೂಹ–III ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 125 ಪ್ರಶ್ನೆಗಳ ಪೈಕಿ 73 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಮುಂದು. .

(720) 14.06.2017 ಎಸ್‌ಪಿಆರ್–ವಿಕೆ 1.50

**ಸಭಾಪತಿಯವರು:–** ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಸಂಬಂಧಪಟ್ಟಂತೆ ಯಾವುದಾದರೂ ಉತ್ತರಗಳು ಬಂದಿದ್ದರೆ ಅವುಗಳನ್ನು ಮಂಡಿಸಿ.

**2. ಸಚಿವರ ಹೇಳಿಕೆ**

**ಅ) ವಿಷಯ:– ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗುತ್ತಿರುವ ಬಗ್ಗೆ**

* * *

**ಡಾ॥ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ದಿನಾಂಕ 06/06/2017 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಆ) ವಿಷಯ:– ಬೆಳೆ ಹಾನಿ ಹೊಂದಿರುವ ರೈತರಿಗೆ 100 ರೂಪಾಯಿಗಳ ಪರಿಹಾರ ನೀಡುವ ಬಗ್ಗೆ**

* * *

“ದುಪಯೋಗಪಡಿಸಿಕೊಳ್ಳಲು ಪ್ರಕಟಣೆಗಾಗಿ ಅಲ್ಲ”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ದಿನಾಂಕ 12/06/2017 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಮಾನ್ಯ ಕಂದಾಯ ಸಚಿವರ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಇ) ವಿಷಯ:- ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳ ಪೂರೈಕೆ ಬಗ್ಗೆ**

* * *

**ಡಾ॥ ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರರವರು ದಿನಾಂಕ 12/06/2017 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಈ) ವಿಷಯ:- ಎನ್.ಸಿ.ಟಿ.ಇ. ಹೊಸ ನಿಯಮಕ್ಕೆ ಹಿಂದಿ ಶಿಕ್ಷಕರು ಕಂಗಾಲಾಗಿರುವ ಬಗ್ಗೆ**

* * *

**ಡಾ॥ ಜಿ.ಪರಮೇಶ್ವರ(ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ದಿನಾಂಕ 12/06/2017 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

## 3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ)ವಿಷಯ:-ವಿಧಾನಸೌಧ ಆವರಣದಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿರವರ ಪ್ರತಿಮೆ ಅನಾವರಣಗೊಂಡಿದ್ದರೂ ಪ್ರತಿಮೆ ಕೆಳಗೆ ನಾಮಫಲಕ ಅಳವಡಿಸದೇ ಇರುವ ಬಗ್ಗೆ**

– – –

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ವಿಧಾನಸೌಧದ ಆವರಣದಲ್ಲಿರುವ ಲಾಲ್‌ಬಹದ್ದೂರ್ ಶಾಸ್ತ್ರಿರವರ ಪ್ರತಿಮೆ ಇರುವುದು ಸರಿಯಷ್ಟೇ. ಆದರೆ, ಪ್ರತಿಮೆ ಅನಾವರಣಗೊಂಡು ಮೂರು ವರ್ಷಗಳು ಕಳೆದಿದ್ದರೂ ಸಹ, ಶಾಸ್ತ್ರೀಜೀಯವರ ಪ್ರತಿಮೆಯ ಬಳಿಯಿರುವ ಸ್ತಂಭದಲ್ಲಿ ಯಾವುದೇ ನಾಮಫಲಕ, ವಿವರಗಳು ಕಾಣಿಸದಿರುವುದು ಬೇಸರದ ಸಂಗತಿ. ಈ ವಿಷಯದ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ ಪ್ರಕಟವಾಗಿ ಸುದ್ದಿಯಾಗಿರುತ್ತದೆ. ಇಷ್ಟು ವರ್ಷಗಳು ಕಳೆದರೂ ಸಹ, ಇಲ್ಲಿಯವರೆಗೆ ಶಾಸ್ತ್ರೀಜೀಯವರ ಪ್ರತಿಮೆಯ ಬಳಿ ಅವರ ನಾಮಫಲಕ ಹಾಕದೇ ಇರುವುದು ವಿಷಾದನೀಯ ಸಂಗತಿಯಾಗಿದೆ. ವಿಧಾನಸೌಧಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ, ಮಕ್ಕಳಿಗೆ ಮಾಹಿತಿ ಸಿಗುವಂತೆ ಮಾಡುವುದು ಬಹಳ ಮುಖ್ಯ. ಆದ್ದರಿಂದ ತಕ್ಷಣವೇ ಸರ್ಕಾರ ಎಚ್ಚೆತ್ತು, ಧೀಮಂತ ನಾಯಕನ ಪ್ರತಿಮೆಯ ಬಳಿ ನಾಮಫಲಕ ಹಾಗೂ ಅವರ ವಿವರಗಳನ್ನು ಹಾಕುವಂತೆ ಏರ್ಪಾಡು ಮಾಡುವ ಸಂಬಂಧ ಚರ್ಚಿಸಿ, ಸರ್ಕಾರಕ್ಕೆ ಶೂನ್ಯ ವೇಳೆಯಲ್ಲಿ ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಆ)ವಿಷಯ:- ಕೂಡಗಿ ವಿದ್ಯುತ್ ಸ್ಥಾವರದಿಂದ 10 ಕಿಲೋಮೀಟರ್ ವ್ಯಾಪ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ 24 ಗಂಟೆಗಳ ಕಾಲ ಪೂರೈಕೆ ಕುರಿತು**

\- - -

**ಶ್ರೀ ಬಸನಗೌಡ್ರ ಪಾಟೀಲ್ ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ರಾಜ್ಯದ ಶೇಕಡಾ 50 ಕ್ಕೂ ಹೆಚ್ಚು ವಿದ್ಯುತ್‌ನ್ನು ಪೂರೈಸುವ ಏಕೈಕ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಕೂಡಗಿ ವಿದ್ಯುತ್ ಸ್ಥಾವರವು ಪೂರ್ಣಗೊಂಡಿದ್ದು, ಈಗಾಗಲೇ ಸದರಿ ಗ್ರಾಮದ ವ್ಯಾಪ್ತಿಯಲ್ಲಿ ಕೇವಲ ಐದು ಕಿಲೋಮೀಟರ್ ವ್ಯಾಪ್ತಿಯ ಕೇವಲ ಐದು ಗ್ರಾಮಗಳನ್ನು ತನ್ನ ವ್ಯಾಪ್ತಿಗೆ ಅಳವಡಿಸಿಕೊಂಡು ಅಭಿವೃದ್ಧಿ ಪಡಿಸುತ್ತಿದೆ. ಇದರಿಂದ ಕೇವಲ ಸುತ್ತಲಿನ ಐದು ಗ್ರಾಮಗಳಿಗೆ ಮಾತ್ರ ಅನುಕೂಲವಾಗಿರುತ್ತದೆ. ಆದರೆ ಸದರಿ ವಿದ್ಯುತ್ ಸ್ಥಾವರದಿಂದ ಸುತ್ತಲಿನ 10 ಕಿಲೋಮೀಟರ್ ವ್ಯಾಪ್ತಿಯವರೆಗೂ ಬೂದಿಯ ಧೂಳುಗಳಿಂದ ರೈತರ ಬೆಳೆಗೂ ಪರಿಣಾಮವುಂಟಾಗಲಿದೆ. ಇದರಿಂದ

ಉಪಯೋಗ, ಪ್ರಕಟಣೆ, ಪತ್ರಿಕಾ ಪ್ರಕಟಣೆಗಾಗಿ ಅಲ್ಲ

ರೈತರಿಗೆ ತುಂಬಾ ನಷ್ಟವುಂಟಾಗುತ್ತಿದೆ. ಈಗಾಗಲೇ ಕೂಡಗಿ ವಿದ್ಯುತ್ ಸ್ಥಾವರದವರು ಐದು ಗ್ರಾಮಗಳಾದ ಮಸೂತಿ, ಮುತ್ತಗಿ, ಗೊಳಸಂಗಿ ಇವುಗಳನ್ನು ದತ್ತುಕ್ಕೆ ತೆಗೆದುಕೊಂಡು ಮೂಲಭೂತ ಸೌಕರ್ಯಗಳಾದ ರಸ್ತೆ, ಒಳಚರಂಡಿ, ಸಮುದಾಯ ಭವನ, ವಿದ್ಯುತ್ ದೀಪ, ಸೋಲಾರ ದೀಪ, ಶೌಚಾಲಯ ಇತ್ಯಾದಿಗಳನ್ನು ಕೈಗೆತ್ತಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ. ಸದರಿ ಕೂಡಗಿ ವಿದ್ಯುತ್ ಸ್ಥಾವರದಿಂದ ಸುತ್ತಲಿನ 10 ಕಿಲೋಮೀಟರ್ ವ್ಯಾಪ್ತಿಯ ಗ್ರಾಮಗಳಿಗೂ ಈ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಈಗಾಗಲೇ ಹಲವು ಬಾರಿ ಒತ್ತಾಯಿಸಿದ್ದರೂ ಕಾರ್ಯಗತವಾಗಿರುವುದಿಲ್ಲ. ಆದ್ದರಿಂದ ಕನಿಷ್ಠ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಈ ಎಲ್ಲಾ ಮೂಲಭೂತ ಸೌಲಭ್ಯ ಹಾಗೂ ಅಗತ್ಯ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡಿ ಈ ಗ್ರಾಮಗಳಿಗೂ ಅನುಕೂಲ ಕಲ್ಪಿಸಿಕೊಡಬೇಕು ಮತ್ತು ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ದಿನದ 24 ಗಂಟೆಗಳ ನಿರಂತರ ವಿದ್ಯುತ್ ನೀಡಬೇಕೆಂದು ತಮ್ಮ ಮುಖಾಂತರ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಂಧನ ಸಚಿವರಿಂದ ಉತ್ತರವನ್ನು ಒದಗಿಸಿ ಕೊಡಲಾಗುವುದು.

**ಇ) ವಿಷಯ:- ಚಾಮರಾಜನಗರದಲ್ಲಿ ಒಳಚರಂಡಿ ಕೆಲಸ ಕಳೆದ ಐದು ವರ್ಷಗಳಿಂದ ಮುಕ್ತಾಯವಾಗದಿರುವ ಬಗ್ಗೆ**

- - -

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಾಮರಾಜನಗರದಲ್ಲಿ ಒಳಚರಂಡಿ ಕಾಮಗಾರಿಗಳು ಕಳೆದ ಐದು ವರ್ಷದಿಂದ ನಡೆಯುತ್ತಿದ್ದು ಇದುವರೆಗೂ ಮುಕ್ತಾಯವಾಗಿಲ್ಲ. ಒಳಚರಂಡಿ ಕಾಮಗಾರಿಗಾಗಿ ಅಗೆದಿದ್ದ ರಸ್ತೆಗಳನ್ನು ಸರಿಯಾಗಿ ಮುಚ್ಚಿಲ್ಲ. ರಸ್ತೆಗಳೆಲ್ಲಾ ಕೊರಕಲು ಬಿದ್ದಿವೆ. ಚರಂಡಿಗಳಲ್ಲಿ ಮಣ್ಣು ತುಂಬಿದೆ. ಇದರಿಂದ ಬೇಸಿಗೆಯಲ್ಲಿ ನಗರದ ತುಂಬಾ ಎಲ್ಲೆಡೆ ಧೂಳು ತುಂಬಿ ನಾಗರಿಕರಿಗೆ, ವಿದ್ಯಾರ್ಥಿಗಳಿಗೆ, ರೋಗಿಗಳಿಗೆ ಬಹಳ ತೊಂದರೆಯಾಯಿತು. ಈಚೆಗೆ ಆ ಅವ್ಯವಸ್ಥೆಯ ಬಗ್ಗೆ ನಾಗರೀಕರು ಪ್ರತಿಭಟಿಸಿ ಚಾಮರಾಜನಗರಕ್ಕೆ ಧೂಳು ನಗರ ಎಂಬ ಹೆಸರಿಡಬೇಕೆಂದು ಪ್ರತಿಭಟನೆ ನಡೆಸಿದ್ದರು.

ಈಗ ಮಳೆ ಬಿದ್ದು ಆ ಗುಂಡಿಗಳಲ್ಲಿ, ತೆರೆದ ಚರಂಡಿಗಳಲ್ಲಿ ನೀರು ತುಂಬಿದೆ. ರಸ್ತೆಗಳಲ್ಲಿ ಓಡಾಡಲೂ ಸಾಧ್ಯವಾಗುತ್ತಿಲ್ಲ. ಕಳೆದ ವಾರ ಭ್ರಮರಾಂಭ ಬಡಾವಣೆಯ ಮಹಿಳೆಯರು ಕೆಸರು ಗದ್ದೆಯಂತಾಗಿದ್ದ ರಸ್ತೆಯಲ್ಲಿ ಮರಗಿಡದ ಸಸಿಗಳನ್ನು ನೆಟ್ಟು ಪ್ರತಿಭಟನೆ ಸಲ್ಲಿಸಿದ್ದಾರೆ. ನಗರದ ಚೆನ್ನಿಪುರದ ಮೊಳೆ, ಉಪ್ಪಾರರ ಬೀದಿ, ಮೂಡುಮೊಳೆ, ಜಾಲಹಳಿ ಹುಂಡಿ, ಮೂಡಲುಪುರ, ಗಾಳಿಪುರ, ರಾಮಸಮುದ್ರ ಬಡಾವಣೆಗಳಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆಯೇ ಇಲ್ಲ. ಇದರಿಂದ ಸೊಳ್ಳೆಕಾಟ ಜಾಸ್ತಿಯಾಗಿದ್ದು, ನಗರದಲ್ಲಿ ಡೆಂಗ್ಯೂ, ಚಿಕನ್ ಗುನಿಯಾ ಖಾಯಿಲೆಗಳು ತಲೆದೋರಿವೆ. ಇದುವರೆಗೆ ನಗರ ಮತ್ತು ಜಿಲ್ಲೆಯ ಕೆಲವೆಡೆ 35 ಡೆಂಗ್ಯೂ, 18 ಚಿಕನ್ ಗುನಿಯಾ, 17 ಮಲೇರಿಯಾ ಪ್ರಕರಣಗಳು ವರದಿಯಾಗಿದೆ. ಕೂಡಲೇ ಒಳಚರಂಡಿ ಕಾಮಗಾರಿಯನ್ನು ಮುಗಿಸಬೇಕು, ರಸ್ತೆಗಳನ್ನು ಸರಿಪಡಿಸಬೇಕು. ನಗರಾಭಿವೃದ್ಧಿ ಇಲಾಖೆ, ನಗರ ಸಭೆಯವರು, ಆರೋಗ್ಯ ಇಲಾಖೆಯವರು ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರುತ್ತೇನೆ.

**ಶ್ರೀ ಆರ್.ರೋಷನ್ ಬೇಗ್ (ನಗರಾಭಿವೃದ್ಧಿ, ನಗರಸಭೆ, ನಗರ ಭೂಸಾರಿಗೆ, ಹಜ್ ಮತ್ತು ವಕ್ಫ್ ಸಚಿವರು):–**ಮಾನ್ಯ ಸಭಾಪತಿಯವರೇ, ಈ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆ. ಚಾಮರಾಜನಗರ ಒಳಚರಂಡಿ ಯೋಜನೆಯನ್ನು Asian Development Bank ನ ಸಹಾಯದಿಂದ 'North Karnataka Urban Sector Investment Program' ನಿಂದ ಪ್ರಾರಂಭವಾಗಿದೆ. ಒಟ್ಟು 26.7 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಯಾಗಿದ್ದು, ಈವರೆಗೆ ಒಟ್ಟು 23 ಕೋಟಿ ರೂಪಾಯಿಗಳಷ್ಟು ಹಣ ವೆಚ್ಚವಾಗಿವೆ. ಶೇಕಡ 90 ರಷ್ಟು ಕೆಲಸವು ಪೂರ್ಣಗೊಂಡಿದ್ದು ಇನ್ನೂ ಸ್ವಲ್ಪ ಕೆಲಸವು ಬಾಕಿಯಿದೆ. ಸದರಿ ಕಾಮಗಾರಿಯನ್ನು ಅರವಿಂದೋ ಜೇವಿಯಾ ಎಂಬ ಗುತ್ತಿಗೆದಾರರಿಗೆ 2012 ನೇ ಸಾಲಿನಲ್ಲಿ ವಹಿಸಿದ್ದು, ಅದು 2013 ನೇ ಸಾಲಿನಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಸದರಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರವು ಸಮಯಾವಕಾಶವನ್ನು ನೀಡಿದೆ ಏಕೆಂದರೆ ಅಲ್ಲಿ ಕೆಲವೊಂದು ಕಟ್ಟಡಗಳು, ರಾಷ್ಟ್ರೀಯ ಹೆದ್ದಾರಿಗಳಿವೆ. ಕಾಮಗಾರಿಯನ್ನು ಜಾರಿಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅನುಮತಿಯನ್ನು ನೀಡಿರಲಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಲು ಕಾಲಾವಕಾಶ ಬೇಕಾಗಿತ್ತು. ಇಂತಹ ಕೆಲವು ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ. 2017 ನೇ ಸಾಲಿನಲ್ಲಿ ಕಾಮಗಾರಿಯು ಪೂರ್ಣಗೊಳ್ಳಬೇಕು. ಆದಷ್ಟು ಶೀಘ್ರದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂಬ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ಕಳೆದ ಐದು ವರ್ಷಗಳಿಂದ ಕಾಮಗಾರಿಯು ಸ್ಥಗಿತಗೊಂಡಿದ್ದು ಯಾವುದೇ ರೀತಿಯ ಕೆಲಸಗಳು ಅಲ್ಲಿ ನಡೆಯುತ್ತಿಲ್ಲ. ಬೇಸಿಗೆಯ ಕಾಲದಲ್ಲಿ ಧೂಳು, ಮಳೆಗಾಲದಲ್ಲಿ ಗುಂಡಿಗಳು ನಿರ್ಮಾಣವಾಗುವಂತಹ ಪರಿಸ್ಥಿತಿಯುಂಟಾಗಿದೆ. ನಾನು ಮೊದಲನೇಯ ಬಾರಿಗೆ ಶಾಸಕನಾಗಿದ್ದಾಗ ಈ ವಿಚಾರದ ಬಗ್ಗೆ ದೂರನ್ನು ನೀಡಿದ್ದೇನು. ಆದರೆ ಇವತ್ತಿಗೂ ಅಲ್ಲಿನ ಪರಿಸ್ಥಿತಿ ಹಾಗೆಯೇ ಇದೆ. ಆದ್ದರಿಂದ ದಯವಿಟ್ಟು ಆದಷ್ಟು ಶೀಘ್ರದಲ್ಲಿ ಕ್ರಮವನ್ನು ತೆಗೆದುಕೊಳ್ಳಿ. ಕಳೆದ ಐದು ವರ್ಷಗಳಿಂದ ಕಾಮಗಾರಿಯು ನನೆಗುದಿಗೆ ಬಿದ್ದಿದೆ.

**ಶ್ರೀ ಆರ್.ರೋಷನ್ ಬೇಗ್:-**ಮಾನ್ಯ ಸಭಾಪತಿಯವರೆ, ಪ್ರಸ್ತುತ ಅಧಿವೇಶನ ಪೂರ್ಣಗೊಂಡ ನಂತರ ನಾನು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆಯನ್ನು ಮಾಡುತ್ತೇನೆ.

**ಈ)ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ಬಿ.ಎಡ್., ಪೂರೈಸದಿರುವ ಉಪನ್ಯಾಸಕರಿಗೆ ಬಿ.ಎಡ್., ವ್ಯಾಸಂಗ ಮಾಡಲು ಅನುಮತಿ ನೀಡಿ ವೇತನ ನೀಡದಿರುವ ಬಗ್ಗೆ**

\- - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 2013 ರಲ್ಲಿ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪದವಿ ಕಾಲೇಜಿನ ಉಪನ್ಯಾಸಕರಾಗಿ ಆಯ್ಕೆಯಾಗಿ B.Ed. ಪದವಿ ಪೂರೈಸದಿರುವ ಉಪನ್ಯಾಸಕರಿಗೆ B.Ed. ಪದವಿ ವ್ಯಾಸಂಗವನ್ನು ಆರಂಭಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಯು ಅನುಮತಿ ನೀಡಿ ಕರ್ತವ್ಯದಿಂದ ಬಿಡುಗಡೆಗೊಳಿಸಿದೆ. ಈ ಉಪನ್ಯಾಸಕರಿಗೆ ಕಳೆದ ಎರಡು ಮೂರು ತಿಂಗಳಿಂದ ವೇತನವನ್ನು ನೀಡಿರುವುದಿಲ್ಲ. ಆದರೆ ಸರ್ಕಾರ ವೇತನ ಸಹಿತ ರಜೆ ಆದೇಶವನ್ನು ಹೊರಡಿಸದೆ ಇರುವುದರಿಂದ ಸುಮಾರು 733 ಕ್ಕೂ ಹೆಚ್ಚು ಉಪನ್ಯಾಸಕರು ಗೊಂದಲದಲ್ಲಿ ಸಿಲುಕಿದ್ದಾರೆ. ಹೀಗಾಗಿ ಶೀಘ್ರದಲ್ಲೇ ವೇತನ ಸಹಿತ ಆದೇಶವನ್ನು ಹೊರಡಿಸಲು ಆಗ್ರಹಿಸುತ್ತಾ, ಇದೇ ಗುರುವಾರದಂದು ನಗರದಲ್ಲಿ ಉಪನ್ಯಾಸಕರು ಪ್ರತಿಭಟನೆಯನ್ನು ನಡೆಸಲು ತೆಗೆದುಕೊಂಡಿರುವ ನಿರ್ಧಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ 2009 ರಲ್ಲಿ ನೇಮಕಗೊಂಡ ಉಪನ್ಯಾಸಕರಿಗೆ ಶಿಷ್ಯ ವೇತನ ಸಹಿತ B.Ed. ವ್ಯಾಸಂಗ ಮಾಡಲು ಪದವಿ ಪೂರ್ವ ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು. 2009 ರಲ್ಲಿ 1,300 ಉಪನ್ಯಾಸಕರಿಗೆ ವೇತನ ಸಹಿತ ರಜೆ ನೀಡಿ, B.Ed. ವ್ಯಾಸಂಗಕ್ಕೆ ಅವಕಾಶ ಕಲ್ಪಿಸಿತ್ತು. ಈ ಹಿನ್ನೆಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2013 ರಲ್ಲಿ ನೇಮಕಗೊಂಡಿರುವ ಉಪನ್ಯಾಸಕರಿಗೂ ಆ ರೀತಿಯ ವೇತನ ಸಹಿತ ರಜೆ ನೀಡಬೇಕೆಂದು ಆಗ್ರಹಿಸಿದ್ದರು. ಬೇಡಿಕೆಗಳನ್ನಿಟ್ಟು ತಿಂಗಳುಗಳೇ ಕಳೆದರೂ ಸರ್ಕಾರ ಈ ಬಗ್ಗೆ ಇನ್ನು ಸ್ಪಂದಿಸಿಲ್ಲ ಹಾಗೂ ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ. ಸರ್ಕಾರ ಶೇಕಡ 50 ರಷ್ಟು ವೇತನವನ್ನು ನೀಡುವ ಭರವಸೆ ನೀಡಿತ್ತು. ಆದರೆ, ಈ ಬಗ್ಗೆ ಸ್ಪಷ್ಟ ಆದೇಶವನ್ನು ಇನ್ನೂ ಹೊರಡಿಸಿಲ್ಲ. ಹಾಗಾಗಿ ಈ ಉಪನ್ಯಾಸಕರು ಎರಡು ವರ್ಷಗಳ ಕಾಲ ವೇತನವಿಲ್ಲದೇ B.Ed. ಕೋರ್ಸ್ ಮಾಡಲು ಸಾಧ್ಯವಿಲ್ಲದೆ ಕುಟುಂಬವನ್ನು ನಿರ್ವಹಣೆ ಮಾಡುವಂತಹ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಗಮನಹರಿಸಿ 2009 ನೇ ಸಾಲಿನ ಉಪನ್ಯಾಸಕರಿಗೆ ನೀಡಿದ್ದಂತೆ ಪೂರ್ಣ ವೇತನ ಸಹಿತ ರಜೆ ನೀಡುವ ಮೂಲಕ ಉಪನ್ಯಾಸಕರ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡಬೇಕಾಗಿ ಈ ಮೂಲಕ ಸರ್ಕಾರದ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ ಮೇಲೆ ಮಾತನಾಡಲೋ ಅಥವಾ ಈಗಲೇ ಉತ್ತರವನ್ನು ಹೇಳಲೋ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಸಚಿವರು ಈಗಲೇ ಹೇಳಲಿ ; ನಮಗೆ ಸಮಸ್ಯೆಯನ್ನು ಪರಿಹಾರ ಮಾಡಿಕೊಟ್ಟರೆ ಸಾಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠೇಗೌಡರ ರವರು ಪ್ರಸ್ತಾಪಿಸಿದ ವಿಚಾರವು ಸರ್ಕಾರದ ಗಮನದಲ್ಲಿದೆ. ನಮ್ಮಲ್ಲಿನ ಎನ್.ಸಿ.ಟಿ.ಇ. ರವರು 2003 ನೇ ಸಾಲಿನಲ್ಲಿ ಭೋಧಕ ವೃಂದದವರು B.Ed. ಪದವಿಯನ್ನು ಹೊಂದುವುದು ಕಡ್ಡಾಯಗೊಳಿಸಿದ್ದರು. ಅದೇ ಪ್ರಕಾರವಾಗಿ 2008 ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಇನ್ನು ಮುಂದಾಗುವಂತಹ ಎಲ್ಲಾ ನೇಮಕಾತಿ ಪ್ರಕ್ರಿಯೆಯಲ್ಲಿ B.Ed. ಪದವಿಯ ವಿದ್ಯಾರ್ಹತೆಯನ್ನು ಕಡ್ಡಾಯಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ 2009 ನೇ ಸಾಲಿನಲ್ಲಿ ಹೊರಡಿಸಿದ ಅಧಿಸೂಚನೆಯನ್ವಯ ಕೆಲವೇ ತಿಂಗಳುಗಳ ಕಾಲಾವಕಾಶದಲ್ಲಿ B.Ed. ಪದವಿಯನ್ನು ಪಡೆಯಲು ಅವಕಾಶವಿಲ್ಲದಂತಹ ಕಾರಣಗಳಿಂದ ಒಂದು ಬಾರಿಗೆ ಮಾತ್ರವೇ B.Ed. ಪದವಿಯ ವಿದ್ಯಾರ್ಹತೆ ಇಲ್ಲದೇ ಇದ್ದರೂ ಕೂಡ ನಾವು ಉಪನ್ಯಾಸಕರುಗಳಿಗೆ ಅವಕಾಶವನ್ನು ಮಾಡಿ ಕೊಟ್ಟು ಸುಮಾರು 1,300 ಉಪನ್ಯಾಸಕರುಗಳಿಗೆ 2009 ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಹುದ್ದೆಗಳನ್ನು ಭರ್ತಿಮಾಡಿ, ಉಪನ್ಯಾಸಕರುಗಳ ಅವರ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇವಾವಧಿಯಲ್ಲಿ B.Ed. ಪದವಿಯನ್ನು ಪೂರ್ಣಗೊಳಿಸುವಂತಹ ಪೂರ್ಣ ವೇತನ ಸಹಿತ ರಜೆಯನ್ನು ನೀಡಿದ್ದು ಸರಿ.

(ಮುಂದು)

**(721)14.06.2017 MSS-BNS 2.00**

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-**

ತದನಂತರ 2011ನೇ ಇಸವಿಯಲ್ಲಿ ಕರೆದಂತಹ ಹುದ್ದೆಗಳನ್ನು ತುಂಬಲು ಅರ್ಜಿ ಅಧಿಸೂಚನೆಯಲ್ಲಿ ಅದೇ ಒಂದು ತಪ್ಪು ಆಗಿರುವಂಥದ್ದು, ಕ್ಯಾಬಿನೆಟ್ ಅದನ್ನು ತಿರಸ್ಕರಿಸಿದ್ದರೂ ಕೂಡ ಕೆಲವೊಂದು ಅಧಿಕಾರಿಗಳು ಮಾಡಿದಂತಹ ಲೋಪದಿಂದ 2011ನೇ ಇಸವಿಯಲ್ಲಿ ಕರೆದಂತಹ ಅಧಿಸೂಚನೆಯ ಪ್ರಕಾರದಲ್ಲಿ B.Ed., ಮಾಡದೇ ಇರುವವರಿಗೆ ಉಪನ್ಯಾಸಕರ ಹುದ್ದೆಯನ್ನು ಮಂಜೂರಾತಿ ಮಾಡಿ, 2013ರಲ್ಲಿ ನೇಮಕಾತಿಯನ್ನು ಮಾಡಿಕೊಂಡಿದ್ದೇವೆ. ಆದರೆ ನೇಮಕಾತಿ ಪತ್ರವನ್ನು ಕೊಡುವಂತಹ ಸಂದರ್ಭದಲ್ಲಿ ಷರತ್ತು ಬದ್ಧವಾಗಿ ನಾಲ್ಕು ವರ್ಷಗಳ ಅವಧಿಯಲ್ಲಿ ಅವರುಗಳು B.Ed., ಪರೀಕ್ಷೆ ಪಾಸ್ ಮಾಡಿಕೊಳ್ಳಬೇಕು ಎನ್ನುವುದನ್ನು ಮಾಡಲಾಗಿದೆ. ಅವರಿಂದ ಮುಚ್ಚಳಿಕೆಯನ್ನು ಕೂಡಾ ಬರೆಸಿಕೊಂಡು ನೇಮಕಾತಿ ಆದೇಶವನ್ನು ಕೊಟ್ಟಿರುವಂಥದ್ದು. ಅದೇ ಸಂದರ್ಭದಲ್ಲಿ ಕಳೆದ ಎರಡು ವರ್ಷಗಳಲ್ಲಿ ಇವತ್ತು ಏನು ಸಂಜೆ ಕಾಲೇಜಿನಲ್ಲಿ B.Ed., ಮಾಡುವುದಕ್ಕೆ ಅವಕಾಶ ಮತ್ತು ಎರಡು ವರ್ಷಗಳ ಕಾಲ D.Ed., ಪರೀಕ್ಷೆಯನ್ನು ಪಾಸ್ ಮಾಡಿದವರಿಗೆ 10 ತಿಂಗಳಿನಲ್ಲಿ ಬಿ.ಎಡ್., ಮಾಡುವಂತಹ ಅವಕಾಶ ಅಥವಾ Distance Education or Open University ಮೂಲಕ ಬಿ.ಎಡ್., ಮಾಡಿಕೊಳ್ಳುವಂತಹ ಅವಕಾಶಗಳು ಏನಿತ್ತೋ ಅದನ್ನು ಸಂಪೂರ್ಣವಾಗಿ ತೆಗೆದು ಹಾಕಿ, regular classes ನಲ್ಲಿಯೇ ಬಿ.ಎಡ್., ಮಾಡಬೇಕೆಂದು ಕಡ್ಡಾಯವಾಗಿದೆ. ಆ ಕಾರಣದಿಂದ ಈ 733 ಉಪನ್ಯಾಸಕರಿಗೆ ಅವರ ವೇತನ ಶ್ರೇಣಿ ಏನಿದೆ ಅದರ 50% ಹಣವನ್ನು ಕೊಟ್ಟು 'Dies non' ಎನ್ನುವುದು ಏನು ಕೊಟ್ಟಿದ್ದೆವು, ಅದನ್ನು ತೆಗೆದು ಹಾಕುವುದಕ್ಕೆ ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಇವತ್ತು ಏನು ಅವರಿಗೆ ಮೂರು ತಿಂಗಳುಗಳಿಂದ ವೇತನವನ್ನು ಕೊಟ್ಟಿಲ್ಲ ಎನ್ನುವುದಿದೆ ಅದನ್ನು ಸರಿಪಡಿಸಿ ಆದೇಶ ಹೊರಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ. 2009ನೇ ಇಸವಿಯಲ್ಲಿ ನೇಮಕಗೊಂಡಂತಹ ಉಪನ್ಯಾಸಕರದು ಈಗ 2013ನೇ ಇಸವಿಯಲ್ಲಿ ನೇಮಕಗೊಂಡಂತಹ ಉಪನ್ಯಾಸಕರದು ವ್ಯತ್ಯಾಸ ಇದೆ. B.Ed., ಕಡ್ಡಾಯ ಎಂದು ಮಾಡಿದ್ದರೂ ಕೂಡ ಒಂದು ಸಾರಿಯಲ್ಲಿ

ಆಯ್ಕೆಯಾದ ಉಪನ್ಯಾಸಕರಿಗೆ ಏನು ರಿಯಾಯಿತಿಯನ್ನು ಕೊಟ್ಟಿದ್ದೆವು. ಆದರೆ ಅದೇ ರಿಯಾಯಿತಿಯನ್ನು ಮುಂದುವರೆಸುವುದಕ್ಕಾಗುವುದಿಲ್ಲ. ಜೂನ್ 2017ಕ್ಕೆ ನಾಲ್ಕು ವರ್ಷಗಳು ಪೂರೈಸುತ್ತಿದೆ. ಹಾಗಿದ್ದರೂ ಕೂಡ ಏನು probationary period ಅನ್ನು ಎರಡು ವರ್ಷ ವಿಸ್ತರಣೆ ಮಾಡಿ ಅವರುಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಈ ಷರತ್ತನ್ನು ಅವರುಗಳು ಒಪ್ಪಿ ನಮಗೆ ಬರೆದುಕೊಟ್ಟಿರುವಂತಹ ಹಿನ್ನಲೆಯಲ್ಲಿ ಶೇಕಡ 50 ರಷ್ಟು ಅವರ ವೇತನವನ್ನು ಬಿಡುಗಡೆಗೊಳಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹಿಂದೆ ಶಿಕ್ಷಣ ಸಚಿವರಾಗಿದ್ದಂತಹ ಶ್ರೀ ಕಿಮ್ಮನೆ ರತ್ನಾಕರ್ ಕಾಲದಲ್ಲಿ 2009ನೇ ಇಸವಿಯಲ್ಲಿ ಆಯ್ಕೆಯಾದ 1,300 ಜನರಿಗೆ B.Ed., ಮಾಡಲು deputation ಮೇಲೆ with salary ಕಳುಹಿಸಿ ಕೊಡಲಾಗಿತ್ತು. 733 ಜನ ಉಪನ್ಯಾಸಕರನ್ನು ಆ ರೀತಿಯಾಗಿ ಕಳುಹಿಸದೇ ಅನ್ಯಾಯವನ್ನು ಮಾಡಿದ್ದಾರೆ? ಬಿ.ಎಡ್., ಆಗದೇ ಇರುವವರನ್ನು ಏಕೆ ಇಲಾಖೆಯವರು ನೇಮಕ ಮಾಡಿದರು?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನವೀಯತೆಯನ್ನು ಕೂಡ ನೋಡಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಮಾನವೀಯತೆಯ ಪ್ರಶ್ನೆ ಬರುವುದಿಲ್ಲ. ಇಲಾಖೆಯ ನಿಯಮಾವಳಿಗಳ ಪ್ರಕಾರವಾಗಿ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಪ್ರತ್ಯೇಕವಾಗಿ ಪ್ರತಿಯೊಬ್ಬ ಉಪನ್ಯಾಸಕರು ನೇಮಕಾತಿ ಆದೇಶವನ್ನು ಪಡೆಯುವಾಗ ನಮಗೆ ಬರೆದುಕೊಟ್ಟು ಒಪ್ಪಿಕೊಂಡಿದ್ದಾರೆ. ಅದರಂತೆ ನಾವು ಆದೇಶವನ್ನು ಹೊರಡಿಸುತ್ತೇವೆ.

ಉ) ವಿಷಯ:- ಬೆಳಗಾವಿ ಜಿಲ್ಲೆ ನಿಪ್ಪಾಣಿ ನಗರಸಭೆಯ ಪೌರಕಾರ್ಮಿಕ ಮುಂಜಾಗರುಕತೆ ವಹಿಸದೇ ಸ್ವಚ್ಛತಾ ಕಾರ್ಯದ ಬಗ್ಗೆ.

- - -

**ಶ್ರೀ ಮಹಾಂತೇಶ ಮ.ಕವಟಗಿಮಠ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರದ ನಗರ ಸಭೆಯ ಪೌರ ಕಾರ್ಮಿಕನಾದ ಶ್ರೀ ರಣಜೀತ ಸದಾನಂದ ಕಾಂಬಳೆ ಇತನು ಮುಂಜಾಗ್ರತಾ ಕ್ರಮ ವಹಿಸದೆ, ಸ್ವಚ್ಛಾತಾ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ

"ಮಾಧ್ಯಮ/ನ್ಯಾಯಾಲಯಗಳಲ್ಲಿ ಪ್ರಕಟಣೆಗಾಗಿ ಅಲ್ಲ"

ಮೃತಪಟ್ಟಿದ್ದು ಸದರಿ ಪೌರ ಕಾರ್ಮಿಕನಿಗೆ ತನ್ನ ಕೆಲಸವನ್ನು ನಿರ್ವಹಿಸಲು ಬೇಕಾಗಿರುವ ಕನಿಷ್ಠ ಸೌಲಭ್ಯಗಳನ್ನು, ಇತರೆ ಮುಂಜಾಗ್ರತ ಸುರಕ್ಷಾತಾ ಸಾಮಗ್ರಿಗಳನ್ನು ಒದಗಿಸದೇ ಅಲ್ಲಿಯ ನಗರ ಸಭೆ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಸಾವಿಗೆ ಕಾರಣವಾದ ಗಂಭೀರ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇಂಥದ್ದೇ ಪ್ರಕರಣ ಬೆಳಗಾವಿ ಮಹಾನಗರದಲ್ಲಿ ವಿಜಯವಾಣಿಯಲ್ಲಿ ವರದಿಯಾಗಿದೆ. ಬೆಂಗಳೂರು ಮಹಾನಗರದಲ್ಲಿ ಅನೇಕ ಪೌರಕಾರ್ಮಿಕರು ಈ ರೀತಿಯ ಒಂದು ತೊಂದರೆಯನ್ನು ಅನುಭವಿಸಿ ಸಾವು ಅನ್ನು ಅಪ್ಪಿದ್ದಾರೆ. ದಯವಿಟ್ಟು ಪೌರಾಡಳಿತ ಸಚಿವರು ಪೌರಕಾರ್ಮಿಕರ ಬಗ್ಗೆ ಸರ್ಕಾರದ ನೀತಿ ಮತ್ತು ಸುರಕ್ಷತೆಯ ಬಗ್ಗೆ ತಮ್ಮ ನಿಲುವುವನ್ನು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪೌರಾಡಳಿತ ಸಚಿವರಿಗೆ ತಿಳಿಸಿ ಅವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

## 4. ವಿತ್ತೀಯ ಕಾರ್ಯಕಲಾಪ

### ಪೂರಕ ಅಂದಾಜುಗಳನ್ನೊಪ್ಪಿಸುವುದು

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಭಾರತ ಸಂವಿಧಾನದ 205(1)(ಎ) ನೆಯ ಅನುಚ್ಛೇದದ ಮೇರೆಗೆ 2017-18ನೇ ಸಾಲಿನ ಪೂರಕ ಅಂದಾಜುಗಳನ್ನು(ಮೊದಲನೆ ಕಂತು)ಅನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

## 5. ವರದಿಗಳನ್ನೊಪ್ಪಿಸುವುದು

**ಶ್ರೀ ಎನ್.ಎಸ್.ಬೋಸ್‌ರಾಜ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾಗಿ 2016-17ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 83 ಹಾಗೂ 84ನೇ ವರದಿಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಸಭಾಪತಿಯವರು:- ಮಂಡಿಸಲಾಯಿತು.

ಈಗ ಸದನವನ್ನು ಭೋಜನಕ್ಕಾಗಿ 3 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

(722)/14-06-2017/RC-KS(AK)/3-40

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 05 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 44 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಉಪಸಭಾಪತಿಯವರು**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಶ್ರೀ ಮರಿತಿಬ್ಬೇಗೌಡರು) ಪೀಠವನ್ನಲಂಕರಿಸಿದರು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಲಕ್ಷಾಂತರ ಹೊಲಿಗೆ ವೃತ್ತಿ ಬಾಂಧವರಿಗೆ ಈಗಾಗಲೇ ಜಾರಿಯಲ್ಲಿರುವ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮುಖಾಂತರ ಜಾರಿಯಲ್ಲಿರುವ ಭವಿಷ್ಯನಿಧಿ, ಪಿಂಚಣಿ ಮತ್ತು ಎನ್.ಪಿ.ಎಸ್. ಲೈಫ್ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಮಾನ್ಯ ಕಾರ್ಮಿಕ ಸಚಿವರ ಗಮನವನ್ನು ಒಂದು ವಾರದಿಂದ ಸೆಳೆಯುತ್ತಿದ್ದೇನೆ. ಆದರೆ ಮಾನ್ಯ ಮುಖ್ಯ ಸಚೇತಕರು ಕಾರ್ಮಿಕ ಸಚಿವರು ಸದನಕ್ಕೆ ಬರಬೇಕೆಂದು ತಿಳಿಸುವುದಕ್ಕಾಗುವುದಿಲ್ಲವೇ? ಅವರು ಬೇಕೆಂದೇ ಕರೆಯುತ್ತಿಲ್ಲ. ಮಾನ್ಯ ಸಚಿವರು ನಿನ್ನೆ ಇಡೀ ದಿವಸ ಸದನದಲ್ಲಿದ್ದರು. ಇವತ್ತು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಸದನದಲ್ಲಿದ್ದರು. ಆದರೆ ಈಗ ಸದನದಲ್ಲಿ ಇಲ್ಲ. ಈ ವಿಷಯ ವಾರದಿಂದ list ಆಗಿತ್ತು. ಮಧ್ಯೆ ಬಿಟ್ಟು ಹೋಯಿತು, ಪುನಃ ಇವತ್ತು list ಆಗಿದೆ. ಇವತ್ತು ಸಹ ಇದಕ್ಕೆ ಅವಕಾಶ ಕೊಡದೆ ಇರುವುದು ಸರಿಯೇ? ಇದು ಕಾರ್ಮಿಕರ ಸಮಸ್ಯೆ.

**ಉಪಸಭಾಪತಿಯವರು:-** ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣವೆಂದರೆ ಸಂಬಂಧಪಟ್ಟಂತಹ ಸಚಿವರು ಇಲ್ಲವಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ಸದನಕ್ಕೆ ಕರೆ ತರಬೇಕಾದುದು ಮಾನ್ಯ ಮುಖ್ಯ ಸಚೇತಕರ ಕರ್ತವ್ಯ ಅಲ್ಲವೆ? ಬೆಳಿಗ್ಗೆ ಇದ್ದರು, ಈಗ ಇಲ್ಲ.

**ಶ್ರೀ ಐವನ್ ಡಿ'ಸೋಜ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಚಾರದ ಬಗ್ಗೆ ಚರ್ಚೆ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-ಮಾನ್ಯ ಸಭಾಪತಿಯವರೇ,** ಮೊನ್ನೆ ದಿವಸ agenda ಇದ್ದಾಗ ಏಕೆ ನೀವು ಈ ವಿಷಯವನ್ನು ತೆಗೆದುಕೊಳ್ಳಲಿಲ್ಲ? ಆಗ ಮಾನ್ಯ ಸಚಿವರು ಇಲ್ಲ, ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆ ರೀತಿ ಹೇಳಿ ಎಷ್ಟು ದಿವಸ ಆಯಿತು?

**ಶ್ರೀ ಐವನ್ ಡಿ'ಸೋಜ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರಿಗೆ ಹೇಳಿದ್ದೇನೆ, agenda ಪ್ರಕಾರ ಹೋಗೋಣ. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ. ಅದನ್ನು ಮುಂದುವರೆಸೋಣ. The Hon'ble

Minister may come any time. ಮಾನ್ಯ ಸಚಿವರು ಬಂದಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮೊನ್ನೆ ದಿವಸ ಕೂಡ ಇದೇ ವಿಷಯವನ್ನೇ ಹೇಳಿದರು. ಆ ರೀತಿ ಮಾಡಬಾರದು. ಮಾನ್ಯ ಸಚಿವರು ನಿನ್ನೆ ಇಡೀ ದಿವಸ ಸದನದಲ್ಲಿದ್ದರು, ಇವತ್ತು ಮಧ್ಯಾಹ್ನ 2 ಗಂಟೆಯವರೆಗೂ ಸಹ ಸದನದಲ್ಲಿದ್ದರು. ನಾನೇನು agenda ಬಿಟ್ಟು ಮಾಡಿ ಎಂದು ಹೇಳಲಿಲ್ಲ. ಒಂದು ವಾರದಿಂದ ನನ್ನ ವಿಷಯ agendaದಲ್ಲಿ ಇರುವಾಗ ನಿಮ್ಮ ನಿಯಮ ಎಲ್ಲಿಗೆ ಹೋಗಿತ್ತು? ಇದು ಸರಿಯಲ್ಲ. ನೀವು ಈ ವಿಷಯವನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು. ಸಚಿವರು ಹೇಗೆ ಮಾಡುತ್ತಾರೆ ಎಂಬುದು ಅವರಿಗೆ ಸಂಬಂಧಪಟ್ಟಿರುವಂಥದ್ದು.

**ಉಪ ಸಭಾಪತಿಯವರು:-** ಈಗ ಸಂಬಂಧಪಟ್ಟಂತಹ ಸಚಿವರು ಇಲ್ಲದೆ ಇರುವುದರಿಂದ ಈಗ agenda ಪ್ರಕಾರ ನಿಯಮ 68ನ್ನು ಚರ್ಚೆಗೆ ತೆಗೆದುಕೊಳ್ಳೋಣ. ಆದರೆ ನಿಯಮ 68ರ ಅಡಿಯಲ್ಲಿ ಮಾತನಾಡುವಾಗ ಮಾನ್ಯ ಎಲ್ಲಾ ಸದಸ್ಯರು ದಯಮಾಡಿ ಸಹಕಾರ ನೀಡಬೇಕು. ತಾವು ಕೇಳಿದಷ್ಟು ಸಮಯ ನೀಡುವುದಕ್ಕೆ ಅವಕಾಶವಿಲ್ಲ. ಈ ದಿವಸ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ ಮುಕ್ತಾಯವಾಗಬೇಕು. ಏಕೆಂದರೆ, ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದಾರೆ. ದಯಮಾಡಿ ಈ ದಿವಸ ನಿಮ್ಮೆಲ್ಲರ ಸಹಕಾರದಿಂದ ನಿಯಮ 68ರ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುವುದಕ್ಕೆ ಸಹಕಾರ ನೀಡಬೇಕು. ಈಗ ನಿಯಮ 68ರ ಮೇರೆಗೆ ಚರ್ಚೆ ಮುಂದುವರೆಯುತ್ತದೆ. ಶ್ರೀಮತಿ ಜಯಮ್ಮರವರು ಮಾತನಾಡಿ.

**6. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ</u>**

**ವಿಷಯ:- ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಣಾಮದ ಬಗ್ಗೆ.**

---

**ಶ್ರೀಮತಿ ಜಯಮ್ಮ(ವಿಧಾನ ಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಬರದ ಬಗ್ಗೆ ಎಲ್ಲಾ ಸಹೋದರ ಸದಸ್ಯರು ಮಾತನಾಡಿದ್ದಾರೆ. ಸುಮಾರು 40 ವರ್ಷಗಳ ಹಿಂದೆ ಬರ ಹೇಗಿತ್ತು, ಹಾಗೂ ಆರು ವರ್ಷಗಳಿಂದ ಬರಗಾಲ ಹೇಗಿದೆ ಎನ್ನುವುದನ್ನು ರಾಜ್ಯಾದ್ಯಂತ ಮತ್ತು ಜಿಲ್ಲೆಯಾದ್ಯಂತ ಯಾವ ರೀತಿ ಬರ ಇದೆ ಎನ್ನುವುದನ್ನು ಈಗಾಗಲೇ ಎಲ್ಲರೂ

ತಿದ್ದುಪಡಿಯಾಗದ ಪ್ರತಿ ಪ್ರಕಟಣೆಗಾಗಿ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಅವರವರ ಸಮಸ್ಯೆಗಳನ್ನು ಯಾವ ಯಾವ ಜಿಲ್ಲೆಯಲ್ಲಿ ಯಾವ ರೀತಿ ಬರ ಇದೆ ಎನ್ನುವುದನ್ನು ಸಂಕ್ಷಿಪ್ತವಾಗಿ ಈ ಸದನದ ಮುಖಾಂತರ ಮಾತನಾಡಿದ್ದಾರೆ.

ನಮ್ಮ ಚಿತ್ರದುರ್ಗದ ಜಿಲ್ಲೆಯ ಅಳಿಯ ನಮ್ಮ ಪಕ್ಕದಲ್ಲಿಯೇ ಇದ್ದಾರೆ. ಆ ವಿಷಯದ ಬಗ್ಗೆ ತೆಗೆದುಕೊಂಡರೆ "ಎಲ್ಲಾರು ಅಳಿಯಾನಿಗೆ ಹೊಳ್ಳೆಣ್ಣೆ ಹೋಳಿಗೆ" ಆದರೆ ನಮ್ಮ ಚಿತ್ರದುರ್ಗದ ಅಳಿಯಾನಿಗೆ ಸಣ್ಣ ಶಾವಿಗೆ ಪುಡಿ ಬೆಲ್ಲ" ಎಂದು ಹೇಳುತ್ತಾರೆ. ಅಂದರೆ ಹಿಂದಿನ ಕಾಲದಲ್ಲಿ ಮದು-ಮಕ್ಕಳಾದಾಗ ಬೇಳೆ ಹೋಳಿಗೆ ಮಾಡಿ, ಅಳಿಯನಿಗೆ ಬಡಿಸುತ್ತಿದ್ದರು. ಆದರೆ ಯಾರ ಮನೆಯಲ್ಲಿ ಮಧು-ಮಗನಿಗೆ ಬೇಳೆ ಹಾಕಿ ಹೋಳಿಗೆ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥವರು "ಸಣ್ಣ ಶಾವಿಗೆ ಪುಡಿ ಬೆಲ್ಲ ಮಾಡಿ ಬಡಿಸುತ್ತೇನೆಂದು" ಎಂದು ಮಧುಮಗನ ಅತ್ತೆ ಹೇಳುತ್ತಿದ್ದರು. ಅಂತಹ ಒಂದು ಚಿತ್ರದುರ್ಗ ಜಿಲ್ಲೆಯಲ್ಲಿ ಯಾವ ರೀತಿ ಬರಗಾಲ ಬಂದಿದೆ ಎಂದು ಹೇಳುವುದಕ್ಕೆ ಏಳೆಂಟು ಗಂಟೆಗಳಾದರೂ ಸಾಕಾಗುವುದಿಲ್ಲ. ಆ ರೀತಿ ಬರದ ಛಾಯೆ ನಮ್ಮ ಊರನ್ನು ಆವರಿಸಿಕೊಂಡಿದೆ. ನಾನು ಈ ಹಿಂದೆಯು ಸಹ ಚಿತ್ರದುರ್ಗ ಜಿಲ್ಲೆಯ ಬಗ್ಗೆ ಸಾಕಷ್ಟು ಮಾತನಾಡಿದ್ದೇನೆ ಮತ್ತು ಅದರ ಬಗ್ಗೆ ಬೆಳಕನ್ನು ಸಹ ಚೆಲ್ಲಿದ್ದೇನೆ. ಚಿತ್ರದುರ್ಗ ಜಿಲ್ಲೆ ಎಂದರೆ ಎಲ್ಲಾ ಕೆರೆಗಳಲ್ಲಿಯೂ ಕೂಡ ನೀರು ತುಂಬಿರುತ್ತಿತ್ತು. ಎಲ್ಲಾ ಬಾವಿಗಳಲ್ಲಿಯೂ ಸಹ ಸಾಕಷ್ಟು ನೀರು ಇರುತ್ತಿತ್ತು. ಆ ಬಾವಿಯಲ್ಲಿ ಈಜು ಕಲಿತ್ತಿದ್ದು ಈಗಲೂ ಸಹ ನನಗೆ ನೆನಪಿದೆ. ಅಂದರೆ ಆಗ ಸಾಕಷ್ಟು ಮಳೆ ಬೀಳುತ್ತಿತ್ತು. ಆದರೆ ಇವತ್ತಿನ ದಿವಸ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿಗೂ ಸಹ ಪರದಾಡುವಂತಹ ಪರಿಸ್ಥಿತಿ ಬಂದಿದೆ. ಅದರಲ್ಲಿಯೂ ವಿಶೇಷವಾಗಿ ಹೇಳಬೇಕೆಂದರೆ ಮೊಳಕಾಲ್ಮೂರು, ಚೆಳ್ಳಕೆರೆ ಮತ್ತು ನಮ್ಮ ಪಕ್ಕದ ತಾಲ್ಲೂಕಾದಂತಹ ಪಾವಗಡದಲ್ಲಿಯೂ ಸಹ ಇದೇ ರೀತಿಯಾದಂತಹ ಬರ ಆವರಿಸಿಕೊಂಡಿದೆ.

(ಮುಂದು)

(723) 14.06.2017 KG.AK(KS) 3.50

**ಶ್ರೀಮತಿ ಜಯಮ್ಮ, (ಮುಂದು....):-** ಈ ಹಿಂದೆ

"ಬೆಳ್ಳನೆಯ ಎರಡು ಎತ್ತು ಬೆಳ್ಳಿ ಬಾರಿ ಕೋಲು
ಹಳ್ಳದ ಮಾಗಿ ಹೊಡೆಯೊನೋ
ಹಳ್ಳವಾದ ಮಾಗಿ ಹೊಡೆಯೂ ಉಗ್ರಣ್ಣನಿಗೆ
ತೆಳ್ಳನೆಯ ಹೊಟ್ಟೆ ಹಸಿದಾವೆ, ಹಸಿದಂತಹ ಹೊಟ್ಟೆಗೆ
ಮೊಸರು ಬುತ್ತಿ ಕಟ್ಟೆ. ಕಸ್ತೂರಿ ಕಟ್ಟೆ ಸೆರಗಿಗೆ ಅಡಿದಮ್ಮ"

ಈ ರೀತಿಯ ಒಂದು ಗಾದೆ ಮಾತು ಇದೆ. ನಮ್ಮ ಕರ್ನಾಟಕಕ್ಕೆ ಒಂದು ಕಡೆ ವಿಪರೀತವಾದ ಮಳೆ, ಬೆಳೆ ಹಾನಿಯಾಯಿತು. ಇನ್ನೊಂದು ಕಡೆ ಮಳೆ ಇಲ್ಲದೆ ಅಂತರ್ಜಲ ಕುಸಿತವಾಗಿ ಕುಡಿಯುವ ನೀರಿಗಾಗಿ ಹಾಹಾಕಾರ ಈ ರೀತಿಯ ಸಮಸ್ಯೆಗಳು ಇರುವಂತಹ ಸಂದರ್ಭದಲ್ಲಿ ಸಾಕಷ್ಟು ಜನರು ವಲಸೆ ಹೋಗುವುದನ್ನು ತಪ್ಪಿಸುವುದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಯವರು "ಅನ್ನ ಭಾಗ್ಯ" ಯೋಜನೆಯನ್ನು ಜಾರಿಗೆ ತಂದರು. ನಮ್ಮ ಭಾಗದಲ್ಲಿ ಹಿಂದೆ ಸಾಕಷ್ಟು ಭತ್ತವನ್ನು ಬೆಳೆಯುತ್ತಿದ್ದರು. ಇವತ್ತಿನ ದಿವಸ ನಮ್ಮ ಭಾಗದಲ್ಲಿ ಭತ್ತದ ಬೆಳೆ ಇಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯರವರು ಅವರು ಬಾಲ್ಯದಲ್ಲಿದ್ದಾಗ ಒಬ್ಬ ತಾಯಿ ಮಗುವನ್ನು ಎತ್ತಿಕೊಂಡು " ಅಮ್ಮ ಅನ್ನ ಕೊಡಿ, ಅಮ್ಮ ಅನ್ನ ಕೊಡಿ" ಎಂದು ಹೋಗುತ್ತಿರುವಂತಹ ಒಂದು ದೃಶ್ಯವನ್ನು ನೋಡಿದ್ದರು. ಅದಕ್ಕೆ ಅವರು ಇವತ್ತು "ಅನ್ನಭಾಗ್ಯ" ಯೋಜನೆಯನ್ನು ಜಾರಿಗೆ ತಂದರು. ಈ ಹಿಂದೆ ಅನ್ನಭಾಗ್ಯ ಯೋಜನೆಯಲ್ಲಿ 5 K.G. ಅಕ್ಕಿಯನ್ನು ಒಬ್ಬರಿಗೆ ಕೊಡುತ್ತಿದ್ದರು. ಈಗ ಒಬ್ಬರಿಗೆ 7 K.G. ಅಕ್ಕಿಯನ್ನು ಕೊಡುತ್ತಿದ್ದಾರೆ. ಆ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಊರಿನಲ್ಲಿರುವ ವಯಸ್ಸಾದವರು ಜೀವನ ಮಾಡುತ್ತಿದ್ದಾರೆ. ಇವತ್ತು ಆ ಊರುಗಳಲ್ಲಿ ಸಾಕಷ್ಟು ಜನ ವಲಸೆ ಹೋಗಿದ್ದಾರೆಂದು ಮತ್ತು ಊರು ಬಿಟ್ಟು ಹೋಗಿದ್ದಾರೆಂದು ಹೇಳುತ್ತಾರೆ. ನಿಜವಾಗಿಯೂ ಆ ರೀತಿ ವಲಸೆ ಹೋಗುವುದು ತಪ್ಪು ಎಂದು ನನ್ನ ಭಾವನೆ. ಏಕೆಂದರೆ, ಮನೆಗಳಲ್ಲಿ ಅಷ್ಟೋ, ಇಷ್ಟೋ ಜನ ಇರುತ್ತಾರೆ. ಅವರು ಬರಿ ಅನ್ನ ಊಟ ಮಾಡಿದರೆ ಆಗುವುದಿಲ್ಲ. ಅಲ್ಪಸ್ವಲ್ಪ ಹಣಕಾಸು ಬೇಕಲ್ಲವೇ? ಅದಕ್ಕೆ ಒಬ್ಬ ವಯಸ್ಸಿಗೆ ಬಂದಿರುವಂತಹ ಮಗ ಬೇರೆ ಕಡೆ ಹೋಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡು ಬಂದು ಊರಿನಲ್ಲಿರುವಂತಹ ತಂದೆ-ತಾಯಿ, ಹೆಂಡತಿ, ಮಕ್ಕಳಿಗೆ ಸಹಕರಿಸುವಂತಹ ಅನುಕೂಲ ಅಲ್ಲಿ ನಡೆಯುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಕಡೆ ಬೆದ್ದಲು ಭೂಮಿ ಎಂದು ಪದೇ ಪದೇ ಹೇಳುತ್ತಿರುತ್ತೇವೆ. ಆ ಬೆದ್ದಲು ಭೂಮಿಯಲ್ಲಿ ಸಜ್ಜೆ, ಜೋಳ, ನವಣೆ, ಹಲಸಂದೆ, ಹೆಸರು, ತೊಗರಿ ಮತ್ತು ಹುರಳಿ ಬೆಳೆಗಳನ್ನು ಶೇಂಗಾ ಬೆಳೆಯ ಜೊತೆಗೆ ಅಕ್ಕಡಿ ಸಾಲುಗಳಲ್ಲಿ ಈ ರೀತಿ ಬೆಳೆಯನ್ನು ಬೆಳೆಯುತ್ತಿದ್ದರು. ಇತ್ತೀಚೆಗೆ ಮಳೆ ಇಲ್ಲದೆ ಶೇಂಗಾ ಬೆಳೆಯು ಇಲ್ಲ. ಅಕ್ಕಡಿ ಸಾಲಿನಲ್ಲಿ ಬೆಳೆಯುತ್ತಿದ್ದಂತಹ ಕಾಳುಗಳು ಸಹ ಇಲ್ಲ. ಇವತ್ತಿನ ದಿವಸ ಬೇಳೆಕಾಳುಗಳನ್ನು ಕೊಂಡುಕೊಂಡು ತಿನ್ನಬೇಕೆಂದರೆ, ಒಂದು ಕೆಜಿಗೆ 200 ರೂಪಾಯಿಗಳನ್ನು ಕೊಡಬೇಕು. ಈಗ ಸರ್ಕಾರ ಒಂದು ಕೆಜಿ ತೊಗರಿ ಬೇಳೆಯನ್ನು 100 ರೂಪಾಯಿಗಳಿಗೆ ಕೊಡುತ್ತೇವೆಂದು ಹೇಳಿದೆ. ಆ ಬೇಳೆಯಿಂದ ನಮ್ಮ ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರ್‌ರವರಿಗೆ ಹೋಳಿಗೆ ಊಟ ಮಾಡಿ ಬಡಿಸಬಹುದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆ ಜಿಲ್ಲೆಯವರನ್ನು ಮದುವೆಯಾಗಿದ್ದು ನಿಜ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ನನ್ನನ್ನು ತಮಾಷೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದರೆ, ನನಗೆ ನನ್ನ ಮಾವನ ಮನೆಯಲ್ಲಿ ಹೋಳಿಗೆ ಊಟವನ್ನು ಕೊಡಲಿಲ್ಲ. ಶಾವಿಗೆ ಊಟವನ್ನು ಸಹಾ ಕೊಡಲಿಲ್ಲ. ನಾನು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು ಆಗಿದ್ದಂತಹ ಸನ್ಮಾನ್ಯ ಜಿ.ವಿ.ಆಂಜೀನಪ್ಪರವರ ಮಗಳನ್ನು ಮದುವೆಯಾಗಿರುವುದರಿಂದ ನಾನು ಅವರ ಅಳಿಯ. ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದಲ್ಲಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಅವರ ಒಡನಾಡಿಗಳು ಎಂದು ನನಗನ್ನಿಸುತ್ತದೆ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಹಿರಿಯರೋ ಅಥವಾ ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯರೋ ಅದು ನನಗೆ ಗೊತ್ತಿಲ್ಲ. ನನಗಂತೂ ಆ ಜಿಲ್ಲೆಯಲ್ಲಿ ಹೋಳಿಗೆ ಊಟ ಸಿಕ್ಕಿಲ್ಲ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಊಟ ಸಿಕ್ಕಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಮಧು ಮಗನಾದ ವೇಳೆಯಲ್ಲಿ ಊಟ ಮಾಡಿದ್ದೇನೆಂದು ಹೇಳಬೇಕು. 'ಅಳಿಯ ಊಟ ಮಾಡಿ, ಅಂಗಳದಲ್ಲಿ ಆಡಿಕೊಂಡ' ಎಂಬ ಗಾದೆ ನಮ್ಮ ಕಡೆ ಇದೆ. ಎಲ್ಲಾ ಬೆಳೆಗಳನ್ನು ಅಲ್ಲಿ ಬೆಳೆಯುತ್ತಿದ್ದರು. ಆ ಭಾಗದಲ್ಲಿ ಜನ ಸಮೃದ್ಧಿಯಾಗಿ ಇದ್ದರು. ನಮಗೆ ಸುಗ್ಗಿ ಕಾಲ ಬಂದರೆ ನಿಜವಾಗಲೂ ಸುಗ್ಗಿಯೋ ಸುಗ್ಗಿ. ಘಮ ಘಮ ವಾಸನೆ. ಸುಗ್ಗಿಯ ಕಾಲದಲ್ಲಿ ಜಂಗಮರು, ಬೇರೆ ಬೇರೆ ಎಲ್ಲಾ ಸಮುದಾಯದವರು ಸಹಾ ಬಂದು ಅಲ್ಲಿ ಇರುತ್ತಿದ್ದರು. ಇದು ಸತ್ಯದ ಮಾತು. ಆ ಬಾಲ್ಯದ ನೆನಪನ್ನು ಯಾವತ್ತು ಮರೆಯುವುದಕ್ಕೆ ಆಗುವುದಿಲ್ಲ. ಹಿಂದಿನ ಘಟನೆಗಳನ್ನು ಒಂದು ಬಾರಿ ನೆನಪು ಮಾಡಿಕೊಂಡು ಯಾವಾಗಲೂ ಮುಂದೆ ಹೋಗಬೇಕೆಂದು ದೊಡ್ಡವರು ಹೇಳುತ್ತಾರೆ.

**ಶ್ರೀ ಶರಣಪ್ಪ ಮಟ್ಟೂರ್:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮನವರು ಹೇಳುತ್ತಿರುವುದನ್ನು ಕೇಳಿ ಬಾಯಲ್ಲಿ ನೀರು ಬರುತ್ತಿದೆ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರಿಗೆ ಬಾಯಲ್ಲಿ ನೀರು ಬರುತ್ತಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ, ಎಷ್ಟು ಬಾಯಲ್ಲಿ ನೀರು ಬರಬಹುದು. ಸನ್ಮಾನ್ಯ ಸಭಾಪತಿಯವರೆ, ಬಹಳ ಜನರು ಬರುತ್ತಿದ್ದರು. ಅವರುಗಳಿಗೆ ನಾವು ಬೆಳೆದಂತಹ ಬೆಳೆಗಳಲ್ಲಿ ಸ್ವಲ್ಪ ಧಾನ್ಯಗಳನ್ನು ಅವರಿಗೆ ಕೊಟ್ಟು ಅವರ ಬಳಿ ಇದ್ದಂತಹ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದೇವು. ಅಲ್ಲಿಗೆ

ತಿದ್ದುಪಡಿಯಾಗದ ಪ್ರತಿ

ಒಳ್ಳೆಯ ಹಿರಿಯ ಅನುಭವಿಗಳು ಬರುತ್ತಿದ್ದರು. 12 ಜನ ಆಯಾಗಾರು ಎಂದು ಬರುತ್ತಿದ್ದರು. ಅವರೆಲ್ಲರೂ ಸಹ ಅನುಭವದ ಮಾತುಗಳನ್ನು ಹೇಳುತ್ತಿದ್ದರು. ನನಗೆ ಆ ಮಾತುಗಳು ಇವತ್ತಿನ ದಿವಸಕ್ಕೂ ನೆನಪಿಗೆ ಬರುತ್ತವೆ. ನಮ್ಮ ಕಡೆ ನೀರಾವರಿ ಭೂಮಿಗೆ “ಮಾಗಾಣಿ” ಎಂದು ಹೇಳುತ್ತೇವೆ. ಅದರೊಳಗೆ ಭತ್ತ, ರಾಗಿ, ಹತ್ತಿ, ತೆಂಗು ಮತ್ತು ಅಡಿಕೆ ಮತ್ತು  ಕಾಯಿ ಪಲ್ಯಗಳನ್ನು ಸಹ ಬೆಳೆಯುತ್ತಿದ್ದರು.  ಈ ಹಿಂದೆ ಗ್ರಾಮ ಸೇವಕರು ಎಂದು ಇದ್ದರು. ರೈತರು ಬೆಳೆ ಇಟ್ಟರೆ ಅವರು ಬಂದು ಆ ಬೆಳೆಗಳನ್ನು ವೈದ್ಯರ ರೀತಿಯಲ್ಲಿ ಪರೀಕ್ಷಿಸಿ ನೋಡಿ ಆ ಬೆಳೆಗಳಿಗೆ ಏನು ಔಷಧಿ ಕೊಡಬೇಕೆಂದು ರೈತರಿಗೆ ತಿಳುವಳಿಕೆ ನೀಡುತ್ತಿದ್ದರು. ಇವತ್ತು ಆ ಹುದ್ದೆ ಇದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಅದು ಒಂದು ರೀತಿಯಲ್ಲಿ ರೈತರಿಗೆ  ಸಹಕಾರ ಆಗುತ್ತಿತ್ತು.

**ಸಭಾಪತಿಯವರು:-** ಮಾನ್ಯ ಜಯಮ್ಮನವರೆ, conclude ಮಾಡಿ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಗೆ ಭೀಕರ ಬರಗಾಲ ಇದೆ. ನಮ್ಮ ಭಾಗದಲ್ಲಿ ಕುಡಿಯಲಿಕ್ಕೆ ನೀರು ಸಹ ಇಲ್ಲ. ನಮ್ಮ ಭಾಗದಲ್ಲಿ ಯಾರೋ ಪುಣ್ಯಾತ್ಮರ  ಬೋರ್‌ವೆಲ್‌ನಲ್ಲಿ ನೀರು ಇದ್ದರೆ ಆ ನೀರನ್ನು ಪಂಚಾಯಿತಿ ಕಡೆಯಿಂದ tanker ಮೂಲಕ ಜನರಿಗೆ ಕುಡಿಯುವುದಕ್ಕೆ  ನೀರು ಕೊಡುತ್ತಿದ್ದಾರೆ.  ಸರ್ಕಾರ ಬಹಳ ಒಳ್ಳೆಯ ಅನುಕೂಲ ಮಾಡಿದೆ. ಎಲ್ಲಾ ಬಡವರ ಪರವಾಗಿ ಸಮಾನತೆ ಮತ್ತು ಎಲ್ಲಾ ಜಾತಿ ಸಮುದಾಯಗಳಿಗೂ ಕೂಡ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಮಾನ್ಯ ಸಭಾಪತಿಯವರು ಹೆಚ್ಚಿನ ಸಮಯವಿಲ್ಲ ಬೇಗ ಮುಗಿಸಿ ಎಂದು ಹೇಳಿದ್ದಾರೆ. ಆದರೆ, ಹೆಚ್ಚಿನ ಬರಗಾಲ ಇರುವ ಕಡೆಯ ಸದಸ್ಯರಿಗೆ ಸ್ವಲ್ಪ ಹೆಚ್ಚಿಗೆ ಮಾತನಾಡುವುದಕ್ಕೆ ಕಾಲವಕಾಶವನ್ನು ಕೊಡಬೇಕಾಗುತ್ತದೆ. ಏಕೆಂದರೆ ನಾವು ಸದನದಲ್ಲಿ ಆ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಬೇಕಾಗುತ್ತದೆ. ನಮಗೆ ಪರಿಹಾರ ಕೊಡದಿದ್ದರೂ ಪರವಾಗಿಲ್ಲ. ಆ ಭಾಗದ ಜನತೆಗೆ ಅವರ ಬಗ್ಗೆ ಒಂದರೆಡು ಮಾತುಗಳನ್ನು ಆಡಿದ್ದೇವೆ ಎನ್ನುವಂತಹ ಸಂತೋಷವಾದರೂ ಬರುತ್ತದೆ. ಬರ ಪರಿಹಾರದ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಈಗಾಗಲೇ Upper Bhadra ದಲ್ಲಿ ಕೆಲಸ ನಡೆಯುತ್ತಿದೆ. ಆದರೆ, ನಮಗೆ ಬರ ಪರಿಹಾರ ಕೊಡಲಿ. ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ಆ ಭಾಗದಲ್ಲಿರುವ ಕೆರೆಗಳಿಗೆ ನೀರು ತುಂಬಿಸಿದರೆ ನಿಜವಾಗಲೂ ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ. ರೈತರು ಕೂಡ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳುತ್ತಾರೆ ಎನ್ನುವಂತಹ ಮಾತನ್ನು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.  ಈಗ ಏನು ಕೆಲಸ ನಡೆಯುತ್ತಿದೆ ಅದು ಇನ್ನೂ ತುರ್ತಾಗಿ ನಡೆಯಬೇಕು. ಆ ಭಾಗದ ಜನತೆಗೆ ಒಳ್ಳೆಯ ಸಹಕಾರ ಸಿಗಬೇಕು. ಅಲ್ಲಿ ವಲಸೆ

ಹೋಗುವುದನ್ನು ತಪ್ಪಿಸಬೇಕೆಂದರೆ, ಆ ಭಾಗದಲ್ಲಿ ಸಣ್ಣ ಕೈಗಾರಿಗಳನ್ನು ಪ್ರಾರಂಭ ಮಾಡಬೇಕು. ಆಗ ಆ ಭಾಗದ ಜನ ಅಲ್ಲಿಯೇ ಕೆಲಸ ಮಾಡುವುದಕ್ಕೆ ಒಂದು ಅವಕಾಶ ಆಗುತ್ತದೆ. ನಾವೆಲ್ಲರೂ ಸಹ ಇವತ್ತು ಬರ ಮತ್ತು ಬರ ಪರಿಹಾರದ ಬಗ್ಗೆ ಮಾತನಾಡುತ್ತೇವೆ. ಮಳೆ ಏಕೆ ಬರುವುದಿಲ್ಲ? ಮೂರು ಭಾಗ ನೀರು ಇದೆ. ಒಂದು ಭಾಗ ಭೂಮಿ ಇದೆ. ನೀರು ಇದ್ದೆ ಇರುತ್ತೆ. ಜನಸಂಖ್ಯೆ ಸ್ಫೋಟ ಹೆಚ್ಚಾಗಿರುವುದರಿಂದ ನೀರಿನ ಅಭಾವ ಹೆಚ್ಚಾಗಿದೆ. ಶಾಸಕರು, ಜನಪ್ರತಿನಿಧಿಗಳಾದ ನಾವೆಲ್ಲರೂ ಎಲ್ಲೆಲ್ಲಿ ಗಿಡ ಮರಗಳಿಲ್ಲ, ಆ ಭಾಗಗಳಲ್ಲಿ ಗಿಡ ಮರಗಳನ್ನು ನೆಟ್ಟರೆ, ಆ ಗಿಡ-ಮರಗಳು ಒಳ್ಳೆಯ ಮೋಡವನ್ನು ಆಕರ್ಷಣೆ ಮಾಡಿ, ಅದರಿಂದ ಒಳ್ಳೆಯ ಮಳೆ ಆಗುತ್ತದೆ. (ಮುಂದು)

(724) 04.20 14-06-2017 CS.GR

**ಶ್ರೀಮತಿ ಜಯಮ್ಮ(ಮುಂದು):-**

ಈಗಾಗಲೇ ಸರ್ಕಾರ ಬರಗಾಲದ ಸಲುವಾಗಿ ಮುಕ್ಕಾಲು ಭಾಗ ಕಾರ್ಯಕ್ರಮಗಳನ್ನು ಮಾಡಿದೆ. ಸರ್ಕಾರ ಮಾಡಿರತಕ್ಕ ಕಾರ್ಯಕ್ರಮಗಳಿಗೆ ಎಲ್ಲಾ ಪ್ರತಿನಿಧಿಗಳು ಹೋದಾಗ ಮಾತ್ರ ನಮ್ಮ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ರೂಪಿಸಿದೆ, ಇನ್ನೂ ಏನೇನು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತದೆ ಎನ್ನುವದು ಗೊತ್ತಾಗುತ್ತದೆ. ಸರ್ಕಾರದ ಎಲ್ಲಾ ಕಾರ್ಯಕ್ರಮಗಳಲ್ಲಿ ನಾವೆಲ್ಲರೂ ಭಾಗವಹಿಸಬೇಕಾಗುತ್ತದೆ. ಆಗ ಮಾತ್ರ ಬೇರೆ ಭಾಗಗಳಲ್ಲಿರುವ ತೊಂದರೆಗಳ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಬರಗಾಲ ಪ್ರತಿ ಸರ್ಕಾರ ಇದ್ದಾಗಲೂ ಬರತಕ್ಕ ಒಂದು ವ್ಯವಸ್ಥೆ. ಪ್ರಕೃತಿಯ ವಿಕೋಪದಿಂದ ಬರುವ ಬರಗಾಲ ಒಂದು ಕಡೆ ಇದ್ದರೆ, ಕೃತಕವಾಗಿ ಸರ್ಕಾರದಿಂದ, ರಾಜಕಾರಣಿಗಳಿಂದ ಮತ್ತು ಅಧಿಕಾರಿಗಳ ಕಾರ್ಯ ವೈಫಲ್ಯದಿಂದ ಜನರು ತೊಂದರೆಗೀಡಾಗುತ್ತಾರೆ ಎನ್ನುವುದು ನನ್ನ ಒಂದು ಭಾವನೆ. ನಮ್ಮ ನಿರ್ಲಕ್ಷ್ಯತನಕ್ಕೆ ಏನು ಕಾರಣ ಎಂದರೆ, ನಮ್ಮ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ 137 ಗ್ರಾಮಗಳಲ್ಲಿ ಜನರು ವಲಸೆ ಹೋಗಿದ್ದಾರೆ ಎನ್ನುವ ಮಾತನ್ನು ಶ್ರೀ ಕೆ.ಟಿ. ಶ್ರೀಕಂಠೇಗೌಡರು ಹೇಳಿದರು. ಆ ಜಿಲ್ಲೆಯಲ್ಲಿ 137 ಗ್ರಾಮಗಳಲ್ಲಿ ಜನರು ವಲಸೆ ಹೋಗುವ ಪರಿಸ್ಥಿತಿ ಬರುವತನಕ ಅಲ್ಲಿನ ಅಧಿಕಾರಿಗಳು ಏನು ಮಾಡುತ್ತಿದ್ದರು? ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಎಲ್ಲಿಂದಲೂ ಸಹ ಇದರ ಬಗ್ಗೆ ವರದಿಯಾಗಲಿಲ್ಲವೇ? ಆ ಅಧಿಕಾರಿಗಳು ನಾವೆಲ್ಲರೂ

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ, ಈ ರೀತಿ ಇಲ್ಲಿಯೇ ಜನರು ಗುಳೆ ಹೋದರೆ ನಮ್ಮ ಪರಿಸ್ಥಿತಿ ಏನಾಗಬಹುದು ಎನ್ನುವ ಭಯ ಇಲ್ಲದ ನಿರ್ಭಯವಾಗಿ ಅಧಿಕಾರಿಗಳು ಇರುವಾಗ ಇನ್ನು ಬೇರೆ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಬರಗಾಲದ ತೊಂದರೆ ಇದೆಯೋ ಅಲ್ಲಿ ಎಷ್ಟರಮಟ್ಟಿಗೆ ಅಧಿಕಾರಿಗಳು ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವುದು ಈ ಸರ್ಕಾರದ ಒಂದು ವೈಖರಿಯನ್ನು ತೋರಿಸುತ್ತದೆ.

ಆದರೆ ನಾನು ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರನ್ನು ನಾನು 40 ವರ್ಷಗಳಿಂದ ನೋಡಿದ್ದೇನೆ. ಅವರಿಗೆ ಕರ್ತವ್ಯದಲ್ಲಿ ಬದ್ಧತೆ ಮತ್ತು ಪ್ರಾಮಾಣಿಕತೆ ಇದೆ. ಬಡವರ ಬಗ್ಗೆ ಕಳಕಳಿ ಹೊಂದಿದ್ದಾರೆ. ಅವರು ಕಂದಾಯ ಇಲಾಖೆಯ ಸಚಿವರಾದ ಮೇಲೆ ಈ ವಯಸ್ಸಿನಲ್ಲಿಯೂ ಸಹ ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಮಾಡುತ್ತಿದ್ದುದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಹಿಂದೆ ಆ ಇಲಾಖೆಯನ್ನು ಕೇಳುವವರೆ ಇಲ್ಲದ ಹಾಗೆ ಆಗಿತ್ತು. ಆದರೆ ಸುಧಾರಣೆ ಮಾಡುವುದು ಒಬ್ಬರ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಕಂದಾಯ ಸಚಿವರು ಪ್ರವಾಸಕ್ಕೆ ಹೋಗುವುದು ಆಯಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದಕ್ಕೆ, ಆದರೆ ಈ ಬರದ ವಿಚಾರದಲ್ಲಿ ಬೇರೆ ಬೇರೆ ಇಲಾಖೆಗಳು ಸಹ ಅಡಕವಾಗಿವೆ. ಇಲ್ಲಿ ಕೃಷಿ, ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಇನ್ನಿತರ ಇಲಾಖೆಗಳು ಸಹ ಬರುತ್ತದೆ. ಹಾಗಾಗಿ ಈ ಇಲಾಖೆಗಳೆಲ್ಲವೂ ಸಹ ಸಮರ್ಥವಾಗಿ ಕೆಲಸ ಮಾಡಿದಾಗ ಮಾತ್ರ ಈ ಬರವನ್ನು ನಾವು ಬಗೆಹರಿಸಬಹುದು. ಈ ಬರಗಾಲದಲ್ಲಿ ಮುಖ್ಯವಾಗಿ ನೀರಿನ ಅಭಾವ ಬರುತ್ತದೆ. ಇದರಿಂದ ಆಹಾರದ ಅಭಾವ ಬರುತ್ತದೆ. ಮತ್ತು ದನ-ಕರುಗಳಿಗೆ ಮೇವಿನ ಅಭಾವ ಬರುತ್ತದೆ. ಮತ್ತು ಜನರಿಗೆ ಕೈ ಕೆಲಸದ ಅಭಾವ ಬರುತ್ತದೆ. ಈ ನಾಲ್ಕು ವಿಚಾರಗಳಲ್ಲಿಯೂ ಸಹ ಜನರಿಗೆ ತುರ್ತಾಗಿ ತೊಂದರೆ ಉಂಟಾಗುತ್ತದೆ. 6 ತಿಂಗಳಿಗೆ ಮೊದಲೇ ಹವಾಮಾನ ಇಲಾಖೆಯವರು ಬರದ ಬಗ್ಗೆ ಸೂಚನೆಯನ್ನು ನೀಡುತ್ತಾರೆ. ಸರ್ಕಾರ ಕಾರ್ಯದರ್ಶಿ ಮಟ್ಟದಲ್ಲಿ ಜಿಲ್ಲೆಗೆ ಒಬ್ಬ ಅಧಿಕಾರಿಯನ್ನು ನೇಮಿಸಿದೆ, ಒಬ್ಬರು ಉಸ್ತುವಾರಿ ಸಚಿವರನ್ನು ನೇಮಕ ಮಾಡಿದೆ. ಆದರೆ ಈ ನಾಲ್ಕು ವಿಚಾರಗಳಲ್ಲಿ ಯಾವುದನ್ನಾದರೂ ಬಗೆಹರಿಸಲು ಸಾಧ್ಯವಿದ್ದಲ್ಲಿ ಅದನ್ನು ಅಧಿಕಾರಿಗಳಾಗಲಿ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಲಿ ಪ್ರಯತ್ನ ಪಟ್ಟಿದ್ದಾರೆಯೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಅವರುಗಳು ಯೋಚನೆ ಮಾಡಿದ್ದರೆ ಬಹುಶಃ ಈ ರೀತಿಯ ತೊಂದರೆ ಆಗುತ್ತಾ ಇರಲಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ ಇವತ್ತಿನ ದಿವಸಗಳಲ್ಲಿ ಬೋರ್‌ವೆಲ್‌ಗಳಲ್ಲಿ ನೀರು ಸಿಗುವುದು ಕಷ್ಟ ಆಗುತ್ತಿದೆ. ಕೆಲವು ಕಡೆ ನೀರು ಸಿಕ್ಕರೂ ಸಹ ಅದು ಕುಡಿಯಲು ಅನರ್ಹವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸಮಯದಲ್ಲಿ ಆ ಭಾಗದ incharge

ಮಂತ್ರಿಗಳು ಮತ್ತು ಅಧಿಕಾರಿಗಳು surface water ಎಲ್ಲಿದೆ, ನದಿಗಳ sources ಎಲ್ಲಿದೆ, ಆ surface perennial water ಎಲ್ಲಿದೆ., ಅದನ್ನು ಸ್ವಲ್ಪ ಕಂಡುಹಿಡಿದು 1-2 ವರ್ಷಗಳ ಹಿಂದೆಯೇ ಆ ನೀರನ್ನು tap ಮಾಡತಕ್ಕ ಪ್ರಯತ್ನವನ್ನು ಮಾಡಿದ್ದೆ ಆದಲ್ಲಿ ನೀರಿನ ಬವಣೆಯನ್ನು ಇನ್ನೂ advanced ಆಗಿ ಬಗೆಹರಿಸಲಿಕ್ಕೆ ಅವಕಾಶವಿತ್ತು. ಆದರೆ ನಾವು ಬರಗಾಲ ಬಂದು ಎಲ್ಲಾ ಬೋರ್‌ವೆಲ್‌ಗಳಲ್ಲಿ ನೀರು ಒಣಗಿದ ಮೇಲೆ ನಂತರ ಹೊಸ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ. ಆಗ ಆ ಬಾವಿಯಲ್ಲಿ ನೀರು ಸಿಕ್ಕುವುದಿಲ್ಲ. ಅದೇ ಪಕ್ಕದಲ್ಲಿ ಎಲ್ಲಾದರೂ ನೀರಿನ ಲಭ್ಯವಿದ್ದು ಅದನ್ನು ತರುವಷ್ಟರಲ್ಲಿ ಬರಗಾಲವೇ ಮುಗಿದು ಹೋಗುತ್ತದೆ. ಆದ್ದರಿಂದ ಹವಾಮಾನ ಇಲಾಖೆಯಿಂದ ಸೂಚನೆ ಬಂದ ಕೂಡಲೇ ಎಲ್ಲೆಲ್ಲಿ surface water ಅನ್ನು tap ಮಾಡಬಹುದು, ಎಲ್ಲಿ ಬೋರ್‌ವೆಲ್‌ಗಳಿಗೆ ತೊಂದರೆ ಆಗುತ್ತದೆ, ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತಿಲ್ಲ ಎನ್ನುವುದನ್ನು ಮನಗಂಡ ಮೇಲೆ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸದೇ ಇರುವುದು, ಅಧಿಕಾರಿಗಳ ನಿರ್ಲಕ್ಷ್ಯ ಇರಬಹುದು ಅಥವಾ ಆ ಜಿಲ್ಲೆಯ ಮೇಲ್ವಿಚಾರಣೆಯನ್ನು ನಡೆಸುವ ಜಿಲ್ಲಾ ಉಸ್ತುವಾರಿ ಸಚಿವರ ನಿರ್ಲಕ್ಷ್ಯ ಇರುವುದು ಇದರಲ್ಲಿ ಎದ್ದು ಕಾಣುತ್ತಿದೆ. ಬರಗಾಲ ಬರುತ್ತಿದೆ ಎನ್ನುವುದು ಗೊತ್ತಾದ ಮೇಲೆ ದನ-ಕರುಗಳಿಗೆ ಮೇವು ಸಂಗ್ರಹಣೆ ಮಾಡಬೇಕಾಗುತ್ತದೆ. ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಹಸಿರಿನ ಪ್ರದೇಶಗಳು ಅಲ್ಲಿ ನೀರಾವರಿಯು surface water ಮತ್ತು borewell ಕಡೆಗಳಿಂದಲೂ ನೀರು ಸಹ ಬರುತ್ತದೆ. ಎಲ್ಲಿ ಸಾಕಷ್ಟು ನೀರಿನ ಲಭ್ಯತೆ ಇದೆ. ಅಂತಹ ಕಡೆ ಮೊದಲೇ ಮೇವಿನ ಬೀಜಗಳನ್ನು ನೀಡಿ, ಹುಲ್ಲನ್ನು ಬೆಳೆಸುವುದಕ್ಕೆ ರೈತರಿಗೆ ಪ್ರೋತ್ಸಾಹವನ್ನು ನೀಡಬೇಕು. ಸಕಾಲಕ್ಕೆ ಇಂತಹ ತಿಂಗಳಿನಲ್ಲಿ ಬೆಳೆಸಬೇಕೆಂದು ಹೇಳಿದ್ದಲ್ಲಿ ಬರಗಾಲದ ಸಮಯದಲ್ಲಿ ಆ ಹುಲ್ಲನ್ನು ಸರಬರಾಜು ಮಾಡಬಹುದಿತ್ತು. ನಾನು ಮಂತ್ರಿಯಾಗಿದ್ದಾಗ ಚಿತ್ರದುರ್ಗ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದೆನು. ತಮಗೆಲ್ಲ ಗೊತ್ತಿರುವ ಹಾಗೆ ಹೊರಗಡೆಯಿಂದ ಹುಲ್ಲನ್ನು ತರಬೇಕಾದ್ದರೆ ವಾಹನಕ್ಕೆ ಬಾಡಿಗೆಯನ್ನು ನೀಡಬೇಕು. ಆಗ 50% ಹಣ ಬಾಡಿಗೆಗೆ ಹೋಗುತ್ತದೆ. ಇನ್ನುಳಿದ 50% ಹಣದಲ್ಲಿ ಹುಲ್ಲನ್ನು ತಂದು ಕೊಡಬೇಕಾಗುತ್ತದೆ. ಬರಗಾಲ ಬರುವುದಕ್ಕೆ ಮುಂಚೆ ಹುಲ್ಲನ್ನು ಬೆಳೆದಿದ್ದರೆ ನಮ್ಮ ರೈತರಿಗೆ ಹಣ ಸಿಗುವುದರ ಜೊತೆಗೆ ದನ-ಕರುಗಳಿಗೆ ಮೇವು ಸಹ ದೊರೆಯುತ್ತದೆ. ಹಾಗೆಯೇ 50% ಸರ್ಕಾರಕ್ಕೂ ಕೂಡ ಹಣದ ಉಳಿತಾಯ ಆಗುತ್ತದೆ. ಇದನ್ನು ನಾನು ಪ್ರಾಕ್ಟಿಕಲ್ ಆಗಿ ಮಾಡಿದ್ದೆನು. ನಾನು ಸಚಿವನಾಗಿದ್ದಾಗ ಮಳೆಯ ತೊಂದರೆ ಆಗುತ್ತದೆ ಎಂದು ಗೊತ್ತಾದ ತಕ್ಷಣ ಎಲ್ಲೆಲ್ಲಿ ಕೊಳವೆಬಾವಿಯಲ್ಲಿ ನೀರಿನ ಲಭ್ಯತೆ ಇದೆ, ಅವರಿಗೆಲ್ಲ ಹುಲ್ಲನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ನೀಡಿ, ನೀವು ಹುಲ್ಲನ್ನು ಬೆಳೆಯಿರಿ, ನಾವು ನಿಮ್ಮಿಂದ ನೇರವಾಗಿ

ಖರೀದಿ ಮಾಡುತ್ತೇವೆ ಎಂದು ಹೇಳಿದ್ದೆನು. 2012ರಲ್ಲಿ ಬರಗಾಲ ಬಂದಾಗ ಒಂದು ಕಂತೆ ಹುಲ್ಲನ್ನು ಚಿತ್ರದುರ್ಗಕ್ಕೆ ಹೊರಗಡೆಯಿಂದ ತರಿಸಿರಲಿಲ್ಲ. ಯಾರ ಬಳಿ ಪಂಪ್‌ಸೆಟ್‌ಗಳಿವೆ, ಅಲ್ಲಿಯೇ ಹುಲ್ಲನ್ನು ಬೆಳೆಸಿ ಸರಬರಾಜು ಮಾಡಿದ್ದೆವು. ಇಂತಹ ವಿಚಾರಗಳ ಬಗ್ಗೆ ಅಧಿಕಾರಿಗಳು ಮತ್ತು ಮಂತ್ರಿಗಳು ಪೂರ್ವಭಾವಿಯಾಗಿ ಯೋಚನೆ ಮಾಡಿದರೆ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಅವಕಾಶ ಇರುತ್ತದೆ. ಜೊತೆಗೆ ಜನರಿಗೂ ಸಹ ಕೆಲಸ ಸಿಗುತ್ತದೆ. ಜನರಿಗೆ ಕೆಲಸ ನೀಡುವ ಸಲುವಾಗಿ ನರೇಗಾ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಕೂಡ ಸಾಕಷ್ಟು ಹಣವನ್ನು ನೀಡುತ್ತಿದೆ. ಅದನ್ನು ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆಯನ್ನು ಮಾಡಿದರೆ ಎಲ್ಲಾ ಕೆಲಸಗಾರರಿಗೆ ಮತ್ತು ನಿರುದ್ಯೋಗಿಗಳಿಗೆ ಅನುಕೂಲವಾಗುತ್ತದೆ. ಯಾರು ಬರಗಾಲದಿಂದ ಪೀಡಿತರಾಗಿದ್ದಾರೆ ಅವರು ನೆಮ್ಮದಿಯ ಜೀವನ ನಡೆಸಲು, ಹಣ ಸಂಪಾದನೆಗೆ ಮತ್ತು ಜೀವನಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ ಬರ ಬಂದಾಗ ಜನರಿಗೆ ಒಂದು ಕಡೆ ತೊಂದರೆ ಆದರೆ ಬರದಿಂದ ಅಧಿಕಾರಿಗಳಿಗೆ ಒಂದು ಕಡೆ ರಿಲೀಫ್ ಸಿಗುತ್ತದೆ. ಬರದ ನೆಪದಲ್ಲಿ ಅಧಿಕಾರಿಗಳು ಹಣವನ್ನು ದುರುಪಯೋಗ ಮಾಡಿಕೊಳ್ಳುವುದು ಸರ್ವೆ ಸಾಮಾನ್ಯವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದನ್ನು ನಾವು ಸಹ ಕಣ್ಣಾರೆ ನೋಡಿದ್ದೇವೆ. ನಮ್ಮ ಪಕ್ಷದಿಂದ ನಾವು ಎರಡು ಬಾರಿ ಇಡೀ ರಾಜ್ಯಾದ್ಯಂತ ಪ್ರವಾಸವನ್ನು ಮಾಡಿದ್ದೇವೆ. ನಾವು ಕವಲಹಂದೆಗೆ ಹೋಗಿದ್ದೆವು. ಅಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬ್ಲೋರ್ಡಿನ ಕಟ್ಟಡ ಇತ್ತು. ಅಲ್ಲಿಗೆ ಯಾರೂ ಹೋಗುತ್ತಿಲ್ಲ, ಅಲ್ಲಿ ಒಂದು ರೂಮಿನಲ್ಲಿ ಒಂದಿಷ್ಟು ಹುಲ್ಲನ್ನು ಗುಡ್ಡೆ ಹಾಕಿದ್ದರು. ಅಲ್ಲಿ ಮೇವು ಎಷ್ಟು ಸ್ಟಾಕ್ ಇದೆ ಎಂದರೆ some tons ಇದೆ ಎಂದು ಲೆಕ್ಕ ಹಾಕುತ್ತಾರೆ. ಆದರೆ ಅಲ್ಲಿನ ಜನರು ಇಷ್ಟು ಹುಲ್ಲನ್ನು ಇಟ್ಟುಕೊಂಡು ನಮಗೆ ಹುಲ್ಲು ನೀಡುತ್ತಿಲ್ಲ ಎನ್ನುವ ದೂರನ್ನು ನೀಡಿದರು. ಹಾಗೆಯೇ ನಾವು ಹಾಸನ ಮತ್ತು ಕೊಡಗಿಗೂ ಸಹ ಹೋಗಿದ್ದೆವು. ಹಾಗೆ ಹೋದ ಜಿಲ್ಲೆಗಳಲೆಲ್ಲಾ ಜನರಿಗೆ ಮೋಸ ಆಗುತ್ತಿದ್ದುದ್ದನ್ನು ಕಣ್ಣಾರೆ ನೋಡಿದ್ದೇವೆ. ನಾನು ಕೂಡ ಅಧಿಕಾರದಲ್ಲಿದ್ದಾಗ ಇಂತಹ ಪ್ರಕರಣಗಳನ್ನು ನೋಡಿ ಹಲವಾರು ಜನರ ಮೇಲೆ ಕ್ರಮ ಕೈಗೊಂಡಿದ್ದೇನೆ. ಹೀಗೆ ಅಧಿಕಾರಿಗಳು ನಿಷ್ಪಹತೆಯಿಂದ ಕೆಲಸ ಮಾಡಿದರೆ ದನ-ಕರುಗಳ ಹುಲ್ಲಿಗೆ ತೊಂದರೆ ಇಲ್ಲದೆ ಹಾಗೆ ಮತ್ತು ಜನರಿಗೆ ಕೆಲಸ ಸಿಕ್ಕುವ ಹಾಗೆ ಮಾಡಬಹುದು. ಬಂದಂತಹ ಹಣವನ್ನು ಪ್ರಾಮಾಣಿಕವಾಗಿ ಉಪಯೋಗ ಮಾಡಿದಾಗ ಯಾವುದೇ ತೊಂದರೆ ಆಗುವುದಿಲ್ಲ. ಹೀಗೆ ಅಧಿಕಾರಿಗಳ ನಿರ್ಲಕ್ಷ್ಯದಿಂದ 137 ಗ್ರಾಮಗಳು ನೀರಿನ ಮತ್ತು ಹುಲ್ಲಿನ ಬವಣೆಯಿಂದ ಆಹಾರದ ತೊಂದರೆಯಿಂದ ಮೂಲಭೂತಸೌಕರ್ಯಗಳ ಲಭ್ಯತೆ ಇಲ್ಲದೆ, ಜನರು, ಅಧಿಕಾರಿಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ತಮಗಾದ ತೊಂದರೆಯಿಂದ ಸರ್ಕಾರದ ಮೇಲೆ

ತಿದ್ದುಪಡಿಯಾಗದ ಪ್ರತಿ - ಪ್ರಕಟಣೆಗಾಗಿ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿರಸ್ಕಾರ ಬಂದು ಜನರು ವಲಸೆ ಹೋಗಬೇಕಾಗಿ ಬಂದಿದೆಯೇ ಹೊರತು, ಅವರು ಸ್ವತಃ ವಲಸೆ ಹೋಗಿರುವುದಿಲ್ಲ. ಇದು ಸರ್ಕಾರದ ನಿರ್ಲಕ್ಷ್ಯ ಎನ್ನುವುದು ನನ್ನ ಒಂದು ಅಪಾದನೆ.

ಇನ್ನು ಸರ್ಕಾರದಿಂದ ಖರ್ಚು ಮಾಡತಕ್ಕ ಹಣದಲ್ಲಿ ಬಂದಂತಹ ಹಣವನ್ನು ಎಷ್ಟು ಪ್ರಾಮಾಣಿಕವಾಗಿ ಖರ್ಚು ಮಾಡಬೇಕೆನ್ನುವುದು ಹಾಗೂ ಕೇಂದ್ರಸರ್ಕಾರ ಎಷ್ಟು ಸಹಾಯ ಮಾಡುತ್ತಿದೆ ಎನ್ನುವುದಕ್ಕೆ ಕೆಲವು ಅಂಕಿಅಂಶಗಳನ್ನು ನಾನು ಸದನದ ಮುಂದಿಡಬಯಸುತ್ತೇನೆ.

(ಮುಂದು)

(725) 4.10 14-06-2017 ಎಂವಿ:ಜಿಆರ್

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ಮುಂದು):-**

ಕಳೆದ ಮೂರು ವರ್ಷಗಳಲ್ಲಿ 2013-14 ರಿಂದ 2015-16 ಇಸವಿಯವರೆಗೆ ಪ್ರಶ್ನೆಗೆ ಉತ್ತರ ಕೊಟ್ಟಿರುವ ಮಾಹಿತಿ ಪ್ರಕಾರ, ಬಡತನ ರೇಖೆಗಿಂತ ಕಡಿಮೆ ಇರುವಂತಹವರಿಗೆ ಅಕ್ಕಿಯನ್ನು ಕೊಂಡು ಕೊಳ್ಳುವಂಥದ್ದಕ್ಕೆ 7340.32 ಕೋಟಿ ರೂಪಾಯಿಗಳ ಹಣ ಕೇಂದ್ರ ಸರ್ಕಾರದಿಂದ ಬಂದಿದೆ. ಕೇಂದ್ರ ಸರ್ಕಾರದವರು ಒಂದು ಕೆ.ಜಿ. ಅಕ್ಕಿಯನ್ನು 30 ರೂಪಾಯಿಗಳಿಗೆ ಕೊಂಡುಕೊಳ್ಳುತ್ತಾರೆ. ರಾಜ್ಯ ಸರ್ಕಾರದವರು ಅದಕ್ಕೆ ಮೂರು ರೂಪಾಯಿಗಳನ್ನು ಕೊಡುತ್ತಾರೆ. ಅನ್ನಭಾಗ್ಯ ಎಂಬ ಬೋರ್ಡ್ ರಾಜ್ಯ ಸರ್ಕಾರದ್ದು. "ಹಸು ಕೇಂದ್ರ ಸರ್ಕಾರದ್ದು, ಹಗ್ಗ ರಾಜ್ಯ ಸರ್ಕಾರದ್ದು," ಆದರೆ ರಾಜ್ಯ ಸರ್ಕಾರ ಹೇಳಿಕೊಳ್ಳುವಂಥದ್ದು ಹಸುವೂ ನಮ್ಮದೆಂದು. ಹಸು ಕೊಟ್ಟವರು ಕೇಂದ್ರ ಸರ್ಕಾರ ಮತ್ತು 30 ರೂಪಾಯಿ ಕೊಟ್ಟು ಅಕ್ಕಿ ಕೊಡುತ್ತಿರುವವರು ಕೇಂದ್ರ ಸರ್ಕಾರ, ಬರೀ ಹಗ್ಗ ಕೊಟ್ಟಿರುವುದು ಹಸು ಕಟ್ಟುವುದಕ್ಕೆ ಅಷ್ಟೇ ಮೂರು ರೂಪಾಯಿಗಳನ್ನು ಒಂದು ಕೆ.ಜಿ. ಅಕ್ಕಿಗೆ ಕೊಟ್ಟು, ನಮ್ಮದೇ ಅನ್ನಭಾಗ್ಯ ಎನ್ನುತ್ತಾರೆ. ಇದರಲ್ಲಿ ದುರುಪಯೋಗವಾಗುತ್ತಿರುವ ಬಗ್ಗೆ ನಾವು ಇಂತಹ ಜಿಲ್ಲೆಗಳಲ್ಲಿ ಅನ್ನಭಾಗ್ಯದ ಅಕ್ಕಿಯನ್ನು ಇಷ್ಟು ಟನ್ ವಶಪಡಿಸಿಕೊಂಡರು ಎಂದೆಲ್ಲಾ, ಮೊನ್ನೆ ದಿವಸ ಟಿ.ವಿ.ಯಲ್ಲಿ ಪ್ರಸಾರವಾಗಿದ್ದನ್ನು ನೋಡಿದೆ. ಒಟ್ಟು 144 ಮೆಟ್ರಿಕ್ ಟನ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವರದಿಯಾಗಿದೆ. ಈ ರೀತಿ ಹಲವಾರು ಬಾರಿ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುತ್ತದೆ. ಆದರೆ, ಕೇಂದ್ರ ಸರ್ಕಾರ ಹೆಚ್ಚಿನ ಹಣವನ್ನು ಕೊಟ್ಟು, ಕೊಟ್ಟಂತಹ ಅಕ್ಕಿಯನ್ನು ರಾಜ್ಯ ಸರ್ಕಾರ ನಿಯಂತ್ರಣ ಮಾಡುವುದರಲ್ಲಿ ವಿಫಲವಾಗಿದೆ. ಇದಕ್ಕೆ ಯಾರು ಜವಾಬ್ದಾರರು? ಕೊಟ್ಟಂತಹ ಅಕ್ಕಿಯನ್ನು ಸಮರ್ಪಕವಾಗಿ ಹಂಚಿದರೆ, ಬರಗಾಲದಲ್ಲಿ ಅಕ್ಕಿ ಸಿಗುವುದರಿಂದ, ಊಟಕ್ಕೆ ತೊಂದರೆಯಾಗುವುದಿಲ್ಲ. ಇದರಲ್ಲಿ ಅಧಿಕಾರಿಗಳು

ಇರಬಹುದು, ರಾಜಕಾರಣಿಗಳು ಇರಬಹುದು, ಅವರು ತಮ್ಮ ಬರವನ್ನು ತೀರಿಸಿಕೊಳ್ಳುತ್ತಿದ್ದಾರೆ ಎನ್ನುವಂಥದ್ದು ನನ್ನ ಒಂದು ಅಪಾದನೆ. ಇನ್ನು ನೀರಾವರಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ಮೇಲೆ ಆಣೆ ಇಟ್ಟು. ಕೃಷ್ಣಾ ಯೋಜನೆಗೆ ವರ್ಷಕ್ಕೆ 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದರು. ಆದರೆ, ದಿನಾಂಕ 07.06.2017ರ ಪ್ರಶ್ನೆ ಸಂಖ್ಯೆ 2155ಕ್ಕೆ ಜಲಸಂಪನ್ಮೂಲ ಸಚಿವರು, ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಖರ್ಚು ಮಾಡಿರುವಂಥದ್ದು 16,086.84 ಕೋಟಿ ರೂಪಾಯಿಗಳೆಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ನಾಲ್ಕು ವರ್ಷಕ್ಕೆ 40,000 ಕೋಟಿ ರೂಪಾಯಿ ಖರ್ಚು ಮಾಡುವಂಥದ್ದಕ್ಕೆ, ಬರೀ 16,000 ಕೋಟಿ ರೂಪಾಯಿಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಖರ್ಚು ಮಾಡಿದ್ದಾರೆ. ಇದನ್ನು ಸಚಿವರು ಕೊಟ್ಟಿರುವಂತಹ statistics ಮತ್ತು ಭದ್ರಾ ಮೇಲ್ದಂಡೆಗೆ 14,649 ಕೋಟಿ ರೂಪಾಯಿಗಳು. ಕಾವೇರಿ ಜಲಾಯನ ಪ್ರದೇಶಕ್ಕೆ 5,427 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೃಷ್ಣಾ ಭಾಗ್ಯ ಜಲಕ್ಕೆ 40,000 ಕೋಟಿಗಳನ್ನು ಖರ್ಚು ಮಾಡಬೇಕಾಗಿರುವ ಕಡೆಗೆ ಕೇವಲ 16,000 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರುವಂಥದ್ದು, ಒಬ್ಬರು ಮುಖ್ಯಮಂತ್ರಿಗಳಾಗಿ ಜನತೆಗೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಎಲ್ಲಿ ಹೋದರೂ ನಾನು ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ 40,000/- ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಹೇಳುತ್ತಾರೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಬಿ.ಜೆ.ಪುಟ್ಟಸ್ವಾಮಿಯವರೆ, ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ಯೋಜನೆಗೆ ಪ್ರತಿ ವರ್ಷ 10,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಏನು ಘೋಷಣೆ ಮಾಡಿದ್ದರು, ಅದರಂತೆ ಪ್ರತಿ ವರ್ಷ ಆಯವ್ಯಯದಲ್ಲಿ ನೀರಾವರಿ ಇಲಾಖೆಗೆ ಹಣವನ್ನು ಮೀಸಲಿಡುತ್ತಿದ್ದಾರೆ, ಅದರಂತೆ ಈಗಾಗಲೇ 46,000 ಕೋಟಿ ರೂಪಾಯಿಗಳು ಹಣವನ್ನು ಈ ನಾಲ್ಕು ವರ್ಷದಲ್ಲಿ ಖರ್ಚು ಮಾಡಿದ್ದೇವೆ. ಈ ವರ್ಷದಲ್ಲಿ ಕಾಮಗಾರಿ ಇನ್ನೂ ಮುಂದುವರಿಯುತ್ತಿದೆ. ಈಗ ನಮ್ಮ ಹತ್ತಿರ ಖರ್ಚಾಗದೇ ಇರುವಂತಹ ಏನು ಹಣ ಇದೆ ಕಾಮಗಾರಿ ಮುಗಿದ ತಕ್ಷಣ ಈ ಬಿಲ್ ಪಾವತಿ ಆದಮೇಲೆ ಖರ್ಚಾಗಿದೆ ಎಂದು ನಾವು ತೋರಿಸುವಂಥದ್ದು, ಹಾಗಾಗಿ ಪ್ರತಿವರ್ಷ 10,000 ಕೋಟಿ ರೂಪಾಯಿಯೆಂದು ನಾವು ಏನು ಮೀಸಲಿಟ್ಟುಕೊಂಡು ಹೋಗುತ್ತಿದ್ದೇವೆ ಮತ್ತು ಐದು ವರ್ಷಕ್ಕೆ 50,000 ಕೋಟಿ ರೂಪಾಯಿಯೆಂದು ಏನು ನಿಗದಿ ಮಾಡಿದ್ದೇವೆ, ಅದಕ್ಕಿಂತ ಜಾಸ್ತಿಯಾಗಿ 56,000 ಕೋಟಿ ರೂಪಾಯಿಗಳಾಗುತ್ತವೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು defend ಮಾಡುವುದಾದರೆ ನಾನು ಏನು ಹೇಳುವುದು?

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ನಾನು defend ಮಾಡಿಕೊಳ್ಳುತ್ತಿಲ್ಲ. ಅದರ ಜೊತೆಗೆ ಅನ್ನಭಾಗ್ಯ ವಿಚಾರದಲ್ಲೂ ಮಾನ್ಯ ಸದಸ್ಯರು ಒಂದು ಕೆ.ಜಿ. ಅಕ್ಕಿಯನ್ನು ಮೂರು ರೂಪಾಯಿಗಳಿಗೆ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದರೆ, ಅದನ್ನು ಸರ್ಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಕೊಡುತ್ತಿರುವುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯವಿಟ್ಟು ಕುಳಿತುಕೊಳ್ಳಲಿ, ನನ್ನ ಹತ್ತಿರ ಇರುವಂತಹ ಲಿಖಿತ ಉತ್ತರಕ್ಕೆ ಯಾರು ಉತ್ತರ ಕೊಟ್ಟಿರುವುದು, ನಾನು ಕೊಟ್ಟಿರುವುದೇ? ಈ ಪ್ರಶ್ನೆಯಲ್ಲಿ 2013–14ರಲ್ಲಿ 6730.28 ಕೋಟಿ ರೂಪಾಯಿ ಹಣವನ್ನು ನೀವು ಖರ್ಚು ಮಾಡಿರುವುದು.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಅದು ಖರ್ಚಾಗಿರುವ ಹಣ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು, ಖರ್ಚಾಗಿರುವ ಹಣವೇ. Backlog ಬರುವಂಥದ್ದು ಈ ವರ್ಷದಲ್ಲಿ ಹಣ ಉಳಿದಿದ್ದರೆ, ಬರುವ ವರ್ಷಕ್ಕೆ ಬರುತ್ತದೆ ಅಷ್ಟೇ. ಅದು ನಾಲ್ಕು ವರ್ಷದವರೆಗೆ carry over ಆಗುವುದಿಲ್ಲ. ಏನಿದ್ದರೂ ಈ ವರ್ಷದ್ದು ಎರಡು–ಮೂರು ತಿಂಗಳು ಮುಂದಕ್ಕೆ ಹೋಗಬಹುದು. ಆದರೆ, 2013ನೇ ಇಸವಿಯದ್ದನ್ನು ತೆಗೆದುಕೊಂಡು ಹೋಗಿ, 2016ನೇ ಇಸವಿಯಲ್ಲೂ ಅಷ್ಟೇ ಇರುವುದಿಲ್ಲ. ಇದು ಮೊನ್ನೆ ಪ್ರಶ್ನೆಗೆ ಕೊಟ್ಟಿರುವಂತಹ ಉತ್ತರ. ಆದುದರಿಂದ, defend ಮಾಡುವಂಥದ್ದು ಸರಿಯಲ್ಲ, ಸರ್ಕಾರ fail ಆಗಿದೆ. ಕೃಷ್ಣಾ ಜಲಾನಯನ ಪ್ರದೇಶದ ನೀರಾವರಿಗೆ ಸರ್ಕಾರ ಖರ್ಚು ಮಾಡಿರುವಂಥದ್ದು 16,000 ಕೋಟಿ ರೂಪಾಯಿಗಳೆಂದು ಉತ್ತರ ಕೊಟ್ಟಿರುವಂಥದ್ದು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 16,000 ಕೋಟಿ ರೂಪಾಯಿಯಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಲ್ಲ ಅದು ನಾಲ್ಕು ವರ್ಷಗಳಲ್ಲಿ 40,000 ಕೋಟಿ ರೂಪಾಯಿಗಳಿಗೆ ಕೇವಲ 16,000 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿರುವುದು. ಸರ್ಕಾರದವರು ತಮ್ಮ ವೈಫಲ್ಯಗಳನ್ನು ಒಪ್ಪಿಕೊಳ್ಳುವುದೇ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, the Government has already spend Rs.36,000 crores.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಈ ರೀತಿ defend ಮಾಡುವುದರಿಂದ ಜನರ ಸಮಸ್ಯೆ ಬಗೆಹರಿಯುವುದಿಲ್ಲ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ನಾನು defend ಮಾಡುತ್ತಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಆಲಮಟ್ಟಿಗೆ ಪ್ರತಿವರ್ಷ 30,000 ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ 36,000 ಕೋಟಿ ರೂಪಾಯಿ ಹಣ ಖರ್ಚಾಗಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿಯ ಸುಳ್ಳು ಆಶ್ವಾಸನೆಗಳನ್ನು ಕೊಟ್ಟು, implement ಮಾಡದೆ, ಸುಳ್ಳು ಹೇಳುವಂಥದ್ದಾಗುತ್ತಿದೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಬಿ.ಜೆ.ಪುಟ್ಟಸ್ವಾಮಿಯವರೆ, ನಾನು ತಮಗೆ ಕೇವಲ correction ಮಾಡಿದ್ದು ಎಲ್ಲಿ ಎಂದು ಹೇಳಿದ್ದೇನೆ. ನಾವು ಏನು ಮಾತನ್ನು ಕೊಟ್ಟಿದ್ದೇವು ಅದರಂತೆ ಆಯವ್ಯಯದಲ್ಲಿ ಮಂಡನೆಯಾದಂತೆ ಕೊಟ್ಟಿದ್ದೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಆಯವ್ಯಯದಲ್ಲಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ಆಯವ್ಯಯದಲ್ಲಿ ಕೊಟ್ಟಿರುವುದು ಎಷ್ಟೆಂದರೆ, 42,540 ಕೋಟಿ ರೂಪಾಯಿಗಳು, ಅದು ನಾಲ್ಕು ವರ್ಷಕ್ಕೆ, ಆದರೆ ಖರ್ಚು ಮಾಡಿರುವುದು ಎಷ್ಟು ಅದನ್ನು ಹೇಳಿ.

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಯೋಜನೆ...

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಕೃಷ್ಣಾ ನೀರಾವರಿ ಯೋಜನೆಗೆ ಕೊಟ್ಟಿರುವುದು 8,400 ಕೋಟಿ ರೂಪಾಯಿಗಳು ಮಾತ್ರ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಇಡೀ ರಾಜ್ಯಕ್ಕೆ 36,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೊನ್ನೆಯ ದಿನ ಅವರು ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ.

**ಉಪಸಭಾಪತಿಯವರು:-** ದಯವಿಟ್ಟು ಸದಸ್ಯರು ಕುಳಿತುಕೊಳ್ಳಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, Debate ಮಾಡುವಾಗ ಅವರು ಹೇಳಿದ್ದನ್ನು ನಾವು ಕೇಳುತ್ತೇವೆ. ನಾವು ಹೇಳುವುದನ್ನು ಅವರು ಕೇಳಬೇಕು, ಉತ್ತರ ಹೇಳುವಾಗ ಬೇಕಾದರೆ ಅದನ್ನು ಹೇಳಲಿ. ಆದರೆ ಅನಾವಶ್ಯಕವಾಗಿ protest ಮಾಡುವುದು ಸರಿಯಲ್ಲ.

**ಉಪಸಭಾಪತಿಯವರು:-** ನೀವು ಈಗ yield ಆಗಿದ್ದೀರಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೃಷ್ಣಾ ನೀರಾವರಿಗೆ 8,400 ಕೋಟಿ ರೂಪಾಯಿಗಳು ಆಯವ್ಯದಲ್ಲಿ provisions ಮಾಡಿರುವಂಥದ್ದು. ಕೃಷ್ಣಾಗೆ ಖರ್ಚು ಮಾಡಿರುವಂಥದ್ದು 6,730 ಕೋಟಿ ರೂಪಾಯಿಗಳು ಮಾತ್ರ. ಇದು ಅವರೆ ಕೊಟ್ಟಿರುವಂತಹ ಪ್ರಶ್ನೆಗೆ ಉತ್ತರ.

**ಉಪಸಭಾಪತಿಯವರು:-** ಮಾನ್ಯ ಸಚಿವರೆ ಅದು ಈಗ ಬೇಡ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, 42,000 ಕೋಟಿ ರೂಪಾಯಿಗಳೆಂದು ಅವರು ಹೇಳಿದ್ದಾರೆ. ಖರ್ಚಾಗಿರುವಂಥದ್ದು 16,000 ಕೋಟಿ ರೂಪಾಯಿಗಳು, ಇದರಲ್ಲಿ ಸುಮಾರು 5,000 ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗೆ, ಈ ರೀತಿ ಖರ್ಚುಗಳಾಗುತ್ತಿರುತ್ತವೆ, ಇಡೀ ರಾಜ್ಯಕ್ಕೆ ಹೇಳಿರುವಂಥದ್ದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಮಾತು ಕೊಟ್ಟಂತೆ ಕೃಷ್ಣಾ ಬೇಸಿನ್‌ಗೆ 50,000 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ರೈತರ ಬವಣೆಯನ್ನು ನೀಗಿಸುವಂಥದ್ದು, ಏಕೆಂದರೆ ಬೆಳೆ ನಾಶವಾದರೆ ಪರಿಹಾರ ಕೊಡುವಂತಹ ಬೆಳೆ ವಿಮೆಯಾಗಿದೆ. ಮೊದಲನೆ ವರ್ಷ 2015-16ರಲ್ಲಿ 2,147.18 ಕೋಟಿ ರೂಪಾಯಿಗಳ ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಈ ಸಾರಿ 2016-17ರಲ್ಲಿ ಬರೀ 527 ಕೋಟಿ ರೂಪಾಯಿಗಳು. ಇದು ಸರ್ಕಾರದ ವೈಪಲ್ಯತೆ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಎಷ್ಟು ಇನ್‌ಶ್ಯೂರೆನ್ಸ್ ಮಾಡಿಸುತ್ತಾರೋ ಅಷ್ಟು ಹಣ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬ್ಯಾಂಕ್‌ಗೆ remittance ಅಗುತ್ತಿದೆ. ಈಗ ಮಾನ್ಯ ಕೃಷಿ ಸಚಿವರು ಸದನದಲ್ಲಿಲ್ಲ. ಮಾನ್ಯ ಕೃಷಿ ಸಚಿವರು ಇಷ್ಟು percentage ಮಾಡಿಬಿಟ್ಟಿದ್ದೇವೆ ನಾವೇ ಮೇಲೂ ಎಂದು ಹೇಳಿದರು. ಈಗ ನಾನು ಕೇಳುತ್ತಿರುವುದು ಹೋದ ವರ್ಷ 2015-16ರಲ್ಲಿ 2,148 ಕೋಟಿ ರೂಪಾಯಿಗಳನ್ನು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಹಣವನ್ನು ರಾಜ್ಯ ಸರ್ಕಾರ ತೆಗೆದುಕೊಂಡಾಗ, ಈ ವರ್ಷ ಭೀಕರ ಬರಗಾಲ ಇದ್ದಾಗ ಬರೀ 522 ಕೋಟಿ ರೂಪಾಯಿಗಳಿದ್ದು ಇದಕ್ಕೆ ರಾಜ್ಯ ಸರ್ಕಾರ ಏಕೆ ಇನ್‌ಶ್ಯೂರೆನ್ಸ್ ಮಾಡಿಸಲಿಲ್ಲ? ಇದು ನಿಮ್ಮ ಅಧಿಕಾರಿಗಳ ವೈಫಲ್ಯತೆ ಅಲ್ಲವೇ? ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಇನ್‌ಶ್ಯೂರೆನ್ಸ್ ಮಾಡಿಸಿದ್ದರೆ, ಕೇಂದ್ರ ಸರ್ಕಾರದಿಂದ ಹಣ ಬಂದಿದ್ದರೆ, ರಾಜ್ಯ ಸರ್ಕಾರಕ್ಕೆ burden ಕಡಿಮೆಯಾಗುತ್ತಿತ್ತು ಮತ್ತು ರೈತರಿಗೆ ಅನುಕೂಲ ಆಗುತ್ತಿರಲಿಲ್ಲವೇ? ಸರ್ಕಾರಕ್ಕೆ ಪ್ರಶ್ನೆ ಹಾಕಿ ಸಂಖ್ಯೆ 1010 ಹಾಕಿದಾಗ ಮಾನ್ಯ ಸಚಿವರು ನೀಡಿರುವಂತಹ ಲಿಖಿತ ಉತ್ತರದಲ್ಲಿರುವಂತಹ statistics. ಆದುದರಿಂದ ಇದು ಸರ್ಕಾರದ ವೈಪಲ್ಯ, ಇದು ಕೃತಕವಾದಂತಹ ಬರಗಾಲವನ್ನು create ಮಾಡುವಂಥದ್ದು. ಇದು ಅಧಿಕಾರಿಗಳು ಮತ್ತು ಸರ್ಕಾರದ ನಿರ್ಲಕ್ಷ್ಯದಿಂದ ಆಗಿರುವಂಥದ್ದು, ನೀವು ಕೆಲವುಗಳನ್ನು set right ಮಾಡಿಕೊಳ್ಳಿ, ನಾನೇನು ಬರೀ ಮೈದಾನದ ಭಾಷಣವನ್ನು ಮಾಡುತ್ತಿಲ್ಲ. ಸರ್ಕಾರಕ್ಕೆ ಮುಂದಕ್ಕೆ ಅನುಕೂಲವಾಗಲಿ ಎಂದು statistics ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರು ಈಗ ಸದನದಲ್ಲಿಲ್ಲ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರನ್ನು ಕರೆಯುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, Net Domestic Product *(N.D.P.)* ಪ್ರಕಾರ ಹಣ ಬಂದಾಗ ಕೊಡಬೇಕೆಂದು ಸರ್ಕಾರದಿಂದ ಮಾನ್ಯ ಕಂದಾಯ ಸಚಿವರು

ಉತ್ತರವನ್ನು ಕೊಟ್ಟಿದ್ದಾರೆ. 2008ರಿಂದ 2012-13ರವರೆಗೆ, ಈ ಹಿಂದಿನ ಸರ್ಕಾರ 26,191.42 ಕೋಟಿ ರೂಪಾಯಿಗಳಿಗೆ ಬೇಡಿಕೆ ಇಟ್ಟಿದ್ದರು. ಉತ್ತರ ಕರ್ನಾಟಕದಲ್ಲಿ ಅತ್ಯಂತ ಭೀಕರವಾದಂತಹ ಪ್ರವಾಹ ಬಂತು, ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಯವರ ಮಠ ಪ್ರವಾಹದಲ್ಲಿ ಮುಳುಗಿ ಹೋಗಿತ್ತು, ಅಂತಹ ಕಾಲದಲ್ಲಿ ನಾವುಗಳು 7,441 ಕೋಟಿ ರೂಪಾಯಿಗಳಿಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಕೊಟ್ಟಿತ್ತು. ಒಟ್ಟು 26,191.42 ಕೋಟಿ ರೂಪಾಯಿಗಳ ರಾಜ್ಯ ಸರ್ಕಾರದ ಬೇಡಿಕೆಗೆ ಅಂದಿನ ಕೇಂದ್ರ ಸರ್ಕಾರ ಒಟ್ಟು ಐದು ವರ್ಷದಲ್ಲಿ 2,533.23 ಕೋಟಿ ರೂಪಾಯಿಗಳನ್ನು ಮಾತ್ರ ಸರ್ಕಾರ ಬಿಡುಗಡೆ ಮಾಡಿರುವುದು.

**(ಮುಂದು)**

(726) 14.06.2017 04.20 LL-MD

**ಶ್ರೀ ಬಿ.ಜೆ. ಪುಟ್ಟಸ್ವಾಮಿ(ಮುಂದು):-**

ರಾಜ್ಯ ಸರ್ಕಾರ 13,851.97 ಕೋಟಿ ರೂಪಾಯಿಗಳನ್ನು ಬೇಡಿಕೆ ಸಲ್ಲಿಸಿತ್ತು. ನಮ್ಮ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಮೇಲೆ 4,555.07 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ನಮ್ಮ ಉಗ್ರಪ್ಪನವರು ಹೇಳಿದ ಹಾಗೆ NDP(Net Domestic Product) ಪ್ರಕಾರ ಅತಿವೃಷ್ಟಿ ಮತ್ತು ಅನಾವೃಷ್ಟಿಯಾದಾಗ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಬೇಡಿಕೆಗೆ ಅನುಗುಣವಾಗಿ ಕೊಟ್ಟಿರುವಂತಹದ್ದರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಶೇಕಡ 11 ರಷ್ಟು ಪ್ರತಿಕ್ರಿಯೆ ನೀಡಿದ್ದಾರೆ. ಈಗ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಶೇಕಡ 32.5 ರಷ್ಟು ಪ್ರತಿಕ್ರಿಯೆ ನೀಡಿದ್ದಾರೆ. ಇದು ಸರ್ಕಾರದ ಉತ್ತರದಲ್ಲಿಯೇ ಇದೆ. ಅನುದಾನ ಕೊಡತಕ್ಕಂತಹದ್ದರಲ್ಲಿ ಕೇಂದ್ರ ಸರ್ಕಾರ ಎಲ್ಲಿ ವಿಫಲವಾಗಿದೆ? ಇವತ್ತಿನ ದಿವಸ Planning Commission ನಲ್ಲಿ ಶೇಕಡ 32 ರಷ್ಟು ಇದ್ದದ್ದನ್ನು ಶೇಕಡ 42 ರಷ್ಟು ಹಣವನ್ನು ಮಾಡುತ್ತಿದ್ದೇವೆ? ಇದಲ್ಲದೇ ಯೋಜನೆಯೇತರದಲ್ಲಿ ನಿನ್ನೆ ದಿವಸದ ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. **(ಗೊಂದಲ)** ಹಿಂದಿನ ಸರ್ಕಾರಕ್ಕೆ ಅದು ಅನ್ವಯವಾಗಲಿಲ್ಲವೇ? ಶೇಕಡ 11 ರಷ್ಟು ಕೊಟ್ಟಾಗ ಅದು ಅನ್ವಯವಾಗಲಿಲ್ಲವೇ?

**ಶ್ರೀ ವಿ.ಎಸ್. ಉಗ್ರಪ್ಪ(ನಾಮ ನಿರ್ದೇಶನ):-** ಮಾನ್ಯ ಸಭಾಪತಿಯವರೇ...

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ...

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಶೇಕಡ 25 ರಷ್ಟು ಕೊಟ್ಟಾಗ ನಮ್ಮ ಬಗ್ಗೆ ಟೀಕೆ ಮಾಡುತ್ತಾರೆ. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಶೇಕಡ 11 ರಷ್ಟು ಕೊಟ್ಟಾಗ ಅದರ ಬಗ್ಗೆ ಟೀಕೆ ಮಾಡುವುದಿಲ್ಲ.

**ಉಪಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕಾದರೆ ಅದರ ಬಗ್ಗೆ ಹೇಳುತ್ತೇನೆ. ಆದರೆ, ಒಂದು ವಿಚಾರವೇನೆಂದರೆ...

**ಉಪಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನ ಹೆಸರು ಹೇಳಿದಾಗಲೂ ನೀವು ಈ ರೀತಿ ಮಾತನಾಡಬೇಡಿ ಎಂದು ಹೇಳಿದರೆ ಹೇಗೆ?

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹೆಸರನ್ನು ನಾನು ಉದ್ದೇಶಪೂರ್ವಕವಾಗಿ ಹೇಳಿಲ್ಲ. ಮಾನ್ಯ ಸದಸ್ಯರು ಹೇಳಿದರೆಂದು ನಾನು ಆ ವಿಚಾರ ಹೇಳಿದೆನು.

**ಉಪಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಹೀಗಾದರೆ ಇದು ಮುಗಿಯುವುದಿಲ್ಲ. ಮಾನ್ಯ ಪುಟ್ಟಸ್ವಾಮಿಯವರೆ, ದಯವಿಟ್ಟು ತಾವು ಬೇಗ ಮುಗಿಸಬೇಕು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು. ಸರ್ಕಾರದವರು ತಮ್ಮ ಉತ್ತರದಲ್ಲಿ ಹೇಳಿರುವಂತೆ, ಯೋಜನೇತರದಲ್ಲಿ ಹಲವಾರು ಖರ್ಚುಗಳಿಗೆ 17,957 ಕೋಟಿ ದುಡ್ಡು ಕೊಟ್ಟಿದ್ದಾರೆ. 17,957 ಕೋಟಿ ರೂಪಾಯಿಗೆ ಸರ್ಕಾರ ಖರ್ಚು ಮಾಡಿರುವುದು ಕೇವಲ 14,385.61 ಕೋಟಿ ರೂಪಾಯಿ. ಇನ್ನು 3,571.39 ಕೋಟಿ ರೂಪಾಯಿ ಕೇಂದ್ರದ ಅನುದಾನದಲ್ಲಿ ಉಳಿದಿರುವುದು.

**ಉಪಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿಯವರೆ, ತಾವು ಏತಕ್ಕೆ ಆ ಕಡೆ ತಿರುಗಿ ಮಾತನಾಡುತ್ತೀರಿ? ಕಂದಾಯ ಸಚಿವರು ಈ ಕಡೆ ಕುಳಿತಿದ್ದಾರೆ. ಅವರು ತಮ್ಮ ಪ್ರಶ್ನೆಗೆ ಉತ್ತರ ಹೇಳುವುದು. ದಯವಿಟ್ಟು ತಾವು ಈ ಕಡೆ ಮಾತನಾಡಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರ ಸಾಕಷ್ಟು ಹಣವನ್ನು Planning ನಲ್ಲಿ ಮತ್ತು Non-Planning ನಲ್ಲಿ ಕೊಡುತ್ತಿದೆ. Non-Planning item ನಲ್ಲಿ 17,957 ಕೋಟಿ ರೂಪಾಯಿ ಅನುದಾನವನ್ನು ಹಲವಾರು ಸಣ್ಣ ಸಣ್ಣ ಯೋಜನೆಗಳಿಗೆ ಕೊಟ್ಟಿದೆ. ಆದರೆ,

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರ್ಚು ಮಾಡಿರುವುದು 14,385.61 ಕೋಟಿ ರೂಪಾಯಿಗಳು. ಅಂದರೆ, ಇನ್ನು 3,571.39 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ ಹಣ ಉಳಿದಿದೆ. ಬರಗಾಲಕ್ಕಾಗಿ ಈ ಹಣವನ್ನು ಖರ್ಚು ಮಾಡಬಹುದಿತ್ತು. ಯಾವುದಕ್ಕೆ ಖರ್ಚು ಮಾಡಬಹುದಾಗಿತ್ತೆಂದರೆ, ಹೊಂಡ ತೆಗೆಯುವುದಕ್ಕೆ ಮತ್ತು SIMKAI ಎನ್ನುವಂತಹ ಯೋಜನೆಯಲ್ಲಿ ಕೃಷಿ ಕೆಲಸಗಳಿಗೆ ಖರ್ಚು ಮಾಡತಕ್ಕಂತಹದ್ದು. ಮೊನ್ನೆಯ ದಿವಸ ಮಾನ್ಯ ಕೃಷಿ ಮಂತ್ರಿಗಳು ಹೇಳಿದರು, "ಕೃಷಿ ಇಲಾಖೆಯ 8 ಯೋಜನೆಗಳಿಗೆ 1,646 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದ್ದಾರೆ. ಒಂದು ಯೋಜನೆಗೆ 300 ಕೋಟಿ ರೂಪಾಯಿಗಳು ಕೂಡ ಬರುವುದಿಲ್ಲ. ಇದನ್ನು 85,000 ರೈತರಿಗೆ ಹೇಗೆ ಹಂಚುವುದಕ್ಕಾಗುತ್ತದೆ? ಅಂದರೆ, ನಾನು ಹೇಳುವುದೇನೆಂದರೆ, ದುಡ್ಡಿಲ್ಲವೆಂದು ಸರ್ಕಾರ ಹೇಳುತ್ತಿದೆ. ಆದರೆ, ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಹಣವನ್ನು ಪೂರ್ಣವಾಗಿ ಉಪಯೋಗಿಸಿ. ಕೇಂದ್ರ ಸರ್ಕಾರ ಏನು ಹೇಳುತ್ತದೆಯೆಂದರೆ, ಕೆಲವು ಯೋಜನೆಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತದೆ ಅಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದೆ. ಉದಾಹರಣೆಗೆ, 'ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ'. ಇದು ರೈತರ ಬೆಳೆಗಳು ನಷ್ಟವಾದಾಗ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರ ಶೇಕಡ 50 ರಷ್ಟು ಪರಿಹಾರವನ್ನು ಕೊಡತಕ್ಕಂತಹದ್ದು. ಈ ಯೋಜನೆಯಡಿಯಲ್ಲಿ ಹೋದ ವರ್ಷ ಸರ್ಕಾರ 2,200 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡಿದೆ. ಆದರೆ, ಈ ವರ್ಷ ಕೇವಲ 522 ಕೋಟಿ ರೂಪಾಯಿಗಳನ್ನು ಮಾತ್ರ ಡ್ರಾ ಮಾಡುವುದಕ್ಕೆ ಬಿಲ್ ಕೊಟ್ಟರೆ ಏನು ಪ್ರಯೋಜನವಾಗುತ್ತದೆ? ಈ ಬಗ್ಗೆ ಸರ್ಕಾರವೇ ಯೋಚನೆ ಮಾಡಲಿ. ಆದ್ದರಿಂದ, ಸರ್ಕಾರ ಯಾವಾಗಲೂ ಕೃತಕವಾಗಿ ಈ ಬರಗಾಲ ಬಂದಾಗ war footing ನಲ್ಲಿ ಏತಕ್ಕೆ ಕೆಲಸ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆ. ಇದರಿಂದಾಗಿ, ಸರ್ಕಾರ ಜನಗಳಿಗೆ ತೊಂದರೆ ಕೊಡುತ್ತಿದೆ ಅಥವಾ ಅನ್ಯಾಯ ಮಾಡುತ್ತಿದೆ ಎನ್ನುವಂಥದ್ದು ಮತ್ತು ಮುಂಗಾರು ಮತ್ತು ಹಿಂಗಾರು ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಹೀಗೆ ಹಲವಾರು ಯೋಜನೆಗಳಲ್ಲಿ ಕೇಂದ್ರ ಸರ್ಕಾರ ಅತ್ಯಂತ ಹೆಚ್ಚಿನ ಹಣವನ್ನು ಕೊಟ್ಟಿದ್ದರೂ ಸಹ ಅದನ್ನು ಅನ್ನಭಾಗ್ಯ ಯೋಜನೆಯಲ್ಲಿ ನಿರ್ದಿಷ್ಟವಾಗಿ 7,340 ಕೋಟಿ ರೂಪಾಯಿಗಳನ್ನು ಕೇವಲ ಮೂರು ವರ್ಷದಲ್ಲಿ ಕೊಟ್ಟಿದೆ. ಈ ವರ್ಷದ ಲೆಕ್ಕವನ್ನು ಸರ್ಕಾರವೇ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವುದಿಲ್ಲ. ಇದರಲ್ಲಿ ಹಣ ದುರಪಯೋಗವಾಗುತ್ತಿದೆ. ಹೀಗೆ ಆಹಾರದಲ್ಲಿ ಹಣವನ್ನು ದುರಪಯೋಗ ಮಾಡತಕ್ಕಂತಹದ್ದು ಮತ್ತು ಕೊಟ್ಟ ಹಣವನ್ನು ಖರ್ಚು ಮಾಡದೇ ಇರತಕ್ಕಂತಹದ್ದರಿಂದ ಕೃತಕವಾಗಿ ಬರವಾಗುತ್ತಿದೆ. ಇದು ಸರ್ಕಾರದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎನ್ನುವಂತಹ ಮಾತನ್ನು ಹೇಳಿ, ಎಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಬರಗಾಲದ ಯೋಜನೆಗಳಿಗೆ incharge ಇರತಕ್ಕಂತಹ ಅಧಿಕಾರಿಗಳು ಕೆಲಸ ಮಾಡಿದರೆ, ಬಹುಶಃ ಬರಗಾಲವನ್ನು

ಹೆಚ್ಚಿನ ಮಟ್ಟದಲ್ಲಿ ಪರಿಹಾರ ಮಾಡಬಹುದು ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಇದುವರೆವಿಗೂ ಹಲವಾರು ನಮ್ಮ ಸಹೋದ್ಯೋಗಿಗಳು ಬರಗಾಲದ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ನಮಗೆ ಬರಗಾಲ ನಿಜವಾಗಲೂ ಕೂಡ ಒಂದು ಶಾಪ ಇದ್ದಹಾಗೆ. ಸುಮಾರು 5-6 ವರ್ಷಗಳಿಂದ ಸತತವಾದಂತಹ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ನಮ್ಮಲ್ಲಿ ಏನಾಗಿದೆಯೆಂದರೆ, ಆಡಳಿತ ಪಕ್ಷದಲ್ಲಿರತಕ್ಕಂತಹ ನಾವು ಏನು ಮಾಡಿದ್ದೇವೆ ಅದನ್ನು ಸಮರ್ಥನೆ ಮಾಡತಕ್ಕಂತಹದ್ದು. ವಿರೋಧ ಪಕ್ಷದಲ್ಲಿರುವವರು ಮಾತನಾಡುವಾಗ ಅದನ್ನು ವಿರೋಧ ಮಾಡತಕ್ಕಂತಹದ್ದು ವಾಡಿಕೆಯಾಗಿದೆ. ಆದರೆ, ನಿಜವಾಗಲೂ ಬರಗಾಲದಿಂದ ತೊಂದರೆಗೀಡಾದಂತಹ ಜನ ಯಾರಿದ್ದಾರೆ ಅವರಿಗೆ ಪ್ರಾಮಾಣಿಕವಾದಂತಹ ನ್ಯಾಯವನ್ನು ಒದಗಿಸುವ ಕಡೆ ಇವತ್ತಿನ ದಿವಸ ನಾವೆಲ್ಲರೂ ಕೂಡ ಗಮನಹರಿಸಬೇಕಾಗಿದೆ. ಬರಗಾಲ ಬಂದಾಗ ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ಎಂತಹ ಹಾಹಾಕಾರವನ್ನು ನಾವು ಅನುಭವಿಸುತ್ತಿದ್ದೇವೆಂದರೆ ಅಂತರ್‌ಜಲ ಕುಸಿದು ಹೋಗಿದೆ. ಬೋರ್‌ವೆಲ್ ಕೊರೆಯುವುದಕ್ಕೆ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೆ, ನೂರು ಬೋರ್‌ವೆಲ್‌ಗಳನ್ನು ಕೊರೆದರೆ ಅದರಲ್ಲಿ ಹತ್ತು ಬೋರ್‌ವೆಲ್‌ಗಳಲ್ಲಿ ಮಾತ್ರ ನೀರು ಸಿಗುವುದು ಕಷ್ಟವಾಗಿದೆ. ಆದರೆ, ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿ ಖರ್ಚಾಗಿ ನೀರು ಬರದೇ ನಷ್ಟವಾಗಿ ಹೋಗುತ್ತಿದೆ. ಅದಕ್ಕೆ ನಾವು ಸಲಹೆಗಳನ್ನು ಕೊಡತಕ್ಕಂತಹ ಕೆಲಸ ಮಾಡಬೇಕು. ಆದರೆ, ನಾವುಗಳು ಸರ್ಕಾರವನ್ನು ದೂರುವುದು ಮಾಡುತ್ತಿದ್ದೇವೆ. ಆದರಿಂದ, ಈಗ ಏನಾಗಬೇಕು ಎನ್ನುವುದರ ಬಗ್ಗೆ ಯಾರೂ ಕೂಡ ಚರ್ಚೆಯನ್ನು ಮಾಡುತ್ತಿಲ್ಲ. ಆದುದರಿಂದ, ಈಗಾಗಲೇ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸರ್ಕಾರ ಯಾವುದೇ ಕೆಲಸ ಮಾಡಲೇ ಇಲ್ಲ ಎನ್ನತಕ್ಕಂತಹ ಪ್ರಶ್ನೆ ಅಲ್ಲ. ಎಲ್ಲಿ ಲೋಪದೋಷಗಳಾಗಿದೆಯೋ ಆ ಲೋಪದೋಷಗಳನ್ನು ತಿದ್ದುವಂತಹ ಕೆಲಸಕ್ಕೆ ನಾವು ನೀವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರಲ್ಲಿ ಸರ್ಕಾರ ಎಡವಿದೆಯೇ ಅಥವಾ ಅಧಿಕಾರಿಗಳು ಎಡವಿದ್ದಾರೆಯೇ? ಅವರಿಗೆ ಸೂಚನೆಗಳನ್ನು, ಸಲಹೆಗಳನ್ನು ಕೊಡುವುದರ ಮುಖಾಂತರ ಅವರನ್ನು ತಿದ್ದುವಂತಹ ಕೆಲಸ ಮಾಡಿದರೆ ನಿಜವಾಗಿ ಈ ಬರಗಾಲದಿಂದ ಯಾರು ಅನ್ಯಾಯಕ್ಕೆ ಗುರಿಯಾಗಿದ್ದಾರೆ ಅವರಿಗೆ ಪ್ರಾಮಾಣಿಕವಾಗಿ ಸ್ವಲ್ಪವಾದರೂ ಕೆಲಸ ಮಾಡಿಕೊಟ್ಟಂತಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಇವತ್ತು 2016-17ರಲ್ಲಿ ಸುಮಾರು 139 ತಾಲ್ಲೂಕುಗಳು ಬರಗಾಲ ಪೀಡಿತವೆಂದು ಸರ್ಕಾರ ಘೋಷಣೆ ಮಾಡಿದೆ. ಸರ್ಕಾರ ಏನು ಕೆಲಸ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದೆ ಎನ್ನುವುದನ್ನು ನೋಡಿದ್ದೇವೆ. ಸರ್ಕಾರವನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರ ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಮೇಲೆ ಇವತ್ತಿನ ದಿವಸ ಕಾಲಕಾಲಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳ ಸಭೆಗಳನ್ನು ಮಾಡುವುದರ ಮುಖಾಂತರವಾಗಿ, ಜಿಲ್ಲಾ ಉಸ್ತುವಾರಿ ಸಚಿವರುಗಳನ್ನು ಸಂಬಂಧಪಟ್ಟಂತಹ ಜಿಲ್ಲೆಗಳಿಗೆ ನೇಮಿಸುವುದರ ಮುಖಾಂತರವಾಗಿ ಅಲ್ಲಿ ಏನೆಲ್ಲಾ ಕೆಲಸಗಳು ಆಗಬೇಕು ಎನ್ನುವುದಕ್ಕೆ ಬಹಳಷ್ಟು ಹೊತ್ತು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಹಿಂದೆ, ಬರಗಾಲ ಬಂದಾಗ ನಾವು ಕೊನೆ ಗಳಿಗೆಯಲ್ಲಿ ಎಚ್ಚೆತ್ತುಕೊಳ್ಳುತ್ತಿದ್ದೆವು. ಆದರೆ, ಈ ಬಾರಿ ಮುಖ್ಯ ಮಂತ್ರಿಗಳು ಬಹಳಷ್ಟು ಕಾಳಜಿಯನ್ನು ತೆಗೆದುಕೊಂಡು ಬರಗಾಲದಲ್ಲಿ ಯಾರು ತೊಂದರೆಗೀಡಾಗುತ್ತಾರೆ, ರೈತರು ಇರಬಹುದು, ಜಾನುವಾರಗಳಿರಬಹುದು. ಕುಡಿಯುವ ನೀರಿಗೆ ಹಾಹಾಕಾರ ಇರಬಹುದು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೊದಲೇ ಎಚ್ಚೆತ್ತುಕೊಂಡು ಸೂಕ್ತವಾದಂತಹ ಕ್ರಮ ಕೈಗೊಳ್ಳುವ ಕಡೆ ಬಹಳಷ್ಟು ಕೆಲಸವನ್ನು ಮಾಡಿದ್ದಾರೆ. ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚನೆ ಮಾಡುವುದರ ಮುಖಾಂತರವಾಗಿ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಗಳಿಗೆ ಪ್ರವಾಸ ಮಾಡಿ ಯಾವ ಯಾವ ಜಿಲ್ಲೆ ಏನೇನು ತೊಂದರೆಗೆ ಗುರಿಯಾಗಿದೆಯೋ ಅದಕ್ಕೆ ಕಟ್ಟು ನಿಟ್ಟಿನ ಕ್ರಮವನ್ನು ಕೈಗೊಳ್ಳುವುದಕ್ಕೆ ಅಧಿಕಾರಿಗಳಿರಬಹುದು ಅಥವಾ ಸಂಬಂಧಪಟ್ಟ ಉಸ್ತುವಾರಿ ಸಚಿವರುಗಳ ಸಮಿತಿಗಳನ್ನು ಮಾಡಿ, ಕಾಲಕಾಲಕ್ಕೆ ಏನಾಗಬೇಕಾಗಿತ್ತು ಅದನ್ನು ಖಂಡಿತವಾಗಿ ಪ್ರಾಮಾಣಿಕವಾಗಿ ಮಾಡಿದ್ದಾರೆ. ಇವತ್ತಿನ ದಿವಸ ಮೇವಿನ ಹಗರಣವಾಗಿದೆ ಎಂದು ಹಲವು ಮಾನ್ಯ ಸದಸ್ಯರು ಹೇಳಿದರು. ಇದರಲ್ಲಿ ಅಲ್ಪ ಸ್ವಲ್ಪ ತೊಂದರೆಗಳಾಗಿರಬಹುದು, ಆದರೆ, ಜಾನುವಾರುಗಳಿಗೆ ಮೇವನ್ನು ತರುವುದಕ್ಕೆ ಸರ್ಕಾರ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಮೇವು ಸಿಗುತ್ತದೆ, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಯಿಂದ ಇರಬಹುದು ಅಥವಾ ಹೊರರಾಜ್ಯಗಳಿಂದ ತರತಕ್ಕಂತಹದ್ದು ಇರಬಹುದು ಈ ಕೆಲಸ ಎಲ್ಲವನ್ನು ಕೂಡ ಮಾಡಿ, ಅಷ್ಟೊಂದು ತೊಂದರೆಗೀಡಾಗದ ರೀತಿಯಲ್ಲಿ ಗೋಶಾಲೆಗಳನ್ನು ತೆರೆಯುವುದರ ಮುಖಾಂತರವಾಗಿ ಸಮರ್ಪಕವಾಗಿ ಸಮಯಕ್ಕೆ ಸರಿಯಾಗಿ ಮೇವು ಕೊಡತಕ್ಕಂತಹ ಕೆಲಸಗಳು ಕೂಡ ಆಗಿದೆ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಈ ಸದನದಲ್ಲಿ ಮಾತನಾಡುತ್ತಾ, "ಮುಖ್ಯಮಂತ್ರಿಗಳು ಗೋಶಾಲೆಗೆ ಭೇಟಿ ನೀಡಿದಾಗ 375 ರಾಸುಗಳಿದ್ದವು, ಅವರು ಹೋದ ಮಾರನೆಯ ದಿವಸ 275 ರಾಸುಗಳಾಗಿವೆ"ಯೆಂದು ಹೇಳಿದರು. ಇಂತಹ ಆಪಾದನೆಗಳು ಬಂದಾಗ ಯಾವ ಅಧಿಕಾರಿ ಈ ತಪ್ಪನ್ನು ಮಾಡಿದ್ದಾರೋ ಅವರ ವಿರುದ್ಧ ವಿರೋಧ ಪಕ್ಷದವರಾಗಿರಬಹುದು ಅಥವಾ ಆಡಳಿತ ಪಕ್ಷದವರಾಗಿರಬಹುದು ಈ ರೀತಿಯಾಗಿ ಕ್ರಮ ಕೈಗೊಳ್ಳದೇ ಹೋದರೆ ಯಾವತ್ತೂ ಕೂಡ ಈ ಬರಗಾಲಕ್ಕೆ ಸರಿಯಾದಂತಹ ಶಾಶ್ವತವಾದಂತಹ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇವತ್ತಿನ ದಿವಸ ಕೃಷಿ ಸಚಿವರು ಯೋಜನೆಗಳನ್ನು ಮಾಡುವುದರ ಮುಖಾಂತರವಾಗಿ ಕೃಷಿ ಹೊಂಡಗಳನ್ನು ತೆಗೆಯಬೇಕು ಎನ್ನುವಂತಹ ಕಾಮಗಾರಿಯನ್ನು ಹಮ್ಮಿಕೊಂಡು, ಇಡೀ ದೇಶದಲ್ಲಿಯೇ ಅತೀ ಹೆಚ್ಚು ಹೊಂಡಗಳನ್ನು ತೆಗೆಯತಕ್ಕಂತಹ ಕಾರ್ಯಕ್ರಮ ನಮ್ಮ ರಾಜ್ಯದಲ್ಲಿ ಆಗಿದೆ. ಯಾವ ರೀತಿಯಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗಿದೆ ಆ ರೀತಿಯಲ್ಲಿ ಖಂಡಿತವಾಗಿ ಮತ್ತು ಪ್ರಾಮಾಣಿಕವಾಗಿ ಎಲ್ಲಾ ಇಲಾಖೆಯಲ್ಲಿಯೂ ಕೂಡ ಇವತ್ತಿನ ದಿವಸ ಕೆಲಸಗಳಾಗಿದೆ. ಅದೇ ರೀತಿಯಾಗಿ ಕೇಂದ್ರದ ಪಾಲು, ರಾಜ್ಯದ ಪಾಲು ಎಂದು ರಾಜ್ಯ ಸರ್ಕಾರದವರು ಕೇವಲ ಕೇಂದ್ರ ಸರ್ಕಾರದ ಕಡೆ ಬೆರಳು ತೋರಿಸತಕ್ಕಂತಹದ್ದು, ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದ ಕಡೆ ಬೆರಳು ತೋರಿಸತಕ್ಕಂತಹದ್ದು ಇವುಗಳೆಲ್ಲಾವನ್ನು ನಾವು ಬಿಡಬೇಕು. ಇವತ್ತಿನ ದಿವಸ ಶ್ರೀ ಬಿ.ಜೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ ಹೇಳಿದರು, "ಒಂದು ವರ್ಷದಲ್ಲಿ ಎರಡು ಸಾವಿರ ಕೋಟಿ ರೂಪಾಯಿ ಹಣವನ್ನು ತೆಗೆದುಕೊಂಡಿದ್ದೇವೆ. ಕಳೆದ ವರ್ಷ ಕೇವಲ ಐದು ನೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ" ಎಂದು ಹೇಳಿದರು. ಈ ತಪ್ಪಾಗಿರುವಂತಹದ್ದನ್ನು ಇವತ್ತಿನ ದಿವಸ ತಿದ್ದುವಂತಹ ಕೆಲಸ ಆಗಬೇಕಾಗಿದೆ.

(ಮುಂದು)

(727)/14-6-2017/4-30/ಎಲ್ಎಂ/ಎಂಡಿ

**ಶ್ರೀ ಎಂ.ನಾರಾಯಣಸ್ವಾಮಿ** (ಮುಂದು):- ಕೇಂದ್ರ ಸರ್ಕಾರದಿಂದ ಬರುವ ಹಣವನ್ನು ಏಕೆ ಬಿಡಬೇಕು? ನಮಗೆ ಎಷ್ಟು ಬೇಕಾಗಿದೆ ಅಷ್ಟನ್ನು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ತೆಗೆದುಕೊಳ್ಳುವಂತಹ ಕೆಲಸವನ್ನು ಪ್ರಮಾಣಿಕವಾಗಿ ಎಲ್ಲರೂ ಮಾಡಬೇಕಾಗಿದೆ. ಮಾನ್ಯ ಶ್ರೀಕಂಠೇಗೌಡರು ನಿನ್ನೆ ಮಾತನಾಡುತ್ತಾ ಮೈಸೂರಿನ 137 ಹಳ್ಳಿಗಳ ಜನರು ಗೂಳೆ ಹೋಗಿದ್ದಾರೆ ಎಂದು ಹೇಳಿದರು. ಮೈಸೂರಿನಲ್ಲಿ ಮಾತ್ರವಲ್ಲ ಕರ್ನಾಟಕದ ಯಾವುದೇ ಜಿಲ್ಲೆಗಳಿಂದ ಜನರು ಗೂಳೆ ಹೋಗುತ್ತಾರೆ ಎಂದರೆ ನಮಗೆ ಅವಮಾನಕರವಾದ ವಿಷಯ. ಉತ್ತರ ಕರ್ನಾಟಕ-ದಕ್ಷಿಣ ಕರ್ನಾಟಕ ಎನ್ನುವ ಭೇದವನ್ನು ಮರೆತು ನಾವೆಲ್ಲರೂ ಕರ್ನಾಟಕ ಜನ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಹಳ್ಳಿಗಳಲ್ಲಿ ಕುಡಿಯಲು ನೀರು ಇಲ್ಲದೆ, ಮಾಡಲು ಕೆಲಸ ಇಲ್ಲದೆ ಇರುವ ಕಾರಣ ಹಳ್ಳಿಗಳನ್ನು ಬಿಟ್ಟು ಜನರು ನಗರ-ಪಟ್ಟಣಗಳಿಗೆ ವಲಸೆ ಬರುವಂತಹ ಪ್ರಸಂಗ ಬಂದಿದೆ. ಅದನ್ನು ತಪ್ಪಿಸಬೇಕು. ಇದೆಲ್ಲವನ್ನು ತಪ್ಪಿಸಬೇಕು ಎಂದೇ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. 'ಅನ್ನಭಾಗ್ಯ ಯೋಜನೆ' ಇದುವರೆಗೆ 5 ಕೆ.ಜಿ ಅಕ್ಕಿಯನ್ನು ಒಬ್ಬರಿಗೆ ಉಚಿತವಾಗಿ ಕೊಡುತ್ತಿದ್ದರು. ಅದನ್ನು ಮೇ 1ನೇ ತಾರೀಖಿನಿಂದ 7 ಕೆ.ಜಿ ಅಕ್ಕಿಯನ್ನು ಕೊಡಲಾಗುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, This is a burning problem. ‘ಅನ್ನ ಭಾಗ್ಯ ಯೋಜನೆ’ ‘ಮನೆಬಾಗಿಲಿಗೆ ಕೃಷಿಭಾಗ್ಯ ಯೋಜನೆ’ ‘ನರೇಗಾ ದೃಢಿಕರಣ ಯೋಜನೆ’ ಯಾವುದು ಅವರಿಗೆ ಪರಿಹಾರ ಕೊಡಲಿಲ್ಲ. ಅವರು ವಾಪಸ್ ಬರಲು ತಯಾರಿದ್ದಾರೆ. ನಮಗೆ ಬೇಸಾಯ ಮಾಡಲು ನೀರು ಕೊಡಿ ಎಂದು ಕೇಳುತ್ತಿದ್ದಾರೆ. ಮಳೆ ನೀರನ್ನು ಇಂಗಿಸಿ, ಕೆರೆ–ಕಟ್ಟೆಗಳನ್ನು ಕಟ್ಟಿಸಿ ನೀರು ತುಂಬಿಸಿ ಕೊಡಿ ನಾವು ಬೇಸಾಯ ಮಾಡಿಕೊಂಡು ಇಲ್ಲೇ ಇರುತ್ತೇವೆ, ಆ ಮೈಸೂರು ಯಾರಿಗೆ ಬೇಕಾಗಿದೆ ಅದು ನಮ್ಮ ಊರು ಅಲ್ಲ. ನಮ್ಮ ಊರು ಅರಳಿಕಟ್ಟೆ ಹುಂಡಿ ಎಂದು ಹೇಳುತ್ತಾರೆ. ‘ಅನ್ನಭಾಗ್ಯ ಯೋಜನೆಯಿಂದ’ ಅವರನ್ನು ಕರೆಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರ ಹತ್ತಿರ ರೇಶನ್ ಕಾರ್ಡ್ ಇದೆ. ಅವರು ತಿಂಗಳಿಗೆ ಒಂದು ಸಾರಿ ಬಂದು ಅಕ್ಕಿ ತೆಗೆದುಕೊಂಡು ವಾಪಸ್ ಮೈಸೂರಿಗೆ, ನಂಜನಗೂಡಿಗೆ ಹೋಗುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಇವತ್ತು ನಾವು ಸದನದಲ್ಲಿ ಕುಳಿತು ಕೆರೆ–ಕಟ್ಟೆ ಕಟ್ಟಬೇಕು ನೀರು ಹರಿದು ಹೋಗುತ್ತಿದೆ ಎನ್ನುವ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ನಿಜವಾದ ಬಡವ ಒಪ್ಪತ್ತು ಊಟಕ್ಕೆ ಇವತ್ತು ತೊಂದರೆಪಡುತ್ತಿದ್ದಾನೆ. ಅನ್ನಭಾಗ್ಯ ಯೋಜನೆಯಿಂದ ಬಹಳಷ್ಟು ಅನುಕೂಲವಾಗಿದೆ. ಇವತ್ತು ಎಲ್ಲಾ ಕಡೆಯಲ್ಲಿ ಈ ಯೋಜನೆ ಇದೆ. ಒಂದೇ ಮಾತಿನಲ್ಲಿ ಸಾರಾಸಗಟಾಗಿ ತೆಗೆದು ಹಾಕಬಾರದು. ಇವತ್ತು ಬರಗಾಲ ಬಂದಿದೆ ಅವನು ಊರು ಬಿಟ್ಟು ಗೂಳೆ ಹೋಗಬಾರದು, ಸ್ವಲ್ಪವಾದರೂ ಅವನಿಗೆ ಅನುಕೂಲವಾಗಲಿ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಸರ್ಕಾರ ಈ ಯೋಜನೆಯನ್ನು ತಂದಿರುವುದು. ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಬೇಕು ಎನ್ನುವ ಕನಸನ್ನು ನಮ್ಮ ಮುಖ್ಯಮಂತ್ರಿಗಳು ಕಂಡು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಕೊಡುತ್ತಿರುವ ಅಕ್ಕಿಯನ್ನು, ಬೆಳೆಯನ್ನು ಅದೇ ಊರಿನಲ್ಲಿದ್ದು ಉಪಯೋಗಿಸಿಕೊಂಡು ಅಲ್ಲೇ ಜೀವನ ಮಾಡಲಿ ಎನ್ನುವುದು ಸರ್ಕಾರದ ಉದ್ದೇಶ. ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದು ಎಂದು ಪುಕ್ಕಟೆಯಾಗಿ ಶಾಲೆಗಳಲ್ಲಿ ಕುಡಿಯಲು ಹಾಲು, ಮೊಟ್ಟೆ ಕೊಡುತ್ತಿದ್ದೇವೆ, ಉಚಿತವಾಗಿ ಪುಸ್ತಕ, ಬ್ಯಾಗ್, ಶೂ ಎಲ್ಲವನ್ನು ಸರ್ಕಾರ ಕೊಡುತ್ತಿದೆ. ಗೂಳೆ ಹೋಗಿ ಮಕ್ಕಳ ವಿದ್ಯಾಭ್ಯಾಸ ಹಾಳಾಗಬಾರದು, ಅವರು ಹಳ್ಳಿಯಲ್ಲಿಯೇ ಉಳಿಯಬೇಕು ಎನ್ನುವುದಕ್ಕಾಗಿ ಈ ಎಲ್ಲಾ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಸರ್ಕಾರ ಮಾಡಿರುವ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ಪ್ರಶಂಸೆಯನ್ನು ಮಾಡಬೇಕು. ಸರಿಯಾಗಿ ಕೆಲಸ ಮಾಡದಿದ್ದರೆ ಕಿವಿಹಿಡುವಂತಹ ಕೆಲಸವನ್ನು ನಾವು–ನೀವು ಎಲ್ಲರೂ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಇವತ್ತು ಪ್ರಮಾಣಿಕವಾದ ಪ್ರಯತ್ನವನ್ನು ಮಾಡಿದೆ. ಇವತ್ತು ಬರಗಾಲ ಬಂದಿರುವುದಿಲ್ಲ, ಸುಮಾರು ವರ್ಷಗಳಿಂದ ಬರಗಾಲ ಬರುತ್ತಲೇ ಇದೆ. ಈ ಎಲ್ಲ ಕಾರ್ಯಕ್ರಮಗಳು ಈಗ ಮಾತ್ರ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವುದು ಎಂದು ಕೂಡಾ ನಾನು ಹೇಳುವುದಿಲ್ಲ. ಪ್ರಕೃತಿ ವಿಕೋಪದಿಂದ ಮಳೆ ಬರುತ್ತಿಲ್ಲ, ಮಳೆ ಬಂದರೆ ನೀರು ಕೊಡಲು ಸಾಧ್ಯ. ನದಿಗಳು ತುಂಬಿದಾಗ ಆ ನೀರನ್ನು ಶೇಖರಣೆ ಮಾಡಿ ಅವರಿಗೆ ಕೊಡಬೇಕಾಗುತ್ತದೆ. ಕೆರೆ-ಕಟ್ಟೆಗಳನ್ನು ಕಟ್ಟುವುದು, ಕೃಷಿ ಹೊಂಡಗಳನ್ನು ಮಾಡುವುದು, ಸಣ್ಣ-ಪುಟ್ಟ ಹೊಂಡಗಳನ್ನು ಕಟ್ಟುವುದು ಈ ಎಲ್ಲ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿಕೊಂಡು ಬರುತ್ತಿದೆ. ಉತ್ತಮವಾದ ಮಳೆಯಾದರೆ ನೀರಿನ ಶೇಖರಣೆಯಾಗಿ ರೈತನಿಗೆ ಖಂಡಿತವಾಗಿ ಒಳ್ಳೆಯದಾಗುತ್ತದೆ. ಈ ನಿಟ್ಟಿನಲ್ಲಿ ನಾವು ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕಾಗಿದೆ.

ಇನ್ನು 'ಫಸಲು ಬೀಮಾ ಯೋಜನೆ' ಇದೊಂದು ಉತ್ತಮವಾದ ಯೋಜನೆಯಾಗಿದೆ. 2016-17ನೇ ಸಾಲಿನಲ್ಲಿ ಸುಮಾರು ಹತ್ತುವರೆ ಲಕ್ಷದಷ್ಟು ರೈತರ ಸುಮಾರು 13.05 ಲಕ್ಷ ಹೆಕ್ಟರ್ ವಿಸ್ತೀರ್ಣದಲ್ಲಿ 193.95 ಕೋಟಿ ರೂ.ಗಳ ವಿಮಾ ಕಂತನ್ನು ಪಾವತಿಸಲಾಗಿದೆ. ರೈತರು ಹೆಚ್ಚು-ಹೆಚ್ಚು ಬೆಳೆ ವಿಮೆಯನ್ನು ಮಾಡಿಕೊಳ್ಳಬೇಕು ಎನ್ನುವುದು ನಮ್ಮ ಆಸೆ. ಬೆಳೆ ನಾಶವಾದರೆ ರೈತನಿಗೆ ವಿಮೆ ಹಣವನ್ನಾದರೂ ಸಿಗುತ್ತದೆ. ಪ್ರತಿಯೊಬ್ಬ ರೈತನಿಗೂ ಅರ್ಥವಾಗುವ ಹಾಗೆ ವಿಮೆ ಬಗ್ಗೆ ತಿಳಿಸಿ, ಬೆಳೆ ವಿಮೆ ಮಾಡಿಸಿ ಎಂದು ಹೇಳಲಾಗುತ್ತಿದೆ. ಈ ರೀತಿ ವಿಮೆ ಮಾಡಿಕೊಂಡವರಿಗೆ ಸುಮಾರು 50% ರಷ್ಟು ಹಣ ಸಂದಾಯವಾಗಿದೆ. ರೈತನೇ ಆಗಲಿ, ಬಡ ಕಾರ್ಮಿಕನೇ ಆಗಿರಲಿ ಅವನಿಗೆ ಏನಾದರೂ ಅನಾನುಕೂಲವಾದರೆ ಸರ್ಕಾರದ ವತಿಯಿಂದ ಅವರಿಗೆ ಕೊಡಬೇಕಾಗಿರುವನ್ನು ಸಕಾಲದಲ್ಲಿ ಕೊಡಬೇಕು. ರೈತ ದೇಶದ ಬೆನ್ನೆಲುಬು ಎಂದು ಹೇಳಲಾಗುತ್ತದೆ. ರೈತ ಮುನಿಸಿಕೊಂಡು ಇವತ್ತು ಕಷ್ಟದಲ್ಲಿರುವ ಸಂದರ್ಭದಲ್ಲಿ ನಾವೆಲ್ಲರೂ ಅವರಿಗೆ ಸಹಾಯ ಮಾಡದೆ ಹೋದರೆ ನಿಜವಾಗಿಯು ಆ ಭಗವಂತನ್ನು ನಮ್ಮನ್ನು ಮೆಚ್ಚುವುದಿಲ್ಲ. ಆದ್ದರಿಂದ ಸರ್ಕಾರ ಇವತ್ತು ಉತ್ತಮವಾದ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ಏನಾದರೂ ಲೋಪ-ದೋಷಗಳು ಇದ್ದರೆ ಸರ್ಕಾರದ ಗಮನ ಸೆಳೆಯಬೇಕು ಎನ್ನುವ ಮನವಿಯನ್ನು ತಮ್ಮ ಮುಖಾಂತರ ಮಾಡಿಕೊಳ್ಳುತ್ತಾ, ಮಾತನಾಡಲು ಅವಕಾಶ ಮಾಡಿಕೊಟ್ಟಿದಕ್ಕೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ರುದ್ರಪ್ಪ ಹನಮಂತ ನಿರಾಣಿ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಬರದ ಬಗ್ಗೆ ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟ ತಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಾ, ಬರದ ಬಗ್ಗೆ ಸುದೀರ್ಘವಾಗಿ ಬಹಳಷ್ಟು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಕಳೆದ 50 ವರ್ಷಗಳಿಂದ ಕಾಣದಂತಹ ಭೀಕರ ಬರಗಾಲವನ್ನು ನಮ್ಮ ರಾಜ್ಯದಲ್ಲಿ ಈ ವರ್ಷ ಕಾಣುತ್ತಿದ್ದೇವೆ. ಎಲ್ಲಿ ನೋಡಿದರು ನೀರಿಗಾಗಿ ಹಾಹಾಕಾರ, ನೀರು ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಅವರು ಬಿತ್ತಿರುವ ಬೆಳೆಯ ಒಂದು ಕಾಳನ್ನು ಪಡೆದಿರುವಂತಹ ಪರಿಸ್ಥಿತಿಯನ್ನು ಇವತ್ತು ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇದರ ಬಗ್ಗೆ

ಪರಿಹಾರವನ್ನು ಕಂಡುಕೊಳ್ಳಬೇಕು ಎಂದು ಇವತ್ತು ಸದನದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ನೀರಾವರಿ ಯೋಜನೆಯನ್ನು ಸಮಗ್ರ ಯೋಜನೆಯಾಗಿ ಮಾಡಲು ನಾವು ಮುಂದಾದರೆ ಬರುವ ದಿನಗಳಲ್ಲಿ ಇಂತಹ ಬರಗಾಲವನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ನೀರಾವರಿ ಯೋಜನೆಗಳನ್ನು ಜಾರಿಯಲ್ಲಿ ತಂದಿದ್ದರೂ ಸಹಾ ಇನ್ನು ಅನೇಕ ಯೋಜನೆಗಳು ಕುಂಟುತ್ತಾ ಸಾಗುತ್ತಿರುವುದನ್ನು ಗಮನಿಸಬೇಕಾಗುತ್ತದೆ. ಈಗಾಗಲೇ ಚರ್ಚೆಯಾಗಿರುವ ಹಾಗೆ, ಕೃಷ್ಣಾ ಎಡದಂಡೆ ಮತ್ತು ಬಲದಂಡೆಯ ನದಿ ಪಾತ್ರದಲ್ಲಿ ಬರುವ 50 ಸಾವಿರ ಎಕರೆ ಜಮೀನಿಗೆ ನದಿಯಿಂದ ನೀರನ್ನು ಪಂಪ್ ಮಾಡಿಕೊಂಡು ಮಾಡಿರುವ ಬೇಸಾಯದ ಬೆಳೆಯು ಕೈಗೆ ಬರದೆ ನಾಶವಾಗಿರುವುದನ್ನು ಕಾಣುತ್ತಿದ್ದೇವೆ. ಇದು ಎಲ್ಲದಕ್ಕೂ ಕಾರಣ ಮಳೆಯಾಗದಿರುವುದು ಮತ್ತು ಎಲ್ಲರಿಗೂ ಗೊತ್ತಿರುವ ಹಾಗೆ ರಾಜ್ಯದಲ್ಲಿ ಯಾವ ಜಲಾಶಯಗಳು ತುಂಬಿರಲಿಲ್ಲ. ಆದರೆ ಕೃಷ್ಣಾ ಭಾಗ್ಯ ಜಲಾ ನಿಗಮದ ಅಡಿಯಲ್ಲಿ ನಿರ್ಮಿಸಿರುವಂತಹ ಆಲಮಟ್ಟಿ ಜಲಾಶಯ 519.6 ಮೀಟರ್‌ವರೆಗೆ ಪೂರ್ತಿ ಪ್ರಮಾಣದಲ್ಲಿ ಹೋದ ವರ್ಷ ಜೂನ್ ಮತ್ತು ಜುಲೈ ತಿಂಗಳಲ್ಲಿ ತುಂಬಿತ್ತು. ಇಷ್ಟು ನೀರು ತುಂಬಿದರಿಂದ ಆ ಭಾಗದ ಜನರಿಗೆ ಕುಡಿಯುವ ನೀರು, ಜನ-ಜಾನುವಾರುಗಳಿಗೆ ನೀರು, ನೀರಾವರಿಗೆ ನೀರನ್ನು ಒದಗಿಸಲು ಸಮರ್ಪಕವಾಗಿ ನೀರು ನಿರ್ವಹಣೆಯಾಗಿತ್ತು. ಆದರೆ ಈ ವರ್ಷ ಪೂರ್ತಿಯಾಗಿ ಜಲಾಶಯ ತುಂಬಿದ್ದರೂ ಕೂಡಾ ನದಿಯ ಪಾತ್ರದಲ್ಲಿರುವ ನೂರಾರು ಊರುಗಳಿಗೆ ಕುಡಿಯಲು ನೀರು ಇಲ್ಲದಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಏನು ಕಾರಣ ಎನ್ನುವುದನ್ನು ವಿಚಾರ ಮಾಡಿದರೆ, ಒಂದು ಅಂಕಿ-ಸಂಖ್ಯೆ ಪ್ರಕಾರ dead storage water ಇದ್ದು 506 ಮೀಟರ್‌ವರೆಗೆ ಮಾತ್ರ ಬಿಡಬೇಕು, 506 ಮೀಟರ್‌ಗಿಂತ ಕೆಳಗೆ ಹೋದರೆ ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎನ್ನುವ ಆದೇಶವಿದರೂ ಈ ವರ್ಷ ಏಪ್ರಿಲ್ 21ನೇ ತಾರೀಖಿನಿಂದ ಏಪ್ರಿಲ್ 30ನೇ ತಾರೀಖಿನವರೆಗೆ ನಿರಂತರವಾಗಿ ಹತ್ತು ದಿನಗಳ ಕಾಲ ಕೃಷ್ಣಾ ನದಿಯಲ್ಲಿರುವ dead storage water ನ್ನು ನಾರಾಯಣಪೂರ ಡ್ಯಾಂ ಮುಖಾಂತರ ಬೇರೆ-ಬೇರೆ ಕಡೆಗಳಲ್ಲಿ ನೀರನ್ನು ಹರಿಸಿರುವುದು ವರದಿಯಾಗಿದೆ. Dead storage water ಅಂದರೆ ಕೆಳಗೆ ಇರುವ ಸುಮಾರು 3.25 ಟಿಎಂಸಿ ನೀರನ್ನು ಯಥೇಚವಾಗಿ ಹನ್ನೆರಡು ದಿವಸಗಳಲ್ಲಿ ಕೆಳಗೆ ಬಿಟ್ಟಿರುವುದು ಇತಿಹಾಸದಲ್ಲಿಯೇ ಹೊಸ ದಾಖಲೆ ಎಂದು ಹೇಳಬಯಸುತ್ತೇನೆ. ನಾನು ಆ ಭಾಗದಿಂದ ಬಂದವನಾಗಿರುವುದರಿಂದ ಆ ಭಾಗದ ರೈತರ ನೋವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಕೃಷ್ಣಾ ನದಿ ಪೂರ್ತಿಯಾಗಿ ಬತ್ತಿರುವುದನ್ನು ನಾವು 50 ವರ್ಷಗಳಿಂದ ಕಂಡಿರಲಿಲ್ಲ ಎಂದು ನಮ್ಮ ಹಿರಿಯರು ಹೇಳುತ್ತಾರೆ. 120 ಟಿಎಂಸಿ ನೀರನ್ನು ಸಂಗ್ರಹ ಮಾಡಿರುವ ನದಿ ನಮ್ಮ ಪಕ್ಕದಲ್ಲಿದರೂ ಕೂಡಾ ಇವತ್ತು ಕುಡಿಯಲು ನೀರು ಇಲ್ಲದ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದೆ. ಇದಕ್ಕೆ ಕಾರಣ ಎಂದರೆ, ಅಲ್ಲಿರುವ ಅಧಿಕಾರಿಗಳ ವೈಫಲ್ಯ ಮತ್ತು ತಪ್ಪಿನಿಂದ ಇವತ್ತು dead storage water ನ್ನು ಹರಿಸಿರುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. 3.25 ಟಿಎಂಸಿ ನೀರು ನದಿಯಲ್ಲಿ ಇದ್ದಿದ್ದರೆ ಕೃಷ್ಣಾನದಿ ದಡದಲ್ಲಿರುವಂತಹ ಸುಮಾರು ನಾಲ್ಕುವರೆ ಲಕ್ಷ ಜನಸಂಖ್ಯೆ ಇರುವಂತಹ ಬಿಜಾಪುರ ಮಹಾನಗರಕ್ಕೆ ಕೃಷ್ಣಾನದಿ Jack Well ನಿಂದಲೇ ಕುಡಿಯುವ ನೀರು ಸರಬರಾಜು ಆಗುತ್ತದೆ. ಆ ನೀರು ಖಾಲಿಯಾಗಿರುವ ಹಿನ್ನಲೆಯಲಿ ಬಿಜಾಪುರ ಮಹಾನಗರಕ್ಕೆ ವಾರಕ್ಕೆ ಒಂದು ಸಾರಿ ಅಥವಾ ಹತ್ತು ದಿನಕ್ಕೆ ಒಂದು ಸಾರಿ ನೀರನ್ನು ಕೊಡುವಂತಹ ಪರಿಸ್ಥಿತಿ ಬಂದಿದೆ ಎಂದು ನಾನು ಹೇಳಬಯಸುತ್ತೇನೆ.

(ಮುಂದು)

(728) 14.06.2017 / YL-RN /4.40

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ (ಮುಂದು):-**

ಅದೇ ಒಂದು ಸ್ಥಳದಲ್ಲಿ ಸುಮಾರು 10 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳಿವೆ. 10 ಬಹು ಗ್ರಾಮಗಳು ಕುಡಿಯುವ ನೀರಿನ ಯೋಜನೆಯಲ್ಲಿ ಸುಮಾರು 100ಕ್ಕೂ ಹೆಚ್ಚು ಗ್ರಾಮಗಳಿಗೆ ಶಾಶ್ವತವಾಗಿರತಕ್ಕಂಥ ಕುಡಿಯುವ ನೀರಿನ ಯೋಜನೆಯನ್ನು ಕಳೆದ 8-10 ವರ್ಷಗಳಿಂದ ಮಾಡಿಕೊಂಡು ಬರಲಾಗಿದೆ. ಆದರೆ ಇವತ್ತಿನ ದಿವಸ 100 ಗ್ರಾಮಗಳಿಗೂ ಕುಡಿಯುವ ನೀರು ಇಲ್ಲದೇ ಇರುವಂತಹ ಪರಿಸ್ಥಿತಿ ಬಂದಿದೆ. ಭೀಕರವಾಗಿರತಕ್ಕಂಥ ಬರಗಾಲದಲ್ಲಿಯೂ ಕೂಡ ನೀರನ್ನು ನಿರ್ವಹಣೆ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಇವತ್ತು ಸರ್ಕಾರ ಎಡವಿದೆ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಏಕೆ ಈ ರೀತಿಯಾಗಿದೆ ಎಂಬುದನ್ನು ನಾವು ಇವತ್ತು ಚಿಂತನೆ ಮಾಡಬೇಕಾಗುತ್ತದೆ. ಕೃಷ್ಣಾಕೊಳದಲ್ಲಿ ಬರತಕ್ಕಂಥ ಜನಪ್ರತಿನಿಧಿಗಳು, ಶಾಸಕರು ಮತ್ತು ಅಧಿಕಾರಿಗಳ ನೇತೃತ್ವದಲ್ಲಿ ಪ್ರತಿ ವರ್ಷವೂ ನಾಲ್ಕಾರು ಸಭೆಗಳನ್ನು ಮಾಡತಕ್ಕಂಥ ವಾಡಿಕೆ ಇದೆ. ಆದರೆ, ಈ ವರ್ಷ ಕಳೆದ ಜುಲೈ ಮಾಹೆಯಲ್ಲಿ ಮಾತ್ರ ಒಂದು ಸಭೆಯನ್ನು ಮಾಡಿದ್ದರು. ಕಳೆದ ಜುಲೈ ಮಾಹೆಯಿಂದ ಇಲ್ಲಿಯವರೆಗೂ ಕೂಡ ಯಾವುದೇ ಒಂದು ಸಭೆಯನ್ನು ಮಾಡಲಾರದೇ ನೀರನ್ನು ಹರಿಸಿರತಕ್ಕಂಥ ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಇವತ್ತು ಸುಮಾರು 500 ಕೋಟಿ ರೂಪಾಯಿಗಿಂತಲೂ ಹೆಚ್ಚು ಉತ್ಪನ್ನ ಬರಬೇಕಾಗಿರತಕ್ಕಂಥ ಕಬ್ಬು, ಶೇಂಗಾ, ಜೋಳ ಅನೇಕ ಬೆಳೆಗಳು ಇವತ್ತು ರೈತರ ಕೈಗೆ ತಲುಪಲಿಲ್ಲ. ಹೀಗಾಗಿ ಯಾವುದೇ ಸಂದರ್ಭದಲ್ಲಿಯೂ ಕೂಡಾ ಆಲಮಟ್ಟಿ ಜಲಾಶಯದಲ್ಲಿರತಕ್ಕಂಥ dead storage water ಗಿಂತ ಕೆಳಗಡೆ ನೀರನ್ನು ಹರಿಸುವುದಾಗಬಾರದು. ಮುಂದಿನ ನಿರ್ಮಾಣಗಳಲ್ಲಿಯೂ ನೀರನ್ನು ಉಳಿಸಿಕೊಳ್ಳಬೇಕು. ಇದರ ಬಗ್ಗೆ ಸರ್ಕಾರ ಜನರ ಗಮನಕ್ಕೆ

ತರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನೆನ್ನೆ ದಿವಸ ಮಾನ್ಯ ಕವಟಗಿ ಮಠರವರು ಹೇಳಿದ್ದರು. 2.5 ಟಿಎಂಸಿ ನೀರನ್ನು ಎರಡು ಬಾರಿ ಮಹಾರಾಷ್ಟ್ರ ಸರ್ಕಾರದಿಂದ ಕೃಷ್ಣಾ ನದಿಗೆ ನೀರನ್ನು ತರಬೇಕಾದಂತಹ ಪ್ರಸಂಗ ಬಂದಾಗ ಸರ್ಕಾರ ಎಷ್ಟೇಲ್ಲಾ ಪ್ರಯತ್ನ ಪಟ್ಟು ಇವತ್ತು ನೀರನ್ನು ಬಿಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ನೀರನ್ನು ಯಥೇಚ್ಚವಾಗಿ ಬೇರೆ ಬೇರೆ ರಾಜ್ಯಗಳಿಗೆ ಬಿಟ್ಟು, ಮಹಾರಾಷ್ಟ್ರದಿಂದ ನೀರನ್ನು ಪಡೆದುಕೊಳ್ಳುವಂತಹ ಪರಿಸ್ಥಿತಿ ಬಂದಿರುವುದನ್ನು ನೋಡಿದ್ದರೆ, ಹಳ್ಳಿ ಭಾಷೆಯಲ್ಲಿ *"ತಮ್ಮ ಜವಳ ಮಂದಿಗೆ ಕೊಟ್ಟು, ಬೇರೆಯವರ ಜವಳ ಹಾರಾಡಿ ಬಿಸಿದರೆಂದು"* ಒಂದು ಗಾದೆ ಹೇಳುತ್ತಾರೆ. ಆ ರೀತಿಯಾಗಿ ನಮ್ಮ ನೀರನ್ನು ಕಳೆದುಕೊಂಡು, ಮಹಾರಾಷ್ಟ್ರ ಸರ್ಕಾರದವರ ಹತ್ತಿರ ನಾವು ಭಿಕ್ಷೆಯನ್ನು ಬೇಡತಕ್ಕಂಥ ಪ್ರಸಂಗ ಬಂತು. ಮೊದಲನೆ ಹಂತದಲ್ಲಿ 2.5 ಟಿಎಂಸಿಯಷ್ಟು ನೀರನ್ನು ಮಹಾರಾಷ್ಟ್ರ ಸರ್ಕಾರ ಬಿಟ್ಟಾಗ ಆ ನೀರು ಬಾಗಲಕೋಟೆ, ಬಿಜಾಪುರ ಭಾಗಗಳಿಗೆ ಬಂದು ತಲುಪಲಿಲ್ಲ. ಎರಡನೆಯ ಹಂತದಲ್ಲಿ ಅಂದರೆ ಕಳೆದ ವಾರ 5, 6ನೇ ತಾರೀಖಿನಂದು ನೀರನ್ನು ಬಿಟ್ಟಾಗ ಬಿಜಾಪುರ ಡ್ಯಾಮಿನವರೆಗೂ ಬಂದು ತಲುಪಿತ್ತು. ಈ ರೀತಿಯಾಗಿ ಮುಂದಿನ ನಿರ್ಮಾಣಗಳಲ್ಲಿ ಕೃಷ್ಣಾ ಅಣೆಕಟ್ಟಿನಲ್ಲಿರತಕ್ಕಂಥ ಆಲಮಟ್ಟಿ ಜಲಾಶಯದಲ್ಲಿರತಕ್ಕಂಥ dead storage ನೀರನ್ನು ಯಾವಾಗಲೂ ಕೂಡ ಕಾಪಾಡಿಕೊಂಡು ಬರಬೇಕು. ಕಾಪಾಡಿಕೊಂಡು ಬರುವುದರಿಂದ ಬರಗಾಲದ ಪರಿಸ್ಥಿತಿಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿನ ಅವಶ್ಯಕತೆ ಉದ್ಭವಿಸಿದಾಗ ಉಪಯುಕ್ತವಾಗುತ್ತದೆ. ಕೃಷ್ಣಾ ನದಿಯಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಿದ್ದರೆ, ಸದರಿ ನದಿಯಲ್ಲಿರತಕ್ಕಂಥ ಎಲ್ಲಾ ಮೀನುಗಳು ಸತ್ತು ಹೋಗಿದೆ. ಮೊಸಳೆಗಳು ಸತ್ತಿದೆ. ಕ್ರೂರ ಪ್ರಾಣಿಯಾಗಿರತಕ್ಕಂಥ ಮೊಸಳೆಯೂ ಕೂಡ ನೀರು ಬತ್ತಿ ಹೋದಂತಹ ಸಂದರ್ಭದಲ್ಲಿ ಗ್ರಾಮಗಳಿಗೆ, ಕಬ್ಬಿನ ಗದ್ದೆಗಳಲ್ಲಿಯೂ ಕೂಡ ಪ್ರವೇಶವನ್ನು ಮಾಡಿತ್ತು. ಸಾಕಷ್ಟು ರೈತರು ಮತ್ತು ಅರಣ್ಯಾಧಿಕಾರಿಗಳು ಮೊಸಳೆಗಳನ್ನು ಹಿಡಿದಿದ್ದಾರೆ. ಹಾಗೆಯೇ ಅಲ್ಲಿರತಕ್ಕಂಥ ನದಿಯ ಹೂಳಿನಲ್ಲಿಯೂ ಕೂಡ ಸಾಕಷ್ಟು ಮೊಸಳೆಗಳು ಸತ್ತಿರುವುದನ್ನು ಪ್ರತ್ಯೇಕ್ಷವಾಗಿ ನೋಡಿದ್ದೇವೆ. ಅದರ ಜೊತೆಗೆ ನೀರನ್ನು ನಿರ್ಮಲವಾಗಿಡಬೇಕು. ಶುದ್ಧವಾಗಿಡಬೇಕು. ನೀರಿನಲ್ಲಿರತಕ್ಕಂಥ ಜಲಚರ ಪ್ರಾಣಿಗಳು ಕೂಡ ಇವತ್ತಿನ ದಿವಸ ಸಂಪೂರ್ಣವಾಗಿ ನಾಶವಾಗಿದೆ. ಪಶು-ಪಕ್ಷಿಗಳಿಗೂ ಕೂಡಾ ಕೃಷ್ಣಾ ನದಿಯಲ್ಲಿ ಸುಮಾರು 50 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪಶು-ಪಕ್ಷಿಗಳಿಗೆ ಕುಡಿಯುವುದಕ್ಕೆ ನೀರಿಲ್ಲವೆಂದರೆ ಅದು ಅತಿಶಯೋಕ್ತಿಯಾಗಲಾರದು. ಇದೆಲ್ಲದಕ್ಕೂ ಕಾರಣವಾಗಿರತಕ್ಕಂಥ ಒಂದು ನೀರು ನಿರ್ವಹಣಾ ಸಮಿತಿಯ ವೈಫಲ್ಯವೇ ಅಥವಾ ಅಧಿಕಾರಿಗಳ ವೈಫಲ್ಯವೇ ಎನ್ನುವಂಥದನ್ನು ಸರ್ಕಾರ ಗಮನಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಬರಗಾಲವು ಪ್ರಕೃತಿ ವಿಕೋಪದಿಂದ

ಬಂದಿದೆ. ದಿನದಿಂದ ದಿನಕ್ಕೆ ಬರಗಾಲ ಉದ್ಭವಿಸುವುದಕ್ಕೆ ಸಾಕಷ್ಟು ಕಾರಣಗಳಿವೆ. ನಾವು ಅರಣ್ಯವನ್ನು ನಾಶ ಮಾಡುತ್ತಿರುವಂತಹ ಹಿನ್ನೆಲೆ ಇರಬಹುದು. ನೀರನ್ನು ಸಂಗ್ರಹಣೆ ಮಾಡದೇ ಇರತಕ್ಕಂಥ ಚೆಕ್ ಡ್ಯಾಮ್‌ಗಳ ಕೊರತೆ ಇರಬಹುದು. ಈ ರೀತಿಯ ಸಮಸ್ಯೆಗಳನ್ನು ಗಮನಿಸಿ, ನಾವು ಅರಣ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತದಾಗಬೇಕೆಂದು ಹೇಳುತ್ತೇನೆ. ಹಿಂದೆ ಸುಮಾರು ಒಟ್ಟು ದೇಶದಲ್ಲಿರತಕ್ಕಂಥ ಭೌಗೋಳಿಕ ಕ್ಷೇತ್ರದ ಶೇಕಡಾ 33 ರಷ್ಟು ಅರಣ್ಯ ಪ್ರದೇಶ ನಮ್ಮ ರಾಜ್ಯದಲ್ಲಿತ್ತು. ಇವತ್ತು ಅರಣ್ಯ ನಗರೀಕರಣವಾದಂತೆ ಹಾಗೂ ಬೆಳೆದಂತೆ ಇವತ್ತು ಅರಣ್ಯ ಭೂಮಿ ಕೂಡಾ ನಾಶವಾಗಿ ಶೇಕಡಾ 16 ರಿಂದ 17 ರಷ್ಟು ಅರಣ್ಯ ಮಾತ್ರ ಉಳಿದಿದೆ. ನಾವೆಲ್ಲರೂ ಇವತ್ತು ಅರಣ್ಯವನ್ನು ಬೆಳೆಸಿದಾಗ ಮಾತ್ರ ಇಂತಹ ಪ್ರಕೃತಿ ವಿಕೋಪದಿಂದ ಸ್ವಲ್ಪ ಮಟ್ಟಿಗಾದರೂ ನಾವು ಪಾರಾಗಬಹುದೆಂಬ ವಿಚಾರವನ್ನು ಇವತ್ತು ಸದನದ ಮುಂದೆ ತರುತ್ತಿದ್ದೇನೆ. ಅದರ ಜೊತೆಗೆ ಇವತ್ತಿನ ದಿವಸ ಕೃಷಿಗೆ ಮೂಲವಾಗಿರತಕ್ಕಂಥ ಪಶುಗಳ ರಕ್ಷಣೆಯೂ ಆಗಬೇಕಾಗಿದೆ. ಪಶು ಇಲ್ಲದೇ ಇವತ್ತು ರೈತನ ಬದುಕು ಇರುವುದಿಲ್ಲ. ಹೀಗಾಗಿ ನಮಗೆ ಸ್ವತಂತ್ರ ಸಿಗುವ ಪೂರ್ವದಲ್ಲಿ ಜಾನುವಾರುಗಳ ಸಂಖ್ಯೆ 100 ಕೋಟಿಗಿಂತಲೂ ಹೆಚ್ಚಾಗಿತ್ತು ಎನ್ನುವುದನ್ನು ಅಂಕಿ ಸಂಖ್ಯೆಗಳ ಮುಖಾಂತರ ನಾವು ಕಾಣುತ್ತಿದ್ದೇವೆ. ಇವತ್ತಿನ ಒಂದು ಸರ್ವೇ ಪ್ರಕಾರ ಕೇವಲ 30 ಕೋಟಿಗಳಿಗೆ ಜಾನುವಾರುಗಳ ಸಂಖ್ಯೆ ಇಳಿದಿದೆ ಎನ್ನುವುದನ್ನು ನಾವು ಗಮನಿಸಬಹುದು. ರಾಜ್ಯದಲ್ಲಿಯೂ ಕೂಡ 2,60,000 ಮಾತ್ರ ಜಾನುವಾರುಗಳು ಉಳಿದಿದೆ. ಈ ಜಾನುವಾರುಗಳ ಸಂಖ್ಯೆ ಹೆಚ್ಚಾದಂತೆ ನಮ್ಮ ಕೃಷಿ ಭೂಮಿಯನ್ನು ಸಾವಯುವ ಕೃಷಿಯ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ರೈತರು ಸಹ ಇವತ್ತಿನ ದಿವಸ ಸಂಪೂರ್ಣ ನೀರನ್ನು ಸದ್ಬಳಕೆ ಮಾಡುತ್ತಿಲ್ಲ. ಸಂಪೂರ್ಣವಾದಂತಹ ನೀರನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ ಹನಿ ನೀರಾವರಿಗೆ ಸರ್ಕಾರ ಒತ್ತು ಕೊಟ್ಟಾಗ ಮಾತ್ರ ಸಂಪೂರ್ಣ ನೀರಿನ ಸದ್ಬಳಕೆಯಾಗುತ್ತದೆ. ಜೊತೆಗೆ ಭೂಮಿಯ ಸವಳು-ಜವಳು ಆಗುವುದನ್ನು ಕೂಡ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು. ಸಾಧ್ಯವಾದಷ್ಟು ಹೆಚ್ಚು ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡುವ ನಿಟ್ಟಿನ ಕಡೆಗೆ ಸರ್ಕಾರ ಗಮನ ಕೊಡಬೇಕು. ಕೃಷಿಗೆ ಪೂರಕವಾಗಿರತಕ್ಕಂಥ ತೋಟಗಾರಿಕಾ ಕೃಷಿ ವಿಶ್ವವಿದ್ಯಾನಿಲಯ ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಸ್ಥಾಪನೆಯಾಗಿರತಕ್ಕಂಥದ್ದು ಬಹಳ ಹೆಮ್ಮೆ ಪಡತಕ್ಕಂಥ ವಿಷಯ. ಆದರೆ, ಆ ತೋಟಗಾರಿಕಾ ವಿಶ್ವವಿದ್ಯಾಲಯದಲ್ಲಿಯೂ ಕೂಡ ನೀರಿನ ಕೊರತೆ ಇದೆ. ಈ ವಿಶ್ವವಿದ್ಯಾನಿಲಯವು ಸುಮಾರು 360 ಎಕರೆ ಜಮೀನನ್ನು ಹೊಂದಿದೆ. ಸುಮಾರು 40-50 ಎಕರೆ ಜಮೀನು ಮೂಲಸೌಕರ್ಯದ ಸಲುವಾಗಿ ಹೋಗಿದೆ. 300 ಎಕರೆಯಷ್ಟು ಜಮೀನು ಇವತ್ತು ಕೃಷಿ ಚಟುವಟಿಕೆಗಳನ್ನು, ತೋಟಗಾರಿಕೆ ಬೆಳೆಯನ್ನು ಪ್ರಾತ್ಯಕ್ಷಿಕೆ ಮಾಡುವುದಕ್ಕೆ ನೀರಿನ ಕೊರತೆ ಇದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾನಿಲಯದ ಪಕ್ಕದಲ್ಲಿಯೇ 5 ಕಿ.ಮೀ ದೂರದಲ್ಲಿ ಘಟಪ್ರಭಾ ನದಿ ಇದೆ. ಅಲ್ಲಿಂದ ಪೈಪ್ ಲೈನ್ ಮೂಲಕ ತೋಟಗಾರಿಕಾ ವಿಶ್ವವಿದ್ಯಾನಿಲಯಕ್ಕೆ ನೀರನ್ನು ಒದಗಿಸಿದರೆ, ಹೆಚ್ಚಿನ ಪ್ರಮಾಣದಲ್ಲಿಯೂ ಕೂಡ ತೋಟಗಾರಿಕ ಬೆಳೆಗಳನ್ನು ಸಂಶೋಧನೆ ಮಾಡುವುದಕ್ಕೆ ಸಹಾಯವಾಗುತ್ತದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ಘಟಕೋತ್ಸವಕ್ಕೆ ಬಂದಾಗ ಒಂದು ವಿಚಾರವನ್ನು ಏನು ಹೇಳಿದ್ದರೆಂದರೆ, 300 ಎಕರೆ ಜಮೀನಿನ ಜೊತೆಗೆ ಇನ್ನೂ 500 ಎಕರೆ ಜಮೀನನ್ನು ತೋಟಗಾರಿಕಾ ವಿಶ್ವವಿದ್ಯಾನಿಲಯಕ್ಕೆ ಬಾಗಲಕೋಟೆಯ ಭಾಗದಲ್ಲಿ ಭೂಸ್ವಾಧೀನ ಮಾಡಿ, ಸಂಶೋಧನಾ ಕೇಂದ್ರವನ್ನು ಮಾಡುತ್ತೇವೆಂದು, ಆದರೆ ಇವತ್ತಿನವರೆಗೂ ಅದು ಆಗಿಲ್ಲ. ದಯವಿಟ್ಟು ಈ ನಿಟ್ಟಿನ ಕಡೆಯೂ ಸರ್ಕಾರ ಗಮನ ಹರಿಸಬೇಕೆನ್ನುವ ಮಾತನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಜೊತೆಗೆ ನಮ್ಮ ಸಹಕಾರಿ ಸಂಘಗಳ ಮುಖಾಂತರ 3% ಪ್ರೋತ್ಸಾಹಧನವನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕಳೆದ 8-10 ವರ್ಷಗಳಿಂದ ಕೊಡುತ್ತಿದ್ದರು. ಆದರೆ, 3% ಪ್ರೋತ್ಸಾಹಧನ ಕಳೆದ 4 ವರ್ಷಗಳಿಂದ ರೈತರಿಗೆ ತಲುಪುತ್ತಿಲ್ಲ. ಆ 3% ಹಣ ಎಲ್ಲಿ ಹೋಗುತ್ತಿದೆ ಎಂಬುದು ಇವತ್ತಿನವರೆಗೂ ನಮಗೆ ಅರ್ಥವಾಗುತ್ತಿಲ್ಲ. ಏಕೆಂದರೆ ನಾನು ಸಹ ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕನಾಗಿದ್ದೇನೆ. ಬರಬೇಕಾಗಿರತಕ್ಕಂಥ ಹಣ ಬರುತ್ತಿಲ್ಲ. ಒಂದು ಲಕ್ಷ ರೂಪಾಯಿ ಸಾಲವನ್ನು ನಾವು ತೆಗೆದುಕೊಂಡರೆ, ಬಡ್ಡಿ ರಹಿತವಾಗಿ 1,00,000 ರೂಪಾಯಿಗಳನ್ನು ಬ್ಯಾಂಕಿಗೆ ಜಮೆ ಮಾಡಿದ ನಂತರ ಮತ್ತೆ ಒಂದು ವಾರದಲ್ಲಿ 1,00,000 ರೂಪಾಯಿ ಸಾಲವನ್ನು ಕೊಡುತ್ತಿದ್ದರು. ನಾವು 1,00,000 ರೂಪಾಯಿಗಳ ಬದಲಾಗಿ 97,000 ರೂಪಾಯಿಗಳನ್ನು ಬ್ಯಾಂಕಿಗೆ ಜಮೆ ಮಾಡಿದ್ದರೆ ಸಾಕು. 3,000 ರೂಪಾಯಿಗಳನ್ನು ಕೊಡತಕ್ಕಂಥ ಸರ್ಕಾರದ ಪ್ರೋತ್ಸಾಹಧನದಿಂದ ಒಂದು ಲಕ್ಷವಾಗಿ ಪರಿಗಣಿಸುವಂತಹ ವ್ಯವಸ್ಥೆ ಬ್ಯಾಂಕಿನಲ್ಲಿತ್ತು. ದಯವಿಟ್ಟು ಸಹಕಾರ ಇಲಾಖೆಯಿಂದಲೂ 3% ಪ್ರೋತ್ಸಾಹಧನವನ್ನು ರೈತರಿಗೆ ಕೊಡತಕ್ಕಂಥ ಕಡೆ ಸರ್ಕಾರ ಗಮನ ಹರಿಸಬೇಕೆನ್ನುವ ವಿಚಾರವನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಈಗಾಗಲೇ ಸಾಕಷ್ಟು ವಿಷಯಗಳನ್ನು ಹಿರಿಯರು ಮಾತನಾಡಿದ್ದಾರೆ. ಹೆಚ್ಚಿನ ಒಂದು ಸಮಯವನ್ನು ತೆಗೆದುಕೊಳ್ಳದೇ, ರೈತರಿಗೆ ಸಾಕಷ್ಟು ಅನುಕೂಲವಾಗುವ ನಿಟ್ಟಿನಲ್ಲಿ ಬರಗಾಲ ಪರಿಹಾರಕ್ಕೆ ಪ್ರೋತ್ಸಾಹಧನವನ್ನು ಕೊಡುವುದರ ಜೊತೆಗೆ, ಸಾಲ ಮನ್ನಾವನ್ನು ಮಾಡುವುದರ ಕಡೆಗೆ ಸರ್ಕಾರ ಮುಂದಾಗಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ರೈತರ ಕಣ್ಣೋರೆಸುವ ನಿಟ್ಟಿನಲ್ಲಿ ರೈತರನ್ನು ಒಮ್ಮೆ ಸಾಲದಿಂದ ಮುಕ್ತರನ್ನಾಗಿ ಮಾಡಬೇಕು. ಹಾಗೆಯೇ ರೈತರಿಗೆ ಬೇಕಾಗಿರುವ ಸಣ್ಣ ಪುಟ್ಟ ಯೋಜನೆಗಳು ಇವತ್ತಿನ ದಿವಸ ಇಲ್ಲವಾಗಿದೆ. ನಾನು ಒಬ್ಬ ರೈತನಾಗಿ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾತನಾಡುತ್ತಿದ್ದೇನೆ. ಸಂಪೂರ್ಣವಾಗಿರತಕ್ಕಂಥ ನೀರಾವರಿಯನ್ನು ಒದಗಿಸಿ ಕನಿಷ್ಠ three phase ವಿದ್ಯುತ್ತನ್ನು ದಿನದ 12 ಗಂಟೆ ಕಾಲ ಕೊಟ್ಟರೆ, ಅದ್ಯಾವುದು ಇವತ್ತು ರೈತರಿಗೆ ಬೇಕಾಗಿಲ್ಲ. ನಾನು ಯಾವುದೇ ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ. ರೈತರಿಗೆ ಬೇಕಾಗಿರತಕ್ಕಂಥದ್ದು ನೀರಾವರಿ. ರೈತರಿಗೆ ನೀರನ್ನು ಒದಗಿಸಿಕೊಡಬೇಕು. ಕನಿಷ್ಠ ಪಕ್ಷ three phase ವಿದ್ಯುತ್ತನ್ನು ಕನಿಷ್ಠ ಪಕ್ಷ 12 ತಾಸು ಕೊಟ್ಟಿದ್ದಾದರೆ ಯಾವ ಸರ್ಕಾರದ ಸೌಲಭ್ಯಗಳನ್ನು ಇವತ್ತು ರೈತ ಬೇಡುವುದಿಲ್ಲವೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮಾತನಾಡಲು ಅವಕಾಶಕೊಟ್ಟಿರತಕ್ಕಂಥ ತಮಗೆ ಮೊತ್ತೊಮ್ಮೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶನ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನೆನ್ನೆಯ ದಿವಸ ತಾನೇ ಈ ಸದನವನ್ನು ಪ್ರವೇಶ ಮಾಡಿದ ನನಗೆ ಇವತ್ತು ರಾಜ್ಯದ ಎಲ್ಲೆಡೆ ಕೋಟ್ಯಾಂತರ ಜನರು ಕಷ್ಟಕ್ಕೆ ಗುರಿಯಾಗಿರತಕ್ಕಂಥ ಬರಗಾಲದ ಪರಿಸ್ಥಿತಿಗೆ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿರುವುದಕ್ಕಾಗಿ ತಮಗೆ ವಂದನೆಗಳನ್ನು ಹೇಳುತ್ತಾ, ನೆನ್ನೆ ದಿವಸ ಮಾನ್ಯ ಸದಸ್ಯರು ಮಾತನಾಡಿರುವುದನ್ನು ಕೇಳಿದ್ದೇನೆ. **(ಮುಂದು)**

**(729) 14.06.2018 ಬಿಎಸ್‌ಡಿ/ಎಕೆ(ಆರ್‌ಎನ್) 4.50**

ಸಿ.ಎಂ. ಲಿಂಗಪ್ಪ (ಮುಂದು):-

ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದ್ದಾರೆ. ಆದರೆ ಇವತ್ತಿನ ನಮ್ಮ ರಾಜ್ಯ ಸರ್ಕಾರ ರಾಜ್ಯಕ್ಕೆ ಒದಗಿಬಂದ ಬರಗಾಲ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಿದೆ ಎಂದು ಸಮರ್ಥವಾಗಿ ನಾವೆಲ್ಲರೂ ಹೇಳುವುದು ಸಹಜವಾಗಿದೆ. ಆದರೆ ಸರ್ಕಾರವೇ ಅಧಿಕೃತವಾಗಿ ಅಂಕಿ ಅಂಶಗಳನ್ನು ಕೊಟ್ಟು, ಬರ ಪೀಡಿತ ತಾಲ್ಲೂಕುಗಳನ್ನು ಗುರುತಿಸಿ, ಅವುಗಳನ್ನು ಘೋಷಣೆ ಮಾಡುವುದರಿಂದ ಹಿಡಿದು, ಏನೇನು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ತಿಳಿಸುತ್ತದೆ. ಅದರಲ್ಲಿ ಮುಂಗಾರು ಮತ್ತು ಹಿಂಗಾರಿನ ಬೆಳೆ ನಷ್ಟವನ್ನು ಭರಿಸಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯಲ್ಲಿ ಕೇಂದ್ರ ಸರ್ಕಾರ ರೂ.1785 ಕೋಟಿಗಳನ್ನು ಮುಂಗಾರಿಗೆ ಕೊಡಬೇಕಾಗಿದ್ದು, ಇದರಲ್ಲಿ ನಾಲ್ಕನೆಯ ಒಂದು ಭಾಗವೂ ಬಿಡುಗಡೆಯಾಗಿಲ್ಲ. ಆದರೆ ಬಿಡುಗಡೆಯಾಗುತ್ತದೆ ಎಂಬ ನಿರೀಕ್ಷೆ ಇದೆ. ಆದರೂ ರಾಜ್ಯ ಸರ್ಕಾರವು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಕಾರ್ಯಕ್ರಮದಲ್ಲಿ, ಗೋಶಾಲೆಗಳನ್ನು ಪ್ರಾರಂಭಿಸಿ ದನ-ಕರುಗಳ ಮೇವನ್ನು ವ್ಯವಸ್ಥೆ ಮಾಡಿ ಗೋರಕ್ಷಣೆ ಮಾಡುವ ಕಾರ್ಯಕ್ರಮ ಆಗಿರಬಹುದು, ಸುಮಾರು 1067 ಗ್ರಾಮಗಳಿಗೆ ಣಚಿಟಿಞಜಡಿ ಮೂಲಕ ನೀರನ್ನು ಸರಬರಾಜು ಮಾಡುವ ಕಾರ್ಯಕ್ರಮ ಆಗಿರಬಹುದು, ಕೆಲವು ಖಾಸಗಿ ಬೋರ್‌ವೆಲ್‌ಗಳನ್ನು ತೆಗೆದುಕೊಂಡು ಹಣ ಪಾವತಿಸಿ ಕುಡಿಯುವ ನೀರನ್ನು ಸರಬರಾಜು ಮಾಡಿಸುವ ಕಾರ್ಯಕ್ರಮ ಆಗಿರಬಹುದು, ಹೀಗೆ ಹತ್ತು-ಹಲವು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಜೊತೆಗೆ ಮಾನ್ಯ ಯಡಿಯೂರಪ್ಪನವರು ಎಲ್ಲಾ ಕಡೆ ರಾಜ್ಯ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿಕೊಂಡು ಬರುತ್ತಿದ್ದಾರೆ. ರಾಜ್ಯ ಸರ್ಕಾರ ಆಗುವುದಿಲ್ಲ ಎಂದು ಹೇಳಿಲ್ಲ. ಆದರೆ ರಾಜ್ಯದ ರೈತರು ರಾಷ್ಟ್ರೀಕೃತ ಮತ್ತು ಇತರ ಸಹಕಾರ ಸಂಘಗಳಲ್ಲಿ ಮಾಡಿರುವ 52 ಸಾವಿರ ಕೋಟಿ ರೂಪಾಯಿಗಳನ್ನು ಈ ಸರ್ಕಾರವಾಗಲೀ ಅಥವಾ ಇನ್ಯಾವುದೇ ರಾಜ್ಯ ಸರ್ಕಾರವಾಗಲೀ ಮನ್ನಾ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಯಡಿಯೂರಪ್ಪನವರು ಆಲೋಚನೆ ಮಾಡಬೇಕಾಗುತ್ತದೆ. ನಮ್ಮ ಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ದರಾಮಯ್ಯನವರು ಸಹಕಾರ ಸಂಘಗಳಲ್ಲಿ ರೈತರು ಮಾಡಿರುವ ಸುಮಾರು 12 ಸಾವಿರ ಅಥವಾ ರೂ.10,800 ಕೋಟಿಗಳನ್ನು ಮನ್ನಾ ಮಾಡುವುದಕ್ಕೆ ಬದ್ಧವಾಗಿದೆ ಎಂದು ಹೇಳಿದ್ದಾರೆ. ಆದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರು ಮಾಡಿರುವ ಸುಮಾರು ರೂ.40 ಸಾವಿರ ಕೋಟಿಗಳನ್ನು ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರ ನೆರವಿಗೆ ಬರದಿದ್ದರೆ ಬಹುಶಃ ರಾಜ್ಯ ಸರ್ಕಾರ ಇಷ್ಟು ದೊಡ್ಡ ಮೊತ್ತವನ್ನು ಮನ್ನಾ ಮಾಡಲು ಸಾಧ್ಯವಾಗುವುದಿಲ್ಲ. ಹಿಂದೆ ಗಿಔಂ ಸರ್ಕಾರ ಇದ್ದಾಗ ಮಾನ್ಯ ಮನ್‌ಮೋಹನ್ ಸಿಂಗ್‌ರವರು ರೂ.72 ಸಾವಿರ ಕೋಟಿ ರೈತರ ಸಾಲಗಳನ್ನು ಮನ್ನಾ ಮಾಡಿದ್ದಾರೆ. ಆ ಸರ್ಕಾರಕ್ಕೆ ಸಾಧ್ಯವಾಗಿದ್ದು, ಈ ಸರ್ಕಾರಕ್ಕೂ ಸಾಧ್ಯವಾಗುತ್ತದೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇವೆ. ಆದರೆ ಮೊನ್ನೆ ಕೇಂದ್ರ ಹಣಕಾಸು ಸಚಿವರಾದ ಮಾನ್ಯ ಅರುಣ್ ಜೇಟ್ಲಿಯವರು ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಒಂದು ಬಿಡಿಗಾಸನ್ನೂ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಈ ರಾಷ್ಟ್ರದ ಹಿರಿಯಣ್ಣನಾದ ಕೇಂದ್ರ ಸರ್ಕಾರ ಇಂತಹ ಬಿಗಿ ನಿಲುವು ತಳೆದರೆ ಬಹುಶಃ ರಾಷ್ಟ್ರದಲ್ಲಿ ರೈತರ ಆತ್ಮಹತ್ಯೆ ಇನ್ನೂ ಹೆಚ್ಚಾಗುತ್ತದೆಯೇ ಹೊರತು ರೈತರ ಆತ್ಮಹತ್ಯೆ ತಡೆಯುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಭಾಪತಿಯವರೇ, ನಾನು ಇದನ್ನು ಲಂಬಿಸದೇ ಮತ್ತು ರಾಜಕೀಯ ಬೆರಸದೇ ಇರುವ ವಾಸ್ತವ ಸ್ಥಿತಿಯನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ರೈತರ ಸಾಲವನ್ನು ಮನ್ನಾ ಮಾಡಿ ದೊಡ್ಡ ಪರಿಹಾರವನ್ನು ಕೊಡಬೇಕಾಗುತ್ತದೆ. ಇದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದ್ದು, ಕೇಂದ್ರ ಸರ್ಕಾರವು ತನ್ನ ಬದ್ಧತೆಯನ್ನು ಹೇಳಬೇಕಾಗುತ್ತದೆ. ರೈತರು ವ್ಯವಸಾಯದ ಮೇಲೆ ಅವಲಂಬಿಸಿಕೊಂಡು ಕಳೆದ 3 ವರ್ಷಗಳಲ್ಲಿ

ನೀರಿಗಾಗಿ ಪಟ್ಟ ಪಡಿಪಾಟಲು ಭಗವಂತನಿಗೂ ತಲುಪಿ ಇನ್ನೂ ಉಳಿಯುತ್ತದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವ್ಯವಸಾಯಕ್ಕೆ ಲಭ್ಯವಾಗುವ ಅಂತರಜಲ ಮತ್ತು ಕೆರೆಕಟ್ಟೆ ಹಾಗೂ ನದಿ ಮೂಲಗಳಿಂದ ಲಭ್ಯವಾಗುವ ನೀರಿನ ಸೌಕರ್ಯ ಒದಗಿಸದಿದ್ದರೆ ಬಹುಶಃ ನಮ್ಮ ರಾಷ್ಟ್ರ ಮುಂದೊಂದು ದಿನ ಬರಗಾಲಕ್ಕೆ ತುತ್ತಾಗುತ್ತದೆ ಎಂಬ ಭೀತಿ ನಮ್ಮಲ್ಲಿದೆ. ಇದಕ್ಕೆ ಕ್ಷಿಪ್ರ ಕಾರ್ಯಕ್ರಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡು, ರೈತನಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕು, ಅವನು ಸಾಲದ ಭಾದೆಯಿಂದ ಬಳಲಿ ನರಳುತ್ತಿದ್ದಾನೆ, ಕೊನೆಗೆ ಜೀವವನ್ನೇ ಅಂತ್ಯ ಮಾಡಿಕೊಳ್ಳುತ್ತಿದ್ದಾನೆ. ಅದಕ್ಕೆ ಪರಿಹಾರವಾಗಿ ಮೊದಲನೆಯದಾಗಿ ಕೇಂದ್ರ ಸರ್ಕಾರ ಮತ್ತು ಎರಡನೆಯದಾಗಿ ರಾಜ್ಯ ಸರ್ಕಾರಗಳು ಸಹಾಯಕ್ಕೆ ಬರಬೇಕೆಂಬ ಮನವಿ ಮಾಡುತ್ತಾ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ವಂದಿಸುತ್ತಾ, ವಿಪರ್ಯಾಸವೆಂದರೆ ಮಳೆ ಬರುತ್ತಿರುವ ಕಾಲದಲ್ಲಿ ನಾವು ಬರಗಾಲದ ಬಗ್ಗೆ ಮಾತನಾಡುತ್ತಿದ್ದೇವೆ. ಅದು ನಿಜ. ಮಳೆ ಬಂದ ತಕ್ಷಣ ಎಲ್ಲಾ ಕಡೆ ರೈತರ ಸಮಸ್ಯೆ ನೀಗಿದೆ ಅಥವಾ ಎಲ್ಲಾ ಕಡೆ ಕುಡಿಯುವ ನೀರಿನ ಅಭಾವ ತೀರಿಹೋಗಿದೆ ಎಂದಲ್ಲ. ಆದರೂ ರಾಜ್ಯದಲ್ಲಿ ಸಾವಿರಕ್ಕಿಂತ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳ ನಿಜವನ್ನು ಒಪ್ಪಿಕೊಳ್ಳಲೇಬೇಕು. ಈಗಾಗಲೇ ಮಾನ್ಯ ನಿರಾಣಿಯವರು ಕೃಷ್ಣಾ ನದಿಗೆ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ದೇವೇಂದ್ರರವರು ದಿನಾಂಕ11/4/17ರಲ್ಲಿ 2.365 ಟಿಎಂಸಿ ನೀರನ್ನು ಹಾಗೂ ದಿನಾಂಕ 20/5/17ರಲ್ಲಿ 2.5 ಟಿಎಂಸಿ ನೀರನ್ನು ಕೃಷ್ಣೆಗೆ ಹರಿಸಿದರು. ಇದರ ಹಿಂದೆ ಸಂಸದರ ಮತ್ತು ಅಲ್ಲಿನ ಶಾಸಕರ ಒತ್ತಾಯದ ಮೇರೆಗೆ ಹರಿಸಿದ್ದು, ನಮ್ಮದೇ ಕೃಷ್ಣೆಯನ್ನು ನಾವೇ ಮತ್ತೆ ಕೇಳಿಕೊಳ್ಳುವ ಪರಿಸ್ಥಿತಿ ಬಂತು ಎನ್ನುವ ಮಾತನ್ನು ಹೇಳಿದರು. ಆದರೆ ನನಗೆ ಗೊತ್ತಿರುವ ಹಾಗೆ ಒಂದು ಟಿಎಂಸಿ ನೀರನ್ನು ಮಹಾರಾಷ್ಟ್ರದಿಂದ ರೂ.5 ಕೋಟಿಗೂ ಹೆಚ್ಚು ಹಣ ಕೊಟ್ಟು ತರಿಸಿಕೊಳ್ಳುತ್ತಿದ್ದೆವು ಎಂಬ ವಿಷಯ ತಿಳಿದು ಬಂದಿದೆ. ಇದು ತಪ್ಪಿದ್ದರೆ ಮಾನ್ಯ ಸಭಾಪತಿಯವರು ತಿದ್ದಬೇಕು. ಆದರೆ ಈಗ ಉಚಿತವಾಗಿ ಸಂಸದರು ಗಲಾಟೆ ಮಾಡಿದ್ದಕ್ಕಾಗಿ 2.365 ಮತ್ತು 2.5 ಟಿಎಂಸಿ ನೀರನ್ನು ಮಹಾರಾಷ್ಟ್ರದಿಂದ ಕೃಷ್ಣ ನದಿಗೆ ಬಿಟ್ಟಿದ್ದಾರೆ ಎನ್ನುವುದು ಒಳ್ಳೆಯ ಸುದ್ದಿ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸಂಸದರು ಎಲ್ಲಿ ಗಲಾಟೆ ಮಾಡಿದರು ಎಂದು ನನಗೆ ಗೊತ್ತಾಗಲಿಲ್ಲ. ನಮ್ಮ ರಾಜ್ಯ ಸಂಸದರು ಪಾರ್ಲಿಮೆಂಟ್‌ನಲ್ಲಿ ಬರದ ಬಗ್ಗೆ ಒಂದು ದಿವಸವೂ ಚರ್ಚೆಗೆ ಆಹ್ವಾನ ಮಾಡಿದ್ದಾಗಲೀ ಅಥವಾ ಚರ್ಚೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾಗಲೀ, ನನ್ನ ಗಮನದಲ್ಲಿ ಇಲ್ಲ. ನಾಲ್ಕು ಜನ ಮಂತ್ರಿಗಳು ಹಾಗೂ 17 ಬಿಜೆಪಿ ಸಂಸದರಿದ್ದು ಒಂದು ದಿವಸ ಮಾತನಾಡಿದ್ದು ಇಲ್ಲ. ಎಲ್ಲಿ ಗಲಾಟೆ ಮಾಡಿದರು?

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ರೆಕಾರ್ಡ್‌ನಲ್ಲಿಯೇ ಇಲ್ಲ.

**ಶ್ರೀ ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಕಾಮಾಲೆ ಕಾಯಿಲೆ ಇದ್ದವರಿಗೆ ಪ್ರಪಂಚವೆಲ್ಲವೂ ಅರಿಶಿನವಾಗಿ ಕಾಣುತ್ತದೆ. ಹಾಗಾಗಿ ಅವರಿಗೆ ಗೊತ್ತಾಗುವುದಿಲ್ಲ. ಮಾತನಾಡಿದ್ದು ಗೊತ್ತಿಲ್ಲ, ಏನೂ ಗೊತ್ತಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದರೆ ಖಂಡಿತವಾಗಿ ಸಮಸ್ಯೆ ಪರಿಹಾರವಾಗುತ್ತಿತ್ತು.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಹಿಂದೆ ಮಾತನಾಡಿರುವುದು ರೆಕಾರ್ಡ್‌ನಲ್ಲಿ ಇರುವುದಿಲ್ಲವೇ?

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಹಿಂದೆ ಒಂದು ಟಿಎಂಸಿ ನೀರಿಗೆ ರೂ.5 ಕೋಟಿಗೂ ಹೆಚ್ಚು ಹಣ ಕೊಟ್ಟು ಖರೀದಿ ಮಾಡಿದ್ದು, ಈಗ ಉಚಿತವಾಗಿ ಇಷ್ಟು ಟಿಎಂಸಿ ನೀರು ಅದಾಗಿಯೇ ಹರಿದು ಬಂದಿತೇ?

(ಮುಂದು)

**(730) 14-06-2017 SK-RN (AK) 5.00**

ಸಂಸದರು ಮತ್ತು ಶಾಸಕರು ನೀರು ಕೇಳದೆ ಇದ್ದರೆ, ಅದು ನೀರು ಹರಿದು ಬರುತ್ತಿತ್ತಾ? ಅದು ಖಂಡಿತವಾಗಿ ಇಲ್ಲ.

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ  ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧರವರು ಭೀಮಾ ನದಿಗೆ ಮಹಾರಾಷ್ಟ್ರದಿಂದ ನೀರಿನ್ನು ಹರಿಸಿದ ಬಗ್ಗೆ ಮತ್ತು ಸಂಸದರು ಪ್ರಯತ್ನ ಮಾಡಿದರು ಎಂದು ಇಲ್ಲಿ

ಹೇಳಿದ್ದಾರೆ. ರಾಜ್ಯ ಸರ್ಕಾರ ಭೀಮಾ ನದಿಗೆ ನೀರನ್ನು ಹರಿಸಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಹಾಗೂ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, ನಾವುಗಳು ಸಹಾ ಅದನ್ನು follow-up ಮಾಡಿಕೊಂಡು ಮೊದಲನೇ ಸಲ 2.365 ಟಿಎಂಸಿ ನೀರನ್ನು ಬಿಡಿಸಿದ್ದು, ಅಮೇಲೆ ಮತ್ತೊಂದು ಸಲ 2.50 ಟಿಎಂಸಿ ನೀರನ್ನು ಪಡೆದುಕೊಂಡಿದ್ದು ಇದೆ. ಅದರ ಜೊತೆಯಲ್ಲಿ ನಾನು ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ಹೇಳಿರುವ ಮಾತನ್ನು ಒಪ್ಪುತ್ತೇನೆ. ಬಿಜೆಪಿ ಸಂಸದರಾದ ಮಾನ್ಯ ಅನಂತ್‌ಕುಮಾರ್‌ರವರ ವಿಶೇಷವಾಗಿ ಒಂದು ಸಲ ಅಂತಿಮವಾಗಿ ದೂರವಾಣಿ ಮೂಲಕ ಮಾತನಾಡಿದ್ದಾರೆ ಎನ್ನುವುದು ಹೌದು. ಇದು ಪಕ್ಷಾತೀತವಾಗಿ ಜನ ಪರವಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಮಾಡಿದ್ದಾರೆ. ಇಲ್ಲಿ credit ಎನ್ನವುದರ ಬಗ್ಗೆ ಮಾತಿಲ್ಲ. ಆದರೆ ಕರ್ನಾಟಕ ರಾಜ್ಯ ಸರ್ಕಾರ ಪ್ರತಿಯೊಂದು ಹಂತದಲ್ಲೂ ಕೂಡ ಮಹಾರಾಷ್ಟ್ರ ರಾಜ್ಯ ಸರ್ಕಾರದ ಜೊತೆಗೆ ಸಂಪರ್ಕವನ್ನಿಟ್ಟುಕೊಂಡು ನಿರಂತರವಾಗಿ ಪ್ರಯತ್ನ ಮಾಡಿ ನೀರನ್ನು ಬಿಡಿಸಿಕೊಂಡು ಬಂದಿರುವುದು ಇದೆ.

**ಶ್ರೀ ನಿರಾಣಿ ಹನಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ತಾವು ಯಾರೂ ಕೂಡ ಹೋಗಿ ಮಹಾರಾಷ್ಟ್ರ ರಾಜ್ಯ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳಲಿಲ್ಲ.

**ಸಭಾಪತಿಯವರು:-** ಶ್ರೀಮತಿ ತಾರಾಅನೂರಾಧರವರೇ, ಮುಂದುವರೆಸಿ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ಮುಖ್ಯಮಂತ್ರಿಗಳಿಗೂ ಅಭಿನಂದಿಸುತ್ತೇನೆ.

**ಸಭಾಪತಿಯವರು:-** ನಿಮ್ಮ ಸಮಯ ಮುಗಿಯಿತು.

**ಶ್ರೀಮತಿ ತಾರಾ ಅನುರಾಧ:-** ಮಾನ್ಯ ಸಭಾಪತಿಯವರೇ, ಇಲ್ಲ ಸಚಿವರೆ ನಾವು ಸ್ವಲ್ಪ ಜನ ಹೆಣ್ಣು ಮಕ್ಕಳಿದ್ದೇವೆ. ಕುಳಿತುಕೊಳ್ಳಿ ಕುಳಿತುಕೊಳ್ಳಿ ಎಂದರೆ ಹೇಗೆ? ಅದು ಸಾಧ್ಯವಿಲ್ಲ.

**ಸಭಾಪತಿಯವರು:-** ನಿಮ್ಮ ಸಮಯ ಮುಗಿಯಿತು.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಆಯಿತು ಮುಗಿಸೋಣ.

**ಸಭಾಪತಿಯವರು:-** ಕುಳಿತುಕೊಳ್ಳಿ ಎಂದಲ್ಲ ಅಮ್ಮ. ನೀವು ಹೆಚ್ಚು ಸಮಯವನ್ನು ತೆಗೆದುಕೊಳ್ಳಬೇಡಿ.

ತಿದ್ದುಪಡಿಯಾಗದ ಪ್ರತಿ / ಉಪಯೋಗಿಸಕೂಡದು

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ನನ್ನ ಸಮಯವನ್ನು ಬೇರೆಯವರು ಹೆಚ್ಚು ತೆಗೆದುಕೊಂಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಿಮ್ಮ ಮನೆಯಲ್ಲಿರಬಹುದು ಮತ್ತು ನಮ್ಮ ಮನೆಯಲ್ಲಿರಬಹುದು. ಹೆಣ್ಣುಮಕ್ಕಳದೇ ನಡೆಯುವುದು. ಹಾಗಾಗಿ ಒಪ್ಪಿಕೊಂಡು ಬಿಡಿ. ನಮ್ಮ ಹೆಂಡತಿ ಮಾತು ನಮ್ಮ ಮನೆಯಲ್ಲಿ ನಡೆಯುತ್ತದೆ ಮತ್ತು ನಿಮ್ಮ ಹೆಂಡತಿ ಮಾತು ನಿಮ್ಮ ಮನೆಯಲ್ಲಿ ನಡೆಯುತ್ತದೆ. ಇಲ್ಲಿ ಕೂಡ ಶ್ರೀಮತಿ ಉಮಾಶ್ರೀ, ಶ್ರೀಮತಿ ಮೋಟಮ್ಮ ಮತ್ತು ಶ್ರೀಮತಿ ತಾರಾಅನೂರಾಧರವರದೇ ನಡೆಯುವುದು. ಬೇರೆ ಯಾರದು ನಡೆಯುವುದಿಲ್ಲ. ನಮ್ಮ ಮರ್ಯಾದೆ ನಾವು ಉಳಿಸಿಕೊಳ್ಳೋಣ. ಸ್ವಲ್ಪ ಕಾಲಾವಕಾಶ ಕೊಟ್ಟಿಬಿಡಿ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ,..

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀಮತಿ ಜಯಮ್ಮ ಮತ್ತು ಜಯಮಾಲಾರವರ ಹೆಸರು ಹೇಳುವುದನ್ನು ಬಿಟ್ಟು ಬಿಟ್ಟಿದ್ದಾರೆ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಅವರು ಇದ್ದಾರೆ. ಎಲ್ಲಾ ಮಹಿಳೆ ಮಹಿಳೆಯರು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮ ಮತ್ತು ಜಯಮಾಲಾರವರದು ಇಬ್ಬರದು ಜಯನೇ. ಅವರ ಗಂಡಂದಿರನ್ನು ದೇವರೇ ಕಾಪಾಡಬೇಕು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಅವರನ್ನು ಅಭಿನಂದಿಸುತ್ತಾ, ನಾನು ಹೇಳಿದ್ದು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಇಲ್ಲಿ ಗಂಡನ ಪ್ರಶ್ನೆ ಏಕೆ ಬಂತು?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಪತಿಯವರೇ, ಶ್ರೀಮತಿ ಜಯಮಾಲ ಚಂದ್ರರವರ ಗಂಡ ಅವರ ಪರಿಸ್ಥಿತಿಯನ್ನು ನನ್ನ ಹತ್ತಿರ ಹೇಳಿಕೊಂಡಿದ್ದರು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೆ ನೀವು ನನ್ನ ಗಂಡನನ್ನು ಯಾವತ್ತು ನೋಡಿದ್ದೀರಿ?

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೇ, ಈ ಸಮಯ ನನ್ನದಲ್ಲ. ಅದನ್ನು ಮೈನಸ್ ಮಾಡಿಕೊಡಬೇಕು.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಜಯಮಾಲರವರನ್ನು ಮದುವೆ ಮಾಡಿಕೊಂಡ ಮೇಲೆ ಅವರ ಗಂಡನಿಗೂ ಜಯವಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇವರಿಬ್ಬರ ಹೆಸರಿನಲ್ಲಿಯೇ ಜಯ ಇದೆ, ಹಾಗಾಗಿ ಅವರ ಗಂಡಂದಿರ ಪಾಡು ಹೇಳತೀರದು ಎಂದು ನಾನು ಹೇಳಿದ್ದು. ಅದನ್ನು ತಪ್ಪು ತಿಳಿದುಕೊಳ್ಳಬೇಡಿ. ಅವರು ಹೇಳಿದ್ದನ್ನು ಒಪ್ಪಿಕೊಂಡು ದಯಮಾಡಿ ಸಮಯವನ್ನು ಕೊಡಿ. ನಮ್ಮ ಮರ್ಯಾದೆಯನ್ನು ನಾವು ಉಳಿಸಿಕೊಳ್ಳೋಣ.

**(ಗೊಂದಲ)**

ಮಾನ್ಯ ಸಭಾಪತಿಯವರೇ, ನಿಮ್ಮ ಮನೆಯಲ್ಲಿಯೂ ನಿಮ್ಮ ಮಾತು ನಡೆಯಲ್ಲ, ನಿಮ್ಮ ಹೆಂಡತಿಯದೇ ನಡೆಯೋದು. ಅದಕ್ಕೋಸ್ಕರ ಅವರೆಲ್ಲಾ ಜಯ. ಅವರು ಹೇಳಿದ್ದನ್ನು ಒಪ್ಪಿಕೊಂಡು ಬಿಟ್ಟು, ದಯವಿಟ್ಟು, ಸಮಯ ಕೊಡಿ. ನಮ್ಮ ಮರ್ಯಾದೆಯನ್ನು ನಾವು ಉಳಿಸಿಕೊಳ್ಳೋಣ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸದನಕ್ಕೆ ಒಂದೇ ಒಂದು ಮಾತನ್ನು ಹೇಳುತ್ತೇನೆ.

**(ಗೊಂದಲ)**

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಗಂಡ–ಹೆಂಡತಿ ಎಂದರೆ ಎತ್ತಿನ ಬಂಡಿಯ ಜೋಡಿ ಎತ್ತುಗಳಿದ್ದ ಹಾಗೆ. ಗಂಡನಿಗೆ ಎಲ್ಲಾ ರೀತಿಯಲ್ಲಿ ಸಮಾನತೆ ಇರುವಂತೆ ಹೆಂಡತಿಗೂ ಕೂಡ ಸಮಾನತೆ ಕೊಡಬೇಕೆಂಬ ಉದ್ದೇಶದಿಂದ ಇವತ್ತಿನ ದಿವಸ ಮಹಿಳೆಯರಿಗೆ ಸಮಾನತೆ ಸಿಕ್ಕಿದೆ. ಆದರೆ ಅರ್ಧಾಂಗಿ ಎಂದು ಶಿವನು ಕೂಡ ಪಾರ್ವತಿಗೆ ಸಮಾನತೆಯನ್ನು ಕೊಟ್ಟಿದ್ದಾನೆ. ಆದರೆ ಗಂಡ ನೆಗೆದು ಬಿದ್ದು ಹೋದ ಎಂದರೆ ಮಹಿಳೆಯರ . . . .

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರ ಮನೆಯಲ್ಲಿ ನಡೆಯುವುದಿಲ್ಲ ಎಂದು ಹೇಳಿದೆ. **(ಗೊಂದಲ)** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮಾಲರವರು ಪ್ರಾಮಾಣಿಕವಾಗಿ ಹೇಳಲಿ. ಅವರು ನಮ್ಮ

ದುರ್ಬಳಕೆ ಮಾಡಿಕೊಳ್ಳಲು ಪ್ರಕಟಿಸುವುದಿಲ್ಲ

ಅಕ್ಕ–ತಂಗಿ ಇದ್ದಹಾಗೆ. ಅವರ ಮನೆಯಲ್ಲಿ ಅವರ ಮಾತು ನಡೆಯುತ್ತದೆಯೋ ಅಥವಾ ಅವರ ಗಂಡನ ಮಾತು ನಡೆಯುತ್ತದೆಯೋ? ಇವರ ಮಾತೇ ನಡೆಯುವುದು.

**(ಗೊಂದಲ)**

**ಸಭಾಪತಿಯವರು:–** ಶ್ರೀಮತಿ ಜಯಮ್ಮನವರೆ ಕುಳಿತುಕೊಳ್ಳಿ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಚರ್ಚೆಗಳು ಎಲ್ಲಿಯೋ ಹೋಗುತ್ತಿದೆ.

**ಶ್ರೀ ಜಿ. ರಘು ಆಚಾರ್:–** ಮಾನ್ಯ ವಿರೋಧಪಕ್ಷದ ನಾಯಕರೆ ನಮ್ಮ ಮನೆಯಲ್ಲಿ ನಮ್ಮ ಹೆಂಡತಿಯದೇ ನಡೆಯುತ್ತದೆ ಏನು ಮಾಡುವುದು?

**ಸಭಾಪತಿಯವರು:–** ಹೇಳಿ ಹೇಳಿ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲಾರಿಗೂ ಒಂದೇ ಒಂದು ಮನವಿಯನ್ನು ಮಾಡುತ್ತೇನೆ. ರೈತರ ಬಗ್ಗೆ ಚರ್ಚೆಯಾಗುವಾಗ, ಮಹಿಳೆಯರು ಮತ್ತು ಮಕ್ಕಳು ಕುರಿತು ಚರ್ಚೆಯಾಗುವಾಗ ಗಂಭೀರವಾಗಿ, ಘನತೆಯಿಂದ ಮಾತನಾಡಬೇಕು. ಆ ಘನತೆ ಮಹಿಳೆ ಎಂದು ಹೇಳಿದರೆ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟಂತಹ, ಅತ್ಯಂತ ಶೋಷಿತ ವರ್ಗ ಅದು. ಅವರ ಸಮಸ್ಯೆಗಳು ಅಧಿಕ ಇದೆ. ಅದರ ಬಗ್ಗೆ ನಾವು ಮಾತನಾಡಬೇಕಾದರೆ ನಾವು ಬಹಳ ಅಲೋಚನೆಯಿಂದ ಮಾತನಾಡಬೇಕಾಗುತ್ತದೆ. ವ್ಯಕ್ತಿಗತವಾಗಿ ಮತ್ತು ವೈಯಕ್ತಿಕವಾಗಿ ಮಾತನಾಡಬಾರದು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ವಿರೋಧಪಕ್ಷದ ನಾಯಕರು ಮಹಿಳೆಯರಿಗೆ ಪ್ರಧಾನವಾದ ಸ್ಥಾನ ಕೊಡಬೇಕೆಂದು ಹೇಳಿದರು. ತಪ್ಪು ಏನು ಹೇಳಿಲ್ಲ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, . .

**ಸಭಾಪತಿಯವರು:–** ಶ್ರೀ ಪ್ರಾಣೇಶ್‌ರವರೆ. ಬೇಡ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಒಂದು ಕಾರ್ಯಕ್ರಮ ನಡೆಯುತ್ತಿರುತ್ತದೆ. ಆ ಕಾರ್ಯಕ್ರಮದೊಳಗಡೆ ಮಹಿಳೆಯರು ಹೆಚ್ಚೋ ಅಥವಾ ಪುರುಷರು ಹೆಚ್ಚೋ. ಪುರುಷರ ಮಾತನ್ನು ಮಹಿಳೆಯರು ಎಷ್ಟು ಕೇಳುತ್ತಾರೆ ಮತ್ತು ಮಹಿಳೆಯರ ಮಾತನ್ನು ಪುರುಷರು ಎಷ್ಟು ಕೇಳುತ್ತಾರೆ ಎನ್ನುವುದರ ಬಗ್ಗೆ ಒಂದು ಚರ್ಚೆಯಾಗುತ್ತದೆ. ಆ ಕಾರ್ಯಕ್ರಮದ ಸ್ಟೇಜಿನ ಮೇಲೆ ನಿಂತುಕೊಂಡು ಮಾತನಾಡುವಂತಹ ಸಂದರ್ಭದಲ್ಲಿ ಅವರು ಒಂದು ಪ್ರಶ್ನೆಯನ್ನು ಹಾಕುತ್ತಾರೆ. ಪುರುಷರು ತಮ್ಮ ಹೆಂಡತಿಯ ಮಾತನ್ನು ಕೇಳುತ್ತೀರಿ ಎನ್ನುವವರು ಕೈಯನ್ನು ಮೇಲಕ್ಕೆ ಎತ್ತಿ ಎಂದು ಹೇಳುತ್ತಾರೆ. ಆಗ ಸಭೆಯೊಳಗಡೆ ಇದ್ದ ಇಬ್ಬರು ಪುರುಷರು ಬಿಟ್ಟು ಉಳಿದವರೆಲ್ಲರೂ ಕೈಯನ್ನು ಮೇಲಕ್ಕೆ ಎತ್ತುತ್ತಾರೆ. ಕೊನೆಗೆ ಖುಷಿಯಾಗಿ ಬಿಟ್ಟು ಅವರಿಬ್ಬರನ್ನು ನೀವು ಏಕೆ ಕೈಯನ್ನು ಮೇಲಕ್ಕೆ ಎತ್ತಲಿಲ್ಲವೆಂದು ಕೇಳುತ್ತಾರೆ. ಅದಕ್ಕೆ ಅವರು ಏನು ಹೇಳುತ್ತಾರೆಂದರೆ ನಮ್ಮ ಮನೆಯವರನ್ನು ಕೈಯನ್ನು ಮೇಲಕ್ಕೆ ಎತ್ತಬೇಕೋ ಬೇಡವೋ ಒಂದು ಸಲ ಕೇಳಿಕೊಂಡು ಬರುತ್ತೇವೆಂದು ಹೇಳುತ್ತಾರೆ. ಹಾಗ್ಗೇ ಪೂರ್ತಿ ಇವತ್ತು ನಿಮ್ಮದೇ ಸಾಮ್ರಾಜ್ಯ. ನಮ್ಮಲ್ಲಿ ಮಹಿಳೆಯರಿಗೆ ಆದ್ಯತೆ ಜಾಸ್ತಿ ಎನ್ನುವುದನ್ನು ಮಾನ್ಯ ಈಶ್ವರಪ್ಪನವರು ಹೇಳಿರುವಂತಹದ್ದು. ಮಾನ್ಯ ಸದಸ್ಯರು ಏಕೆ ತಪ್ಪಾಗಿ ಅರ್ಥೈಸಿಕೊಂಡಿರಿ ಎಂಬುದು ಅರ್ಥವಾಗಲಿಲ್ಲ.

**ಸಭಾಪತಿಯವರು:-** ಬಿಡಿ. ಶ್ರೀಮತಿ ತಾರಾಅನೂರಾಧರವರೆ ನಿಮ್ಮ ಚರ್ಚೆಯನ್ನು ಮುಂದುವರೆಸಿ.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಇದಕ್ಕೆ ರಾಜ್ಯ ಸರ್ಕಾರವು ಪ್ರಯತ್ನ ಪಟ್ಟಿದೆ ಎಂದು ಮಾನ್ಯ ಸಚಿವರು ಹೇಳಿದಾಗ, ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತಾ, ಮುಂದಕ್ಕೆ ಹೇಳುತ್ತೇನೆ. ಸರ್ಕಾರ ಗ್ರಾಮೀಣ ಭಾಗದ ಕೃಷಿ ಚಟುವಟಿಕೆಗಳಿಗೆ ಸಮರ್ಪಕವಾಗಿ ವಿದ್ಯುತ್‌ನ್ನು ಪೂರೈಸಲಾಗುತ್ತಿದೆ ಎಂದು ಹೇಳುತ್ತಿದೆ. ಆದರೆ ಹಳ್ಳಿಗಳಲ್ಲಿ ವಿದ್ಯುತ್ ಹೆಚ್ಚು ಸಮಯ ಇರುವುದೇ ಇಲ್ಲ. ಇಷ್ಟು ಟಿಎಂಸಿ ನೀರು ಬಂದಾಗಲೂ ಕೂಡ ರೈತನಿಗೆ ಪಂಪ್‌ಸೆಟ್‌ನಿಂದ ನೀರನ್ನು ತೆಗೆದುಕೊಂಡು ಕೃಷಿಗಾಗಲಿ, ದನಕರುಗಳಿಗಾಗಲಿ, ನೀರನ್ನು ಉಪಯೋಗಿಸಬೇಕೆಂದರೆ ವಿದ್ಯುತ್ ಇರುವುದೇ ಇಲ್ಲ. ವಿದ್ಯುತ್ ಇಲ್ಲದೇ ಇರುವಾಗ, ಇಷ್ಟು ನೀರು ತೆಗೆದುಕೊಂಡು ಬಂದು ಏನು ಮಾಡುತ್ತಾರೆ. ಮಾನ್ಯ ನಿರಾಣಿ ಹನಮಂತ ರುದ್ರಪ್ಪನವರೆ ನಿಮ್ಮಲ್ಲಿ ಸರಿಯಾಗಿ ವಿದ್ಯುಚ್ಛಕ್ತಿ ಇರುತ್ತದೆಯೋ ಇಲ್ಲವೋ ಹೇಳಿ. ರೈತರು ಉಪಯೋಗಿಸುವುದಕ್ಕೆ ಆಗುತ್ತದೆಯೇ? ವಿದ್ಯುತ್ ಕೊಡುತ್ತೇವೆಂದು ರಾಜ್ಯ ಸರ್ಕಾರ ಹೇಳುತ್ತಿದ್ದಾರೆ ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸಲಿಚ್ಛಿಸುತ್ತೇನೆ. ಆದರೆ ಸರ್ಕಾರ ವಿದ್ಯುತ್ ಕೊಡದೆ ವಿದ್ಯುತ್ ಶಾಕ್ ಕೊಡುತ್ತಿದೆ. ಹಾಗಾದರೆ ಸರ್ಕಾರ ವಿದ್ಯುತ್ ಪೂರೈಕೆಯನ್ನು ಹೇಗೆ ಮಾಡುತ್ತಿದೆ? ಮುಂದುವರೆದು ಮಾನ್ಯ ಸಚಿವರೊಬ್ಬರು 'ಬರ ನಿವಾರಣೆಗೆ ಪಾತಾಳ ಗಂಗೆಯೇ ಪರಿಹಾರ' ಎಂದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಳಿರುತ್ತಾರೆ. Krishnaraja Wodeyar Centre of Legal Research and Studies ಅಧ್ಯಕ್ಷರಾದ ಶ್ರೀ ಭಾಸ್ಕರ್‌ರವರು ಇದನ್ನು ಸಮರ್ಥಿಸಿಕೊಳ್ಳದೆ ಈ ರೀತಿ ಹೇಳಿರುತ್ತಾರೆ. "ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನೀರನ್ನು ಇಂಗಿಸುವ ಇಂಗು ಗುಂಡಿ ಮಳೆ ನೀರಿನ ಸಂಗ್ರಹ, ನೀರಿನ ಮಿತವ್ಯಯದ ಬಗ್ಗೆ ಆಲೋಚಿಸಬೇಕೇ ಹೊರತು, ಆಳದ ನೀರನ್ನು ತೆಗೆಯುವ ಕಡೆ ಅಲ್ಲ. ಈ ಯೋಜನೆ ದುಂದುವೆಚ್ಚವೇ ಹೊರತು, ಬೇರೇನೂ ಅಲ್ಲ ಹಾಗೂ ಇದು ಅವೈಜ್ಞಾನಿಕವಾಗಿದೆ." ಈ ವರದಿಯು ಸರ್ಕಾರದ ಗಮನಕ್ಕೆ ಬಂದಿದ್ದು, ಪತ್ರಿಕೆಗಳಲ್ಲಿಯೂ ಕೂಡ ವರದಿಯಾಗಿದೆ. ಇನ್ನು ಹಿರಿಯ ಸದಸ್ಯರಾದ ಸಿ.ಎಂ. ಲಿಂಗಪ್ಪನವರು ಸಾಲ ಮನ್ನಾದ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದರು. ಅದರಲ್ಲಿ ನನಗೆ ಗೊತ್ತಿರುವ ಇತಿಹಾಸದ ಪ್ರಕಾರ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಬಗ್ಗೆ ಮಾನ್ಯ ಲಿಂಗಪ್ಪನವರು ಮಾತನಾಡಿದರು. ಶ್ರೀ ಬಿ.ಎಸ್. ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದಾಗ ಮತ್ತು ಶ್ರೀ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ 6.7 ಲಕ್ಷ ರೈತರ ತಲಾ 25,000 ರಂತೆ ಕೃಷಿ ಸಾಲ ಮನ್ನಾ ಮಾಡಿದರು. 2012 ಮತ್ತು 2013 ರಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಅವಧಿಯಲ್ಲಿ 2,878 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದೆ ಎಂಬುದು ಇತಿಹಾಸದಲ್ಲಿದೆ.

**ಶ್ರೀ ಕೆ.ವಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರ ಮಾಹಿತಿ ತಪ್ಪು ಇದೆ. ಶ್ರೀ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದು, ಶ್ರೀ ಬಿ.ಎಸ್.ಯಡಿಯೂರಪ್ಪನವರು ಆರ್ಥಿಕ ಸಚಿವರಾಗಿದ್ದಾಗ ಈ proposal ಬಂದಾಗ ಶ್ರೀ ಯಡಿಯೂರಪ್ಪನವರೆ ನಮ್ಮಲ್ಲಿ ಹಣವಿಲ್ಲದ ಕಾರಣ ಮಾಡಲಾಗುವುದಿಲ್ಲ ಎಂದು ಹೇಳಿದ್ದಾರೆ. ಅವರು 25,000 ರೂಪಾಯಿಗಳನ್ನು ಕೊಟ್ಟಿಲ್ಲ.

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೇ, ನಂತರ ರೈತರ ಸಾಲ ಮನ್ನಾ ಆಯಿತೆ ಅಥವಾ ಇಲ್ಲವೇ?

**ಶ್ರೀ ಎಂ.ಕೆ.ಪ್ರಾಣೇಶ್:–** ಆದಾದ ಮೇಲೆ ಶ್ರೀ ಯಡಿಯೂರಪ್ಪನವರೆ ಸಾಲ ಮನ್ನಾ ಮಾಡಿದ್ದು.

**ಆರ್. ಧರ್ಮಸೇನ:–** ಶ್ರೀ ಯಡಿಯೂರಪ್ಪನವರು ಮುಂದೆ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿರಬೇಕು ನೋಡಿ. ಎಲ್ಲಾ confuse ಆಗಿ ಹೇಳುತ್ತಿದ್ದೀರಿ.

**(ಗೊಂದಲ)**

"ದುಪ್ಪಟಿ ಬಳಕೆಗಾಗಿ ಅಲ್ಲ – ಶಾಸಕಾಂಗ ಸಚಿವಾಲಯ"

**ಶ್ರೀ. ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಹಣ ಕೊಡದೇ ಇದ್ದರೆ, ನನ್ನ ಹತ್ತಿರ ಪ್ರಿಂಟಿಂಗ್ ಮೆಷಿನ್ ಇದೆಯಾ ಎಂದು ಶ್ರೀ ಯಡಿಯೂರಪ್ಪನವರು ಹೇಳಿರುವುದು. ಅದು ದಾಖಲೆಗಳಲ್ಲಿದೆ. ಶ್ರೀ ಉಗ್ರಪ್ಪನವರು ಕೇಳಿದಂತಹ ಸಂದರ್ಭದಲ್ಲಿ ಶ್ರೀ ಯಡಿಯೂರಪ್ಪನವರು ನಮ್ಮ ಹತ್ತಿರ ಪ್ರಿಂಟಿಂಗ್ ಮೆಷಿನ್ ಇಲ್ಲ ಎಂದು ಹೇಳಿದರು. ಈಗ ಶ್ರೀ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿದ್ದಾರೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇ ಗೌಡ:-** ಅವರು ಮುಖ್ಯಮಂತ್ರಿಗಳಾಗಿದ್ದಾಗ ಹೇಳಿದ್ದು ಅದು.

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸಾಮಾನ್ಯ ದಿನಗಳಲ್ಲಿಯೇ ಟ್ಯಾಂಕರ್‌ಗಳ ಮೂಲಕ ನೀರು ತರಿಸಿಕೊಳ್ಳುತ್ತೇವೆ. ಇನ್ನು ಬರದ ಸಮಯದಲ್ಲಿಯಂತೂ, ಕುಡಿಯುವ ನೀರಿನ ಸಮಸ್ಯೆ ಎಷ್ಟಿದೆ ಎಂದು ಕಲ್ಪಿಸಿಕೊಳ್ಳಬಹುದು. ಇದು ನಮಗೆಲ್ಲರಿಗೂ ಗೊತ್ತಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಯಾವುದಾದರೂ ದೊಡ್ಡ ಉದ್ಯಮಯಿದ್ದರೆ, ಅದು ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಉದ್ಯಮವಾಗಿದೆ. ಈ ಬಾರಿಯ ಕಾವೇರಿ ಕೊಳ್ಳದ ನೀರಿನ ಸಮಸ್ಯೆ ಎಂದರೆ, ಬೆಂಗಳೂರು ಕುಡಿಯುವ ನೀರಿಗಾಗಿ ಪರಿತಪಿಸ್ಬೇಕಾಗಿ ಬಂತು ಮತ್ತು ಇದು ಒಂದು ನಮಗೆ ಎಚ್ಚರಿಕೆ ಘಂಟೆಯಾಗಿದೆ. (ಮುಂದು..)

731/14.06.2017/5.10/hv.ak

**ಶ್ರೀಮತಿ ತಾರಾಅನೂರಾಧ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರ್ರೇ, ಮಾನವ ನಿರಂತರವಾಗಿ ಪ್ರಕೃತಿಯ ಮೇಲೆ ಮಾಡುತ್ತಿರುವ ದೌರ್ಜನ್ಯದಿಂದಾಗಿ ಇವತ್ತು ನೀರಿನ ಸಮಸ್ಯೆಯುಂಟಾಗಿದೆ ಎನ್ನುವ ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ. ಈಗ ಮಳೆಗಾಲ ಪ್ರಾರಂಭವಾಗಿದೆ. ನಾವು ಸ್ವಲ್ಪ ಮಟ್ಟಿಗೆ ನಿಟ್ಟುಸಿರು ಬಿಡುತ್ತಿದ್ದೇವೆ. ನೀರಿನ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಗಂಭೀರ ಚಿಂತನೆಗಳು ನಡೆಯಬೇಕಾಗಿದೆ. ನಮ್ಮ ರಾಜ್ಯ ಟ್ಯಾಂಕರ್ ಮುಕ್ತ ರಾಜ್ಯವಾಗಬೇಕು. ಈ ಅಭಿಯಾನ ಬೆಂಗಳೂರು ನಗರದಿಂದ ಪ್ರಾರಂಭವಾಗಬೇಕಾಗಿದೆ. ಇತ್ತೀಚೆಗೆ ನಾವು ಪರಿಸರ ದಿನಾಚರಣೆಯನ್ನು ಆಚರಣೆ ಮಾಡಿದ್ದೇವೆ. ಆಗ ಕೆಲವರು 'ಕಳೆದ ವರ್ಷ ನಾವು ನೆಟ್ಟ ಸಸಿಗಳು ಏನಾದವು? ಅವು ಬೆಳೆಯಲೇ ಇಲ್ವಲ್ಲ?" ಎಂದು ಪ್ರಶ್ನೆ ಮಾಡುತ್ತಿದ್ದರು. ನಾವು ಪ್ರತಿವರ್ಷ ಪರಿಸರ ದಿನಾಚರಣೆಯಂದು ಶಾಸಕರು, ಸ್ವಯಂ ಸೇವಾ ಸಂಸ್ಥೆಗಳು, ಮಹಾನಗರ ಪಾಲಿಕೆಯವರು ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಸಿಗಳನ್ನು ನೆಡುತ್ತಿರುತ್ತೇವೆ. ಆದರೂ ಸಸಿಗಳು ಕಾಣುತ್ತಿಲ್ಲ ಅವುಗಳು ಏನಾಗುತ್ತಿವೆ ಎನ್ನುವ ನಿಟ್ಟಿನಲ್ಲಿ ನಾವು ಆಲೋಚನೆ ಮಾಡಬೇಕಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಒಂದೇ ಹೊಂಡದಲ್ಲಿ ಸಸಿಗಳನ್ನು ನೆಡಲಾಗುತ್ತಿದೆ. ನೆಟ್ಟ ಸಸಿ ಕೀಳುವುದೇ ಪುನಃ ಅದೇ ಹೊಂಡದಲ್ಲಿ ಸಸಿ ನೆಡುವಂತಹ ಕೆಲಸ ಆಗುತ್ತಿದೆ.

**ಶ್ರೀಮತಿ ತಾರಾಅನೂರಾಧ:–** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರ ರೈತರ ಸಾಲ ಮನ್ನಾ ಮಾಡುವುದರ ಜೊತೆಗೆ ಕೇಂದ್ರ ಸರ್ಕಾರದ ಯೋಜನೆಯಾದ 'ಫಸಲ್ ಭೀಮಾ ಯೋಜನೆ'ಯನ್ನು ಬಹಳ ಉಪಯುಕ್ತವಾಗಿ ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡುತ್ತಿದ್ದೇನೆ. ಶ್ರೀಮಂತ ರೈತರು ವಿದ್ಯುತ್ ಇಲ್ಲದಿದ್ದರೂ ತಮ್ಮ ಪಂಪ್‌ಸೆಟ್‌ಗಳಿಗೆ ಜನರೇಟರ್‌ಗಳನ್ನು ಅಳವಡಿಸಿಕೊಂಡು ಬೇಸಾಯ ಮಾಡುತ್ತಾರೆ. ಆದರೆ, ಬಡ ಮತ್ತು ಕಡುಬಡ ರೈತರು ವಿದ್ಯುತ್ ಕೊರತೆಯಿಂದಾಗಿ ಬಹಳಷ್ಟು ತೊಂದರೆಗೊಳಗಾಗುತ್ತಿದ್ದಾರೆ. ಸರ್ಕಾರ ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಬೇಕಾಗಿದೆ. ಬರಗಾಲದ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಮಾಡಬೇಕೆನ್ನುವುದನ್ನು ಸರ್ಕಾರ ಮೊದಲೇ ಯೋಚನೆ ಮಾಡಬೇಕಾಗುತ್ತದೆ. ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎನ್ನುವ ಬೇಧಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಬರಗಾಲದ ನಿರ್ವಹಣೆಯ ಬಗ್ಗೆ ಸಾಮಾಜಿಕ ಕಳಕಳಿಯನ್ನು ತೋರಿಸಬೇಕಾಗುತ್ತದೆ. ಬರಗಾಲದ ನಿರ್ವಹಣೆಗಾಗಿ ಒಂದು ಸಮಿತಿಯನ್ನು ರಚನೆ ಮಾಡಬೇಕೆನ್ನುವ ಸಲಹೆಯನ್ನು ಮಾನ್ಯ ಸದಸ್ಯರಾದ ಕೆ.ವಿ.ನಾರಾಯಣಸ್ವಾಮಿಯವರು ನೀಡಿದ್ದಾರೆ. ಸಮಿತಿ ರಚನೆಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರೂ ಸೇರಿ ಜೊತೆಯಾಗಿ ಕೆಲಸ ಮಾಡುವಂತಹ ಕಾಲ ಬರಬೇಕಾಗಿದೆ, ಆ ಮೂಲಕ ಬರ ಪರಿಸ್ಥಿತಿಯ ನಿವಾರಣೆಯಾಗಬೇಕೆನ್ನುವುದು ನಮ್ಮೆಲ್ಲರ ಆಶಯವಾಗಿದೆ.

**ಶ್ರೀಮತಿ ಜಯಮ್ಮಾಲ ರಾಮಚಂದ್ರ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಬರಗಾಲದ ಸ್ಥಿತಿಗತಿ ಕುರಿತಂತೆ ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಸದನದಲ್ಲಿ ಬರಗಾಲದ ಬಗ್ಗೆ ಚರ್ಚೆ ಎಂದು ಹೇಳಿದಾಗ 'ಏಕರೂಪದ ಧ್ವನಿ ಇಡೀ ಸದನದಲ್ಲಿ ಇರುತ್ತದೆ. ಎಲ್ಲ ಸದಸ್ಯರು ಬರಗಾಲದ ಪರಿಸ್ಥಿತಿಯನ್ನು ಪಕ್ಷಾತೀತವಾಗಿ ನೋಡುತ್ತಾರೆ. ರೈತರ ಪರವಾಗಿ ಎಲ್ಲರ ಧ್ವನಿ ಒಂದೇ ಆಗಿರುತ್ತದೆ' ಎನ್ನುವ ಆಲೋಚನೆ ನನ್ನಲ್ಲಿ ಮೂಡಿತ್ತು. ಆದರೆ, ಇಲ್ಲಿಯೂ ಕೂಡ ರಾಜಕಾರಣವನ್ನು ಬೆರೆಸುತ್ತಿದ್ದೇವೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿದೆ. ಒಳ್ಳೆಯ ಕೆಲಸವನ್ನು ಮಾಡಿದಾಗಲೂ ರಾಜಕಾರಣವನ್ನು ಬೆರೆಸುವುದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಬರಗಾಲವನ್ನು ಎದುರಿಸುವುದಕ್ಕೆ ರೈತರನ್ನು ಯಾವ ರೀತಿಯಲ್ಲಿ ಸಜ್ಜುಗೊಳಿಸಬೇಕಾಗುತ್ತದೆ ಎನ್ನುವುದನ್ನು ನಾವು ಆಲೋಚಿಸಬೇಕಾಗುತ್ತದೆ. ಕಳೆದ 15 ವರ್ಷಗಳಿಂದ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಮ್ಮ ರಾಜ್ಯದಲ್ಲಿ ಬರಗಾಲವನ್ನು ಎದುರಿಸುತ್ತಿದ್ದೇವೆ. ರೈತ ವರ್ಗ ಮತ್ತು ಅವರ ಕುಟುಂಬದವರು ಅನುಭವಿಸಿರುವ ನಷ್ಟವನ್ನು ಭರಿಸುವುದಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮೆಲ್ಲರ ಧ್ವನಿ ಒಂದಾಗಿರುತ್ತದೆ ಎನ್ನುವ ಆಸೆ ನನ್ನಲ್ಲಿ ಇತ್ತು. ಆದರೆ, ಈ ಚರ್ಚೆಯನ್ನು ಗಮನಿಸಿದಾಗ ನನಗೆ ನಿರಾಸೆಯುಂಟಾಗಿದೆ. ಇಲ್ಲಿ ಮಾತನಾಡುತ್ತಿರುವ ಮಾತುಗಳು ಒಂದು ಪಕ್ಷಕ್ಕೆ ಸೀಮಿತವಾಗಿ, ಆ ಪಕ್ಷಕ್ಕೆ ಪೆಟ್ಟು ಬೀಳುತ್ತದೆ ಎನ್ನುವ ಸಂದರ್ಭ ಬಂದಾಗ, 'ಒಲ್ಲದ ಗಂಡ ಮೊಸರಿನಲ್ಲಿ ಕಲ್ಲು ಹುಡುಕಿದಂತೆ' ತಪ್ಪುಗಳನ್ನು ಹುಡುಕಿ ಹುಡುಕಿ ಎತ್ತಿ ತೋರಿಸಿರುವುದು ನನಗೆ ನಿರಾಸೆಯನ್ನುಂಟು ಮಾಡಿದೆ.

ಸನ್ಮಾನ್ಯ ಸಭಾಪತಿಯವರೇ, ಇಸ್ರೇಲ್ ದೇಶ ಮರುಭೂಮಿಯಾಗಿದ್ದರೂ ಉತ್ತಮ ಗುಣಮಟ್ಟದ ತರಕಾರಿಗಳನ್ನು, ಹೂವುಗಳನ್ನು ಮತ್ತು ಹಣ್ಣುಗಳನ್ನು ಬೆಳೆದು ಇಡೀ ಪ್ರಪಂಚಕ್ಕೆ ನೀಡುತ್ತಿದ್ದಾರೆ. ನೀರೇ ಇಲ್ಲದಂತಹ ಪ್ರದೇಶದಲ್ಲಿ vertical line ನಲ್ಲಿ ಕಡಿಮೆ ನೀರನ್ನು ಬಳಕೆ ಮಾಡಿಕೊಂಡು ಅವರು ಬೆಳೆಯುತ್ತಿರುವ ಬೆಳೆಗಳು ಮತ್ತು ಬೆಳೆಯ ಪದ್ಧತಿ ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿರುವ ಅನಕ್ಷರಸ್ಥ ರೈತಾಪಿ ವರ್ಗವನ್ನು ಶಿಕ್ಷಿತರನ್ನಾಗಿ ಮಾಡಿ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ನಾವು ಪ್ರಯತ್ನವನ್ನು ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಸ್ವಿಟ್ಜರ್‌ಲ್ಯಾಂಡ್‌ಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿನ ಪರ್ವತ ಶ್ರೇಣಿಗಳು ಮತ್ತು ಹಚ್ಚ ಹಸಿರನ್ನು ನೋಡಿ ಬೆರಗಾಗಿದ್ದೆ. ಅಲ್ಲಿನ ಹಸುವಿನ ಕೊರಳಿಗೆ ದೊಡ್ಡ ದೊಡ್ಡ ಗಂಟೆಗಳನ್ನು ಕಟ್ಟಲಾಗಿದೆ. ಆ ಗಂಟೆಯ ಗಣಗಣ ನಾದದೊಂದಿಗೆ ಹುಲುಸಾಗಿ ಬೆಳೆದಿರುವ ಹುಲ್ಲನ್ನು ಮೇಯುತ್ತಿರುವ ಹಸುಗಳನ್ನು ನೋಡಿದಾಗ, 'ಇಷ್ಟೊಂದು ಹಸಿರಿನಿಂದ ಕೂಡಿರುವ ಹುಲ್ಲು ನಮ್ಮ ದೇಶದ ದನಕರುಗಳಿಗೂ ಸಿಗಬಾರದೆ' ಎನ್ನುವ ಭಾವನೆ ಮನಸ್ಸಿನಲ್ಲಿ ಮೂಡುತ್ತದೆ. ನಾನು ಆ ದೇಶಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಒಬ್ಬನೇ ಒಬ್ಬ ರೈತ ಬೆಳಗಿನಿಂದ ಸಂಜೆಯವರೆಗೆ ಹೊಲ, ಗದ್ದೆ ಅಥವಾ ತೋಟಕ್ಕೆ ಬಂದು ಕೆಲಸ ಮಾಡಿದ್ದನ್ನು ನೋಡಲೇ ಇಲ್ಲ. 'ಇಲ್ಲಿನ ರೈತರು ಕೆಲಸ ಮಾಡುವುದೇ ಇಲ್ಲವೇ' ಎನ್ನುವ ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ ಅಲ್ಲಿನವರು 'ಇಲ್ಲಿ ಬೆಳಗಿನ ಜಾವ 4.30 ಗಂಟೆ ಸೂರ್ಯೋದಯ ಆಗುತ್ತದೆ. ಇಲ್ಲಿನ ಹೆಣ್ಣುಮಕ್ಕಳ ಹೈನುಗಾರಿಕೆ ಕೆಲಸ ಕಾರ್ಯಗಳು 6 ಗಂಟೆಗೆಲ್ಲ ಮುಗಿದು ಹೋಗುತ್ತದೆ. ಹಾಲು ಕರೆಯುವಂತಹ ಕೆಲಸವನ್ನು ಮೆಷಿನ್‌ಗಳೇ ಮಾಡುತ್ತವೆ. ಉಳಿದಂತೆ ಉಳುಮೆ, ಬಿತ್ತನೆ ಮತ್ತು ಕ್ರಿಮಿನಾಶಕಗಳನ್ನು ಸಿಂಪಡಿಸುವ ಕೆಲಸವನ್ನು ಇಟಲಿ ದೇಶದಿಂದ ತರಿಸಿಕೊಂಡ ಮೆಷಿನ್‌ಗಳು ಮಾಡುತ್ತವೆ' ಎಂದು ಹೇಳಿದರು. ನಾವು ಆ ಪದ್ಧತಿಗಳನ್ನು ನಮ್ಮ ದೇಶದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ದೇಶ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗುತ್ತಿರುವುದರಿಂದ ಅಂತಹ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾಗದಿದ್ದರೂ ಸಹ ಕನಿಷ್ಠ ಇಸ್ರೇಲ್ ಮಾದರಿಯನ್ನಾದರೂ ನಾವು ಇಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾತನಾಡಿದಂತಹ ಮಾನ್ಯ ಸದಸ್ಯರುಗಳು ನಮ್ಮ ರಾಜ್ಯದಲ್ಲಿ ಬರಗಾಲವನ್ನು ಎದುರಿಸುವುದಕ್ಕೆ ಕೆರೆಕಟ್ಟೆಗಳನ್ನು ಕಟ್ಟಿ ಅದರಲ್ಲಿ ನೀರನ್ನು ಸಂಗ್ರಹ ಮಾಡುವಂತಹ ಕೆಲಸವನ್ನು ಮಾಡಲಿಲ್ಲವೆಂದು ಹೇಳುತ್ತಿದ್ದರು. ನಾನು ಇಲ್ಲಿ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಂದು ಕಾಲದಲ್ಲಿ ಚನ್ನಪಟ್ಟಣವನ್ನು ಬರಗಾಲ ಪೀಡಿತ ಪ್ರದೇಶವೆಂದು ಕರೆಯುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಶಿಂಷಾ ನದಿಮೂಲದಿಂದ ಏತ ನೀರಾವರಿಯ ಮೂಲಕ ನೀರನ್ನು ಹಿಡಿದಿಡುವಂತಹ ಕಾರ್ಯವನ್ನು ಅಲ್ಲಿ ಮಾಡಲಾಗಿದೆ. ಇದು ನಮ್ಮ ಕಣ್ಮುಂದೆ ಇರುವಂತಹ ಸತ್ಯ ಸಂಗತಿಯಾಗಿದೆ. ಆ ಭಾಗದಲ್ಲಿ ನೂರಾರು ಕೆರೆಗಳು ನೀರಿನಿಂದ ತುಂಬಿವೆ. ಅಲ್ಲಿನ ಪ್ರದೇಶ ಹಚ್ಚಹಸಿರಿನಿಂದ ಕೂಡಿದೆ. ಚನ್ನಪಟ್ಟಣದ ವಿಧಾನಸಭಾ ಸದಸ್ಯರಾಗಿರುವ ಮಾನ್ಯ ಸಿ.ಪಿ.ಯೋಗೇಶ್ವರ್‌ರವರು ಇಂತಹ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅದಕ್ಕಾಗಿ ಅವರನ್ನು ಅಭಿನಂದಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿನಮಾನಗಳಲ್ಲಿ ಪರಿಸರದ ಮೇಲೆ ನಡೆಯುತ್ತಿರುವ ದೌರ್ಜನ್ಯದಿಂದಾಗಿ, ಮರಗಳನ್ನು ಕಡಿಯುತ್ತಿರುವುದರಿಂದ ಹವಾಮಾನದಲ್ಲಿ ಆಗುತ್ತಿರುವ ಏರುಪೇರುಗಳ ಬಗ್ಗೆ ಬಹಳಷ್ಟು ಜನ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಇಲ್ಲಿ ನಾವು ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಹಿಂದೆ ನಾವು ಮನೆಗಳನ್ನು ಕಟ್ಟಬೇಕಾದರೆ ಇಟ್ಟಿಗೆಯನ್ನು ಬಳಸಿ ಕಟ್ಟುತ್ತಿದ್ದೆವು. ಇವತ್ತಿನ ದಿನ ಇಟ್ಟಿಗೆಯ ಬದಲಿಗೆ ಹಾಲೋಬ್ರಿಕ್‌ಗಳನ್ನು ಬಳಕೆ ಮಾಡುತ್ತಿದ್ದೇವೆ. ಕಾಂಕ್ರಿಟ್ ಮತ್ತು ಥಾರ್ ರಸ್ತೆಗಳಿಂದಾಗಿ ಮಳೆಯ ನೀರು ಭೂಮಿಯೊಳಗೆ ಇಂಗುವುದಕ್ಕೆ ಅವಕಾಶವಿಲ್ಲದಂತಾಗಿದೆ. ಜನಸಂಖ್ಯಾ ಸ್ಫೋಟದಿಂದಾಗಿ ಒಂದಿಂಚು ಜಾಗ ಬಿಡದೇ ಮನೆಗಳನ್ನು ಕಟ್ಟಲಾಗುತ್ತಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಹವಾನಿಯಂತ್ರಿತ ವ್ಯವಸ್ಥೆಗಳನ್ನು ಹೆಚ್ಚು ಹೆಚ್ಚು ಬಳಕೆ ಮಾಡುತ್ತಿರುವುದು ಮತ್ತು ಗಾಜಿನ ಕಟ್ಟಡಗಳು ತಾಪಮಾನವನ್ನು ಹೆಚ್ಚು ಮಾಡುತ್ತಿವೆ. ಇಂತಹ ವಿಚಾರಗಳ ಬಗ್ಗೆಯೂ ನಾವು ಯೋಚನೆ ಮಾಡಬೇಕಾಗಿದೆ. ಇವುಗಳ ಬಗ್ಗೆ ನಾವು ಗಂಭೀರ ಚಿಂತನೆ ಮಾಡಬೇಕಾಗುತ್ತದೆ. ಯಾವ ವಸ್ತುಗಳನ್ನು ಬಳಕೆ ಮಾಡಬೇಕು ಯಾವ ವಸ್ತುಗಳನ್ನು ಬಳಕೆ ಮಾಡಬಾರದು ಎನ್ನುವುದರ ಬಗ್ಗೆ ನಮಗೆ ಅರಿವಿರಬೇಕಾಗುತ್ತದೆ.

(ಮುಂದು)

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(732) 14.06.17, 5.20, TCH/VK

**ಡಾ॥ ಜಯಮಾಲ ರಾಮಚಂದ್ರ (ನಾಮ ನಿರ್ದೇಶನ ಹೊಂದಿದವರು) (ಮುಂದು)**

2006ನೇ ಇಸವಿಯಲ್ಲಿ ಕೇಂದ್ರದಲ್ಲಿ ನಮ್ಮ ಸರ್ಕಾರ ಕೇಂದ್ರದಲ್ಲಿ ಇದ್ದಾಗ ಒಂದು ಬಹಳ ಒಳ್ಳೆಯ ಕೆಲಸ ಮಾಡಿದೆ. ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಮನಮೋಹನ್ ಸಿಂಗ್ ರವರು 2006-07ರಲ್ಲಿ ನರೇಗಾ ಮೂಲಕ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದರು. ಒಂದು ಕುಟುಂಬದಲ್ಲಿ ಒಬ್ಬರಿಗಾದರೂ ಕೆಲಸ ಸಿಗಲಿ ಎನ್ನುವಂತಹ ಉದ್ದೇಶವನ್ನು ಇಟ್ಟುಕೊಂಡು ಒಬ್ಬರಿಗೆ 100 ದಿನಗಳ ಕೆಲಸವನ್ನು ಕೊಡುತ್ತಿದ್ದಾರೆ. ಕನಿಷ್ಠ ಪುರುಷರಿಗೆ ಮತ್ತು ಮಹಿಳೆಯರಿಗೆ ಇವರಿಬ್ಬರಿಗೂ ತಾರತಮ್ಯ ಮಾಡುವುದು ಬೇಡ. ಇವರಿಬ್ಬರಿಗೂ ಕೂಡ ದಿನಕ್ಕೆ 246 ರೂಪಾಯಿಗಳಂತೆ ಏಕರೂಪವಾಗಿ 100 ದಿನಗಳಿಗೆ ಕೂಲಿ ಕೊಡುತ್ತಿದ್ದಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರ ಬೇಡಿಕೆ 200 ದಿನಗಳಾದರೂ ಕೆಲಸವನ್ನು ಕೊಡಬೇಕೆಂದು ಇದೆ. ಎಲ್ಲಿ ಹೆಚ್ಚಿನ ಬರಗಾಲ ಪೀಡಿತ ಸ್ಥಳ ಇದೆಯೋ ಅಲ್ಲಿ ವರ್ಷಕ್ಕೆ ಕನಿಷ್ಠ 200 ದಿನಗಳಾದರೂ ಕೆಲಸ ಕೊಡುವುದರ ಬಗ್ಗೆ ಚಿಂತನೆ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ. ಏಕೆಂದರೆ, ಈ ಯೋಜನೆಯಲ್ಲಿ ಹೆಣ್ಣುಮಕ್ಕಳು ಬಹಳ ದೊಡ್ಡ ಪಾಲನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಹೆಣ್ಣುಮಕ್ಕಳು ಬಹುಪಾಲು ಪಡೆದುಕೊಂಡಿರುವುದು ಹೇಗಿದೆ ಎಂದರೆ, ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಗುಲ್ಬರ್ಗಾದಲ್ಲಿ ಜನವಾತಿ ಮಹಿಳಾ ಸಂಘಟನೆ ಇದೆ. ಆ ಜನವಾತಿ ಮಹಿಳಾ ಸಂಘಟನೆಯವರು, ಆ 23 ಹಳ್ಳಿಗಳಲ್ಲಿ 23 ಕೆರೆಗಳ ಹೂಳನ್ನು ತೆಗೆದಿದ್ದಾರೆ. 3500 ಹೆಣ್ಣುಮಕ್ಕಳು ಆ ಕೆರೆಗಳಲ್ಲಿ ಕೆಲಸ ಮಾಡಿದರು. ನೀವು ಇವತ್ತಿನ ದಿವಸ ಅದನ್ನು ನೋಡಿದರೆ ಸಂತೋಷಪಡುತ್ತೀರಿ. 23 ಹಳ್ಳಿಗಳ ಕೆರೆಗಳಲ್ಲಿಯೂ ನೂರಕ್ಕೆ ನೀರು ಇವತ್ತು ತುಂಬಿದೆ. 8 ಕಿಲೋಮೀಟರ್ ದೂರದಲ್ಲಿರತಕ್ಕಂತಹ ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ನೀರನ್ನು ಹಿಡಿದಿಟ್ಟುಕೊಳ್ಳುವಂತಹ ಶಕ್ತಿಯನ್ನು ಪಡೆದುಕೊಂಡಿದೆ. ಇವತ್ತಿನ ದಿವಸ ಅಷ್ಟೊಂದು ಹೆಣ್ಣುಮಕ್ಕಳಿದ್ದು, ವಿಧವೆ ಹಾಗೂ ವಿಚ್ಛೇದಿತ ಹೆಣ್ಣುಮಕ್ಕಳಿಗೆ ಇವರಿಗೆಲ್ಲರಿಗೂ ದಿನಕ್ಕೆ 246 ರೂಪಾಯಿಗಳ ಕೂಲಿಯನ್ನು ಕೊಡಲಾಗುವುದು. ಉರಿಯುವ ಬಿಸಿಲು 46 ಡಿಗ್ರಿ ತಾಪಮಾನ ಇರುತ್ತದೆ. ಈ ಬಿಸಿಲನ್ನೂ ಲೆಕ್ಕಿಸದೇ ನಾವು ಬಂದು, ಕೆಲಸ ಮಾಡಿದ್ದಾರೆ. ಅದಕ್ಕೆ ನನಗೆ ಸಂತೋಷ. ಇವತ್ತಿನ ದಿವಸ ನಮ್ಮ ಸರ್ಕಾರ ಕನಿಷ್ಠ 15,000 ಜನರಿಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಗುರುತಿಸಿ, ನೀವು ಕಡ್ಡಾಯವಾಗಿ ಕೆಲಸ ಕೊಡಬೇಕೆಂದು ಹೇಳಿದೆ. ಇದು ತುಂಬಾ ಒಳ್ಳೆಯ ಯೋಜನೆಯಾಗಿದೆ. ಹಿಂದೆ ಒಂದು ಕಾಲದಲ್ಲಿ ಸುಮಾರು 40,000 ಕೆರೆಗಳು ಇದ್ದವು. ಸುಮಾರು 2,400 ಕೆರೆಗಳಿವೆ ಎಂದು ಇತ್ತೀಚಿನ ದಿನಗಳಲ್ಲಿ ಹೇಳಲಾಗುತ್ತಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ

10000 ಕೆರೆಗಳು ಕೂಡ ಇರುವುದಿಲ್ಲ. ಆದರೆ, ಈ ಉದ್ಯೋಗ ಖಾತರಿ ಯೋಜನೆಯು ಜನರು ಬೇರೆ ಕಡೆ ವಲಸೆ ಹೋಗುವುದನ್ನು ತಪ್ಪಿಸುತ್ತದೆ. ಈ ಉದ್ಯೋಗ ಖಾತರಿ ಯೋಜನೆ dropout ನ್ನು ತಪ್ಪಿಸುತ್ತದೆ. ಈ ಉದ್ಯೋಗ ಖಾತರಿ ಯೋಜನೆ ಬೇರೆ ಕಡೆ ಹೋದಾಗ ಆಗುವಂತಹ ಎಲ್ಲಾ ಅನಾಹುತಗಳನ್ನು ಹಾಗೂ ಶೋಷಣೆಗಳನ್ನು ತಪ್ಪಿಸುತ್ತದೆ. ಆದ್ದರಿಂದ ಸರ್ಕಾರ ಇವುಗಳಿಂದ ಮುಕ್ತಿ ಕೊಡಬೇಕೆಂತಲೇ ಇವತ್ತಿನ ದಿವಸ ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆಯನ್ನು ಇನ್ನಷ್ಟು ದಿನಗಳಿಗೆ ಅಂದರೆ, 200 ದಿನಗಳಿಗೆ ವಿಸ್ತಾರ ಮಾಡಲು ಸರ್ಕಾರ ಗಮನಿಸಬೇಕೆಂದು ನಾನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಏಕೆಂದರೆ, ಈ ಯೋಜನೆಯ ಮುಖಾಂತರ ಅಂಗವಿಕಲರಿಗೆ ಮತ್ತು ವೃದ್ಧರಿಗೆ ಸುಮಾರು 80 ಮತ್ತು 90 ವರ್ಷದವರಿಗೂ ಕೂಡ ಅರ್ಧ ದಿನದ ಕೆಲಸ ಮಾಡಿಸಿಕೊಂಡು, ಪೂರ್ಣ ದಿನದ ಕೂಲಿ ಕೊಡುತ್ತಿದ್ದಾರೆ. ದಯವಿಟ್ಟು ಈ ಉದ್ಯೋಗ ಖಾತರಿ ಯೋಜನೆಯನ್ನು 200 ದಿನಕ್ಕೆ ಏರಿಸಬೇಕೆಂದು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಹೆಣ್ಣುಮಕ್ಕಳು ಕುರಿತಂತೆ ನಾನು ಒಂದು ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಾವು-ನೋವು ಎಂದು ಹೇಳುತ್ತಾರೆ. ನಾನು ನಿಜಕ್ಕೂ ಹೇಳುತ್ತೇನೆ ನಮ್ಮ ರಾಜ್ಯದಲ್ಲಿ ಈ ಬಾರಿ ಬರ ಬಂದಿದೆ. ಬೇರೆ ರಾಜ್ಯದಲ್ಲೂ ಬರ ಬಂದಿದ್ದು, ಬೇರೆ ರಾಜ್ಯದಲ್ಲಿ ಆದ ಹಾಗೆ, ನಮ್ಮ ರಾಜ್ಯದಲ್ಲಿ ಎಲ್ಲೂ ಕೂಡ ಅಂತಹ ಸಾವು ನೋವುಗಳು ಆಗಿಲ್ಲ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಇರತಕ್ಕಂತಹ ಹೆಣ್ಣುಮಕ್ಕಳು ಇವತ್ತಿನ ದಿವಸ ಹೈನುಗಾರಿಕೆಯಲ್ಲಿ ಪ್ರಗತಿ ಹೊಂದುತ್ತಿದ್ದು, ಅತಿ ಹೆಚ್ಚಿನ ಹಾಲನ್ನು ಮಾರುಕಟ್ಟೆಗೆ ತಂದು ಕೊಡುತ್ತಿದ್ದಾರೆ. ಅದರಲ್ಲಿ ಆ ಹೆಣ್ಣುಮಕ್ಕಳ ಶ್ರಮ ಹೆಚ್ಚು ಇದ್ದು, ಅವರು ಹೈನುಗಾರಿಕೆ ಮಾಡುವುದರಲ್ಲಿ ಎತ್ತಿದ ಕೈ. ನಮ್ಮ ಹೆಣ್ಣುಮಕ್ಕಳಿಗೆ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕೆಂದು ಗೊತ್ತಿದೆ. ಅದಕ್ಕೆ ಒಂದು ಸಣ್ಣ ಉದಾಹರಣೆಗೆ ಶಿರಸಿಯಲ್ಲಿ ಶ್ರೀಮತಿ ಗೌರಿ.ಎಸ್.ನಾಯಕ್ ಎನ್ನುವಂತಹ ಹೆಣ್ಣುಮಗಳು ಇದ್ದಾಳೆ. ಅವರೇ ತೆಂಗು, ಅಡಿಕೆ ಮತ್ತು ಮತ್ತಿತರೆ ಬೆಳೆಗಳನ್ನು ಬೆಳೆಸಿರುತ್ತಾರೆ. ಆ ತೆಂಗು ಮತ್ತು ಅಡಿಕೆಗೆ ನೀರು ಇಲ್ಲದೇ ಇದ್ದಾಗ, ಆ ಗಿಡಗಳು ಸಾಯುವುದನ್ನು ನೋಡುವುದಕ್ಕಾಗದೇ ಸುಮಾರು 60X7 ಅಡಿ ಸುತ್ತಳತೆಯ ಬಾವಿಯನ್ನು ಏಕಾಂಗಿಯಾಗಿ ತೋಡಿದ್ದಾಳೆ. ಇವತ್ತಿನ ದಿವಸ ಆ ಹೆಣ್ಣುಮಗಳು ಬಾವಿಯನ್ನು ಒಬ್ಬಳೇ ತೋಡಬಲ್ಲಳು ಎಂದು ತೋರಿಸಿಕೊಟ್ಟಿದ್ದಾಳೆ. ಅದರ ಹಿಂದೆ ಇರುವಂತಹ ಕಥೆ ಏನಿದೆ ಎಂದರೆ, " ತಾನು ಸಾಕಿದ, ತಾನು ಬೆಳೆಸಿದ ಗಿಡಮರಗಳ ಬಗ್ಗೆ ಇರುವ ಪ್ರೀತಿ" ಇಂತಹ ಒಂದು ನಾಡಿನಲ್ಲಿ ನಾವು ಇದ್ದೇವೆ. ಈ ನಾಡಿನಲ್ಲಿ ಇರುವುದು ನನಗೆ ತುಂಬಾ ಸಂತೋಷವಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಅತ್ಯಂತ ಒಳ್ಳೆಯ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅವರು ಇವತ್ತಿನ ದಿವಸ ಭೀಕರ ಬರವನ್ನು

ಎದುರಿಸಿದಂತಹ ರೀತಿ ಏನಿದೆ, ಅದು ಎಲ್ಲರಿಗೂ ಮಾದರಿಯಾಗಿದೆ. ಯಾವುದೇ ಸಾವು ನೋವುಗಳು ಇಲ್ಲದೇ ಎಲ್ಲರಿಗೂ ಕೂಡ ಒಪ್ಪುವಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಇಂತಹ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿದಾಗ ನಾನು ಅತ್ಯಂತ ಗೌರವವಾಗಿ ಸರ್ಕಾರವನ್ನು ಕೇಳುತ್ತೇನೆ. ಒಂದೆರಡು ವಿಷಯಗಳ ಬಗ್ಗೆ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ನೀವು ಮನುಷ್ಯರಿಗೆ ನೀರಿನ ವ್ಯವಸ್ಥೆಯನ್ನು ಮಾಡಿ ಮಾನವೀಯತೆಯನ್ನು ಮೆರೆದಿದ್ದೀರಿ. ಇಡೀ ಈ ಬರಗಾಲದ ಸಂದರ್ಭದಲ್ಲಿ ಯಾವೊಬ್ಬ ಮನುಷ್ಯನಿಗೂ ಕೂಡ ಒಂದು ತೊಟ್ಟು ನೀರಿನ ತೊಂದರೆ ಆಗದಂತೆ ಟ್ಯಾಂಕರ್‌ಗಳಲ್ಲಿ ನೀರನ್ನು ತೆಗೆದುಕೊಂಡು ಹೋಗಿ ಮನೆ ಮನೆಗಳಿಗೆ ಸರಬರಾಜು ಮಾಡಿ, ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಣೆ ಮಾಡಿದೆ. ಅದರ ಜೊತೆಗೆ ಜಾನುವಾರುಗಳಿಗೂ ಕೂಡ ನೀರನ್ನು ಒದಗಿಸಬೇಕು. ನಿಜಕ್ಕೂ ಎಲ್ಲಿ ಜಾನುವಾರುಗಳಿಗೆ ನೀರು ಇಲ್ಲವೋ, ಆ ಜಾನುವಾರುಗಳಿಗೆ ಒಂದು ಸ್ವಲ್ಪ ನೀರು ಕೊಡುವಂತದ್ದನ್ನು ಹೆಚ್ಚಿಗೆ ಮಾಡಬೇಕು. ನಾನು ಮೊದಲೇ ಹೇಳಿದ್ದ ಹಾಗೆ, ನರೇಗಾ ಉದ್ಯೋಗ ಖಾತರಿ ಯೋಜನೆಯಲ್ಲಿ ವರ್ಷದಲ್ಲಿ ಒಂದು ಕುಟುಂಬಕ್ಕೆ ಕನಿಷ್ಠ 200 ದಿನಗಳ ಕೆಲಸವನ್ನು ಕೊಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತಾ, ಎಲ್ಲದಕ್ಕಿಂತಲೂ ಹೆಚ್ಚಿನದಾಗಿ, ನಾವು ನಮ್ಮ ರಾಜ್ಯದಲ್ಲಿ ಬೆಳೆಯನ್ನು ಬೆಳೆಯುತ್ತೇವೆ. ಆದರೆ, ಆ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಇರುವುದಿಲ್ಲ. ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ನಾವು " ನೆಲ್ಲಿಕಾಯಿಯನ್ನು ಬೆಳೆಯುತ್ತೇವೆ, ಆ ನೆಲ್ಲಿಕಾಯಿಯನ್ನು ಕೊಂಡುಕೊಳ್ಳುವವರು ಇಲ್ಲ". ಆ ನೆಲ್ಲಿಕಾಯಿಯನ್ನು ಸಂಗ್ರಹಿಸಿಡುವಂತಹ ವ್ಯವಸ್ಥೆಗಳು ನಮ್ಮಲ್ಲಿ ಇರುವುದಿಲ್ಲ. ಇವತ್ತಿನ ದಿವಸ ಆಪಲ್‌ಗಳನ್ನು ಬೆಳೆದರೆ, ವರ್ಷಾನುಗಟ್ಟಲೆ ಆ ಆಪಲ್‌ಗಳನ್ನು ಶೇಖರಣೆ ಮಾಡುವಂತಹ ವ್ಯವಸ್ಥೆಗಳಿವೆ. ನೆಲ್ಲಿಕಾಯಿ ಕೂಡ most medicated. ಆದರೆ, ಅವುಗಳನ್ನು ಸಂಗ್ರಹಿಸಿಡುವುದಾಗಲಿ ಅಥವಾ ಮಾರಾಟ ಮಾಡುವುದಕ್ಕೆ ಮಾರುಕಟ್ಟೆಗಳಾಗಲಿ ಯಾವುದೂ ಇರುವುದಿಲ್ಲ. ಇಂತಹ ಒಂದು ವ್ಯವಸ್ಥೆಯಲ್ಲಿ ಮಾರುಕಟ್ಟೆಯನ್ನು ಮತ್ತು ಅವುಗಳನ್ನು ಸಂಗ್ರಹಿಸಿಡುವಂತಹ ಕೆಲಸ ಆಗಬೇಕು. ಬೀಜ ವಿತರಣೆಯಿಂದ ಹಿಡಿದು, ಅಂತಿಮ ಮಾರುಕಟ್ಟೆಯುವರೆಗೂ ಇದರ ಬಗ್ಗೆ ಹೆಚ್ಚಿನ ಚಿಂತನೆ, ಸಮೀಕ್ಷೆಗಳು ಮತ್ತು ಸಂಶೋಧನೆಗಳು ಹೆಚ್ಚಾಗಬೇಕು. ಕೃಷಿಯ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ಆಗಬೇಕು. ಇಡೀ ಬರದ ಸಂದರ್ಭದಲ್ಲಿ ನಮ್ಮ ಸರ್ಕಾರ ಮತ್ತು ಮಾನ್ಯ ಸಚಿವರು ಅತ್ಯಂತ ಕಾಳಜಿಯನ್ನು ವಹಿಸಿ, ರೈತರ ಬಗ್ಗೆ, ಜನರ ಬಗ್ಗೆ ಮತ್ತು ಜಾನುವಾರುಗಳ ಬಗ್ಗೆ ಹೆಚ್ಚಿನ concern ತೋರಿಸಿದ್ದಾರೆ. ನಾನು ಅದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇನ್ನೂ ಹೆಚ್ಚಿನ ಸವಲತ್ತುಗಳನ್ನು ಆ ರೈತಾಪಿ ಬಂಧುಗಳಿಗೆ ಕೊಡಲಿ. ಅವರ ಸಂಕಷ್ಟಕ್ಕೆ ಇನ್ನೂ ಸ್ಪಂದಿಸಲಿ. ಅವರ ಆರೋಗ್ಯದ ಬಗ್ಗೆ ಕಾಳಜಿ ತೋರಿಸಲಿ. ಇನ್ನೊಂದು

ವಿಷಯ ಏನೆಂದರೆ, ಇತ್ತೀಚಿನ ದಿನಗಳಲ್ಲಿ ಅವರ ಉತ್ಪಾದನೆಯ ವೆಚ್ಚ 50% ಗಿಂತಲೂ ಹೆಚ್ಚಾಗುತ್ತಿದೆ ಎನ್ನುವುದರ ಬಗ್ಗೆ ಚರ್ಚೆಗಳು ಆಗುತ್ತಿವೆ. ಅವರ ಬಗ್ಗೆ ಚರ್ಚೆ ಮಾಡುವಾಗ, ಅವರ ಆರೋಗ್ಯ, ಅವರ ಬದುಕು ಮತ್ತು ಅವರ ಮಕ್ಕಳು ಇವುಗಳನ್ನೂ ಸಹ ಗಮನದಲ್ಲಿಟ್ಟು ಮಾಡಲಿ ಎಂದು ಹೇಳಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಉಪಸಭಾಪತಿಯವರು:–** ಧನ್ಯವಾದಗಳು. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪರವರು ಮಾತನಾಡಿದ ನಂತರ ನಾನು ಮಾತನಾಡುತ್ತೇನೆ. ನಾನು ಐದು ನಿಮಿಷ ಮಾತನಾಡುತ್ತೇನೆ. ಅಲ್ಲಿಯವರೆಗೆ ಅವರಿಗೆ ಮೊದಲು ಅವಕಾಶ ಕೊಟ್ಟರೆ ತೊಂದರೆ ಇಲ್ಲ.

**ಉಪಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಮಾನ್ಯ ಉಗ್ರಪ್ಪನವರಿಗೆ ಇನ್ನೂ ಸ್ವಲ್ಪಕಾಲದ ನಂತರ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ಅವರು ಬೇಗ ಮಾತನಾಡಿ ಮುಗಿಸುತ್ತೇನೆ ಎನ್ನುವುದಾದರೆ, ಅವರಿಗೆ ಮಾತನಾಡಲು ಅವಕಾಶ ಕಲ್ಪಿಸಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಉಗ್ರಪ್ಪನವರೆ ಮೊದಲು ಮಾತನಾಡಲಿ.

**ಉಪಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ತಾವು ಆದಷ್ಟು ಬೇಗ ಮಾತನಾಡಿ ಮುಗಿಸುತ್ತೇನೆ ಎಂದರೆ ಮಾತನಾಡಲು ಅವಕಾಶ ಕಲ್ಪಿಸಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿರವರು ಸ್ನೇಹಿತರು ಅಲ್ಲವೇ, ಹಾಗಾಗಿ ನಾನು ಮೊದಲು ಮಾತನಾಡಲು ಅವಕಾಶ ಕಲ್ಪಿಸಿಕೊಡುವಂತೆ ಹೇಳುತ್ತಿದ್ದಾರೆ. **(ಮುಂದು)**

(733)14.06.2017 ಪಿಕೆ/ವಿಕೆ 5.30

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು)**

ಮಾನ್ಯ ಸಭಾಪತಿಗಳೇ, ಒಂದು ಜ್ವಲಂತ ಸಮಸ್ಯೆಯ ಬಗ್ಗೆ ಸದನದ ಎಲ್ಲಾ ಸದಸ್ಯರುಗಳು ಸ್ವಲ್ಪಮಟ್ಟಿಗೆ ಮನಬಿಚ್ಚಿ ಮಾತನಾಡುತ್ತಿದ್ದಾರೆ ಎಂದು ನಾನು ಭಾವಿಸಿದ್ದೇನೆ. ರಾಜ್ಯದಲ್ಲಿ ಸುಮಾರು ಆರೂವರೆ ಕೋಟಿ ಜನ ಇದ್ದಾರೆ. ಸುಮಾರು 176 ತಾಲ್ಲೂಕುಗಳು, 30 ಜಿಲ್ಲೆಗಳು ರಾಜ್ಯದಲ್ಲಿವೆ. ರಾಜ್ಯ ಸರ್ಕಾರ 160 ತಾಲ್ಲೂಕುಗಳು ಬರಪೀಡಿತವಾಗಿವೆ ಎಂದು ಘೋಷಣೆ ಮಾಡಿದೆ. 160 ತಾಲ್ಲೂಕುಗಳ ಪೈಕಿ, ಮುಂಗಾರಿನಲ್ಲಿ ಸುಮಾರು 33.44 ಹೆಕ್ಟೇರ್ ಕೃಷಿ ಬೆಳೆ ನಾಶವಾಗಿರುವುದನ್ನು ನಾವು ನೋಡಬಹುದು. ಅದರ ಜೊತೆ 2.9 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆ ನಾಶವಾಗಿದೆ. ಮುಂಗಾರಿನಲ್ಲಿ ಆಗಿರುವ ನಷ್ಟ ಸುಮಾರು ರೂ.4702.54 ಕೋಟಿ. NDRF (National Disaster Response Fund) and SDRF (State Disaster Response Fund) ಬಗ್ಗೆ ಆಮೇಲೆ ಹೇಳುತ್ತೇನೆ. ನಾರ್ಮ್ಸ್ ಪ್ರಕಾರ ನಾವು ರೂ. 1784.44 ಕೋಟಿಗಳನ್ನು claim ಮಾಡಬೇಕಿದೆ. ಅದೇರೀತಿ, ಹಿಂಗಾರಿನಲ್ಲಿ ಸುಮಾರು 13.57 ಲಕ್ಷ ಹೆಕ್ಟೇರ್‌ಗಳ ಕೃಷಿ ಬೆಳೆ ನಾಶವಾಗಿದೆ, 15092 ಹೆಕ್ಟೇರ್ ತೋಟಗಾರಿಕೆ ಬೆಳೆ ನಾಶವಾಗಿದೆ. ನಾರ್ಮ್ಸ್ ಪ್ರಕಾರ ನಷ್ಟವನ್ನು ಲೆಕ್ಕ ಹಾಕಿದರೆ ಅದು ರೂ. 3310.83 ಕೋಟಿ ಆಗುತ್ತದೆ. ಅದನ್ನೇ ನಾನೇದರೂ ಜನರಲ್ ನಷ್ಟ ಎಂದು ಹೇಳುವುದಾದರೆ ಅದು ಸುಮಾರು ರೂ.15000 ಕೋಟಿಯಷ್ಟು ರಾಜ್ಯಕ್ಕೆ ನಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ತನ್ನದೇ ಆಗಿರುವ ಜವಾಬ್ದಾರಿಗಳನ್ನು ನಿರ್ವಹಣೆ ಮಾಡಿರುವ ಮಾಹಿತಿ ಲಭ್ಯವಾಗಿದೆ. ರಾಜ್ಯದಾದ್ಯಂತ ಸುಮಾರು 1815 ಗ್ರಾಮಗಳಿಗೆ 2835 ಟ್ಯಾಂಕರ್‌ಗಳಲ್ಲಿ ಮತ್ತು ಪಟ್ಟಣ-ನಗರಗಳಿಗೆ ಸುಮಾರು 640 ಗಳಲ್ಲಿ ಟ್ಯಾಂಕರ್ ಕುಡಿಯುವ ನೀರನ್ನು ಸರಬರಾಜು ಮಾಡಿದ್ದಾರೆ. ಸರ್ಕಾರ ಸುಮಾರು 1.19 ಲಕ್ಷ ಜಾನುವಾರುಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಉದ್ದಗಲಕ್ಕೂ 98 ಗೋಶಾಲೆಗಳನ್ನು ಮಾಡಿದೆ. 444 ಮೇವಿನ ಬ್ಯಾಂಕುಗಳನ್ನು ಮಾಡುವುದರ ಮೂಲಕ ಗೋವುಗಳ ರಕ್ಷಣೆ ಮಾಡತಕ್ಕ ಪ್ರಯತ್ನವನ್ನು ಸರ್ಕಾರ ಮಾಡಿದೆ. ಈ ರೀತಿಯ ಬರ ಅಥವಾ ಪ್ರಕೃತಿ ವಿಕೋಪ ಏನಿದೆ ಅದು ಕೇವಲ ಕರ್ನಾಟಕಕ್ಕೆ ತಟ್ಟಿರುವಂಥದ್ದಲ್ಲ. ತಮಿಳುನಾಡಿನಲ್ಲಿಯೂ ಇವತ್ತು ಬರ ಕಾಣುತ್ತಿದ್ದೇವೆ. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಈ ರಾಜ್ಯಗಳಲ್ಲೂ ಬರ ಕಾಣುತ್ತಿದ್ದೇವೆ. ನನ್ನ ದೃಷ್ಟಿಕೋನದಲ್ಲಿ ಬರ ಎಂದರೆ ಮಳೆ ರಾಯನ ಕೃಪೆ ಇಲ್ಲದಿರುವಂಥದ್ದು. ನಾನು ಚಿಕ್ಕ ಹುಡುಗನಾಗಿದ್ದಾಗ ನನ್ನ ತಾಲ್ಲೂಕಿನಲ್ಲಿ 760 ರಿಂದ 840 ಮಿಲಿ ಮೀಟರ್ ನಷ್ಟು ಮಳೆ ಬೀಳುತ್ತಿತ್ತು. ಮಧುಗಿರಿ, ಕೊರಟಗೆರೆ, ಪಾವಗಡಗಳಲ್ಲಿ ಜೀವಂತ ನದಿಗಳಿತ್ತು. ನಂದಿ ಬೆಟ್ಟದಿಂದ ಹುಟ್ಟುವಂತಹ ಉತ್ತರ ಪಿನಾಕಿನಿ ನದಿ ಗೌರಿಬಿದನೂರಿನ ಮೂಲಕ ಹಿಂದೂಪುರ, ಪಾವಗಡಕ್ಕೆ ಹರಿಯುತ್ತಿತ್ತು, ಇದು 365 ದಿನಗಳ ಕಾಲ ಹರಿಯುತ್ತಿದ್ದುದನ್ನು ನಾವು ನೋಡಿದ್ದೇವೆ. ಇವತ್ತು ಒಂದು ಕಡೆ, ಕೃಷ್ಣಾ, ಭೀಮ, ಘಟಪ್ರಭಾ, ತುಂಗ, ಭದ್ರಾ, ಕಾವೇರಿ ಈ ಎಲ್ಲಾ

ನದಿಗಳು ಒಣಗಿ ಜೀವಂತ ನದಿ ಎಂಬ ಹೆಸರನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದು ತಲುಪಿವೆ. ನಾವು ಚಿಕ್ಕವರಿದ್ದಾಗ ನಮ್ಮ ಹಳ್ಳಿಯಲ್ಲಿ ಮಣಿಮುಕ್ತಿ ಎನ್ನುವ ಹಳ್ಳ ಇತ್ತು. ಅದನ್ನು ಮಣಿಮುಕ್ತಿ ನದಿ ಎಂದು ಕರೆಯುತ್ತಿದ್ದರು. ನಾನು 2007-08ರಲ್ಲಿ ಸುಮಾರು ರೂ.37 ಲಕ್ಷ ಖರ್ಚು ಮಾಡಿಸಿ, ಸುಮಾರು 200 ಮೀಟರ್ ಉದ್ದ, 3 ಮೀಟರ್ ಅಗಲ ಮತ್ತು 32 ಅಡಿ ಆಳದಲ್ಲಿರುವ ಎಲ್ಲಾ ಮರಳನ್ನು ತೆಗೆದು ಅದಕ್ಕೆ ಒಂದು vented dam ಹಾಕಿ, ಅದಕ್ಕೆ ತಾಗಿಕೊಂಡಂತೆ ಒಂದು ರಸ್ತೆಯನ್ನು ಮಾಡಿಸಿದೆ. ಇದೇರೀತಿ ನವಿಲುಮಡಿಕೆ ಎನ್ನುವ ಕಡೆ vented dam ಕಟ್ಟುವುದಕ್ಕೆ ಈ ಮೊತ್ತದ ಬಹುಪಾಲು ಹೆಚ್ಚು ಅಂದರೆ ಸುಮಾರು ರೂ.17 ಕೋಟಿ ಖರ್ಚು ಮಾಡಿದ್ದಾರೆ. ಅದು ಬೇರೆ ವಿಚಾರ. ಮಾನ್ಯ ಸಭಾಪತಿಗಳೇ, ಮಳೆ ಬಂದಾಗ ಅಲ್ಲಿ ಸುಮಾರು 30 ಅಡಿ ನೀರು ಇರುತ್ತದೆ. ಇದರಿಂದ 200-250 ಬೋರ್‌ವೆಲ್‌ಗಳು recharge ಆಗಿರುವುದನ್ನು ಆ ಭಾಗದಲ್ಲಿ ನೋಡುತ್ತಿದ್ದೇವೆ. ಆದರೆ ಬರ ಬಂದಿರುವ ಹಿನ್ನೆಲೆಯಲ್ಲಿ, ಒಂದು ಕಡೆ ನದಿಗಳು ಒಣಗುತ್ತಿವೆ, ಇನ್ನೊಂದು ಕಡೆ ಕೆರೆ-ಕುಂಟೆಗಳು ಒಣಗುತ್ತಿವೆ. ಇದರ ಪರಿಣಾಮ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೆ ಬರ ಬಂದಿದೆ. ಪಾವಗಡದ ವೆಂಕಟಾಪುರದ ಹತ್ತಿರ ಇರುವ ಕಾಡಿನಲ್ಲಿ ಸುಮಾರು 3000 ಜಿಂಕೆಗಳಿವೆ. ಈ 3000 ಜಿಂಕೆಗಳಿಗೆ ಇವತ್ತು ತಿನ್ನುವುದಕ್ಕೆ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ. ನಾನು ಒಂದೊಂದು ಸಲ ನನ್ನ ತೋಟಕ್ಕೆ ಹೋದಾಗ ಕಣ್ಣಲ್ಲಿ ನೀರು ಬರುತ್ತದೆ. ಯಾವ ಹಳ್ಳದಲ್ಲಿ ನಾವು 365 ದಿನಗಳ ಕಾಲ ನೀರಿನಲ್ಲಿ ಈಜಾಡುತ್ತಿದ್ದೆವೋ, ಮೀನು ಹಿಡಿಯುತ್ತಿದ್ದೆವೋ, ಏಡಿಗಳನ್ನು ಹಿಡಿಯುತ್ತಿದ್ದೇವೆಯೋ ಅವುಗಳನ್ನು ಇವತ್ತು ಕಾಣುವುದಕ್ಕೆ ಆಗುವುದಿಲ್ಲ. ಏಕೆ ಈ ಸ್ಥಿತಿ ಬಂತು? ಬಹುಶಃ ಬರದ ಹಿನ್ನೆಲೆಯಲ್ಲಿ ನೀರು ಇಲ್ಲದೇ ಇರುವಂಥದ್ದು, ಅದರ ಪರಿಣಾಮ ಆಹಾರದ ಕೊರತೆ, ಮೇವಿನ ಕೊರತೆ, ಉದ್ಯೋಗ ಸೃಷ್ಟಿ ಆಗದೇ ಇರುವಂಥದ್ದು ಆಗಿದೆ.

(ಮುಂದು)

**(734)14-6-2017 MM-BNS 5.40**

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು) ಮುಂದು:-**

ನಾನು jugglery ಗೆ ಹೋಗುವುದಿಲ್ಲ. ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ, ರಾಜ್ಯ ಸರ್ಕಾರ ಎಷ್ಟು ಹಣವನ್ನು ವೆಚ್ಚ ಮಾಡಿದೆ ಎನ್ನುವ ಎಲ್ಲಾ ಮಾಹಿತಿಗಳು ನನ್ನ ಬಳಿ ಇದೆ. ಈಗಾಗಲೇ ಸಾಕಷ್ಟು ಜನರು ಅದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ, ಬಹುಶಃ ಮಂತ್ರಿಗಳೂ ಅದರ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆ. ಆದರೆ ಒಂದು ರೀತಿ ಕೆಸರು ಎರಚಿಕೊಳ್ಳುವುದಕ್ಕೆ ಸೀಮಿತವಾಗುತ್ತೇವೆಯೋ ಅಥವಾ ಈ ಸಮಸ್ಯೆಯ ಬಗ್ಗೆ ಶಾಶ್ವತವಾದಂತಹ ಪರಿಹಾರವನ್ನು ರೂಪಿಸುವುದಕ್ಕೆ ನಾವು ಏನಾದರೂ

ಯೋಚನೆ ಮಾಡುವುದಕ್ಕೆ ಸಾಧ್ಯತೆ ಇದೆಯೇ? ಇಲ್ಲಿ National Disaster Response Force/Fund (NDRF)ಅಂತ ಇದೆ. ಅದೇ ರೀತಿಯಲ್ಲಿ State Disaster Response Fund (SDRF) ಎಂದು ರಾಜ್ಯಕ್ಕೆ ಸಂಬಂಧಪಟ್ಟದ್ದು ಇದೆ. ಆಗಲೇ ಹೇಳಿದ ಹಾಗೆ ಅನೇಕ ರಾಜ್ಯಗಳಲ್ಲಿ ಈ ಸ್ಥಿತಿ ಇರಬೇಕಾದರೆ ಕೇವಲ ತೇಪೆ ಹಾಕುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಬಹುಶಃ ರಾಷ್ಟ್ರವೇ ಬೇರೆ ರೀತಿಯಲ್ಲಿ ಚಿಂತನೆ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಶಾಶ್ವತವಾದಂತಹ ಪರಿಹಾರವನ್ನು ನೋಡುವುದಕ್ಕೆ ಸಾಧ್ಯತೆ ಇದೆ. ಇಲ್ಲದಿದ್ದರೆ ಪ್ರತಿ ಅಧಿವೇಶನದಲ್ಲಿಯೂ ನಮ್ಮ ರಾಜ್ಯದಲ್ಲಿ ಬರ ಇದೆ, ನಮ್ಮ ರಾಜ್ಯದಲ್ಲಿ ಎಲ್ಲೋ ಒಂದು ಕಡೆ ಪ್ರವಾಹ ಬಂದಿದೆ ಅದಕ್ಕೋಸ್ಕರ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಅದರಲ್ಲಿ ಎಷ್ಟು ಭ್ರಷ್ಟಾಚಾರವಾಗಿದೆ, ಎಷ್ಟು ಅಧಿಕಾರಿಗಳು, ರಾಜಕಾರಣಿಗಳು ಏನು ಮಾಡಿದ್ದಾರೆ ಇಷ್ಟರಲ್ಲಿಯೇ ನಾವು ಸೀಮಿತವಾಗುವುದಿದೆ. ನಾನು ಆಗಲೇ ಹೇಳಿದ ಹಾಗೆ;

> *"The National Disaster Response Force (NDRF) is a specialised force constituted for the purpose of specialist response to a threatening disaster situation or disaster under the Disaster Management Act, 2005. The Apex Body for Disaster Management in India is the National Disaster Management Authority (NDMA). The Chairman of the NDMA is the Prime Minister."*

ಮಾನ್ಯ ಈಶ್ವರಪ್ಪರವರೆ, ದಯವಿಟ್ಟು ಈ ಕಡೆ ಸ್ವಲ್ಪ ಗಮನಹರಿಸಿ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಮಾನ್ಯ ಉಗ್ರಪ್ಪರವರೆ, ತಮ್ಮ ವಿಚಾರವನ್ನೇ ಮಾತನಾಡುತ್ತಿದ್ದೆ.

**ಶ್ರೀ ಹೆಚ್. ಎಂ. ರೇವಣ್ಣ:–** ಮಾನ್ಯ ಈಶ್ವರಪ್ಪರವರೇ, ನಮ್ಮ ವಿಚಾರವನ್ನು ನೀವು ಮಾತನಾಡುತ್ತೀರಾ? ಹಾಗಾದರೆ ಇದರಲ್ಲಿ ಏನೋ ಇದೆ.

**Sri V.S.UGRAPPA**:- The Apex Body for Disaster Management in India is the National Disaster Management Authority (NDMA) which

is headed by none other than the Prime Minister. ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. There is a provision which reads as follows:

> *"when calamities of severe nature occur, the Central Government is responsible for providing aid and assistance to the affected State…."*

ಹೀಗೆಂದು the Disaster Management Act, 2005 ಇದು ಪಾರ್ಲಿಮೆಂಟ್‌ನಲ್ಲಿ ಮಾಡಿರುವ ಕಾನೂನಾಗಿದೆ. ಇದರ ಜೊತೆಗೆ, State Disaster Response Fund (SDRF) Rules ಇದೆ.

> *"The State Disaster Response Fund (SDRF) is a fund constituted under Section 48(1)(a) of the Disaster Management Act, 2005"*

ಇದರಲ್ಲಿ SDRF Fund ಅನ್ನು ಯಾರು ಕೊಡುತ್ತಾರೆ ಎಂದರೆ, ಶೇ.25 ರಷ್ಟು ರಾಜ್ಯ ಸರ್ಕಾರ ಮತ್ತು ಶೇ.75ರಷ್ಟು ಕೇಂದ್ರ ಸರ್ಕಾರ ಕೊಡುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಕೊಡುವ ಹಣ ಒಂದು ಕಡೆಯಾದರೆ, NDRF Fund ಅನ್ನು ಶೇ.100ರಷ್ಟು ಕೇಂದ್ರ ಸರ್ಕಾರ ಕೊಡುತ್ತದೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲಿ SDRF ನ ಬಗ್ಗೆ, what is the role of SDRF? Union Government issue ಮಾಡಿರತಕ್ಕಂತಹ ಆದೇಶದ ರೀತ್ಯಾ ಐದು ವರ್ಷಕ್ಕೆ 2015–16 ರಿಂದ 2019–20ಕ್ಕೆ ಒಂದಿಷ್ಟು ಫಂಡ್‌ಗೆ ರಾಜ್ಯ ಸರ್ಕಾರ ಒಂದಿಷ್ಟು ratio ನಲ್ಲಿ ಮತ್ತು ಕೇಂದ್ರಸರ್ಕಾರ ಒಂದಿಷ್ಟು ratio ನಲ್ಲಿ ಕೊಡಬೇಕು ಎಂದು ಇದೆ. Total Fund ನಲ್ಲಿ, clause 3(i) ನಲ್ಲಿ ಹೇಳುವುದೇನೆಂದರೆ,

> *"The SDRF shall be used only for meeting the expenditure for providing immediate relief….."*

Not for permanent relief. These SDRF Rules were framed by the Union Government not by the State Government. So also the NDRF Rules. The rules framed by the Union Government says that SDRF fund has to be used for immediate purpose and not

for permanent purpose. ಎಲ್ಲಿ ಈ ರೀತಿಯ natural disaster ಅಥವಾ calamity ಆಗಿರುವಂಥದ್ದು ಇದೆ ಇದರಲ್ಲಿ ಯಾವ ಫಂಡ್ ಅನ್ನು ಐದು ವರ್ಷಕ್ಕೆ ಮಾಡಿದ್ದಾರೆ, further, ಸದರಿ ಕಲಂನ sub-clause(ii)ನಲ್ಲಿ ಹೇಳುವುದೇನೆಂದರೆ;

> *"A State Government may use upto 10 per cent of the funds available under the SDRF for providing immediate relief to the victims of natural disasters that they consider to be 'disasters'..."*

ಎಂದು ಹೇಳುತ್ತಾರೆ. Entire SDRF fund ಅನ್ನು ರಾಜ್ಯ ಸರ್ಕಾರ ಬಳಸುವುದಕ್ಕೆ ಆಗುವುದಿಲ್ಲ. ಪ್ರತಿವರ್ಷವೂ only 10% has to be used. ಈ ಸ್ಥಿತಿ ಇರಬೇಕಾದರೆ, Norms ಪ್ರಕಾರ ಇರುವ ಹಿನ್ನೆಲೆಯಲ್ಲಿ ಯಾರಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಬೇಕು ಎಂಬುದನ್ನು ಪ್ರಕೃತಿ ವಿಕೋಪದಿಂದ ಆದಂತಹ ಹಾನಿಗೆ ಕೇಂದ್ರ ಸರ್ಕಾರದಿಂದ ದಿನಾಂಕ 8-4-2015ರಂದು ಹೊರಡಿಸಿರುವ NDRF and SDRF ಮಾರ್ಗಸೂಚಿಯ ಪ್ರಕಾರ ಪರಿಹಾರಗಳನ್ನು ನೀಡಬೇಕು.

ಮಾನವನ ಪ್ರಾಣ ಹಾನಿಯಾದರೆ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡಬೇಕು. ಅಂಗವಿಕಲತೆ ಶೇ.40 ರಿಂದ 60 ಆದರೆ 59,100 ರೂಪಾಯಿಗಳನ್ನು ಕೊಡಬೇಕು. ಶೇ.60ಕ್ಕಿಂತ ಹೆಚ್ಚು ಅಂಗವಿಕಲತೆಯಾದರೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು. ಇದೇ ರೀತಿ ಮನೆ ಕಳೆದುಕೊಂಡ ಕುಟುಂಬಗಳಿಗೆ ಪಾತ್ರೆ ಇನ್ನಿತರ ಸಾಮಾಗ್ರಿಗಳನ್ನು ಕಳೆದುಕೊಂಡವರಿಗೆ 1800 ರಿಂದ 2000 ರೂಪಾಯಿಗಳನ್ನು ಕೊಡಬೇಕು ಎಂದು ಹೇಳುತ್ತಾರೆ. ಇದರ ಜೊತೆಗೆ ಎಲ್ಲವನ್ನೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ನಾನು ಆಗಲೇ ಹೇಳಿದ್ದೇನೆ. ಅವರಿಗೆ ಯಾವ ratio ನಲ್ಲಿ ಪರಿಹಾರವನ್ನು ಕೊಡಬೇಕು? ಮಳೆಯಾಶ್ರಿತ ಬೆಳೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರತಿ ಹೆಕ್ಟೇರ್‌ಗೆ 6,800 ರೂಪಾಯಿಗಳನ್ನು ಕೊಡಬೇಕೆಂದು ರೂಲ್ಸ್ ಹೇಳುತ್ತದೆ. ನೀರಾವರಿ ಆಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ಕನಿಷ್ಟ 1000 ರೂಪಾಯಿಗಳು, ಗರಿಷ್ಠ 13,500 ರೂಪಾಯಿಗಳನ್ನು ಕೊಡಬೇಕೆಂದು, ಬಹುವಾರ್ಷಿಕ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ಕನಿಷ್ಟ 2000 ರೂಪಾಯಿಗಳು ಗರಿಷ್ಠ 18,000 ರೂಪಾಯಿಗಳನ್ನು ಕೊಡಬೇಕೆಂದು ರೂಲ್ಸ್‌ನಲ್ಲಿ ಇದೆ. ಅದೇ ರೀತಿ ದೊಡ್ಡ ರೈತರಿಗೆ ಪ್ರತಿ ಹೆಕ್ಟೇರ್‌ಗೆ ಮಳೆಯಾಶ್ರಿತ ಬೆಳೆಯಾದರೆ 6,800 ರೂಪಾಯಿಗಳು ನೀರಾವರಿ ಆಶ್ರಿತ

ಬೆಳೆಯಾದರೆ 13,500 ರೂಪಾಯಿಗಳು, ಬಹುವಾರ್ಷಿಕ ಬೆಳೆಯಾದರೆ 18,000 ರೂಪಾಯಿಗಳು ಎನ್ನುವುದು ನಿಯಮಾವಳಿಗಳಲ್ಲಿ ಇದೆ. (ಮುಂದು)

(735)14-6-2017/5.50/ಡಿಎಸ್-ಬಿಎನ್ಎಸ್

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ಅದೇ ರೀತಿಯಾಗಿ ಎಮ್ಮೆ, ಹಸು ಸತ್ತರೆ ಸುಮಾರು 30,000 ರೂಪಾಯಿ ಪರಿಹಾರ ನೀಡಬೇಕು. ಎತ್ತು, ಕೋಣ ಸತ್ತರೆ ಸುಮಾರು 25,000 ರೂಪಾಯಿ ಕೊಡಬೇಕು. ಕರು, ಕತ್ತೆ, ಇನ್ನಿತರ ಪ್ರಾಣಿಗಳು ಸತ್ತರೆ 16,000 ರೂಪಾಯಿ ಕೊಡಬೇಕು. ಕುರಿ, ಮೇಕೆ ಸತ್ತರೆ 3,000 ರೂಪಾಯಿ ಕೊಡಬೇಕು. ಕೋಳಿ ಸತ್ತರೆ 50 ರೂಪಾಯಿ, ಹೀಗೆ ಪರಿಹಾರವನ್ನು ಕೊಡಬೇಕೆಂದು ಇದೆ. ರಾಜ್ಯದಲ್ಲಿ ಈ ರೀತಿಯ ಪರಿಸ್ಥಿತಿ ಇರಬೇಕಾದರೆ ಕೇಂದ್ರ ಸರ್ಕಾರದಿಂದ ಒಂದಿಷ್ಟು ಹಣವನ್ನು ಕೊಟ್ಟಿದ್ದಾರೆ, ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. 2016-17ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ National Disaster Response Fund (NDRF) ನಲ್ಲಿ ಬಂದಿರುವಂತಹ ಪಾಲಿನ ಹಣ 217.5 ಕೋಟಿ ರೂಪಾಯಿಗಳು, ರಾಜ್ಯದ ಪಾಲಿನ ಹಣ 72.5 ಕೋಟಿ ರೂಪಾಯಿಗಳು, ಒಟ್ಟು 290 ಕೋಟಿ ರೂಪಾಯಿಗಳು. ರಾಜ್ಯ ಸರ್ಕಾರ ಇದುವರೆವಿಗೂ ಒಟ್ಟು 2292.5 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಆದರೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ Memorandum ನ್ನು ಕೊಟ್ಟು 2016ನೇ ಸಾಲಿನ ಮುಂಗಾರು ಬರ ಪರಿಸ್ಥಿತಿಯಿಂದ 17,190 ಕೋಟಿ ರೂಪಾಯಿಗಳ ನಷ್ಟ ಆಗಿದೆ, ಅದೇ ರೀತಿ ಪ್ರವಾಹ ಪರಿಸ್ಥಿತಿಯಿಂದ ಬೀದರ್, ಗುಲ್ಬರ್ಗಾ, ಬೆಳಗಾವಿ, ರಾಯಚೂರು, ಯಾದಗಿರಿಯಲ್ಲಿ 2480.6 ಕೋಟಿ ರೂಪಾಯಿಗಳ ನಷ್ಟ ಆಗಿದೆ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದಾಗ ಅಷ್ಟು ಹಣವನ್ನು ಕೊಡುವುದಕ್ಕಾಗಿಲ್ಲ. ಆದರೆ ಈ ಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಬರ ಈ ವರ್ಷಕ್ಕೆ ಸೀಮಿತವಾಗಿರುವಂಥದ್ದಲ್ಲ. 2011-12ನೇ ಸಾಲಿನಲ್ಲಿ 123 ತಾಲ್ಲೂಕುಗಳಲ್ಲಿ ಬರ ಇತ್ತು. 2012-13ನೇ ಸಾಲಿನಲ್ಲಿ 153 ತಾಲ್ಲೂಕುಗಳಲ್ಲಿತ್ತು. 2013-14ನೇ ಸಾಲಿನಲ್ಲಿ 125 ತಾಲ್ಲೂಕುಗಳಲ್ಲಿತ್ತು. 2014-15ನೇ ಸಾಲಿನಲ್ಲಿ 35 ತಾಲ್ಲೂಕುಗಳಲ್ಲಿತ್ತು. 2015-16ನೇ ಸಾಲಿನಲ್ಲಿ 136 ತಾಲ್ಲೂಕುಗಳಲ್ಲಿತ್ತು. 2016-17ನೇ ಸಾಲಿನಲ್ಲಿ 160 ತಾಲ್ಲೂಕುಗಳಲ್ಲಿ ಬರಗಾಲ ಇದೆ. ಆದರೆ ಮುಂದಿನ ವರ್ಷ ಇದೇ ಸ್ಥಿತಿಯಾದರೆ ನನಗೇನು ಆಶ್ಚರ್ಯ ಕಾಣುವುದಿಲ್ಲ. ಇವತ್ತು ರಾಜ್ಯದ 176 ತಾಲ್ಲೂಕುಗಳಲ್ಲಿ ಅಥವಾ ರಾಜ್ಯದ 30 ಜಿಲ್ಲೆಗಳು ಬರಪೀಡಿತ ಪ್ರದೇಶಗಳು ಎಂದು ಹೇಳುವಂತಹ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಇದು ಬರೀ ನಮ್ಮ ರಾಜ್ಯಕ್ಕೆ ಸೀಮಿತವಾಗಿರುವಂಥದ್ದಲ್ಲ. ರಾಷ್ಟ್ರದ ಬಹುತೇಕ ರಾಜ್ಯಗಳಲ್ಲಿ ಇವತ್ತು

ಬರದ ಛಾಯೆ ಕಾಣುತ್ತಿದೆ. ನನಗನಿಸುವುದೇನೆಂದರೆ, ಒಂದು ಕಡೆ ನಾವು ಹೇಳುತ್ತೇವೆ, ಡಾ:ಮನಮೋಹನ್‌ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ರಾಷ್ಟ್ರದ ಎಲ್ಲಾ ರೈತರ ಸಾಲವಾದ ಸುಮಾರು 73,000 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿರತಕ್ಕಂಥದ್ದು ಇತಿಹಾಸದ ಕಾಲಘಟ್ಟದಲ್ಲಿ ನೋಡುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಬಯಸುತ್ತೇನೆ. ಈ ರೀತಿಯ ಬರ ಪರಿಸ್ಥಿತಿಗಳನ್ನು ನಿರ್ವಹಣೆ ಮಾಡತಕ್ಕಂಥ ದೃಷ್ಟಿಯಿಂದ ಉದ್ಯೋಗ ಖಾತ್ರಿ ಯೋಜನೆಯನ್ನು ಸೃಷ್ಟಿ ಮಾಡಿ, ಪ್ರತಿ ವರ್ಷ ಸುಮಾರು 41,000 ಕೋಟಿ ರೂಪಾಯಿಗಳ ವೆಚ್ಚ ಮಾಡಿರುವಂಥದ್ದನ್ನು ನಾವು ಕಾಣುತ್ತೇವೆ.

ಮಾನ್ಯ ಸಭಾಪತಿಯವರೇ, ಒಂದು ಕಡೆ ರೈತರು ಬರ ಮತ್ತು ಇನ್ನಿತರ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪಂಜಾಬ್, ರಾಜಸ್ಥಾನ, ಹರಿಯಾಣ, ಗುಜರಾತ್ ರಾಜ್ಯಗಳಲ್ಲಿ ರೈತರು ಗಲಾಟೆ ಮಾಡುತ್ತಾರೆ, ಮಧ್ಯಪ್ರದೇಶದಲ್ಲಿ ರೈತರು ಬೀದಿಗಿಳಿದು ಫೈರ್ರಿಂಗ್ ಆಗಿ ರೈತರು ಸಾಯುತ್ತಾರೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಅದೇ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲೂ ಇದೆ. ಹೀಗೆ ಇರಬೇಕಾದರೆ ನಾವು ರಾಜಕೀಯ ಕಾರಣಗಳಿಗೋ, ಮತ್ತೊಂದು ಕಾರಣಗಳಿಗೋ ರಾಜ್ಯ ಸರ್ಕಾರ ಕೊಡಬೇಕೆಂದು ಅವರು ಹೇಳುತ್ತಾರೆ, ಕೇಂದ್ರ ಸರ್ಕಾರ ಕೊಡಬೇಕೆಂದು ನಾವು ಹೇಳುತ್ತೇವೆ. ಆದರೆ ಕೇಂದ್ರದ ರಿಸರ್ವ್ ಬ್ಯಾಂಕ್‌ನ ಗವರ್ನರ್‌ರವರು ಯಾವುದೇ ಕಾರಣಕ್ಕೂ ಸಬ್ಸಿಡಿ ಕೊಡುವುದಾಗಲಿ, ಸಾಲ ಮನ್ನಾ ಮಾಡತಕ್ಕಂಥದ್ದಾಗಲಿ ಮಾಡಿದರೆ ಈ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಅತ್ಯಂತ ದುಷ್ಪರಿಣಾಮ ಬೀರುತ್ತದೆಂದು ಹೇಳಿದ್ದಾರೆ. ಹಣಕಾಸು ಸಚಿವರು nothing doing, ನಾವು ಯಾವುದೇ ಕಾರಣಕ್ಕೂ ರೈತರ ಸಾಲ ಮನ್ನಾ ಮಾಡುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಜನಾರ್ಧನ ಪೂಜಾರಿಯವರು ಕೂಡ ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಅವರು ಏನು ಹೇಳಿದ್ದಾರೆ ಎಂಬುದನ್ನು ತಮಗೆ ಅವಕಾಶ ಕೊಟ್ಟಾಗ ಹೇಳಿ. ನಾನು ಅದನ್ನು ಹೇಳಬೇಡಿ ಎಂದು ಹೇಳಲಿಲ್ಲ.

ಮಾನ್ಯ ಸಭಾಪತಿಯವರೆ, ಇದು ಹೇಗಿದೆ ಎಂದರೆ, ನಾವು ಅವರ ಮೇಲೆ ಬೆರಳು ತೋರಿಸುತ್ತೇವೆ, ಅವರು ನಮ್ಮ ಮೇಲೆ ಬೆರಳು ತೋರಿಸುತ್ತಾರೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಕುಳಿತಿರುವಂತಹ ಜಾಗದಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿ ಕುಳಿತಿದ್ದಂತಹ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ:31–12–2009 ರಲ್ಲಿ, ನಾನು ಇದೇ ರೀತಿ ಬರದ ಬಗ್ಗೆ ಪ್ರಸ್ತಾಪ ಮಾಡಿದಾಗ ಅಂದಿನ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಏನು ಹೇಳಿದ್ದಾರೆಂದು ನಾನು ಓದುವುದಕ್ಕೆ ಬಯಸುತ್ತೇನೆ.

*"ಮಾನ್ಯ ಸಭಾಪತಿಗಳೇ, ಬಹಳ ಉತ್ತಮವಾದಂತಹ ಚರ್ಚೆ ನಡೆದಿದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಉಗ್ರಪ್ಪನವರು ಹೇಳಿದ ಮಾತು ಸತ್ಯವಾದಲ್ಲಿ ನಾನು ಅವರನ್ನು ಕರೆದುಕೊಂಡು ನಾಳೆ ಆ ಜಾಗಕ್ಕೆ ಹೋಗುತ್ತೇನೆ ಎನ್ನುವ ಮಾತನ್ನು ಹೇಳುತ್ತಾ, ಈಗ ನಾವೆಲ್ಲರೂ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಮಾತನಾಡುತ್ತೇವೆ, ರೈತರ ಸಾಲವನ್ನು ಮನ್ನಾ ಮಾಡಲು ನಾನು ತಯಾರಿದ್ದೇನೆ, ಆದರೆ ಅದಕ್ಕೆ ಹಣವನ್ನು ಎಲ್ಲಿಂದ ತರುವುದು? ನನಗೆ ಹಣವನ್ನು ಮುದ್ರಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡಿಲ್ಲ"*

ಇದನ್ನು ಮುಖ್ಯಮಂತ್ರಿಗಳಾಗಿ ಮಾನ್ಯ ಯಡಿಯೂರಪ್ಪನವರು ದಿನಾಂಕ:31–12–2009 ರಲ್ಲಿ ಮಾಡಿರುವ ಭಾಷಣ. ಇದೇ ಸದನದಲ್ಲಿ ನಾನು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿದ್ದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಇಲ್ಲಿ ಇದ್ದರು. ಮುಂದುವರೆದು ಅವರು ಏನು ಹೇಳುತ್ತಾರೆಂದರೆ,

*"ನನಗೆ ಹಣವನ್ನು ಮುದ್ರಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡಿಲ್ಲ, ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರ ಹಣವನ್ನು ನೀಡದೆ, ಹಣವನ್ನು ಎಲ್ಲಿಂದ ತರಬೇಕು ಎನ್ನುವುದನ್ನು ಹೇಳಿ, ನಾನು ಕೂಡ ವಿರೋಧ ಪಕ್ಷದ ನಾಯಕನಾಗಿದ್ದಂತಹ ಸಂದರ್ಭದಲ್ಲಿ ಈ ರೀತಿಯ ಮಾತನ್ನಾಡಿದ್ದೇನೆ. ರೈತರ ಸಾಲ ಮನ್ನಾ ಮಾಡಲು ನಾನು ತಯಾರಿದ್ದೇನೆ, ಮುಂದಿನ ವರ್ಷ ಬೇರೆ ಯಾವುದೇ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ರೈತರ ಸಾಲ ಮನ್ನಾ ಮಾಡೋಣವೆಂದು ನಾವೆಲ್ಲರೂ ಸೇರಿ ತೀರ್ಮಾನವನ್ನು ಮಾಡೋಣ. ಮುಂದಿನ ವರ್ಷ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ರಸ್ತೆ, ದೀಪ, ಯಾವುದೂ ಬೇಡ. ರೈತರ ಸಾಲ ಮನ್ನಾ ಮಾಡೋಣ ಎಂದಲ್ಲಿ ನಾನು ಅದಕ್ಕೆ ಸಿದ್ಧನಿದ್ದೇನೆ. ಎಲ್ಲರೂ ಮತವನ್ನು ಗಳಿಸಲು ರೈತರ ಸಾಲ ಮನ್ನಾ ಮಾಡುತ್ತೇವೆಂದು ಭಾಷಣ ಮಾಡಿದ ಹಾಗೆ ನಾನು ಕೂಡ ಮತವನ್ನು ಗಳಿಸಲು ಭಾಷಣವನ್ನು ಮಾಡಿದ್ದೇನೆ. ಇದು ಆಗದಿರುವ ವಿಚಾರವೆಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದ್ದೇನೆ. ಇವತ್ತಿನ ಇತಿಮಿತಿಯಲ್ಲಿ ನಿಮಗೆ ಏನು ಬೇಕು ರೈತರ ಹೊಲಕ್ಕೆ ನೀರು ಬೇಕು, ಆತ ಬೆಳೆದಂತಹ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಬೇಕು, ಬಿತ್ತನೆಗೆ*

*ಉತ್ತಮ ಬೀಜಗಳು ಬೇಕು, ಬ್ಯಾಂಕ್ ಸಾಲ ಸವಲತ್ತುಗಳು ಬೇಕು. ಅದನ್ನು ಒದಗಿಸಲು ಸರ್ಕಾರ ಸಿದ್ಧವಿದೆ. ಎಲ್ಲೋ ಒಂದು ಕಡೆ ತಪ್ಪಾಗಿದೆ. ಅದನ್ನು ನಾವು ನೀವೆಲ್ಲರೂ ತಿದ್ದಿಕೊಂಡು ಜನರಿಗೆ ವಿಶ್ವಾಸ ಬರತಕ್ಕಂಥ ರೀತಿಯಲ್ಲಿ ಮಾತನಾಡಬೇಕೇ ಹೊರತು ನಾನಾಗಲಿ, ನೀವಾಗಲಿ ಆಗದಿರುವ ವಿಚಾರಗಳನ್ನು ಮಾತನಾಡಿದರೆ ಸರಿ ಹೋಗುವುದಿಲ್ಲ, ಈ ವಿಚಾರದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ನೆರವಿಗೆ ಬರಲಿ, ನಾವೆಲ್ಲರೂ ನಿಯೋಗ ಹೋಗೋಣ. ಇನ್ನೂ ಹೆಚ್ಚು ಹಣವನ್ನು ಅವರು ನೀಡಿದ್ದಲ್ಲಿ ರಾಜ್ಯಕ್ಕೆ ಏನು ಬೇಕಾದರೂ ಮಾಡಲು ನಾನು ಸಿದ್ಧನಿದ್ದೇನೆ."*

ಮಾನ್ಯ ಈಶ್ವರಪ್ಪನವರೆ, ಇದು ತಮ್ಮ ನಾಯಕರು ಹೇಳಿರುವಂಥದ್ದು. ತಮ್ಮ ನಾಯಕರು ಹೇಳಿರುವಂಥದ್ದು. ಕೊನೆಗೆ ಅವರು ಅಪೀಲ್ ಮಾಡಿಕೊಳ್ಳುತ್ತಾರೆ. (ಮುಂದು)

(736) 14–06–2017/ 6–00/ ಕೆಹೆಚ್/ಕೆಎಸ್ (ಎಸ್‌ಪಿ)

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು):–** ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವನ್ನು ಪಡೆಯುವುದಕ್ಕೆ ಎಲ್ಲರೂ ಸಹ ಪೂರ್ಣ ಸಹಕಾರವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ. ನನ್ನಲ್ಲಿರುವ ಮಾಹಿತಿಯನ್ನು ಒದಗಿಸುತ್ತಿದ್ದೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಈ ರೀತಿಯ ಪರಿಸ್ಥಿತಿ ಇರಬೇಕಾದರೆ, ಒಂದು ಕಡೆ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಇರಬೇಕಾದರೆ 29ನೇ ಅಕ್ಟೋಬರ್ 2009 ರಲ್ಲಿ ಬಿಜಾಪುರ, ಬಾಗಲಕೋಟೆ, ರಾಯಚೂರು ಜಿಲ್ಲೆಗಳಲ್ಲಿ ಪ್ರವಾಹ ಬಂದಂತಹ ಸಂದರ್ಭದಲ್ಲಿ ಆಗಿನ ಪ್ರಧಾನ ಮಂತ್ರಿಗಳಾಗಿದಂತಹ ಡಾ॥ ಮನಮೋಹನ್ ಸಿಂಗ್‌ರವರು ಮತ್ತು ಆಗಿನ ಯು.ಪಿ.ಎ Chairman ಆಗಿದ್ದಂತಹ ಶ್ರೀಮತಿ ಸೋನಿಯ ಗಾಂಧಿಯವರು ವೈಮಾನಿಕ ಸಮೀಕ್ಷೆಯನ್ನು ಮಾಡಿ, ಸ್ಥಳದಲ್ಲಿಯೇ ಒಂದೂವರೆ ಸಾವಿರ ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿದ್ದರು. ಚಿಕ್ಕಮಗಳೂರು, ಬಾಗಲಕೋಟೆ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ಜಾಸ್ತಿಯಾಗಿದ್ದಾಗ ಪ್ರಧಾನ ಮಂತ್ರಿಯವರು ಮೂರು ಸಾವಿರ ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಮಹಾರಾಷ್ಟ್ರದಲ್ಲೂ ಕೂಡ under the guidelines of National Disaster Response Fund (NDRF), Vidarbha fund ಮತ್ತು Vidarbha package ಎಂದು ಕೊಟ್ಟಿದ್ದರು. ಎನ್‌ಡಿಆರ್‌ಎಫ್ ನ ಪೂರ್ಣ ಅನುದಾನ ಇರುವಂತಹದ್ದು, ಇವತ್ತಿನ ದಿವಸ ಅದು ಕೇಂದ್ರ ಸರ್ಕಾರದ ಅನುದಾನ. Whereas in the case of State Disaster Response Fund

(SDRF), ಶೇಕಡಾ 25 ರಷ್ಟು ರಾಜ್ಯ ಸರ್ಕಾರದ ಅನುದಾನ, ಶೇಕಡಾ 75 ರಷ್ಟು ಕೇಂದ್ರ ಸರ್ಕಾರದ ಅನುದಾನ. ಪ್ರತಿ ವರ್ಷ ಕೇಂದ್ರ ಸರ್ಕಾರವು NDRF ನ ಅನುದಾನವನ್ನು ಕೇಂದ್ರ ಸರ್ಕಾರದ ಸುಭದ್ರಿನಲ್ಲಿ ಇರುವಂತಹವರೇ ಇದನ್ನು ನಿಗದಿ ಮಾಡುವಂತಹದ್ದು. SDRF ನ ಅನುದಾನದಲ್ಲಿ ಶೇಕಡಾ 10 ರಷ್ಟು ಮಾತ್ರ ವೆಚ್ಚ ಮಾಡುವುದಕ್ಕೆ ಅವಕಾಶ ಇರುವಂತಹದ್ದು. 2015-16 ರಿಂದ 2019-20 ರವರೆಗೆ SDRF ಗೆ 1527 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿರುವಂತಹದ್ದು. ಆದರೆ ಇದರಲ್ಲೂ 25% has to be contributed by the State Government. ಆದರೆ ಇದರಲ್ಲೂ ರಾಜಕಾರಣ ಯಾವ ರೀತಿಯಲ್ಲಿ ಇದೆ ಎಂದರೆ, ಕರ್ನಾಟಕ ರಾಜ್ಯಕ್ಕೆ 1527 ಕೋಟಿ ರೂಪಾಯಿಗಳು, ಬೇರೆ ರಾಜ್ಯಗಳಾದ ಆಂಧ್ರ ಪ್ರದೇಶಕ್ಕೆ 2430 ಕೋಟಿ ರೂಪಾಯಿಗಳು, ತಮಿಳು ನಾಡು ರಾಜ್ಯಕ್ಕೆ 3751 ಕೋಟಿ ರೂಪಾಯಿಗಳು, ಗುಜಾರಾತ್ ರಾಜ್ಯಕ್ಕೆ 3894 ಕೋಟಿ ರೂಪಾಯಿಗಳು, ಮಹಾರಾಷ್ಟ್ರ ರಾಜ್ಯಕ್ಕೆ 8195 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರವು ನಿಗದಿ ಮಾಡಿತ್ತು. ಇದರ basis ಮೇಲೆ ಶೇಕಡಾ 75 ರಷ್ಟು contribute ಮಾಡುವುದು ಕೇಂದ್ರ ಸರ್ಕಾರ, ಶೇಕಡಾ 25 ರಷ್ಟು contribute ಮಾಡುವುದು ರಾಜ್ಯ ಸರ್ಕಾರ. ಮಹಾರಾಷ್ಟ್ರ ರಾಜ್ಯಕ್ಕೆ 8195 ಕೋಟಿ ರೂಪಾಯಿಗಳು SDRF ನ ಅನುದಾನವನ್ನು ಐದು ವರ್ಷಕ್ಕೆ fix ಮಾಡಬೇಕಾದರೆ, ಯಾವ ಮಾನದಂಡದ ಆಧಾರ ಮೇಲೆ ಕರ್ನಾಟಕ ರಾಜ್ಯಕ್ಕೆ 1527 ಕೋಟಿ ರೂಪಾಯಿಗಳನ್ನು fix ಮಾಡಿದ್ದಾರೆ. ಅದೇ ರೀತಿ ಗುಜಾರಾತ್ ರಾಜ್ಯಕ್ಕೆ 3894 ಕೋಟಿ ರೂಪಾಯಿಗಳಲ್ಲಿ ಶೇಕಡಾ 75 ರಷ್ಟು ಕೇಂದ್ರ ಸರ್ಕಾರದ್ದು. ಶೇಕಡಾ 25 ರಷ್ಟು ರಾಜ್ಯ ಸರ್ಕಾರ contribute ಮಾಡಬೇಕು. ಒಟ್ಟಾರೆ ಅನುದಾನದಲ್ಲಿ ಪ್ರತಿ ವರ್ಷ ವೆಚ್ಚ ಮಾಡುವುದಕ್ಕೆ immediate relief ಶೇಕಡಾ 10 ರಷ್ಟು ಮಾಡುವುದಕ್ಕೆ ಸಾಧ್ಯತೆಯಿದೆ. ಆದರೆ ರಾಜ್ಯ ಸರ್ಕಾರವು ಇವತ್ತಿನ ದಿವಸ ವಿಶೇಷವಾದ ಅನುದಾನವನ್ನು ತಮ್ಮ ಖಜಾನೆಯಲ್ಲಿರುವುದನ್ನು ಬಳಸುವಂತಹದ್ದು ಸಹಜ. ಅದನ್ನು ಮಾಡುತ್ತಿದ್ದಾರೆ. ಆದರೆ ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಳೆದ ವರ್ಷ ಕೇಂದ್ರ ಸರ್ಕಾರದ ಬಗ್ಗೆ ನಾವು ಹೇಳುತ್ತಿದ್ದೇವೆ. 2013-14ನೇ ಸಾಲಿನಲ್ಲಿ 385.4 ಕೋಟಿ ರೂಪಾಯಿಗಳು ಮಾತ್ರ SDRF ಗೆ ಸಂಬಂಧಪಟ್ಟಂತೆ 2014-15ನೇ ಸಾಲಿನಲ್ಲಿ 418 ಕೋಟಿ ರೂಪಾಯಿಗಳು ಬಿಡುಗಡೆಯಾಗಿರುವಂತಹದ್ದು. 2015-16ನೇ ಸಾಲಿನಲ್ಲಿ 1852 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ನಾವು 2066.34 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರುವಂತಹದ್ದು. ಆದರೆ ರಾಜ್ಯದಲ್ಲಿ ಇಷ್ಟೆಲ್ಲ ಭೀಕರತೆ ಇದ್ದರೂ ಕೂಡ ಜನರು ಹಾಹಾಕಾರದಿಂದ ಏಕೆ ಕೂಡಿಲ್ಲವೆಂದರೆ, ನನಗೆ ಕಾಣುವ ಹಾಗೆ ಎರಡು ಪ್ರಮುಖ

ಅಧಿಕೃತ ಪ್ರಕಟಣೆಗಾಗಿ ಅಲ್ಲ

ಕಾರಣಗಳಿವೆ. ರಾಜ್ಯದಲ್ಲಿ ಆಹಾರದ ವಿಚಾರವಾಗಿ ಎಲ್ಲೂ ಸಹ ತೊಂದರೆಯಾಗಿಲ್ಲ. ಏಕೆಂದರೆ "ಅನ್ನ ಭಾಗ್ಯ"ದ ಕಾರ್ಯಕ್ರಮದ ಮೂಲಕ ಪ್ರತಿಯೊಬ್ಬರಿಗೂ ಉಚಿತವಾಗಿ ಅಕ್ಕಿ ಸಿಗುತ್ತಿದೆ. ಇವತ್ತಿನ ದಿವಸ ರಾಜ್ಯದಲ್ಲಿ ಎಲ್ಲ ರಾಸುಗಳಿಗೆ ಅಥವಾ ಜಾನುವಾರುಗಳಿಗೆ fodder ಸಿಗುತ್ತಿದೆ. ಇವತ್ತಿನ ದಿವಸ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಉದ್ಯೋಗಗಳು ಸೃಷ್ಠಿಯಾಗುತ್ತಿವೆ. ಇದಕ್ಕೆ ಸೀಮಿತವಾದರೆ ಮುಂಬರುವ ದಿನಗಳಲ್ಲಿ ನೀರು ಸಿಗದೇ ಇರುವಂತಹ ಪರಿಸ್ಥಿತಿ ಬಂದಾಗ ನಮ್ಮ ಮಕ್ಕಳು, ಮೊಮ್ಮಕ್ಕಳು ನಮ್ಮ ಮೇಲೆ ಶಾಪ ಹಾಕುತ್ತಾರೆ ಎಂದು ನನಗನಿಸುತ್ತದೆ. ನಮ್ಮ ರಾಜ್ಯದಲ್ಲಿ ವರ್ಷಕ್ಕೆ Cauvery Basin ಇರಬಹುದು. Krishna Basin ಇರಬಹುದು. Godavari Basin ಇರಬಹುದು. Pinakini Basin ಇರಬಹುದು. Western Ghats ಇರಬಹುದು. 4000 ಟಿ.ಎಂ.ಸಿ ನೀರು ಲಭ್ಯವಿದೆ. ಇದರಲ್ಲಿ ನಾವು ಬಳಕೆ ಮಾಡಿಕೊಳ್ಳುವಂಥದ್ದು ಎಷ್ಟೆಂದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಕೇವಲ 2000 ಟಿ.ಎಂ.ಸಿ ನೀರನ್ನು ಇಲ್ಲಿಯವರೆಗೂ ನಾವು ಬಳಕೆ ಮಾಡಿಕೊಂಡಿರುವಂತಹದ್ದು. ಇನ್ನು 2000 ಟಿ.ಎಂ.ಸಿ ನೀರು ಬೇರೆ ಬೇರೆ ರಾಜ್ಯಗಳಿಗೋ ಅಥವಾ ಸಮುದ್ರದ ಪಾಲಾಗುತ್ತಿದೆ. ಹಾಗಾಗಿ ನಾನು ಇಷ್ಟೆ ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಈಗ ತೆಪೆ ಹಾಕುವಂತಹ ಕೆಲಸವನ್ನು, ಕೇವಲ ಆಯಾ ವರ್ಷಕ್ಕೆ ಬರ ಪೀಡಿತ ಅಥವಾ floods ಬಂದಿದೆ ಅದಕ್ಕೆ ಪರಿಹಾರವನ್ನು ಕೊಡಬೇಕು. To some extent ಇದನ್ನು ಸರಿ ಎಂದು ಹೇಳುತ್ತೇನೆ. ಶಾಶ್ವತವಾದಂತಹ ಪರಿಹಾರವನ್ನು ನೀಡಬೇಕೆನ್ನುವ ಹಾಗಿದ್ದರೆ, ultimately ಸ್ಪಷ್ಟವಾದಂತಹ National Water Policy ಮತ್ತು National Disaster Policy ಅನ್ನು evolve ಮಾಡಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ. ರಾಷ್ಟ್ರೀಯ ವಿಕೋಪ ನಿಯಾಮವಳಿಗಳು ಅಥವಾ Policy ಯ ಜಲ ನೀತಿಯನ್ನು ಮಾಡುವುದರ ಮೂಲಕ ಈ ದೇಶದಲ್ಲಿರುವಂತಹ ನೀರಿನ ಸಂಪತ್ತನ್ನು ರಾಷ್ಟ್ರದ ಸಂಪತ್ತು ಎಂದು declare ಮಾಡಿ, ಎಲ್ಲೆಲ್ಲಿ ಅವಶ್ಯಕತೆಯಿದೆ. ಆ ಎಲ್ಲ ಭಾಗಗಳಿಗೆ ನೀರನ್ನು ತರುವಂತಹ ಕೆಲಸವನ್ನು 1978 ನೇ ಇಸವಿಯಲ್ಲಿ ಸನ್ಮಾನ್ಯ ಮೊರರ್ಜಿ ದೇಸಾಯಿಯವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಗಂಗಾ-ಕಾವೇರಿ ಜೋಡಣೆ ಯೋಜನೆ ಪ್ರಸ್ತಾಪ ಪ್ರಾರಂಭವಾಗಿದ್ದು, ಸನ್ಮಾನ್ಯ ಆಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗಲೂ ಸಹ ಇದರ ಬಗ್ಗೆ ಪ್ರಸ್ತಾಪವಾಗಿತ್ತು. ಬಹುಶಃ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದಾಗ ಅವರ ಜೊತೆಯಲ್ಲಿ ಪ್ರಸ್ತಾಪ ಮಾಡಿ ಹೇಳಿದ್ದೆ. ಈ ದೇಶದಲ್ಲಿ ಒಂದು ಕ್ರಾಂತಿ ಮಾಡಬೇಕೆನ್ನುವ ಹಾಗಿದ್ದರೆ, ಈ ದೇಶದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರೀಯವರು "ಜೈ

ಜವಾನ್, ಜೈ ಕಿಸಾನ್" ಎಂದು ಹೇಳಿದ ಮಾತಿಗೆ ಅರ್ಥ ಬರಬೇಕೆನ್ನುವ ಹಾಗಿದ್ದರೆ, ಜೈ ಕಿಸಾನ್ ದೇಶದ ಬೆನ್ನುಲುಬು ಮತ್ತು ಅವನಿಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವಂತಹ ನೀರನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ Ganga-Cauvery Linking Project ಮಾಡುವುದಕ್ಕೆ ಕೇಂದ್ರ ಸರ್ಕಾರವು ಮುಂದಾಗಬೇಕು. ಬಹುಶಃ ಸುಮಾರು 10 ಲಕ್ಷ ಕೋಟಿ ರೂಪಾಯಿಗಳು ವೆಚ್ಚವಾಗಬಹುದು ಅಥವಾ 12 ಲಕ್ಷ ಕೋಟಿ ರೂಪಾಯಿಗಳು ವೆಚ್ಚವಾಗಬಹುದೆಂದು ಹೇಳಿ estimate variations ಇದೆ. ನಾನು ಅವರಿಗೆ ಒಂದು ಬಾರಿ ಹೇಳಿದ್ದೆ. ಆಹಾರಕ್ಕೋಸ್ಕರ ಒಂದು ವರ್ಷಕ್ಕೆ 1,23,000 ಕೋಟಿ ರೂಪಾಯಿಗಳನ್ನು Food Security Act ಕೆಳಗಡೆ ವೆಚ್ಚ ಮಾಡುತ್ತಿದ್ದೇವೆ. ಪ್ರತಿ ವರ್ಷ ಉದ್ಯೋಗ ಖಾತ್ರಿ ಯೋಜನೆಗೋಸ್ಕರ 41,000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ. ಇದನ್ನು 10 ವರ್ಷಗಳ ಕಾಲ ನಿಲ್ಲಿಸಿ ನೀರಿಗೆ ವೆಚ್ಚ ಮಾಡಿದರೆ ಎಷ್ಟಾಗಬಹುದು? ನಾನು ಇನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳಿದೆ. ಅವರಿಗೂ ನನಗೂ ಒಳ್ಳೆಯ ಸಂಬಂಧವಿರುವಂತಹ ಹಿನ್ನಲೆಯಲ್ಲಿ ಹಣವಿಲ್ಲವೆಂದು ಹೇಳಿದರೆ ನಾನು source ತೋರಿಸುತ್ತೇನೆ. ನೀವು ಪ್ರಯತ್ನ ಮಾಡುತ್ತೀರಾ ಎಂದು ಕೇಳಿದೆ. ಈ ಗಂಗಾ–ಕಾವೇರಿ ಜೋಡಣೆ ಯೋಜನೆಗೆ ಅನಂತ ಪದ್ಮನಾಭ ಕುಡಿಯುವ ನೀರಿನ ಯೋಜನೆ ಎಂಬ ಹೆಸರಿಟ್ಟು, ಅನಂತ ಪದ್ಮನಾಭ ದೇವಸ್ಥಾನದಲ್ಲಿ 10 ಕೋಟಿ ರೂಪಾಯಿಗೂ ಹೆಚ್ಚು ಬೆಲೆಬಾಳುವಂತಹ ಸಂಪತ್ತು ಇದೆಯಲ್ಲವೇ ಅಥವಾ ತಿರುಪತಿಯ ತಿಮ್ಮಪ್ಪನ ದೇವಸ್ಥಾನದಲ್ಲಿರುವಂತಹ ಸಂಪತ್ತು ಇದೆಯಲ್ಲವೇ, ಈ ಸಂಪತ್ತನ್ನು ಇದಕ್ಕೆ ಬಳಕೆ ಮಾಡಿದರೆ ಆ ದೇವರಿಗೂ ಸಹ ಖುಷಿಯಾಗುತ್ತದೆಂದು ಹೇಳಿ ನಾನು ಅವರಿಗೆ ಅನೇಕ ಬಾರಿ ಹೇಳಿದ್ದೆ. ನಾನು ಈಗಲೂ ಸಹ ಕೇಂದ್ರ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುವುದೇನೆಂದರೆ,

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೈಸೂರು ಮಹಾರಾಜರ ಕಾಲದಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿಸುವಂತಹ ಸಂದರ್ಭದಲ್ಲಿ ತಮ್ಮಲ್ಲಿ ಇದ್ದಂತಹ ಇಡೀ ಚಿನ್ನವನ್ನು ಬಾಂಬೆಗೆ ತೆಗೆದುಕೊಂಡು ಹೋಗಿ ಮಾರಿರುವ ವಿಷಯದ ಬಗ್ಗೆ ನೆನಪು ಮಾಡಿದೆ. (ಮುಂದು)

737/14-6-2017/6-10/bkp-ks (sp)

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು. . )**

ಶ್ರೀಯುತ ಶ್ರೀಕಂಠೇಗೌಡರವರು ಏನು ಹೇಳುತ್ತಿದ್ದಾರೆಂದರೆ 1924–25ನೇ ಇಸವಿಯಲ್ಲಿ ಕೆ.ಆರ್.ಎಸ್. ಕಟ್ಟಬೇಕಾದರೆ ಸರ್.ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಮತ್ತು ಮೈಸೂರು ಮಹರಾಜರ ಬಗ್ಗೆ ಅಲ್ಲಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕಷ್ಟು ಹೇಳುವಂತಹದ್ದಾಗಿದೆ. ಏನೇ ಆಗಲಿ, ಅಲ್ಲಿನ ವಿವಾದದ ವಿಚಾರವನ್ನು ನಾನು ಇಲ್ಲಿ ಏಳೆಯಲಿಕ್ಕೆ ಹೋಗುವುದಿಲ್ಲ. ನಾನು ಇಷ್ಟನ್ನೇ ಹೇಳಲಿಕ್ಕೆ ಬಯಸುತ್ತೇನೆ. ಕೆ.ಆರ್.ಎಸ್. ಕಟ್ಟಬೇಕಾದರೆ ರಾಜರ ಅಸ್ಥಾನದಲ್ಲಿದ್ದಂತಹ ವಜ್ರ ವೈಡೂರ್ಯಗಳನ್ನು, ಚಿನ್ನವನ್ನು ಮಾರಾಟ ಮಾಡಿ ಕೆ.ಆರ್.ಎಸ್. ಕಟ್ಟಿದರು. ಆ ಕೆ.ಆರ್.ಎಸ್. ಕಟ್ಟುವುದಕ್ಕಿಂತ ಮೊದಲು ಮಂಡ್ಯದಲ್ಲಿ ಆರ್ಕ, ನವಣೆ, ಹುರಳಿ ಬೆಳೆಗಳನ್ನು ಮಳೆ ಆಧಾರಿತ ಬೆಳೆಗಳನ್ನಾಗಿ ಬೆಳೆಯುತ್ತಿದ್ದರು. ಆ ವಿಚಾರ ತಮಗೂ ಗೊತ್ತಿದೆ. ಅಷ್ಟೇ ಅಲ್ಲ, ಆಂದ್ರ ಪ್ರದೇಶದಲ್ಲಿ ಕೆ.ಎಲ್.ರಾವ್ ರವರು ಮುಖ್ಯಮಂತ್ರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ Nagarjuna Project ಕಟ್ಟಬೇಕಾದರೆ ಅಲ್ಲಿ ಯಾರು ಅಧಿಕಾರಿಗಳಿದ್ದರು, ಅವರಿಗೆ ಕೆಲವು ತಿಂಗಳುಗಳ ಕಾಲ ಸಂಬಳವನ್ನು ಕೊಡುತ್ತಿರಲಿಲ್ಲ. ಶಾಶ್ವತವಾದ ಪರಿಹಾರವನ್ನು ಈ ಬರಗಾಲದ ಹಿನ್ನೆಲೆಯಲ್ಲಿ ಕಾಣಬೇಕಾದರೆ ಒಂದು National Policy evolve ಮಾಡಬೇಕಾಗುತ್ತದೆ.

ಎರಡನೆಯದಾಗಿ, ಈ ಎಲ್ಲಾ rivers ಏನಿವೆ, ಅದು ಗಂಗಾ-ಕಾವೇರಿ, ಗಂಗಾ, ಯಮುನ, ಸರಸ್ವತಿ, ರೇವಾ ಮಹಾನದಿ, ಗೋದಾ, ಬ್ರಹ್ಮಪುತ್ರ ಮಹಾನದಿಮಾಮ್ ಎಂದು ಅನೇಕರು ಹೇಳುತ್ತಾರೆ. ಬಹುಶಃ ಈ ನದಿಗಳ ವಿಚಾರದಲ್ಲಿ link ಮಾಡುವುದರ ಮೂಲಕ ಶಾಶ್ವತವಾಗಿ ಈ ದೇಶದಲ್ಲಿ ಇರತಕ್ಕಂತಹ ಈ ನದಿಗಳನ್ನು link ಮಾಡುವುದರ ಮೂಲಕ ಶಾಶ್ವತವಾಗಿ ಈ ದೇಶದಲ್ಲಿ ಇರತಕ್ಕಂತಹ ಬರವನ್ನು ಪರಿಹಾರ ಮಾಡಲಿಕ್ಕೆ ಸಾಧ್ಯತೆ ಇದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನನ್ನ ಮೂರನೆಯ ಸಲಹೆ ಏನೆಂದರೆ, ನಾವು ಹುಡುಗರು ಇರಬೇಕಾದರೆ ಎಲ್ಲಿ ಬೇಕಾದರೂ ಕಾಡನ್ನು ನೋಡುತ್ತಿದ್ದೆವು. ಕಾಡಿನಲ್ಲಿ ಜಿಂಕೆ ನೋಡುತ್ತಿದ್ದೆವು, ಮೊಲವನ್ನು ನೋಡುತ್ತಿದ್ದೆವು, ಹುಲಿಯನ್ನು ನೋಡುತ್ತಿದ್ದೆವು, ಸಿಂಹವನ್ನು ನೋಡುತ್ತಿದ್ದೆವು. ಸಾಕಷ್ಟು ಹಣ್ಣುಗಳು ಸಿಕ್ಕುತ್ತಿದ್ದವು. ಕಾರೆ ಹಣ್ಣನ್ನು ತಿನ್ನುತ್ತಿದ್ದೆವು. ಈಚಲು ಹಣ್ಣನ್ನು ತಿನ್ನುತ್ತಿದ್ದೆವು. ಮಾವಿನ ಹಣ್ಣುಗಳನ್ನು ತಿನ್ನುತ್ತಿದ್ದೆವು. ಆ ವಿಷಯವನ್ನು ಬಿಡಿ. ನೇರಳೆ ಹಣ್ಣನ್ನು ತಿನ್ನುತ್ತಿದ್ದೆವು. ಆ ನೇರಳೆ ಹಣ್ಣನ್ನು ತಿಂದರೆ ಕೆಮ್ಮು ಬರುತ್ತದೆ ಎಂದು ಹೇಳಿ ನಮಗೆ ನಮ್ಮ ತಾಯಿ ಹೆದರಿಸಿ, ಬಯ್ಯುತ್ತಿದ್ದರು. ಆದರೆ, ಯಾವ ಒಂದು ಜಮ್ಮು ನೇರಳೆ ಇದೆ, ಅದೇ ಇವತ್ತು sugar ಗೆ ರಾಮಬಾಣ ಎನ್ನುವಂತಾಗಿದೆ. ಏನೇ ಆಗಲಿ, ನಾನು ಏನು ಹೇಳಲಿಕ್ಕೆ ಬಯಸುತ್ತಿದ್ದೇನೆಂದರೆ ನಮ್ಮ ರಾಜ್ಯದಲ್ಲಿ ಸುಮಾರು 1.20 ಕೋಟಿ hectare cultivable land ಇದೆ. National average ತೆಗೆದುಕೊಂಡ ಸಂದರ್ಭದಲ್ಲಿ ಆ ಪರಿಸರ ಉತ್ತಮ ರೀತಿಯಲ್ಲಿ ಇರಬೇಕೆನ್ನುವ ಹಾಗಿದ್ದರೆ, a

ಪ್ರಕಟಣೆಗಾಗಿ ಅಲ್ಲ, ಪತ್ರಿಕೆಗಳಿಗೆ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

minimum 33% of the land has to be forest. ಆದರೆ, ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟಿದೆ? ಅದು hardly, 16 ರಿಂದ 17% ಇದೆ. ನಾವು ಒಂದು ಕಡೆ 79-ಎ ಮತ್ತು ಬಿ relax ಮಾಡಿ ಉಳುವವನಿಗೆ ಜಮೀನು ಅಥವಾ ಯಾರು ಜಮೀನನ್ನು ಒತ್ತುವರಿ ಮಾಡಿದ್ದಾರೆ, ಅದು ಗೋಮಾಳ ಇರಬಹುದು, ಮತ್ತೊಂದು ಇರಬಹುದು, ಅದನ್ನು ನಾವು regularize ಮಾಡುತ್ತೇವೆ. ಆದರೆ, ನನಗೆ ಅನಿಸುವುದೇನೆಂದರೆ, ನಮ್ಮ ರಾಜ್ಯದಲ್ಲಿ ಸುಮಾರು 1975ನೇ ಇಸವಿಯಿಂದ ಅರಣ್ಯ ಇಲಾಖೆಯಿಂದ ಸಸಿಗಳನ್ನು ನೀಡಲಾಗುತ್ತಿದೆ. ಇಲ್ಲಿಯವರೆಗೆ ಅರಣ್ಯ ಇಲಾಖೆಯವರನ್ನು ಕೇಳಿದರೆ ಪ್ರತಿ ವರ್ಷ 3 ಕೋಟಿ saplings ಹಂಚುತ್ತೇವೆಂದು ಹೇಳುತ್ತಾರೆ. ಅದರಲ್ಲಿ 50 ಲಕ್ಷ saplings ಅನ್ನು ನಮ್ಮ ಇಲಾಖೆಯಿಂದಲೇ ಗಿಡಗಳನ್ನು ಹಾಕುತ್ತೇವೆಂದು ಹೇಳುತ್ತಾರೆ. ಬಹುಶಃ 1975 ರಿಂದ ಇಲ್ಲಿಯವರೆಗೆ ಪ್ರತಿ ವರ್ಷ 3 ಕೋಟಿ ಎಂದು ಹೇಳಿದರೆ ಕಳೆದ 40 ವರ್ಷಗಳಲ್ಲಿ ಎಷ್ಟು ಕೋಟಿ ಗಿಡ ಮರಗಳಾಗಿರಬೇಕಾಗಿತ್ತು? ಇಲಾಖೆಯಿಂದ ಅಂದಿನಿಂದ ಹಾಕಿದಂತಹ ಗಿಡಗಳನ್ನು ಉಳಿಸಿದ್ದರೆ ರಾಜ್ಯದಲ್ಲಿ ಒಂದೇ ಒಂದು ಎಕರೆಯಲ್ಲೂ ಸಹ ಗಿಡ-ಮರಗಳು ಇಲ್ಲದೇ ಇರುವುದಕ್ಕೆ ಸಾಧ್ಯತೆ ಆಗುತ್ತಿರಲಿಲ್ಲ.

**ಉಪಸಭಾಪತಿಯವರು:-** ಶ್ರೀಯುತ ಉಗ್ರಪ್ಪನವರೇ, ಬೇಗ ಮುಗಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇನ್ನು 5-10 ನಿಮಿಷಗಳಲ್ಲಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. 8 ಕೋಟಿ ಗಿಡಗಳನ್ನು ಹಾಕಬೇಕೆಂದು ಹೇಳಿ ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಾವೆಲ್ಲರೂ ಒತ್ತಡ ತಂದಿದ್ದರಿಂದ, ಅದನ್ನು ಬಜೆಟ್‌ನಲ್ಲಿ ಪ್ರಕಟಣೆ ಮಾಡಿದರು. ಈ ಬಾರಿಯೂ ಸಹ 5 ಕೋಟಿಯೋ, 7 ಕೋಟಿಯೋ ಗಿಡಗಳನ್ನು ಹಾಕಬೇಕು. ಪ್ರತಿ Assembly segment ನಲ್ಲಿ ಸಾಲು ಮರದ ತಿಮ್ಮಕ್ಕನ ಹೆಸರಿನಲ್ಲಿ ಒಂದು ವನ ಮಾಡಬೇಕೆಂದು ಪ್ರಕಟಣೆ ಮಾಡಿದರು. ಬಹುಶ: ನನಗೆ ಅನಿಸುವುದೇನೆಂದರೆ ಈ ರೀತಿ ಬರ ಪ್ರತಿ ವರ್ಷ ಬರುವುದನ್ನು ತಡೆಯಬೇಕಾದರೆ ನಾವು ಪರಿಸರವನ್ನು ಉಳಿಸಬೇಕು. ಬಹುಶ: war footing ನಲ್ಲಿ ಈ ಕೆಲಸವನ್ನು ಈಗ ಏನು ಬಹಳ ರಾಷ್ಟ್ರಗಳ ಬಗ್ಗೆ ಹೇಳುತ್ತೇವೆ, ಇಸ್ರೇಲ್ ಎಂದು ಹೇಳುತ್ತೇವೆ, ಮತ್ತೊಂದು ರಾಷ್ಟ್ರವೆಂದು ಹೇಳುತ್ತೇವೆ. ಇಸ್ರೇಲ್ ರೀತಿಯಲ್ಲಿ ಕೃಷಿ ಮಾಡುವುದು ಒಂದು ಕಡೆಯಾದರೆ ಬಹುಶಃ ನನಗೆ ಅನಿಸುವಂತಹದ್ದು ಇಸ್ರೇಲ್ ಮಾದರಿಯಲ್ಲಿಯೇ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ಶಾಲಾ-ಕಾಲೇಜುಗಳಲ್ಲಿ, ಈ ಮಕ್ಕಳಿಗೆ ಪರಿಸರದ ಬಗ್ಗೆ ಒಂದು ವಾರದಲ್ಲಿ ಒಂದು

ದಿವಸ, ಒಂದು period ಶಾಲೆ ಇಲ್ಲದಿದ್ದರೂ ಪರವಾಗಿಲ್ಲ, ಅಂದು ಈ ಪರಿಸರವನ್ನು ಉಳಿಸತಕ್ಕಂತದ್ದಕ್ಕೆ, ಗಿಡ-ಮರಗಳನ್ನು ಹಾಕುವಂತದ್ದರ ಬಗ್ಗೆ ಪರಿಸರ ದಿನವೆಂದು ಮಾಡಬೇಕು. ಇಡೀ ರಾಷ್ಟ್ರದಲ್ಲಿ Yoga Day ಮಾಡೋಣ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಯೋಗ ಮತ್ತೊಂದರ ಜೊತೆಗೆ ಪರಿಸರವನ್ನು ಉಳಿಸಿದಾಗ ಮಾತ್ರ ನಾವೆಲ್ಲರೂ ಉಳಿಯಲಿಕ್ಕೆ ಸಾಧ್ಯತೆ ಇದೆ. ಬಹುಶಃ ನಮ್ಮ ದೇಶದ ಯಾವ ಒಂದು forest ಇದೆ, ಇದನ್ನು 33% ಗೆ ತೆಗೆದುಕೊಂಡು ಹೋಗುವಂತಹದ್ದಕ್ಕೆ ಸ್ಪಷ್ಟವಾದ ನೀತಿ ಮತ್ತು ಅದಕ್ಕೆ ಹಣವನ್ನು ಕೊಡುವಂತಹದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಕೆಲಸ ಮಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ಒಂದು ಕಡೆ ಪರಿಸರ ಉಳಿಸುವಂತಹದ್ದು, ಇನ್ನೊಂದು ಕಡೆ ನೀತಿಯನ್ನು ರೂಪಿಸುವುದಾಗಿದೆ. ಬರ ಬಂದ ತಕ್ಷಣ ಒಬ್ಬರು ಮೋಡ ಬಿತ್ತನೆ ಎಂದು ಹೇಳುತ್ತಾರೆ, ಇನ್ನೊಬ್ಬರು ಪರ್ಜನ್ಯ ಹೋಮ ಎಂದು ಹೇಳುತ್ತಾರೆ, ಇನ್ನೊಬ್ಬರು ಪಾತಾಳ ಗಂಗೆಯಿಂದ ನೀರು ತರುತ್ತೇವೆಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ನಾವು ಮತ್ತು ನೀವು ಹಳ್ಳಿಯಿಂದ ಬಂದಂತಹವರು. ನಾನು ನನ್ನ ಊರಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟಿದ್ದೇನೆ. ಏಕೆಂದರೆ, ನಾನು ಅಲ್ಲಿಗೆ ಹೋಗಿ ನನ್ನ ತೋಟವನ್ನು ನೋಡಿದ್ದರೆ ನನ್ನ ಕಣ್ಣಲ್ಲಿ ನೀರು ಬರುತ್ತದೆ. ನಾನು ನೀರು ಹಾಕಿ, ನನ್ನ ತಂದೆ-ತಾಯಿಂದಿರು ನೀರು ಹಾಕಿ, ನನ್ನ ಬಂಧು-ಬಳಗ ಬೆಳೆಸಿರತಕ್ಕಂತಹ ಮರಗಳ ಸುಳಿಗಳು ಇವತ್ತು ಒಣಗಿ ಬೀಳುತ್ತಿವೆ. ಇನ್ನು ನೀವು ಪಾತಾಳ ಗಂಗೆಯಿಂದಲೂ ನೀರನ್ನು ಎತ್ತಿದರೆ ಯಾವ ಸ್ಥಿತಿ ಬರಬಹುದು ಎಂದು ಊಹಿಸುವುದಕ್ಕೂ ಸಾಧ್ಯವಿಲ್ಲ. ಇನ್ನು ನಾನು 1986-87 ರಲ್ಲಿ ಯುವ ಜನತಾ ಪಕ್ಷದ State President ಆಗಿ ಕೆಲಸ ನಿರ್ವಹಿಸಿದ್ದೇನೆ. ಆ ಸಮಯದಲ್ಲಿ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ನಜೀರ್ ಸಾಬ್‌ರವರು ಬೋರ್‌ವೆಲ್ ಮೂಲಕ ಎಲ್ಲಾ ಕಡೆಗಳಲ್ಲಿ ನೀರನ್ನು ನೀಡಿದ್ದಕ್ಕೆ ಅವರನ್ನು ಅಭಿನಂದಿಸಿದ್ದೆ. ಈ ಪಾತಾಳ ಗಂಗೆಯಿಂದ ಈ ಪರಿಸರವನ್ನು ಉಳಿಸಲಿಕ್ಕೆ ಸಾಧ್ಯತೆ ಇಲ್ಲ. ಬೇವಿನ ಮರಕ್ಕೋ, ಈಚಲ ಮರಕ್ಕೋ ಅಥವಾ ಹೊಂಗೆ ಮರಕ್ಕೋ, ಹುಣಸೆ ಮರಕ್ಕೋ ಎಷ್ಟರಮಟ್ಟಿಗೆ ಬೇರು ಹೋಗಲಿಕ್ಕೆ ಸಾಧ್ಯ? ಬಹುಶಃ ನನಗೆ ಅನಿಸುವುದೇನೆಂದರೆ, ಯಾವ ಒಂದು ವಾತಾವರಣದಲ್ಲಿ ನೀರಿಲ್ಲ, ತೇವಾಂಶ ಇಲ್ಲವೆಂದರೆ, ಯಾವ ಗಿಡ-ಮರಗಳು ಇರಲಿಕ್ಕೆ ಸಾಧ್ಯತೆ ಇಲ್ಲ. ಈಗಾಗಲೇ ನಾವು ರಾಜಸ್ಥಾನದ ಹತ್ತಿರ ಬಂದಿದ್ದೇವೆ. ಇವತ್ತು ನಾವು ರಾಜಸ್ಥಾನವನ್ನು ಮೀರಿಸುತ್ತೇವೆ. ನನಗೆ ಅನಿಸುವಂತಹದ್ದು, ರಾಜಸ್ಥಾನ ಆಗಬಾರದು, ಅದನ್ನು ಮೀರಿಸಬಾರದು ಎನ್ನುವ ಹಾಗಿದ್ದರೆ ಈ ರೀತಿಯ ಯೋಚನೆಗಳನ್ನು ಬಿಡಬೇಕು.

ಸಾಧ್ಯವಾದರೆ, this is high time to ban all the bore wells. ಇರುವಂತಹದ್ದನ್ನು ಬಿಟ್ಟು ಇನ್ನು ಮುಂದೆ ರಾಜ್ಯದಲ್ಲಿ ಯಾವುದೇ ಬೋರ್‌ವೆಲ್‌ಗಳನ್ನು ಹಾಕುವುದಿಲ್ಲವೆನ್ನುವಂತಹ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳದಿದ್ದರೆ ನನಗೆ ಅನಿಸುವಂತೆ ಇವತ್ತಿನ ಭೂಗರ್ಭದಲ್ಲಿ ಇರತಕ್ಕಂತಹ ನೀರಿನ ಮಟ್ಟ ಒಂದು ಸಾವಿರ ಅಡಿಗೆ ಹೋಗುತ್ತದೆ, ಅದು ಎರಡು ಸಾವಿರಕ್ಕೂ ಹೋಗಬಹುದು, 3 ಸಾವಿರಕ್ಕೂ ಹೋಗಬಹುದು. ಇದನ್ನು ನಾವು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ತಮಗೆ ಆಶ್ಚರ್ಯವಾಗಬಹುದು. ಸನ್ಮಾನ್ಯ ಸಭಾನಾಯಕರ ಕ್ಷೇತ್ರ ಕೊರಟಗೆರೆಯಲ್ಲಿ ಸಿದ್ದರಬೆಟ್ಟವೆಂದು ಹೇಳಿ ಒಂದು ಪ್ರದೇಶವಿದೆ. ನನ್ನ ಶ್ರೀಮತಿಯವರ ಊರು ಸಹ ಅಲ್ಲಿಯೇ ಇದೆ. ಸಿದ್ದರಬೆಟ್ಟದ ಸುತ್ತ-ಮುತ್ತಲ ಪ್ರದೇಶದ ಬಗ್ಗೆ ಮಾನ್ಯ ಸಭಾನಾಯಕರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಅಲ್ಲಿ ಇದ್ದಿದ್ದರಲ್ಲಿ ಮಳೆಯಾಗುತ್ತದೆ. ಅದು ಡಾ|| ಜಿ. ಪರಮೇಶ್ವರ್‌ರವರಿಗೂ ಗೊತ್ತಿದೆ. ಆದರೆ, ಬಯಲುಸೀಮೆ, ಅಂದರೆ ಈ ಕಡೆ ಗೌರಿಬಿದನೂರು ಪ್ರದೇಶದ ಕಡೆ ಮಳೆ ಕಡಿಮೆಯಾಗುತ್ತದೆ. ಏತಕ್ಕೆ ಈ ರೀತಿಯಲ್ಲಿ ಆಗುತ್ತದೆ ಎಂದರೆ ಅಲ್ಲಿ ಇರತಕ್ಕಂತಹ ಬೆಟ್ಟಗಳ ಸಾಲು ಏನಿದೆ, ಮೋಡ ಬರುವಂತಹದ್ದನ್ನು ತಡೆಯುವಂತಹ ಸಂದರ್ಭಗಳಿದ್ದು, ಅದರಿಂದ, ಮಳೆ ಬರುವಂತಹ ಅವಕಾಶ ಇರುತ್ತದೆ. ಪಾವಗಡದ ವೈ.ಎನ್.ಹೊಸಕೋಟೆಗೆ ಹೋದರೂ ಅಲ್ಲಿ ಇದ್ದಿದ್ದರಲ್ಲಿ ಉತ್ತಮ ಮಳೆ ಬೀಳುತ್ತದೆ. ಆದರೆ, ಇವತ್ತು ದುರಂತ ಏನಾಗಿದೆ ಎಂದರೆ ಇವತ್ತು ರಾಜ್ಯವ್ಯಾಪಿ ಎಲ್ಲೆಲ್ಲಿ ಬೆಟ್ಟುಗಳು ಇವೆ, ಅದು granite ಗೆ, ಜಲ್ಲಿಗೆ, building stones ಗೆ ಇವತ್ತು ಈ ಬೆಟ್ಟಗಳನ್ನು ಕರೆಗಿಸುವುದರ ಮೂಲಕ ಈ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಬೆಂಗಳೂರಿಗೆ ನಾನು ಪ್ರಾರಂಭದಲ್ಲಿ ಬಂದಂತಹ ಸಂದರ್ಭದಲ್ಲಿ ಬೆಟ್ಟ ಹಲಸೂರು ಎನ್ನುವುದು ದೊಡ್ಡ ಶಿಖರದ ರೀತಿಯಲ್ಲಿ ಕಾಣುತ್ತಿತ್ತು. (ಮುಂದು).

(738) 14.06.2017 ಎಸ್‌ಪಿಆರ್-ಜಿಆರ್ 6.20

**ಶ್ರೀ ಕೆ.ಎಸ್.ಉಗ್ರಪ್ಪ(ಮುಂದು):-**

ಆದರೆ ಇವತ್ತಿನ ದಿವಸ ಬಹುತೇಕವಾಗಿ ನೆಲಸಮವಾಗಿದೆ. ನನಗನ್ನಿಸುವುದೇನೆಂದರೆ ಕಟ್ಟಡಗಳ ನಿರ್ಮಾಣದ ಮೇಲೆ ನಿರ್ಬಂಧವನ್ನು ಹೇರದಿದ್ದರೆ ಬಯಲುಪ್ರದೇಶಗಳಾಗುತ್ತವೆ. ಅಲ್ಲಿ ಮಳೆ ಬೀಳಲು ಕೊರತೆಗಳಾಗಬಹುದು ಎನ್ನುವಂತಹ ಎಚ್ಚರಿಕೆಯ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈಗ ಎಲ್ಲರೂ ಸಹ ಹೇಳಿದ್ದಾರೆ ಹಾಗೂ ಮತ್ತೊಂದು ಬಾರಿಯೂ ಸಹ ಹೇಳುವ ಅಂಶವೇನೆಂದರೆ, ಚಂಡಮಾರುತದ ಬಗ್ಗೆ ನಾನು ಅಷ್ಟೊಂದು ಅಧ್ಯಯನವನ್ನು ಮಾಡಿಲ್ಲ ಹಾಗಾಗಿ

ಹೆಚ್ಚಿನ ಮಾಹಿತಿ ಇಲ್ಲ. ಸಮುದ್ರದಲ್ಲಿ vacuum create ಆದರೆ ಚಂಡಮಾರುತ ಬರುತ್ತದೆ ಎಂಬುದಾಗಿ ಹೇಳುತ್ತಾರೆ. Vacuum create ಆಗಿದೆ ಆ ಕಾರಣಕ್ಕಾಗಿ ಇವತ್ತಿನ ದಿವಸ ಜಾಸ್ತಿ ಮಳೆ ಬರುತ್ತಿದೆ. ಯಾವ ಕಾರಣಗಳಿಂದಾದರೂ ಸರಿ ಮಳೆ ಬರುತ್ತದೆ ಎನ್ನುವುದಾದರೆ vacuum create ಮಾಡುವಂತಹ ಪ್ರಕ್ರಿಯೆಗಳಿಗೆ ವೈಜ್ಞಾನಿಕವಾಗಿ ಮಾಡುವಂತಹ ಅವಕಾಶಗಳು ಸರ್ಕಾರಕ್ಕೆ ಇದ್ದರೆ, ಅದರ ಮೂಲಕವಾದರೂ ಅಲ್ಲೋ ಇಲ್ಲೋ ಎಲ್ಲೋ ಒಂದು ಕಡೆ ಮಳೆ ಬಿದ್ದರೆ ಈ ರಾಷ್ಟ್ರಕ್ಕೆ ಒಳ್ಳೆಯದಾಗುತ್ತದೆ ಎನ್ನುವಂತಹ ಅವಕಾಶಗಳಿವೆ. ಹೀಗಾಗಿ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇವುಗಳ ಜೊತೆಗೆ ನಾನು ಅಂತಿಮವಾಗಿ ಹೇಳಬಯಸುವುದೇನೆಂದರೆ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿರವರ ಅದೃಷ್ಟದಿಂದ ಅವರು ಅಧಿಕಾರಕ್ಕೆ ಬರುವಂತಹ ಸಂದರ್ಭದಲ್ಲಿ ಅಥವಾ ಹಿಂದಿನ ಪ್ರಧಾನ ಮಂತ್ರಿ ಡಾ॥ ಮನ್‌ಮೋಹನ್ ಸಿಂಗ್‌ರವರು ಅಧಿಕಾರ ಬಿಡುವ ಸಂದರ್ಭದಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್‌ನ ಖಚ್ಚಾ ತೈಲದ ಬೆಲೆ 139 ಡಾಲರ್‌ಗಳಷ್ಟಿತ್ತು. ಶ್ರೀ ನರೇಂದ್ರ ಮೋದಿರವರ ಅದೃಷ್ಟವೋ ಏನೋ ಗೊತ್ತಿಲ್ಲ, ಇವತ್ತಿನ ದಿವಸ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್‌ನ ಖಚ್ಚಾ ತೈಲದ ಬೆಲೆ 40 ಡಾಲರ್‌ಗಳಾಗಿದೆ. ಅಂದರೆ ಒಂದು ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗಳಷ್ಟು ಬೆಲೆ ಕಡಿಮೆಯಾಗಿದೆ. ಈ ದರವು ಕೇವಲ ಒಂದೆರಡು ದಿನಗಳದ್ದಲ್ಲ, ಕಳೆದ ಮೂರು ವರ್ಷಗಳಿಂದ ಇಂತಹ ಪರಿಸ್ಥಿತಿಯು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿದೆ. ಇದರ ಪರಿಣಾಮವಾಗಿ ಕೇಂದ್ರ ಸರ್ಕಾರಕ್ಕೆ ಕನಿಷ್ಟ 8–10 ಲಕ್ಷ ಕೋಟಿ ರೂಪಾಯಿಗಳಷ್ಟು ಪೆಟ್ರೋಲ್ ಮತ್ತು ಡಿಸೇಲ್ ಉಪಯೋಗಿಸುವುದರಿಂದ ವೆಚ್ಚವಾಗುತ್ತಿತ್ತು. ಆದರೆ ಪೆಟ್ರೋಲ್, ಡಿಸೇಲ್ ಬೆಲೆ ಕಡಿಮೆಯಾದುದರಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷ ಎರಡು ಲಕ್ಷ ಕೋಟಿ ರೂಪಾಯಿಗಳಷ್ಟು ವೆಚ್ಚ ಕಡಿಮೆಯಾಗಿದೆ. ಅಂದರೆ ಕಳೆದ ಮೂರು ವರ್ಷದಲ್ಲಿ ಆರು ಲಕ್ಷ ಕೋಟಿ ರೂಪಾಯಿಗಳಷ್ಟು ವೆಚ್ಚ ಕಡಿಮೆಯಾಗಿದೆ. ಆದರೆ ಇವತ್ತಿನ ದಿವಸ ಅಷ್ಟು ಮೊತ್ತ ಉಳಿತಾಯವಾಗಿದ್ದನ್ನು ನಾವು ನೋಡಲಿಕ್ಕೆ ಸಾಧ್ಯವಾಗಿದೆ ಹಾಗೂ ಈ ಅಂಶವು ಗೋಡೆ ಬರಹಗಳಂತೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಈ ವಿಚಾರವಾಗಿ ನಾನು ಹೇಳುವುದೇನೆಂದರೆ, ದಯಮಾಡಿ ಶಾಶ್ವತ ಕಾರ್ಯಕ್ರಮಗಳಿಗೆ ಒಂದೆಡೆ ಒತ್ತು ಕೊಡುವುದರ ಜೊತೆಗೆ once for all, one time measure ಎನ್ನುವಂತಹ ರೀತಿಯಲ್ಲಿ ರೈತರ ಸಾಲವನ್ನು ಮನ್ನಾ ಮಾಡಬೇಕು. ಯಾರ ಯಾರೋ ಸಾಲಗಳನ್ನು ಮನ್ನಾ ಮಾಡುತ್ತೀರಿ. ಶ್ರೀ ಗೌತಮ್ ಆದಾನಿ, ಶ್ರೀ ಮುಖೇಶ್ ಅಂಬಾನಿ ಹಾಗೂ ಇನ್ನಿತರೆ ಸುಮಾರು 60 ಕೈಗಾರಿಕೋದ್ಯಮಿಗಳ

ಕುಟುಂಬದ ಯವರುಗಳ ಹೆಸರಿನಲ್ಲಿರುವ ಸುಮಾರು 28 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಲಾಗಿದೆ. ಇವತ್ತಿನ ದಿವಸ ಶ್ರೀ ಮುಖೇಶ್ ಅಂಬಾನಿಯೊಬ್ಬರೇ 1,25,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ಬ್ಯಾಂಕ್‌ಗಳಿಂದ ತೆಗೆದುಕೊಂಡಿದ್ದಾರೆ. ಆದರೆ ಭಾರತ ದೇಶದಲ್ಲಿರುವ ಅವರ ಒಟ್ಟು ಆಸ್ತಿಯ ಮೊತ್ತ ಕೇವಲ 65 ಸಾವಿರ ಕೋಟಿ ರೂಪಾಯಿಗಳಷ್ಟಿದೆ. ಪರಿಸ್ಥಿತಿ ಹೀಗಿರುವಾಗ ಅವರ ಉಳಿದ ಆಸ್ತಿಯ ಮೊತ್ತ ಎಲ್ಲಿ ಹೋಯಿತು? ಈ ವಿಚಾರವಾಗಿ ನಾನು ಕೇಳುವುದೇನೆಂದ್ದರೆ ಕೆಲವೇ ಕೆಲವು ಕೈಗಾರಿಕೋದ್ಯಮಿಗಳ ಕುಟುಂಬಕ್ಕೆ ಅಥವಾ ಕೈಗಾರಿಕೋದ್ಯಮಿಗಳಿಗೆ ಸಾಲ ಮನ್ನಾ ಮಾಡುವಂತಹ ಪ್ರಯತ್ನವನ್ನು ಏಕೆ ಮಾಡುತ್ತಾರೆ? ಶಾಶ್ವತವಾಗಿ ಪ್ರತಿ ವರ್ಷವೂ ಸಾಲ ಮನ್ನಾ ಮಾಡಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಾಲ ಮನ್ನಾ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರದ ಇತಿ ಮಿತಿಗಳಿವೆ. ಕೇಂದ್ರ ಸರ್ಕಾರವು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್‌ಗಳ ಮುಖಾಂತರ ಅನುದಾನಗಳನ್ನು ಕೊಡಬೇಕಾಗುತ್ತದೆ. ನಾನು ಹೇಳುವುದೇನೆಂದ್ದರೆ, ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತಹ ಕೆಲಸವನ್ನು ರಾಜ್ಯ ಸರ್ಕಾರವು ಮಾಡಲಿ. ಅದರ ಜೊತೆಗೆ ಈಗಾಗಲೇ ಹೇಳಿರುವಂತೆ ಸುಮಾರು ಶೇಕಡ 22 ರಷ್ಟು ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಸಾಲವಿದೆ ಹಾಗೂ ಇನ್ನುಳಿದ ಶೇಕಡ 78 ರಷ್ಟು ಸಾಲವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿದೆ. ಕೇಂದ್ರ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನಾದರೂ ತೀರಿಸುವಂತಹ ಪ್ರಕ್ರಿಯೆಗೆ ಮುಂದಾಗಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಸಾಲವನ್ನು ಮನ್ನಾ ಮಾಡದೇ ಹೋದರೆ ಮತ್ತೆ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬರುವುದಿಲ್ಲವೆಂದು ಶ್ರೀ ಜನಾರ್ಧನ ಪೂಜಾರಿಯವರು ಹೇಳಿದ್ದಾರೆ. ನಾನು ಇದನ್ನು ಸರ್ಕಾರಕ್ಕೆ ಎಷ್ಟು ಸಲ ಅಂತ ಜ್ಞಾಪಿಸುವುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಯಾರು ಅಧಿಕಾರಕ್ಕೆ ಬರಬೇಕು ಅಥವಾ ಬರಬಾರದು ಎಂಬ ತೀರ್ಮಾನವನ್ನು ಜನರು ಅಂತಿಮವಾಗಿ ತೆಗೆದುಕೊಳ್ಳುತ್ತಾರೆ. ಆದರೆ ಅಧಿಕಾರಕ್ಕೆ ಬರಬೇಕು ಎನ್ನುವ ವಿಚಾರದ ಹಿನ್ನೆಲೆಯಲ್ಲಿ ಬರ ಅಥವಾ ಪ್ರವಾಹದ ಹಾಗೂ ಇನ್ನಿತರೆ ಯಾವುದೇ ವಿಚಾರಗಳನ್ನು ಬಳಕೆ ಮಾಡಿಕೊಳ್ಳುವಂತಹದ್ದು ಯಾರಿಗೂ ಶೋಭೆಯನ್ನು ತರುವಂತಹದ್ದಲ್ಲ. ಈ ರಾಜ್ಯವು ಸುಭೀಕ್ಷವಾಗಿ ಇರಬೇಕೆನ್ನುವಂತಹ ದೃಷ್ಟಿಯಿಂದ ಈ ರೀತಿಯಾಗಿರುವ ಸಮಸ್ಯೆಗಳನ್ನು ಬದ್ಧತೆಯಿಂದ ಪರಿಹಾರ ಕಾರ್ಯಕ್ರಮಗಳನ್ನು ರೂಪಿಸುವಂತಹ ಯೋಜನೆಗಳಿಗೆ ಬಹುಶಃ ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಸಹ ಬದ್ಧವಾಗಿದೆ ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಇವತ್ತಿನ ದಿವಸ

ದಕ್ಷಿಣ ಭಾರತವು ಪೂರ್ತಿಯಾಗಿ ಬರಪೀಡಿತದಿಂದ ಬಳಲುತ್ತಿದೆ. ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಬರವುಂಟಾಗಿದೆ. ಎಲ್ಲಾ ರಾಜ್ಯಗಳ ಒಟ್ಟಾರೆಯ ಚಿತ್ರಣವನ್ನು ತೆಗೆದುಕೊಂಡು ರಾಷ್ಟ್ರೀಯ ನೀತಿಯನ್ನು ವಿಕಸನ ಮಾಡುವುದರ ಮೂಲಕ ಮತ್ತೊಮ್ಮೆ ಈ ರಾಷ್ಟ್ರವನ್ನು ಅತ್ಯಂತ ಸಂಪದ್ಭರಿತವಾಗಿರುವಂತೆ **'ಸುಜಲಾಂ ಸುಫಲಾಂ'** ಎನ್ನುವ ಮಾತಿನಂತೆ ರಾಷ್ಟ್ರವನ್ನು ನಿರ್ಮಾಣ ಮಾಡುವಂತಹ ಯೋಜನೆಗಳಿಗೆ ನಾವೆಲ್ಲರೂ ಒಂದಾಗಿ ಅದರಲ್ಲೂ ವಿಶೇಷವಾಗಿ ಕೇಂದ್ರ ಸರ್ಕಾರವು ದೊಡ್ಡಣ್ಣನ ಪಾತ್ರವನ್ನು ನಿರ್ವಹಿಸಲಿ ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಿದ್ದೇನೆ. ನನಗೆ ಮಾತನಾಡಲು ಇಷ್ಟೆಲ್ಲಾ ಸಮಯವನ್ನು ತಾವು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಸವರಾಜ ಪಾಟೀಲ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈಗಾಗಲೇ ಹಲವಾರು ಗೌರವಾನ್ವಿತ ಸದಸ್ಯರು ಬರಗಾಲದ ವಿಚಾರವಾಗಿ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ಅದೇ ಅಂಶಗಳನ್ನು ಪುನರಾವರ್ತಿಸದೇ, ಕೇವಲ ಕೆಲವು ಅಂಶಗಳನ್ನು ತಮ್ಮ ಮುಖಾಂತರ ಸದನಕ್ಕೆ ತಿಳಿಸಲು ಬಯಸುತ್ತೇನೆ. ಈ ಬಾರಿಯ ಬರಗಾಲವು ಸತತವಾಗಿ ಆರನೇಯ ವರ್ಷದ್ದಾಗಿದೆ. ಕಳೆದ ಆರು ವರ್ಷಗಳಲ್ಲಿ ನಮಗೆ ಬೀಳುವ ಮಳೆಯು ಕಡಿಮೆಯಾಗುತ್ತಾ ಬಂದಿದೆ. ನಮ್ಮ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪ್ರತಿ ವರ್ಷವೂ ಕನಿಷ್ಠವಾಗಲೂ ಸುಮಾರು 850-900 ಮಿಲಿ ಮೀಟರ್‌ನಷ್ಟು ಮಳೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಆದರೆ ಕಳೆದ ಆರು ವರ್ಷಗಳಿಂದ ಪ್ರತಿ ವರ್ಷದಂತೆ ಮಳೆಯ ಪ್ರಮಾಣವು ಕಡಿಮೆಯಾಗಿ ಕಳೆದ ವರ್ಷ ಸುಮಾರು 450 ಮಿಲಿ ಮೀಟರ್‌ನಷ್ಟು ಮಾತ್ರವೇ ಮಳೆಯಾಗಿದೆ. ಇದರರ್ಥವೇನೆಂದರೆ, ಇವತ್ತಿನ ದಿವಸ ನಮ್ಮ ಪರಿಸರದಲ್ಲಿ ವಾತಾವರಣ ವ್ಯತ್ಯಯವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತಿನ ದಿವಸ ಅರಣ್ಯ ವಿಚಾರಗಳ ಬಗ್ಗೆ ನಮ್ಮ ಗೌರವಾನ್ವಿತ ಸದಸ್ಯರುಗಳು ಬೆಳಕನ್ನು ಚೆಲ್ಲಿದ್ದಾರೆ. ಬರ ಎಂದರೆ ಮೂರು ಅಂಶಗಳು. ಅವು ಯಾವುವೆಂದರೆ, ಮೊದಲನೆಯದು ಬರ ಪರಿಸ್ಥಿತಿಯುಂಟಾದಾಗ ಕುಡಿಯುವ ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುವುದು ಮೊದಲ ಆದ್ಯತೆಯಾಗಿದೆ. ಇದಾದ ನಂತರದಲ್ಲಿ ಎರಡನೆಯ ವಿಚಾರ ಏನೆಂದರೆ, ಜಮೀನು ಮತ್ತು ರೈತರ ದನ-ಕರುಗಳು ಮತ್ತು ಅವುಗಳಿಗೆ ಬೇಕಾಗಿರುವ ಮೇವಿನ ನಿರ್ವಹಣೆ ಕಡೆಗೆ ಹೆಚ್ಚಿನ ನಿಗಾ ವಹಿಸಬೇಕಾಗಿದೆ. ಈ ಮೂರು ಅಂಶಗಳು ಬಹಳ ಅತ್ಯಂತ ಅಗತ್ಯವಾಗಿ ಮಾಡಬೇಕಾದ ಕಾರ್ಯವಾಗಿದೆ. ಏತಕ್ಕೋಸ್ಕರ ಬರ ಪರಿಸ್ಥಿತಿ ಬಂದಿದೆ, ಈ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬ ವಿಚಾರಗಳ ಬಗ್ಗೆ

ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಅವುಗಳನ್ನು ಹೊರತು ಪಡಿಸಿ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಬಯಸುವುದೇನೆಂದರೆ, ಇವತ್ತಿನ ದಿವಸ ನಮಗೆ ಬರ ಪರಿಸ್ಥಿತಿ ಎದುರಾಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಮೋಡಗಳ ಬಿತ್ತನೆ ಮಾಡುವ ಪ್ರಸ್ತಾವನೆಯನ್ನು ಮಾಡಿದ್ದಾರೆ. ಇದನ್ನು ಯಾವಾಗ ಮಾಡಬೇಕು ಎನ್ನುವ ಅಂಶ ಬಹಳ ಮುಖ್ಯವಾದುದು. ಇವತ್ತಿನ ದಿವಸ ಮಳೆಗಾಲವು ಪ್ರಾರಂಭವಾಗಿದೆ. ಕೆಲವು ಪ್ರದೇಶಗಳಲ್ಲಿ ಮಳೆಯಾಗಿದೆ ಹಾಗೂ ಇನ್ನು ಕೆಲವು ಪ್ರದೇಶಗಳಲ್ಲಿ ಇನ್ನೂ ಮಳೆಯಾಗಿಲ್ಲ. ಜೂನ್ ತಿಂಗಳಿನಿಂದ ಆಗಸ್ಟ್‌ವರೆಗಿನ ಬಿತ್ತನೆಯ ಸಮಯವಾಗಿದೆ. ಮಳೆಗಾಲದ 18 ದಿನಗಳನ್ನು ನಾವು ಈಗಾಗಲೇ ಕಳೆದಿದ್ದೇವೆ. ಮೋಡಗಳ ಬಿತ್ತನೆಯ ಉಪಯೋಗವನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುವುದು ಬಹಳ ಮುಖ್ಯವಾದ ವಿಚಾರವಾಗಿದೆ. ಎಲ್ಲೆಲ್ಲಿ ಮೋಡಗಳಿವೆ ಅಲ್ಲಿ ಹೆಚ್ಚು ಪ್ರಯೋಜನವಾಗುವ ಕೆಲಸ ಈಗ ಆಗುತ್ತದೆ. ಅದರಲ್ಲೂ ಕೂಡ ಜೂನ್, ಜುಲೈ ಮತ್ತು ಆಗಸ್ಟ್ ಮಾಹೆಗಳಲ್ಲಿ ನಾವು ಅತ್ಯಂತ ಹೆಚ್ಚು ಮೋಡಗಳನ್ನು ಕಾಣುತ್ತೇವೆ. (ಮುಂದು)

**(739)14.06.2017 MSS-GR 6.30**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ಕೆಲವು ಪ್ರದೇಶದಲ್ಲಿ ಮಳೆ ಬರುತ್ತದೆ, ಕೆಲವು ಪ್ರದೇಶದಲ್ಲಿ ಮಳೆ ಬರುವುದಿಲ್ಲ. ಅದುದರಿಂದ ತಮ್ಮ ಮುಖಾಂತರ ನನ್ನ ಒಂದು ಸಲಹೆ ಸರ್ಕಾರಕ್ಕೆ ಏನೆಂದರೆ, ತಕ್ಷಣ immediately cloud seeding ಏನಿದೆ ಇವತ್ತು ಜಿಲ್ಲಾವಾರು ಯಾವ್ಯಾವ ತಾಲ್ಲೂಕಿನಲ್ಲಿ, ಯಾವ್ಯಾವ ಹೋಬಳಿಯಲ್ಲಿ ಮಳೆ ಬಂದಿದೆ ಅದನ್ನು ಬಿಟ್ಟು ಎಲ್ಲೆಲ್ಲಿ ಮಳೆ ಬಂದಿಲ್ಲ ಅಲ್ಲಿ cloud seeding ಮಾಡಬೇಕು. Cloud seeding ಮಾಡಿದರೆ ಅದರ ಪರಿಣಾಮ 90% ಆಗುತ್ತದೆ. ಆಮೇಲೆ ರೈತರಿಗೆ ಸರಿಯಾದ ಸಮಯಕ್ಕೆ ಬಿತ್ತನೆಯನ್ನು ಮಾಡುವುದಕ್ಕೆ ಅವಕಾಶ ಇದೆ. ಇದು ಅತ್ಯಂತ ಪ್ರಮುಖವಾದಂತಹ ಅಂಶವಾಗಿದೆ. ಆಮೇಲೆ ರೈತರ ಬಗ್ಗೆ ನಾವೆಲ್ಲರೂ ಸಾಕಷ್ಟು ಚರ್ಚೆಯನ್ನು ಮಾಡುತ್ತಿದ್ದೇವೆ. ಇವತ್ತು ಇಂತಹ ಬರಗಾಲ ಪರಿಸ್ಥಿತಿಯಲ್ಲಿ ಸರ್ಕಾರ ರೈತರಿಗೆ ಏನು ಮಾಡುವುದಕ್ಕೆ ಸಾಧ್ಯವಿದೆ? ಬರಗಾಲ ಸತತವಾಗಿ ಬರುತ್ತಾ ಇದೆ. ಇದಕ್ಕೆ ತಕ್ಷಣ ಪರಿಹಾರವನ್ನು ಕೊಡಬೇಕು. ಎರಡನೆಯದಾಗಿ ಆ ರೈತರನ್ನು ಬರಗಾಲದಿಂದ ಶಾಶ್ವತವಾಗಿ ಹೊರಗಡೆ ತರುವಂತಹ ಕೆಲಸವನ್ನು ಮಾಡುವಂಥದ್ದು ಎರಡೂ ಒಟ್ಟಿಗೆ ಮಾಡುವಂಥದ್ದನ್ನು ಸರ್ಕಾರ ಮಾಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಇವತ್ತು ಸುಮಾರು 60% ನಿಂದ 80% ರೈತರು ಸಣ್ಣ ಮತ್ತು ಅತೀ ಸಣ್ಣ ಹಿಡುವಳಿಯನ್ನು ಮಾಡುವಂತಹ ರೈತರಿದ್ದಾರೆ.

ಸಣ್ಣ ಮತ್ತು ಅತೀ ಸಣ್ಣ ಹಿಡುವಳಿಯನ್ನು ಮಾಡುವಂತಹ ರೈತರಿಗೆ ಒತ್ತು ಕೊಟ್ಟು ಅವರು ಬರಗಾಲ ಬಂದಾಗ ಮತ್ತು ಬರಗಾಲ ಇಲ್ಲದೇ ಇದ್ದಾಗಲೂ ಕೂಡ ಆದಾಯವನ್ನು ಯಾವ ರೀತಿಯಾಗಿ ಮಾಡಿಕೊಳ್ಳಬೇಕು ಹಾಗೂ ಅವರು ಯಾವ ರೀತಿಯಾಗಿ ಬದುಕಬೇಕು ಎನ್ನುವುದನ್ನು ಕಲಿಸಬೇಕಾಗಿದೆ. ಅದರಲ್ಲಿಯೂ ಕೂಡ ಬರಗಾಲದಂತಹ ಪರಿಸ್ಥಿತಿಯಲ್ಲಿ ಪ್ಯಾಕೇಜ್ ಕೊಡುವಂಥದ್ದು ಆಗಬೇಕು. ಅದಕ್ಕೆ ನನ್ನ ಒಂದು ಸಲಹೆಯನ್ನು ತಮ್ಮ ಮುಖಾಂತರ ಕೊಡುವುದೇನೆಂದರೆ, "ಸಮಗ್ರ ಕೃಷಿ ಪದ್ಧತಿ" Integrated Farming System ಅಂದರೆ ಇವತ್ತಿನ ದಿವಸ ಒಬ್ಬ ರೈತನ ಹತ್ತಿರ 4 ಅಥವಾ 5 ಎಕರೆ ಜಮೀನು ಇರುತ್ತದೆ. ಆ 5 ಎಕರೆ ಜಮೀನಿನಲ್ಲಿ ಮೊದಲನೆಯದಾಗಿ Soil Health Card ಕೊಡಬೇಕು. ಅಂದರೆ ಅವನ ಜಮೀನಿನ ಮಣ್ಣಿನ ಗುಣಧರ್ಮ ಏನಿದೆ, ಅವನು ಆ ಮಣ್ಣಿನಲ್ಲಿ ಯಾವ ಬೆಳೆಯನ್ನು ಬೆಳೆಯಬಹುದು, ಆ ಬೆಳೆಗೆ ಎಷ್ಟು ಮಳೆ ಬೇಕು. Soil Health Card ನಲ್ಲಿ ಪ್ರತಿಯೊಂದು ಅಂದರೆ ಮಣ್ಣಿನ ಆರೋಗ್ಯ ಇರುತ್ತದೆ. ಅದನ್ನು ಮೊದಲು ರೈತರಿಗೆ ಕೊಡಬೇಕು. ತದನಂತರ ಆ ಐದು ಎಕರೆಯಲ್ಲಿಯೂ ಕೂಡ ಒಂದೇ ರೀತಿಯ ಬೆಳೆಯನ್ನು ಬೆಳೆಯುವಂಥದ್ದು ಆಗಬಾರದು. ನಾವು ಕೃಷಿ ಭಾಗ್ಯದ ಮುಖಾಂತರ Farm Pond ಕೊಟ್ಟಿದ್ದೇವೆ. ಒಂದು Farm Pond ಇರಬೇಕು. ಜೊತೆಯಲ್ಲಿ ಕೃಷಿ ಭಾಗ್ಯ ಯೋಜನೆಯಲ್ಲಿ Drip Irrigation ಅನ್ನೂ ಕೊಡುತ್ತಿದ್ದೇವೆ. ಅದೂ ಕೂಡ ಇರಬೇಕು. ಅದಲ್ಲದೇ ಅವರು ರೈತರಲ್ಲಿರತಕ್ಕಂತಹ ಅಷ್ಟು ಭೂಮಿಯಲ್ಲಿ ಒಂದೇ ಬೆಳೆಯನ್ನು ತೆಗೆಯುವಂಥದ್ದು ಸರಿಯಲ್ಲ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಾಕಷ್ಟು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಅವುಗಳಲ್ಲಿ ಅಲ್ಲಲ್ಲಿಯೇ ಪ್ರಯೋಗವನ್ನು ಮಾಡುತ್ತಿದೆ. ಅಂದರೆ ಏನು ಮಾಡಬೇಕೆಂದರೆ ಅಲ್ಲಿರತಕ್ಕಂತಹ ಜಮೀನಿನ ಸ್ವಲ್ಪದರಲ್ಲಿ ತರಕಾರಿಯನ್ನು ಬೆಳೆಯಬೇಕು, millets ಬೆಳೆಯಬೇಕು ಆಮೇಲೆ ಭತ್ತ ಬೆಳೆಯಬೇಕು ಮತ್ತೆ ಅದರಲ್ಲಿ perennial crops ಕೂಡ ಇರಬೇಕು. ಇವತ್ತು ಸುಮಾರು 4-5 ಎಕರೆಯಲ್ಲಿ ಸುಮಾರು 50 ಅಥವಾ 100 ಗಿಡಗಳು ಯಾವುದಾದರು ತೋಟಗಾರಿಕೆಯ ಬೆಳೆಯ ಗಿಡಗಳಿತ್ತು ಎಂದರೆ 4-5 ಮಾವಿನ ಮರಗಳಿದ್ದರೆ ಅದರಿಂದ ಪ್ರತಿವರ್ಷ ಕೂಡ ಸ್ವಲ್ಪ ಆದಾಯ ರೈತರಿಗೆ ಬರುತ್ತದೆ. ಒಂದು ವೇಳೆ ಜೂನ್, ಜುಲೈ, ಆಗಸ್ಟ್ ತಿಂಗಳಿನಲ್ಲಿ ಮುಂಗಾರು ಮಳೆ ಸರಿಯಾಗಿ ಬರಲಿಲ್ಲ ಎಂದರೆ, ಸೆಪ್ಟಂಬರ್, ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ಮಳೆ ಬಂದರೆ ಅವು ಎರಡು ಮೂರು ಬೆಳೆಗೆ ಪ್ಲಸ್ ಈ perennial crops ಗೆ ಅನುಕೂಲವಾಗುತ್ತದೆ. ಅದರ ಜೊತೆಗೆ ಒಂದು ಪ್ಯಾಕೇಜ್ ಇವತ್ತಿನ ದಿವಸ ಕುರಿ, ಮೇಕೆ ಮತ್ತು ಹಸುಗಳನ್ನು ಸಾಕಬೇಕು. ಒಟ್ಟು 5 ಎಕರೆಯ ಜಮೀನಿನಲ್ಲಿ ಈ ರೀತಿಯಲ್ಲಿ ಒಂದು ಪ್ಯಾಕೇಜ್

ಇರುವಂಥದ್ದು ಆಗಬೇಕು. ಒಂದು ವೇಳೆ ಈ ಎಲ್ಲಾ ಬೆಳೆಗಳು ಹೋಯಿತು ಎಂದರೂ ಕೂಡ ಕುರಿ, ಮೇಕೆಗಳನ್ನು ಸಾಕಿ Farm Pond ದಲ್ಲಿ ಇದಂತಹ ನೀರಿನಿಂದ ಸ್ವಲ್ಪ ಹುಲ್ಲನ್ನು ಬೆಳೆದುಕೊಂಡು 10-20 ಮೇಕೆಯನ್ನು ಸಾಕಿದರೆ ಪ್ರತಿ ತಿಂಗಳು ಒಂದು ಮೇಕೆಯನ್ನು ಮಾರಿ ಜೀವನವನ್ನು ಸಾಗಿಸುವಂಥದ್ದು ಸಾಕಷ್ಟು ರೈತರಲ್ಲಿ ಕಾಣುತ್ತಿದ್ದೇವೆ. ಇದನ್ನು ಸಮಗ್ರವಾಗಿ ಇಡೀ ರಾಜ್ಯದ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿ ರೈತರಿದ್ದಾರೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಸರ್ಕಾರದ ವತಿಯಿಂದ scope ಕೊಟ್ಟಾಗ ಮಾತ್ರ ಇಂತಹ ಬರಗಾಲ ಬಂದಾಗ ರೈತರು ತಮ್ಮದೇ ಆದಂತಹ ಕಾಲಿನ ಮೇಲೆ ನಿಲ್ಲುವಂತಹ ಶಕ್ತಿ ಬರುವಂಥದ್ದು ಅಗುತ್ತದೆ. ಅದರ ಜೊತೆಗೆ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿಯೂ ಕೂಡ ಮತ್ತೆ ಇವತ್ತು ನಮ್ಮ ರಾಜ್ಯದಲ್ಲಿ 10 Agricultural Zones ಇದೆ. ಈ 10 Agricultural Zones ನಲ್ಲಿ ಯಾವ zone ನಲ್ಲಿ ಯಾವ ಬೆಳೆ ಬರುತ್ತದೆ, ಯಾವ ರೀತಿಯ ವಾತಾವರಣ ಯಾವ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲ ಇದೆ ಎನ್ನುವಂಥದ್ದು ಇವತ್ತಿನ ದಿವಸ ನೋಟಿಫೈಡ್ ಇದೆ. ಆ ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ 10 Agricultural Zones ನಲ್ಲಿ ಯಾವ್ಯಾವ ಬೆಳೆಯನ್ನು ಬೆಳೆಯಬಹುದು, ಯಾವ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ ಎನ್ನುವಂತಹ ಸಂಪೂರ್ಣವಾದಂತಹ ಮಾಹಿತಿ ಇದೆ. ಈ ಮಾಹಿತಿಯನ್ನು ಸರಿಯಾಗಿ ಆ ಭಾಗದ Zone ನಲ್ಲಿರುವಂತಹ ರೈತರಿಗೆ ಮುಟ್ಟುವಂತಹ ಕೆಲಸವಾಗಬೇಕು. ಆ ರೀತಿಯ ಕೆಲಸವಾಗಬೇಕಾದರೆ, ಎಲ್ಲಾ ಕಡೆ ರೈತರಿಗೆ ತರಬೇತಿಯನ್ನು ಕೊಡುವಂತಹ ಸಂಸ್ಥೆಗಳಿರಬೇಕು. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ 4 ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಇವತ್ತು ನಾವು ಕೂಡ ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮುಖಾಂತರ ನಾವು ಒಂದು ವಿನಂತಿಯನ್ನು ಏನು ಮಾಡಿದ್ದೇವೆಂದರೆ, ರಾಯಚೂರಿನಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ ಇದೆ. **RAPCMS** (Raichur Agricultural Produce Cooperative Marketing Committee) ಚೆನ್ನಾಗಿದೆ. ಅವರ ಹತ್ತಿರ 43 ಎಕರೆ ಭೂಮಿ ಇದೆ. ಅವರು ಕೂಡ ನಾವು ಸ್ವಲ್ಪ ಇನ್‌ವೆಸ್ಟ್ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಾವು ಐವತ್ತು ಲಕ್ಷ ರೂಪಾಯಿಗಳನ್ನು ಹಾಕಿ ಒಂದು ರೈತರ ತರಬೇತಿ ಸಂಸ್ಥೆಯನ್ನು ಪ್ರಾರಂಭ ಮಾಡಿ ಪ್ರತಿವರ್ಷ ಮೂರು ಅಥವಾ ನಾಲ್ಕು ಸಾರಿ ಆ ಕೃಷಿಕರಿಗೆ ಸದರಿ ವಿಷಯದ Subject matter Specialists and Agricultural Scientists ಗಳನ್ನು ಕರೆದುಕೊಂಡು ಆ ಭಾಗದಲ್ಲಿರತಕ್ಕಂತಹ ಏನು ಬೆಳೆ ಬೆಳೆಯುತ್ತಾರೆ ಅದನ್ನು

ಯಾವ ರೀತಿಯಾಗಿ ಬೆಳೆಯಬೇಕು. ಅದರ ಕಾಲಮಿತಿ ಏನು ಎನ್ನುವುದರ ಬಗ್ಗೆ ಮಾಹಿತಿಯನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಆ ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ಟೀಚರ್‌ಗೆ, ಪ್ರೊಫೆಸರ್‌ಗಳಿಗೆ ಗದ್ದೆಯನ್ನು ಹೂಳುವುದಕ್ಕೆ ಬರುತ್ತದೆಯೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಗದ್ದೆಯನ್ನು ಹೂಳುವುದಕ್ಕೆ ಬರುವುದಿಲ್ಲ. ಹೇಳುತ್ತಾರೆ. ರೈತರು ಗದ್ದೆಯನ್ನು ಹೂಳಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಕೃಷಿ ವಿಶ್ವವಿದ್ಯಾನಿಲಯದವರ ಹತ್ತಿರ ಜಮೀನು ಇರುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಗದ್ದೆ ಉಳುವುದಕ್ಕೆ ಬರುವುದಿಲ್ಲವೆಂದರೆ ಹಾಗಾದರೆ ಕೃಷಿ ವಿಶ್ವವಿದ್ಯಾನಿಲಯವನ್ನು ಏಕೆ ಮಾಡಬೇಕು. ಅದನ್ನೆಲ್ಲಾ ಮುಚ್ಚಿಬಿಡಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ Judicial Layout ಹತ್ತಿರ ಕೃಷಿ ವಿಶ್ವವಿದ್ಯಾನಿಲಯ ಇದೆಯಲ್ಲಾ ಅಲ್ಲಿ ಬಂಗಾರದಂತಹ ಜಮೀನು ಇದೆ. ಅಲ್ಲಿ ಒಂದು ಎಕರೆಯಲ್ಲಿ ಬಂಗಾರದಂತಹ ರಾಗಿಯನ್ನು ಬೆಳೆದರೆ ಸಾಕು. ಈಗ ಬೆಳೆಯನ್ನು ಯಾವ ರೀತಿಯಾಗಿ ಬೆಳೆಯಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ನಾನು ಪದವಿಯನ್ನು ಓದುತ್ತಿರುವಾಗಲೂ ಗದ್ದೆಯನ್ನು ಉಳುವುದಕ್ಕೆ ಹೋಗುತ್ತಿದ್ದೆ. ಆದರೆ ಲಾ ಪದವಿಯನ್ನು ಮಾಡಬೇಕಾಗಿದ್ದರಿಂದ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಕೃಷಿ ನಮ್ಮ ದೇಶದಲ್ಲಿ ಇವತ್ತು ಅವಿದ್ಯಾವಂತರ ಕೈಯಲ್ಲಿದೆ. ಅವರನ್ನು ನಿಮ್ಮ ದೃಷ್ಟಿಯ ಪ್ರಕಾರವಾಗಿ ಬದವಲಾವಣೆ ಮಾಡುವುದು ಸುಲಭದ ಕೆಲಸವಲ್ಲ. ವಿದ್ಯಾವಂತರು ಈ ಕೃಷಿ ಕ್ಷೇತ್ರಕ್ಕೆ ಹೋಗುವುದೇ ಇಲ್ಲ. ಈಗ ನಮ್ಮ ಮನೆಯಲ್ಲಿ ನನ್ನ ಮಕ್ಕಳು ಮತ್ತು ನನ್ನ ಅಣ್ಣನ ಮಕ್ಕಳು ಇದ್ದಾರೆ ಅವರ್‍ಯಾರು ಕೃಷಿ ಕ್ಷೇತ್ರಕ್ಕೆ ಬರಲೇ ಇಲ್ಲ. ಇದು ನನಗೆ ಬಂದಂತಹ ದುರಂತ. ವಿದ್ಯಾವಂತ ಕೈಗೆ ಕೃಷಿ ಕ್ಷೇತ್ರ ಸಿಕ್ಕಿದರೆ ಆಗ ಈ ಕೃಷಿ ಕ್ಷೇತ್ರವನ್ನು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಲಾಭದಾಯಕವಾದಂತಹ ಒಂದು ಉದ್ಯಮವನ್ನಾಗಿ ಮಾಡಬಹದು. ಆದರೆ ಅವಿದ್ಯಾವಂತರ ಕೈಯಲ್ಲಿರುವುದೇ ನಮ್ಮ ದುರಂತ. ಬಯಲು ಸೀಮೆಯಲ್ಲಿ ಒಬ್ಬ ರೈತನಿಗೆ 50 ಎಕರೆ, 100 ಎಕರೆ ಭೂಮಿ ಇದೆ. ಅವರ್‍ಯಾರು ವ್ಯವಸಾಯವನ್ನು ಮಾಡುವುದಿಲ್ಲ. ಅವರ ಆಳುಗಳು ವ್ಯವಸಾಯವನ್ನು

ಮಾಡುತ್ತಾರೆ. ಆ ಆಳು ಯಾರಿರುತ್ತಾರೆಂದರೆ ಅವಿದ್ಯಾವಂತರು. ಅದಕ್ಕೋಸ್ಕರವಾಗಿ ನಾನು ಹೇಳಿದ್ದು. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಸನ್ನಿವೇಶದಲ್ಲಿ ನಾವಿದ್ದೇವೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೆ ನಿಮಗೆ ಜಮೀನು ಇದೆಯೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅಲ್ಪ ಸ್ವಲ್ಪ ಜಮೀನು ಇದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಗದ್ದೆ ಉಳುವುದಕ್ಕೆ ಬರುತ್ತದೆಯೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಇವತ್ತಿನವರೆಗೂ ಸ್ವಂತ ಒಕ್ಕಲುತನವನ್ನು ಮಾಡುತ್ತೇನೆ. ಮಾನ್ಯ ಸಚಿವರು ಮಾಡುತ್ತಾರೆಯೋ ಇಲ್ಲವೋ ಗೊತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರಿಗೆ 200 ಎಕರೆ ಜಮೀನು ಇದೆ. ಅವರು ಬೇಸಾಯಗಾರರು. ಉಳುಮೆಯನ್ನು ಮಾಡುತ್ತಾರೆ. ಗದ್ದೆ ಹತ್ತಿರವೇ ಮಲಗುತ್ತಾರೆ. ಬೇಸಾಯದಲ್ಲಿ ಮಾತ್ರ ಅವರು ಮಾದರಿಯಾಗಿದ್ದಾರೆ. ಅವರು B.Sc., (Agri., ) ಪದವೀಧರರಾಗಿದ್ದಾರೆ, ಮತ್ತೆ ವ್ಯವಸಾಯದ ಬಗ್ಗೆ ಅನುಭವ ಇದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ಅವಿದ್ಯಾವಂತ ರೈತರ ಕೈಯಲ್ಲಿ ಇವತ್ತು ನಮ್ಮ ದೇಶದ ಕೃಷಿ ಇದೆ ಎಂದು ಅವರು ಹೇಳಿದರು. ಹಾಗಾದರೆ ಅವರುಗಳು ಯಾವಾಗ ವಿದ್ಯಾವಂತರಾಗಬೇಕು? ಏನಾದರು ಮಾಡಬೇಕಲ್ಲವೇ? We have to take some steps. ಇವತ್ತು ಕೃಷಿಕರ ತರಬೇತಿ ಕೇಂದ್ರ ಎಂದು ಹೇಳುತ್ತಿದ್ದೆ? ಈ ಕೃಷಿಕರ ತರಬೇತಿ ಕೇಂದ್ರದಲ್ಲಿ ಕೇವಲ ಲೆಕ್ಚರರ್ಸ್ ಮಾತ್ರ ಬಂದು ತರಬೇತಿಯನ್ನು ಕೊಡುತ್ತಿಲ್ಲ. ಇವತ್ತಿನ ಅತ್ಯಂತ innovative farmers ಇರುತ್ತಾರೆ. ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಯಾರು ಹೆಚ್ಚು ಪರಿಣಾಮಕಾರಿಯಾಗಿ ಕೃಷಿ ಪದ್ಧತಿಯನ್ನು ಅಳವಡಿಸಿ ಆ ಜಮೀನಿನಲ್ಲಿ ಹೆಚ್ಚು ಇಳುವರಿಯನ್ನು ತೆಗೆದಿರುತ್ತಾರೆ. ಅವರಿಗೆ ರಾಜ್ಯ ಸರ್ಕಾರ ಮತ್ತು ಜಿಲ್ಲಾ ಮಟ್ಟದಲ್ಲಿ ಅವರಿಗೆ ಪುರಸ್ಕಾರವನ್ನು ಕೊಟ್ಟಿರುತ್ತೇವೆ. ಅಂಥವರ 10-20 ರೈತರ ನೋಂದಣಿ ಇರುತ್ತದೆ. ಈ ಕೃಷಿಕರ ತರಬೇತಿ ಕೇಂದ್ರದಲ್ಲಿ ನಾವೇ ಅವರನ್ನು ಕರೆದು ಅವಿದ್ಯಾವಂತ ರೈತರು ಯಾರಿದ್ದಾರೆ ಅವರಿಗೆ ರೈತರ ಭಾಷೆಯಲ್ಲಿಯೇ ಅವರಿಗೆ ತರಬೇತಿಯನ್ನು ಕೊಡುವಂತಹ

ಕೆಲಸವಾಗುತ್ತಿದೆ. ಇದನ್ನು ನಾವು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕೆಂದು ನಮ್ಮ ಆಸೆ.

**(ಮುಂದು)**

**(740)14.06.2017 6.40 ಎಸ್‌ವಿ/ಎಂಡಿ**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ಇದನ್ನು ನಾವು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕಾದುದು ನಮ್ಮ ಆಶಯ. ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಬಳಸಿಕೊಂಡು ಯಾವ ಬೆಳೆಯು ಎಷ್ಟು ಸಮಯದಲ್ಲಿ ಬರುತ್ತದೆ, ಅದರ ಬೆಲೆ ಏನು, ಅದರ ಬಿತ್ತನೆ ಹೇಗೆ? ಇವೆಲ್ಲವುಗಳನ್ನೂ ತಿಳಿದುಕೊಳ್ಳಬೇಕು. ಹೈದರಾಬಾದ್‌ನಲ್ಲಿ The *International Crops Research Institute* for the Semi-Arid Tropics (ICRISAT) ಎಂದು ಇದೆ. ಜೋಳ, ಭತ್ತ ಅಥವಾ ಸಾವೆಣೆ ಹೀಗೆ ಯಾವುದನ್ನೇ ತೆಗೆದುಕೊಂಡರೂ ಸಹ 3,000 ತಳಿಗಳು ಇದೆ. ಅಲ್ಲಿ ಏನನ್ನೂ ಬೆಳೆಯುತ್ತಿಲ್ಲ ಎಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಅಲ್ಲಿ ಕೇವಲ ಸಂಶೋಧನೆಯನ್ನು ಮಾಡುತ್ತಿರುತ್ತಾರೆ. A+B, B+C, C+D, A+A etc., ಈ ರೀತಿ ಮಾಡಿ genes ಅನ್ನು link ಮಾಡುವುದಕ್ಕೆ ನಾಲ್ಕು ಸಾಲು experiment ಇರುತ್ತದೆ. ಅಲ್ಲಿ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಆ ನಾಲ್ಕು ಸಾಲುಗಳನ್ನು check ಮಾಡಿದಾಗ ಯಾವ ಜೀನ್ ಯಾವುದರೊಂದಿಗೆ ಅಟ್ಯಾಚ್ ಆದಾಗ ಹೆಚ್ಚು ಬೆಳೆ ಬರುತ್ತದೆಯೋ ಆಗ ಅದಕ್ಕೆ ವಿಸ್ತರಣೆಯನ್ನು ಕೊಡಲಾಗುವುದು. ನಾಲ್ಕು ಸಾಲಿನಲ್ಲಿ ಬೆಳೆದದ್ದನ್ನು ಅರ್ಧ ಎಕರೆಯಲ್ಲಿ findings ಮಾಡುತ್ತಾರೆ. ಅರ್ಧ ಎಕರೆ ಆದಮೇಲೆ ಒಂದೆರಡು ಎಕರೆ findings ಮಾಡುತ್ತಾರೆ. ತದನಂತರ ಅದನ್ನು innovative farmers ಗೆ ಕೊಡುತ್ತಾರೆ. ಅದಾದ ನಂತರ ಸರ್ಕಾರ ಅದನ್ನು ಒಪ್ಪಿ ಬಿಡುಗಡೆ ಮಾಡುವಂತಹ ಕೆಲಸ ಆಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳಿಗೂ ಸಂಶೋಧನೆ ಮಾಡಲು ಸಾಕಷ್ಟು ಹಣವನ್ನು ಕೊಡುತ್ತಿಲ್ಲ. *Rashtriya Krishi Vikas Yojana (RKVY)* ಅಡಿಯಲ್ಲಿ ಹೆಚ್ಚು ಹಣವನ್ನು ಕೊಡುತ್ತಿದ್ದಾರೆ. ವಿಶ್ವವಿದ್ಯಾಲಯಗಳನ್ನು ಹೆಚ್ಚಿನ ರೀತಿಯಲ್ಲಿ establish ಮಾಡಿದಾಗ ರಾಜ್ಯದಲ್ಲಿರತಕ್ಕಂತಹ 60-70% ರೈತರ ಕೈ ಬಲ ಪಡಿಸುವಂತಹ ಕೆಲಸವಾಗುತ್ತದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರದಿಂದ ಇದೊಂದು ದೊಡ್ಡ ಕೆಲಸವಾಗಬೇಕಾಗಿದೆ. ಬರಗಾಲ ಬಂದಾಗ ಪಶುಗಳಿಗೂ ಮತ್ತು ರೈತರಿಗೂ ಸಹ ತೊಂದರೆಯಾಗುತ್ತದೆ. ಇದು ಕೇವಲ ನಮ್ಮ ರಾಜ್ಯದ ಒಂದು ಇಲಾಖೆ ಮಾಡುವ ಕೆಲಸವಲ್ಲ. ಇದಕ್ಕೆ ಕೃಷಿ, ತೋಟಗಾರಿಕೆ, ಸಹಕಾರ, ನೀರಾವರಿ

ಮತ್ತು ಪಶುಸಂಗೋಪನೆ ಈ ಐದೂ ಇಲಾಖೆಗಳೂ ಸೇರಿ ಇಂತಹ ಸಂದರ್ಭಗಳು ಬಂದಾಗ ನಾಲ್ಕಾರು ಸಭೆಗಳನ್ನು ನಡೆಸಿ ಕ್ರಮ ಕೈಗೊಳ್ಳಬೇಕು. ಏಕೆಂದರೆ ಇವು ಒಂದಕ್ಕೊಂದು *interlinked* ಆಗಿರುತ್ತವೆ. ಇಲ್ಲಿ ಹಲವಾರು ಮಾನ್ಯ ಸದಸ್ಯರು ಮಾತನಾಡುವಾಗ ಹನಿ ನೀರಾವರಿಗೆ ಉತ್ತೇಜನ ಕೊಡಬೇಕೆಂದು ಹೇಳಿದರು. ಮಾನ್ಯ ಮಂತ್ರಿಗಳೂ ಸಹ 800 ಕೋಟಿ ರೂಪಾಯಿಗಳಿಗೂ ಅಧಿಕ ಹಣವನ್ನು ಹನಿ ನೀರಾವರಿಗಾಗಿ ಮೀಸಲಿಡಲಾಗಿದೆ ಎಂದು ಹೇಳಿದರು. ಹನಿ ನೀರಾವರಿಯನ್ನು ನಾವು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಬೇಕಾದರೆ ರೈತರಿಗೆ ಹೆಚ್ಚು ವಿದ್ಯುಚ್ಛಕ್ತಿ ಕೊಡಬೇಕು. ಈಗ ಕೊಡುತ್ತಿರುವಂತಹ 7 ತಾಸು ವಿದ್ಯುಚ್ಛಕ್ತಿಯಿಂದ ಹನಿ ನೀರಾವರಿಯ ಮುಖಾಂತರ *you can't cover the whole land.* ಆದರೆ ಅದು *interlinked* ಇದೆ. ಇದಕ್ಕೆ ಹೆಚ್ಚು ವಿದ್ಯುಚ್ಛಕ್ತಿ ಬೇಕು. ಏಕೆಂದರೆ ಸ್ವಲ್ಪ ಕೆಸರಿದ್ದರೂ ಸಹ ಹನಿ ನೀರಾವರಿಯಲ್ಲಿ ನೀರು ಮುಂದೆ ಹೋಗುವುದಿಲ್ಲ. ಅದು ರಂಧ್ರಗಳ ಮೂಲಕ ಹೋಗಬೇಕು. ಅದೆಲ್ಲವನ್ನೂ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದಾಗ ಮಾತ್ರ ಹನಿ ನೀರಾವರಿ ಯಶಸ್ವಿಯಾಗಲು ಸಾಧ್ಯ.

ನಂತರ ಬರುವುದು ಕೃಷಿ ಇಲಾಖೆ. ನಮ್ಮ ರಾಜ್ಯ ಸರ್ಕಾರದವರು ಎಲ್ಲಾ ಕಡೆಗಳಲ್ಲಿಯೂ input subsidy ಯನ್ನು ಕೊಡಬೇಕು. Small and marginal farmers ಎಷ್ಟಿದ್ದಾರೆ, SC-ST farmers ಎಷ್ಟಿದ್ದಾರೆ, ಯಾರಿಗೆ ಕೊಳ್ಳುವುದಕ್ಕೆ ಶಕ್ತಿ ಇಲ್ಲವೋ ಅಂತಹ ರೈತರಿಗೆ ಒಂದು ಕಿಟ್ ಅನ್ನು ವಿತರಿಸಬೇಕು. ಪ್ರಥಮವಾಗಿ ಜೂನ್-ಜುಲೈನಲ್ಲಿ ಬಿತ್ತನೆಯು ಪ್ರಾರಂಭಗೊಳ್ಳುತ್ತದೆ. First we have to distribute agricultural kits. ಉದಾಹರಣೆಗೆ ಮೂರು ಎಕರೆ ಹೊಲ ಇರುವವನಿಗೆ ಬೇಕಾದಷ್ಟು ಬಿತ್ತನೆ ಬೀಜಗಳು, ಗೊಬ್ಬರ ಮತ್ತು ಕೀಟನಾಶಕಗಳನ್ನು ನೀಡಬೇಕು. ರಾಜ್ಯ ಸರ್ಕಾರದಿಂದ ಈ ಕೆಲಸ ಮೊದಲು ಆಗಬೇಕಾಗಿದೆ. ತಕ್ಷಣವೇ ಈ ಕೆಲಸವಾದರೆ ರೈತನಿಗೆ ಬಿತ್ತನೆ ಮಾಡಲು ಅನುಕೂಲವಾಗುತ್ತದೆ.

ತದನಂತರ ನೀರಾವರಿಯ ಕುರಿತು ಸಾಕಷ್ಟು ತೊಂದರೆಗಳಿವೆ. ಮಾನ್ಯ ಉಗ್ರಪ್ಪನವರು ಹೇಳಿದಂತೆ ನಮ್ಮಲ್ಲಿ ಸಾಕಷ್ಟು ಸಮಸ್ಯೆಗಳಿವೆ. Cauvery basin, Krishna basin, Pinakini basin ಹೀಗೆ ಮತ್ತು ಅವುಗಳ ಬಗ್ಗೆ ಅವರು ಸಾಕಷ್ಟು ಬೆಳಕನ್ನೂ ಚೆಲ್ಲಿದರು. ಸುಮಾರು 4,000 ಟಿ.ಎಂ.ಸಿ. ಮಳೆ ನೀರು ನಮ್ಮ ರಾಜ್ಯದಲ್ಲಿ ಬೀಳುತ್ತಿದ್ದು, ಅದನ್ನು ಬಳಕೆ ಮಾಡುವುದಕ್ಕೆ ಆಗುತ್ತಿಲ್ಲ. ಸುಮಾರು 1700-1800 ಟಿ.ಎಂ.ಸಿ. ನೀರು ಮಾತ್ರ ಬಳಸಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ನದಿಗಳಿದ್ದು, ಆ ನದಿಗಳನ್ನು ಸದುಪಯೋಗ ಮಾಡುವಂತಹ ಕೆಲಸ ಸರಿಯಾಗಿ

ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ನಮ್ಮ ಮಾನ್ಯ ಸದಸ್ಯರೊಬ್ಬರು Krishna basin ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿ ವರ್ಷ 10,000 ಕೋಟಿಯನ್ನು ನೀರಾವರಿಗೆ ಕೊಡುತ್ತೇವೆಂದು ಹೇಳಿರುತ್ತಾರೆಯೇ ಹೊರತು Krishna basin ಗಾಗಿ ಮಾತ್ರ ಎಂಬುದಾಗಿ ಅಲ್ಲ. ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದಾರೆ. 4 ವರ್ಷ ಕಳೆದರೂ ರೂ.53,000-54,000 ಸಾವಿರ ಕೋಟಿ enmark ಆಗಿದ್ದು, ಅದರಲ್ಲಿ ರೂ.34,000 ಕೋಟಿ ಖರ್ಚಾಗಿದೆ. ಅದು ಕೃಷ್ಣಾ ಇರಬಹುದು, ಕಾವೇರಿ ಇರಬಹುದು.

ಮಾನ್ಯ ಸಭಾಪತಿಯವರೇ, ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದಂತೆ, ನಾವು ಚಿಕ್ಕವರಿದ್ದಾಗ ನದಿ ಇರಲಿ, ಹಳ್ಳದಲ್ಲಿ ಇರಲಿ ಸಾಕಷ್ಟು ದಿನ ನೀರು ಹರಿಯುತ್ತಿತ್ತು. ಇವತ್ತು ಆ ರೀತಿ ನೀರು ಹರಿಯುತ್ತಿಲ್ಲ ಎಂಬುದು ತಮಗೆಲ್ಲರಿಗೂ ತಿಳಿದಿದೆ. ಇದಕ್ಕೆ ಪ್ರಮುಖವಾದ ಕಾರಣ ಕಟ್ಟಿರುವಂತಹ ಬ್ಯಾರೇಜ್‌ಗಳಿಂದ ನಿರ್ಮಿಸಿರುವಂತಹ ಚೆಕ್‌ಡ್ಯಾಂಗಳಿಂದ ಮೊದಲು ನದಿಗಳಲ್ಲಿ ನೀರು ನಿರಂತರವಾಗಿ ಹರಿಯುತ್ತಿದ್ದವು. ಅದರಿಂದ ಯಾರೂ ಉಸುಕನ್ನು ತೆಗೆಯುತ್ತಿರಲಿಲ್ಲ. ಅದಕ್ಕೆ water holding capacity ಇರುತ್ತಿತ್ತು. ಒಂದೊಂದು ಕಡೆಗಳಲ್ಲಿ 6-8 ಅಡಿ ಉಸುಕು ಇರುತ್ತಿತ್ತು. ಉಸುಕಿನಲ್ಲಿ ಸಾಕಷ್ಟು water holding capacity ಇರುವುದರಿಂದ ನೀರು ನಿರಂತರವಾಗಿ ಹರಿಯುತ್ತಿತ್ತು. ಒಂದು ವೇಳೆ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ನದಿಗಳು ಬತ್ತಿ ಹೋದರೂ ಸಹ ಸ್ವಲ್ಪ ಉಸುಕನ್ನು ತೋಡಿದರೆ ಅಲ್ಲಿ ಪರಿಶುದ್ಧವಾದ ನೀರು ಬರುತ್ತಿತ್ತು. ಅದನ್ನು ಚಿಲುಮೆ ಎನ್ನುತ್ತೇವೆ. ನದಿಪಾತ್ರದಲ್ಲಿ ಇಂತಹ ಚಿಲುಮೆಗಳಿಂದ ನಾವು ಚೊಂಬಿನಿಂದ ಬಿಂದಿಗೆಗಳಿಗೆ ನೀರು ತುಂಬಿಕೊಂಡು ನಮ್ಮ ಮನೆಗೆ ನೀರು ತರುತ್ತಿದ್ದುದನ್ನು ನಾನು ನೋಡಿದ್ದೇನೆ. It is fully filtered pure drinking water. ಇದು ಯಾವಾಗಲೂ ಸಿಗುತ್ತದೆ. ಈಗ ನಾವು ಶುದ್ಧ ಕುಡಿಯುವ ನೀರಿನ ಘಟಕಗಳನ್ನೇನು ಮಾಡಿದ್ದೇವೆ ಅದೇ ರೀತಿ ಆಗ ಅದೇ ಪರಿಶುದ್ಧವಾದ ಕುಡಿಯುವ ನೀರಾಗಿತ್ತು. ನಮ್ಮ ಊರಿನಲ್ಲಿ ನದಿ ಇದೆ. ಆದರೆ ನಾವೆಂದಿಗೂ ಆ ನದಿಯ ನೀರನ್ನು ಕುಡಿಯುತ್ತಿರಲಿಲ್ಲ. ಚಿಲುಮೆಯ ನೀರನ್ನೇ ಕುಡಿಯುತ್ತಿದ್ದೆವು. ಅಂದಿನ ಚಿಲುಮೆಗಳ ಕಾರ್ಯವನ್ನು ಇಂದಿನ ಶುದ್ಧ ನೀರಿನ ಘಟಕಗಳು ಮಾಡುತ್ತಿವೆ.

ತಿದ್ದುಪಡಿಯಾಗದ ಪ್ರತಿ ಪ್ರಕಟಣೆಗಾಗಿ ಅಲ್ಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಷ್ಟೆಲ್ಲ ಆದಮೇಲೆ 365 ದಿನಗಳೂ ನೀರು ಬರುವುತ್ತದೆಂದು you can't expect it. ಏಕೆಂದರೆ, ಆಲಮಟ್ಟಿ, ನಾರಾಯಣಪುರ ಮುಂತಾದ ಬ್ಯಾರೇಜ್‌ಗಳನ್ನು ಕಟ್ಟಿರುತ್ತೇವೆ. ಉಸುಕು ಕೂಡ ಹೋಗುತ್ತದೆ. ಈಗ ನಮ್ಮ ರಾಜ್ಯ ಸರ್ಕಾರ ಮಾಡಬೇಕಾದ ಪ್ರಮುಖವಾದ ಕೆಲಸವೇನೆಂದರೆ flood flow water ಹಿಡಿಯಬೇಕಾಗಿದೆ. Every year we are getting 4,000 TMC of rainfall water ಎಂದು ಮಾನ್ಯ ಉಗ್ರಪ್ಪನವರು ಹೇಳಿದರು. ಅದನ್ನು ಪೂರ್ತಿ ಉಪಯೋಗಿಸಿಕೊಳ್ಳಲು ಆಗುತ್ತಿಲ್ಲ. ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲಿ flood flow canal ಗಳನ್ನು ಮಾಡಬೇಕಾಗಿದೆ. ರಾಯಚೂರು, ವಿಜಾಪುರ, ಯಾದಗಿರಿ ಮತ್ತು ಬಾಗಲಕೋಟೆ ಜಿಲ್ಲೆ ಕೃಷ್ಣಾ ನದಿ ಪಾತ್ರದಲ್ಲಿದೆ. ಪ್ರತಿ ಜಿಲ್ಲೆಗಳಲ್ಲಿಯೂ 70 ರಿಂದ 90 ಕೆರೆಗಳಿವೆ. ಅದು ಸಣ್ಣ ನೀರಾವರಿ ಇಲಾಖೆಯ ಕೆರೆಗಳಿರಬಹುದು ಅಥವಾ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಕೆರೆಗಳಿರಬಹುದು ಅಥವಾ ಬೃಹತ್ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳಿರಬಹುದು. ನಾವು ಅಂತಹ ಕೆರೆಗಳನ್ನು ಪುನಶ್ಚೇತನಗೊಳಿಸಿ ನದಿಯಿಂದ ಸಮುದ್ರವನ್ನು ಸೇರುತ್ತಿರುವಂತಹ ನೀರು ಮತ್ತು ಮಳೆಗಾಲದಲ್ಲಿ ಬರತಕ್ಕಂತಹ ಹೆಚ್ಚು ನೀರನ್ನು ಸಂಗ್ರಹಣೆ ಮಾಡಿ flood flow canal ಗಳ ಮುಖಾಂತರ ಪ್ರತಿ ಜಿಲ್ಲೆಯಲ್ಲಿ 70-80 ಕೆರೆಗಳನ್ನು ತುಂಬಿಸಿದಾಗ ನಾಲ್ಕರಿಂದ ಎಂಟು ಟಿ.ಎಂ.ಸಿ.ವರೆವಿಗೂ ನೀರು ಸಂಗ್ರಹಣೆ ಮಾಡಬಹುದಾಗಿದೆ. ಒಂದೊಂದು ಜಿಲ್ಲೆಯಲ್ಲಿ ಏಳೆಂಟು ಟಿ.ಎಂ.ಸಿ. ನೀರು ಸಂಗ್ರಹಣೆ ಮಾಡಿದರೆ ಅದು ಮುಖ್ಯವಾಗಿ ಕುಡಿಯುವ ನೀರಿಗಾಗುತ್ತದೆ. ಒಣಗಿ ಹೋಗುತ್ತಿರುವ ಬೋರ್‌ವೆಲ್‌ಗಳನ್ನು recharge ಮಾಡುವ ಕೆಲಸ ಆಗಬೇಕಾಗಿದೆ. ಮಾನ್ಯ ನೀರಾವರಿ ಮಂತ್ರಿಗಳಾದ ಶ್ರೀ ಎಂ.ಬಿ.ಪಾಟೀಲರು ಬಿಜಾಪುರ ಜಿಲ್ಲೆಯಲ್ಲಿ trial basis ಮೇಲೆ ಸುಮಾರು 70-80 ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡಿರುತ್ತಾರೆ. (ಮುಂದು)

(741)/14-6-2017/RC-MD/6-50/

**ಶ್ರೀ ಬಸವರಾಜ್ ಪಾಟೀಲ್ ಇಟಗಿ(ಮುಂದು):-**

ಈ ಯೋಜನೆಯಲ್ಲಿ ಕೇವಲ Krishna basin ಮಾತ್ರವಲ್ಲ, Cauvery basin, Pinakini basin and Godavary basin ಎಲ್ಲಾ basin ಗಳಲ್ಲಿಯೂ ಮಾಡುವಂಥದ್ದು ಬಹಳ ಮುಖ್ಯವಾಗಿದೆ. ಅದೂ ಅಲ್ಲದೆ ನಮ್ಮ ಮಾನ್ಯ ಬಸವರಾಜ್ ಪಾಟೀಲ್ ಯತ್ನಾಳ್ ಸಾಹೇಬರು ಒಂದು ವಿಷಯ ಹೇಳಿದರು. Interlinking of rivers ಇದು ಅತ್ಯಂತ ಮಹತ್ವವಾದಂತ ಒಂದು ಅಂಶ.

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎಲ್ಲಿಯವರೆಗೆ ನಾವು interlinking of rivers ಮಾಡುವುದಿಲ್ಲ ಅಲ್ಲಿಯವರೆಗೂ ನೀರಿನ ಸಮಸ್ಯೆ ಬಗೆಹರಿಯುವುದಿಲ್ಲ. ಇದನ್ನು ಮಾಡದೆ ಹೋದರೆ ಮುಂಬರುವ 25 ವರ್ಷಗಳ ನಂತರ ಇವತ್ತೇನು ನಮ್ಮ ಹತ್ತಿರ distributors ಗಳಿವೆ, ಕಾಲುವೆಗಳಿವೆ, these irrigation canals will turn up as a drinking water canals. ಏಕೆಂದರೆ, ಜನಸಂಖ್ಯೆಯು ಸಹ ಅಷ್ಟೇ ವೇಗವಾಗಿ ಬೆಳೆಯುತ್ತಿದೆ. ಇವತ್ತು ಮಾನ್ಯ ಸದಸ್ಯರೊಬ್ಬರು ಈ ಹಿಂದೆ cattle population ಇಷ್ಟಿತ್ತು, ಈಗ ಇಷ್ಟಿದೆ ಎಂದು ಹೇಳಿದರು. ಆದರೆ ಅದರ ವ್ಯತಿರಿಕ್ತವಾಗಿ human population ಸಿಕ್ಕಾಪಟ್ಟೆಯಾಗಿದೆ. ಹಿಂದಿನ ಕಾಲದಲ್ಲಿ ಒಬ್ಬ ಮನುಷ್ಯ ತನ್ನ ಸ್ವಂತ ಬಳಕೆಗೆ ಸುಮಾರು 30 ರಿಂದ 50 ಲೀಟರ್‌ರಷ್ಟು ನೀರನ್ನು ಉಪಯೋಗಿಸುತ್ತಿದ್ದ. ಆದರೆ ಇವತ್ತಿನ ದಿವಸ ಪಟ್ಟಣದಲ್ಲಿ per person per day minimum 150 to 200 liters of water is needed for their usage. ಅಂದರೆ ಬಟ್ಟೆ ಹೊಗೆಯುವುದಕ್ಕೆ, ಪಾತ್ರೆ ತೊಳೆಯುವುದಕ್ಕೆ ಅಥವಾ ಸ್ನಾನಕ್ಕೆ ಮಾಡುವುದಕ್ಕೆ ದಿವಸಕ್ಕೆ 150 ರಿಂದ 200 ಲೀಟರ್ ನೀರನ್ನು ಉಪಯೋಗಿಸುತ್ತಿದ್ದಾನೆ. ಆದರೆ recycling ಮಾಡುವುದು ಬಹಳ ಕಡಿಮೆ ಆಗುತ್ತಿದೆ. ಇದಕ್ಕೋಸ್ಕರ ಇವತ್ತಿನ ದಿವಸ ನೀರಿಗೆ ಬಹಳ ತೊಂದರೆಯಾಗುತ್ತಿದೆ. ಬರ ಬಂದ ಕೂಡಲೇ ನಾವು ಮೊದಲು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಆನಂತರ ರೈತರಿಗೆ uplift ಮಾಡುವಂತಹ ಕೆಲಸ ಮಾಡಬೇಕು. ಆದಕಾರಣ ನೀರಾವರಿ ಇಲಾಖೆ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುವಂಥದ್ದು ಬಹಳ ಜರೂರಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಕಷ್ಟವೆಂದರೂ ನೀರಾವರಿಗಾಗಿ 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮೊದಲೇ ಹೇಳಿದರು.

ಇನ್ನು *National Disaster Relief Fund* (NDRF) ಅದು ಬಹಳ ಒಂದು ಮುಖ್ಯವಾದಂತಹ ಅಂಶ. ಇವತ್ತಿನ ದಿವಸ ಅತಿವೃಷ್ಟಿ ಹಾಗೂ ಅನಾವೃಷ್ಟಿ ನಮ್ಮ ಕೈಯಲ್ಲಿ ಇಲ್ಲ. ದೇವರು ನಾಳೆ ಬೆಳಿಗ್ಗೆ ಏನು ಮಾಡುತ್ತಾನೆ ಎಂಬುದು ಯಾರಿಗೂ ಗೊತ್ತಿಲ್ಲ. ಭೂಕಂಪ ಆಗುತ್ತದೆಯೋ ಗೊತ್ತಿಲ್ಲ, ಮಳೆ ಜಾಸ್ತಿ ಬರುತ್ತದೋ ಗೊತ್ತಿಲ್ಲ, ಏನಾಗುತ್ತದೆ ಎಂಬುದು ಗೊತ್ತಿಲ್ಲ. ಆದರೆ NDRF ಎನ್ನುವಂಥದ್ದು ಬಹಳ ಮುಖ್ಯವಾದಂಥದ್ದು. ಇವತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿಯೂ ಸಹ NDRF ಬಹಳ ಅತ್ಯಂತ ಪರಿಣಾಮಕಾರಿಯಾದಂತಹ ಕೆಲಸ ಮಾಡಬೇಕು. ನನ್ನ ಮನವಿ ಏನೆಂದರೆ,

ನಮ್ಮ ರಾಜ್ಯ ಸರ್ಕಾರ ಕೂಡ State Drought Disaster Committee ಮಾಡುವುದು ಬಹಳ ಮುಖ್ಯವಾದುದು.

ಈ ಹಿಂದೆ ಶ್ರೀ ಎಸ್.ಎಂ.ಕೃಷ್ಣರವರ ನೇತೃತ್ವದ ಸರ್ಕಾರ ಇದ್ದಾಗ ರೈತರು ಬೆಳೆದ ಧಾನ್ಯಗಳಿಗೆ ಸರಿಯಾದ ಬೆಲೆ ಸಿಗುತ್ತಿರಲಿಲ್ಲ. ಆಗ ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಸಮಸ್ಯೆಗೆ ಏನಾದರು ಒಂದು ಪರಿಹಾರ ಕಂಡುಹಿಡಿಯಬೇಕೆಂದು ಇದೇ ಸದನದಲ್ಲಿ ನಾವು ವಿನಂತಿ ಮಾಡಿಕೊಂಡಿದ್ದೆವು. ಆ ಸಂದರ್ಭದಲ್ಲಿ ಅವರು Revolving Fund ನ್ನು create ಮಾಡಿದರು. ಮೊದಲ Revolving Fund ನಲ್ಲಿ ಸುಮಾರು 500 ಕೋಟಿ ರೂಪಾಯಿಗಳನ್ನು ಇಟ್ಟರು. ಆ Revolving Fund ಏನು ಕೆಲಸ ಮಾಡುತ್ತದೆ ಎಂದರೆ, ರೈತ ಬೆಳೆದಂತಹ ಬೆಳೆಗೆ ಬೆಲೆ ಕುಸಿತವಾದಾಗ farmer supportive ಆಗಿ market intervention ಮಾಡಿ, ಪುನಃ ಧಾನ್ಯಗಳನ್ನು ಮಾರಾಟ ಮಾಡಿ ಆ ಹಣವನ್ನು ಆವರ್ತನಿಧಿಗೆ ಜಮಾ ಮಾಡುವುದು. ಅಂದರೆ ಅದರಿಂದ 50 ಕೋಟಿ ರೂಪಾಯಿ ನಷ್ಟವಾದರೂ ಆಗಬಹುದು, ಅಥವಾ 50 ಕೋಟಿ ರೂಪಾಯಿ ಲಾಭವಾದರೂ ಆಗಬಹುದು. ಆದರೆ ಮಾರುಕಟ್ಟೆಯಲ್ಲಿ ಧಾನ್ಯಗಳ ಬೆಲೆ ಕುಸಿತವಾದಾಗ ಆ ಸಮಯದಲ್ಲಿ ಸರ್ಕಾರ intervention ಆದತಕ್ಷಣ ವರ್ತಕರು ಸಹ ಒಂದು ಕ್ವಿಂಟಾಲ್‌ಗೆ 50 ರಿಂದ 100 ರೂಪಾಯಿ raise ಮಾಡುವಂಥದ್ದನ್ನು ನಾವು ಕಾಣುತ್ತಿದ್ದೇವೆ.

ಇವತ್ತಿನ ದಿವಸ ನಾವೇನು ಬರಗಾಲವನ್ನು ನೋಡುತ್ತಿದ್ದೇವೆ, ಈ ಬರಗಾಲ ಈಗ ಮಾತ್ರ ಬಂದಿರುವಂಥದ್ದಲ್ಲ. 1977ನೇ ಇಸವಿಯಲ್ಲಿಯೂ ಸಹ ಬರಗಾಲ ಬಂದಿತ್ತು, 1983ನೇ ಇಸವಿಯಲ್ಲಿಯೂ ಸಹ ಬರಗಾಲ ಬಂದಿತ್ತು. ಸುಮಾರು ಆರು ವರ್ಷದಿಂದ ಸತತವಾಗಿ ಬರಗಾಲ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಈಗಲಾದರು ನಮ್ಮ ರಾಜ್ಯ ಸರ್ಕಾರ Drought Management Committee ಮಾಡುವುದು ಬಹಳ ಅವಶ್ಯಕವಾಗಿದೆ. ಮುಂದಿನ ಬಜೆಟ್ ಅಧಿವೇಶನದಲ್ಲಿ 5,000 ಅಥವಾ 10,000 ಕೋಟಿ ಸಾವಿರ ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ State Drought Disaster Committee ಗೆ ಇಡಬೇಕೆಂಬುದು ನಮ್ಮ ಇಚ್ಛೆ. ಒಂದು ವೇಳೆ ಬರಗಾಲ ಬರದೇ ಹೋದರೆ ಆವರ್ತ ನಿಧಿಯಲ್ಲಿ ಇಟ್ಟಿರುವಂತಹ 10,000 ಕೋಟಿ ರೂಪಾಯಿಗಳನ್ನು ಬೇರೆ ಇನ್ಯಾವುದಕ್ಕಾದರೂ ಉಪಯೋಗ ಮಾಡಿಕೊಳ್ಳಬಹುದು. ಆದರೆ 10 ಸಾವಿರ ಕೋಟಿ ರೂಪಾಯಿಗಳನ್ನು earmark ಮಾಡಬೇಕು. ಏಕೆಂದರೆ, ಇತ್ತೀಚೆಗೆ ರೈತರು ಸಾಲ ಮನ್ನಾ

ತಿದ್ದುಪಡಿಯಾಗದ ಪ್ರತಿ

ಮಾಡಬೇಕೆಂದು ಕೇಳುತ್ತಿದ್ದಾರೆ. ಒಂದು ವೇಳೆ 10,000 ಕೋಟಿ ರೂಪಾಯಿಗಳನ್ನು budget ನಲ್ಲಿ earmark ಮಾಡಿದ್ದೇ ಆಗಿದ್ದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸವಲತ್ತು ಸಿಗುತ್ತಿತ್ತು, ರೈತರ ಸಾಲ ಮನ್ನಾ ಮಾಡುವುದಕ್ಕೆ ಉಪಯೋಗವಾಗುತ್ತಿತ್ತು.

**ಉಪಸಭಾಪತಿಯವರು:-** ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರೇ, ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ಸಮಯವಿಲ್ಲ ಅಷ್ಟೆ. ಬೇಗ conclude ಮಾಡಿ.

**ಶ್ರೀ ಬಸವರಾಜ್ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸ್ವಾಮಿಗಳ ನೇತೃತ್ವದಲ್ಲಿ ತುಂಗಭದ್ರಾ ಜಲಾಶಯದಲ್ಲಿ ಹೂಳು ಎತ್ತುವಂತಹ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ನಮ್ಮ ರಾಜ್ಯ ಸರ್ಕಾರ 33 ಟಿಎಂಸಿ ಅಷ್ಟು ಹೂಳು ಎತ್ತುವುದಕ್ಕೆ feasible ಅಗಿಲ್ಲ. ಆದುದರಿಂದ ಮಠದ ಸ್ವಾಮಿಗಳು ರೈತರ ಸಹಕಾರದಿಂದ, ಮಠ-ಮಾನ್ಯರ ಸಹಕಾರದಿಂದ, ಸ್ಥಳೀಯ ಜನಪ್ರತಿನಿಧಿಗಳ ಸಹಕಾರದಿಂದ ಸುಮಾರು 10 ರಿಂದ 13 ಎಕರೆಯಷ್ಟು ಹೂಳನ್ನು ತೆಗೆಯುವಂತಹ ಕೆಲಸ ಮಾಡಿದರು. ಹೂಳು ತೆಗೆಯುವಂತಹ ಕಾರ್ಯಕ್ರಮ ಏನಿದೆ, ಇದು ಒಂದೇ ಸಲ ಮಾಡಿ ಮುಗಿಸುವಂತಹ ಕೆಲಸ ಅಲ್ಲ. ನನ್ನ ಬಯಕೆ ಏನೆಂದರೆ ನಮ್ಮ ನಮ್ಮ ಊರಿನಲ್ಲಿರುವಂತಹ ಎಲ್ಲಾ ಕೆರೆಗಳಲ್ಲಿ (NREG) National Rural Employment Guarantee Scheme ಮುಖಾಂತರವಾಗಲಿ ಅಥವಾ ಇನ್ನಾವುದೇ ಯೋಜನೆಯ ಮುಖಾಂತರವಾಗಲಿ ಪ್ರತೀ ವರ್ಷವು ಸ್ವಲ್ಪ ಸ್ವಲ್ಪ ಹೂಳು ತೆಗೆಯುವಂತಹ ಕೆಲಸ ಮಾಡಿದರೆ ಶಾಶ್ವತವಾದಂತಹ ಒಂದು ಪರಿಹಾರ ಸಿಗಬಹುದು. ಏಕೆಂದರೆ ಇದು ಒಂದೇ ಸಲ ಮಾಡಿ ಮುಗಿಸುವಂತಹ ಕೆಲಸವಲ್ಲ. It needs nearly 66,000 acres of land. 7 feet soil ಇರಬೇಕೆಂದರೆ ಇದಕ್ಕೆ ಸುಮಾರು 50 ರಿಂದ 60 ಸಾವಿರ ಎಕರೆ ಜಮೀನು ಬೇಕು. ಅದನ್ನು ಎಲ್ಲಿಂದ ತರುತ್ತೀರಿ? ಆದುದರಿಂದ ಪ್ರತೀ ವರ್ಷ ಎಷ್ಟು ಹೂಳು ತುಂಬಿರುತ್ತದೋ ಅದರಲ್ಲಿ ಅರ್ಧದಷ್ಟಾದರು ಹೂಳನ್ನು ರೈತರು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು. ರೈತರಿಗೆ ಅವಕಾಶ ಮಾಡಿಕೊಡುವುದು ಎಂದರೆ ಸುಮ್ಮನೆ ಯಾವ ಮಣ್ಣನ್ನಾದರು ರೈತರು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅದಕ್ಕೆ ನಮ್ಮ ಕೃಷಿ ಇಲಾಖೆಯ Soil Scientists ಗಳಿಂದ ತಾಂತ್ರಿಕ ಸಲಹೆಯನ್ನು ಕೊಡಬೇಕು. ಏಕೆಂದರೆ ಯಾವ ಮಣ್ಣಿನಲ್ಲಿ NPK (Nitrogen, Phosphorus and Potassium) ಇದೆ, micro

nutrients ಇದೆ ಎಂದು ತಿಳಿಸಬೇಕು. ಅದು ಬಿಟ್ಟು ರೈತರು hard soil ತೆಗೆದುಕೊಂಡು ಹೋಗಿ ಅವರ ಹೊಲದಲ್ಲಿ ಹಾಕಿದರೆ ಏನು ಪ್ರಯೋಜನ ಆಗುವುದಿಲ್ಲ.

ಆಂಧ್ರಪ್ರದೇಶದಲ್ಲಿ ಒಂದು ಬೋರ್ಡ್ ಇದೆ. ಆ ಬೋರ್ಡಿನವರು ಸುಮಾರು 100 ಸ್ಥಳಗಳನ್ನು ಗುರುತಿಸಿದ್ದಾರೆ. ಆ 100 ಸ್ಥಳಗಳಲ್ಲಿ ರೈತರು ಹೂಳು ಎತ್ತಿ ಅವರವರ ಹೊಲಗಳಿಗೆ ಹಾಕಿದರೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ. ಇಂತಹ ಸ್ಥಳಗಳನ್ನು ಕೃಷಿ ಇಲಾಖೆಯ Soil Scientists attend ಮಾಡಿ ಪ್ರತಿ ಸ್ಥಳಗಳನ್ನು ಗುರುತಿಸಿ, ಅವರಿಗೆ mark ಮಾಡಿಕೊಟ್ಟರೆ ಆ ರೈತರು ಬೇಸಿಗೆಯಲ್ಲಿ ಅಂದರೆ ನೀರು ಇಲ್ಲದೆ ಇರುವಂತಹ ಸಮಯದಲ್ಲಿ ಯಾವಾಗ ಕೆರೆ ಖಾಲಿ ಇರುತ್ತದೆ, ಆ ಕೆರೆ ಇರುವಂತಹ ಸ್ಥಳಕ್ಕೆ ಹೋಗಿ ಆ ಮಣ್ಣನ್ನು ತರಬೇಕು. ಏಕೆಂದರೆ ಆ ಮಣ್ಣು ಅತ್ಯಂತ fertile ಆದಂತಹ ಮಣ್ಣು ಆಗಿರುತ್ತದೆ. ಹಾಗಾಗಿ ಅದಕ್ಕೆ ಒಂದು ಗ್ರೇಡ್ ಕೊಡುತ್ತಾರೆ. ಅಂದರೆ ಅದರಲ್ಲಿ Phosphorus ಇದೆಯೋ, Potassium ಇದೆಯೋ, Nitrogen ಇದೆಯೋ ಅಥವಾ micro nutrients, zink ಇದೆಯೋ ಎಂದು ಇವೆಲ್ಲವನ್ನೂ ವಿಜ್ಞಾನಿಗಳು ಕಂಡು ಹಿಡಿದು, ಯಾವ ಯಾವ ಹೊಲಗಳಿಗೆ ಯಾವ ರೀತಿಯಾದಂತಹ fertilizer ಬೇಕೋ ಅಲ್ಲಿಗೆ ಅದನ್ನು ರೈತರು ತೆಗೆದುಕೊಂಡು ಹೋದಾಗ ಮಾತ್ರ ಅನುಕೂಲವಾಗುತ್ತದೆ. ಪ್ರತೀ ವರ್ಷ ಸುಮಾರು 10 ರಿಂದ 15 ಟಿಎಂಸಿ ಅಷ್ಟು ಹೂಳನ್ನು ಇಡೀ ರಾಜ್ಯದಲ್ಲಿ ತೆಗೆಯುವಂತಹ ಕೆಲಸ ಆಗಬೇಕು.

ಇವತ್ತಿನ ದಿವಸ ನಮ್ಮ ಸರ್ಕಾರದಲ್ಲಿ ಅನೇಕ ಕಾರ್ಯಕ್ರಮಗಳಿವೆ. **‘ಜಿನಗು ಕಾರ್ಯಕ್ರಮ’** ಎಂದು ಇದೆ. ಇವತ್ತಿನ ದಿವಸ NREG ಅಡಿಯಲ್ಲಿಯೂ ಸಹ ಹೆಚ್ಚಿನ ರೀತಿಯಲ್ಲಿ ಹೂಳು ತೆಗೆಯುವುದಕ್ಕೆ ಉತ್ತೇಜನ ನೀಡುತ್ತಿದ್ದಾರೆ. ಸರ್ಕಾರ ಕೂಡ ಇದಕ್ಕೆ ಸಲಹೆ ಕೊಡುವಂಥದ್ದು, ಪ್ರೋತ್ಸಾಹ ಕೊಡುವಂಥದ್ದು ಮಾಡಿದಾಗ ಮಾತ್ರ ಇಂತಹ ಬರಗಾಲದ ಪರಿಸ್ಥಿತಿಯಲ್ಲಿ ನಾವು ಹೆಚ್ಚು ನೀರನ್ನು retain ಮಾಡಿಕೊಂಡು ಬಳಕೆ ಮಾಡಿಕೊಂಡು ಉಪಯೋಗ ಮಾಡುವಂತಹ ಕೆಲಸ ಆಗುತ್ತದೆ. ಆದಕಾರಣ ತಮ್ಮ ಮೂಲಕ ರಾಜ್ಯ ಸರ್ಕಾರವನ್ನು ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, ಮೊದಲನೆಯದಾಗಿ, ಈಗ ಬರಗಾಲದ ಬಗ್ಗೆ ಇಷ್ಟೆಲ್ಲಾ ಮಾತನಾಡಿದ್ದೇವೆ, ಕೇವಲ ಭಾಷಣ ಮಾಡುವುದರಿಂದ ರೈತರಿಗೆ ಇದರಿಂದ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಈಗಾಗಲೇ ಜೂನ್ ತಿಂಗಳು ಪ್ರಾರಂಭವಾಗಿದೆ. ಇವತ್ತಿನ ದಿವಸ ಶೇಕಡ 30 ರಿಂದ 40 ಜಾಗಗಳಲ್ಲಿ ಮಳೆ ಬಿದ್ದಿದೆ.

ಎಲ್ಲಿ ಮಳೆ ಬಿದ್ದಿಲ್ಲ ಅಲ್ಲಿಗೆ ನಮ್ಮ ಸರ್ಕಾರ cloud seeding ಗೆ ಬಜೆಟ್‌ನಲ್ಲಿ ಹಣವನ್ನು ಇಟ್ಟಿದ್ದಾರೆ. ಆದಕಾರಣ ತಕ್ಷಣ ಅಂದರೆ ಇನ್ನು 15 ದಿವಸಗಳಲ್ಲಿ cloud seeding ಪ್ರಾರಂಭ ಮಾಡಬೇಕು. ಜೂನ್, ಜುಲೈ ತಿಂಗಳಿನಲ್ಲಿ ಯಾವ ಬೆಳೆ ಬೆಳೆಯುತ್ತಾರೆ ಅದಕ್ಕೆ ಅನುಕೂಲವಾಗುವಂತೆ ಮಾಡಬೇಕು. Input subsidy ಯನ್ನು ಹೆಚ್ಚಿನ ರೀತಿಯಲ್ಲಿ ಕೃಷಿ ಇಲಾಖೆಯವರು ಕೊಡುವಂತಹ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ಕೋರುತ್ತೇನೆ. (ಮುಂದು)

(742) 14.06.2017 KG.AK 7.00

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಇವೆಲ್ಲವನ್ನು ಮಾಡಿದಾಗ ತಕ್ಷಣ ಜನರಿಗೆ ಬರದ ತೊಂದರೆಯನ್ನು ನಿವಾರಿಸಿದಂತಾಗುತ್ತದೆ. ಶ್ವಾಶತ ಪರಿಹಾರಗಳು ಸಹ side by side every year ಅಷ್ಟು ಆಗುತ್ತದೆ ಅಷ್ಟನ್ನು ನಾವು ಮಾಡಿಕೊಂಡು ಹೋದಾಗ ಮಾತ್ರ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತದೆ ಎನ್ನುವಂತ ಮಾತನ್ನು ಹೇಳುತ್ತಿದ್ದೇನೆ. 10 ಸಾವಿರ ಕೋಟಿ ರೂಪಾಯಿಗಳನ್ನು ಮುಂದಿನ ಬಜೆಟ್‌ನಲ್ಲಿ ರೈತರ ಸಲುವಾಗಿ ಮತ್ತು ಬರದ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಯವರು ಮೀಸಲು ಇಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಈ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಬರದ ಸಲುವಾಗಿ ಹಣವನ್ನು ಇಡಬೇಕು ಕಾರಣ ಬರ ಬರದೇ disaster ಆದರೆ ಹಣವನ್ನು ಖರ್ಚು ಮಾಡುವುದಕ್ಕೆ management ಗೆ ಅವಕಾಶ ಇರುತ್ತದೆ. ಒಂದು ವೇಳೆ, ಈ ಎರಡು ಬರಲಿಲ್ಲವೆಂದರೆ, ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಬೇರೆ ಕಾರ್ಯಕ್ರಮಗಳಿಗೆ ಉಪಯೋಗ ಮಾಡಿಕೊಂಡು, ಮತ್ತೆ ಮರು ವರ್ಷ ಮತ್ತೆ ಹಣವನ್ನು ಮೀಸಲು ಇಡುವಂತಹ ಕೆಲಸ ಆಗಬೇಕು. ಆಗ ಮಾತ್ರ ರೈತರಿಗೆ ಸರ್ಕಾರ ನಮ್ಮ ಜೊತೆಗೆ ಇದೆ ಮತ್ತು ರೈತರ ಬಗ್ಗೆ ಬಹಳ ಕಾಳಜಿ ಇದೆ ಎನ್ನುವಂತಹ ಭಾವನೆ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಪೀಠದಲ್ಲಿ ಸಭಾಪತಿಯವರು ಕುಳಿತುಕೊಂಡಿದ್ದರೆ ಸಮಯ ಮುಗಿಯಿತು ಕುಳಿತುಕೊಳ್ಳಿ ಎಂದು ಕುಳ್ಳಿರಿಸಿ ಬಿಡುತ್ತಿದ್ದರು. ನನಗೆ ಮಾತನಾಡಲಿಕ್ಕೆ ಹೆಚ್ಚಿನ ಕಾಲಾವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಉಪಸಭಾಪತಿಯವರು:–** ಮಾನ್ಯ ಸದಸ್ಯರೆ ಧನ್ಯವಾದಗಳು. ನಾಳೆ ನಿಯಮ 68 ಅಡಿಯಲ್ಲಿ ಚರ್ಚೆ ಮತ್ತು ಉತ್ತರವನ್ನು ಮುಕ್ತಾಯಗೊಳಿಸಲಾಗುತ್ತದೆ. ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 07 ಗಂಟೆ 02 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 15ನೇ ಜೂನ್ 2017ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**